ಶ್ರೀರಸ್ತು.

ಶ್ರೀ ಸೀತಾರಾಮ ಪರಬ್ರಹ್ಮಣೇನಮಃ.

ಸೀತಾರಾಮಾಂಜನೇಯ ಸಂವಾದವೆಂಬ

ಸಚಿತ್ರ

ಶ್ರೀ ರಾಮತತ್ವಾಮೃತವು.

ಅರಮನೆ ವಿದ್ವಾಂಸರಾದ,

ಕಾವಸಾಂದೂರು, ರಾಮಸ್ವಾಮ್ಯೈಯಂಗಾರ್ಯರಿಂದ

ಬರೆಯಲ್ಪಟ್ಟು.

ಇದರ ವಿಶಿಷ್ಟ ಹಕ್ಕನ್ನು ಹೊಂದಿರುವ

ಬೆಂಗಳೂರು ಸಿಟಿ

ರಾಧಾಮಾಧವ ವಿಲಾಸ ಪ್ರೆಸ್ ಪ್ರೊಪ್ರೈಟರ್.

ಎಂ. ಆರ್. ವೆಂಕಟಾಚಲಂಶೆಟ್ಟರಿಂದ

ಮುದ್ರಿಸಿ ಪ್ರಕಟಿಸಲ್ಪಟ್ಟಿತು.

ಪ್ರಥಮ ಮುದ್ರಣ ೧೦೦೦ ಪ್ರತಿಗಳು

Printed at the Sri Chowdeswari Press,

Bangalore City.

ಕ್ರಯ ೧—೮—೦.

1921





ವಿಷಯಸೂಚಿಕೆ.

ಮೂರನೆಯ ಸಂಧಿ.

ನಾಲ್ಕನೆಯ ಸಂಧಿ.

ಐದನೆಯ ಸಂಧಿ.

ಪ್ರಸ್ತಾಪನೆ.

ಕನ್ನಡ ಭಾಷೆಯಲ್ಲಿ ವೇದಾಂತ ವಿಷಯುಗಳನ್ನು ಬೋಧಿಸುವ ಗ್ರಂಥಗಳು ಹೆಚ್ಚಾಗಿಲ್ಲ. ಸೀತಾರಾಮಾಂಜನೇಯ ಸಂವಾದವು ಮುಖ್ಯವಾದ ವೇದಾಂತಗ್ರಂಥ. ಇದರ ಜತೆಗೆ ಇನ್ನೂ ಕೆಲವು ವೇದಾಂತ ಪುಸ್ತಕಗಳಲ್ಲಿರುವ ವಿಷಯುಗಳನ್ನು ಸಂಗ್ರಹಿಸಿ, ಜನರಿಗೆ ಸುಲಭವಾಗಿ ತಿಳಿಯುವಂತೆ ಬರೆಯಬೇಕೆಂದು ಕೆಲವು ಮಿತ್ರರು ಅಪೇಕ್ಷಿಸಿದ್ದರಿಂದ ಅದರಂತೆ ಈ ಪುಸ್ತಕವನ್ನು ಬರೆದಿದ್ದೇನೆ. ಆರ್ಯರಲ್ಲಿ ಅದ್ವೈತ, ದ್ವೈತ, ವಿಶಿಷ್ಟಾದ್ವೈತಗಳೆಂಬ ಮೂರು ಮುಖ್ಯ ಮತಗಳಿದ್ದರೂ ಇವುಗಳಲ್ಲಿ ಪ್ರಬಲವಾದದ್ದೂ, ವಿಶೇಷ ಸಂಖ್ಯೆಯ ಜನರನ್ನೊಳಗೊಂಡಿರುವುದೂ ಅದ್ವೈತ ಮತವೇ, ಆದುದರಿಂದ ಆ ಸಿದ್ಧಾಂತವನ್ನನುಸರಿಸಿಯೇ ಸಂಸ್ಕೃತಾಂಧ್ರ ಕರ್ಣಾಟಕಗಳಲ್ಲಿ ಹಲವು ಗ್ರಂಥಗಳು ಬರೆಯಲ್ಪಟ್ಟಿರುವುವು. ಅದ್ವೈತವೆಂದರೆ ಜೀವಪರಮಾತ್ಮಗಳು ಒಂದೇ. ಇವುಗಳಿಗೆ ಯಾವ ಭೇದವೂ ಇಲ್ಲ. ಆತ್ಮನಿಗೆ ಮಾಯೆಯು ಕವಿದಿರುವಾಗ ಜೀವನೆಂಬ ಭ್ರಾಂತಿಯುಂಟಾಗುವುದು, ಜ್ಞಾನಸಂಪಾದನೆಮಾಡಿ, ಆ ಭ್ರಾಂತಿಯನ್ನು ಬಿಟ್ಟುಬಿಟ್ಟರೆ ನಾನೇ ಬ್ರಹ್ಮನೆಂದು ತಿಳಿಯಬರುವುದೆಂಬುದೇ ಈ ಸಿದ್ಧಾಂತದ ಸಾರವು. ಸೀತಾರಾಮಾಂಜನೇಯ ಸಂವಾದದಲ್ಲಿ ಈ ವಿಷಯುವು ತುಂಬ ಸ್ಪಷ್ಟವಾಗಿ ವಿವರಿಸಲ್ಪಟ್ಟಿರುವುದು. ಆಂಧ್ರಭಾಷೆಯಲ್ಲಿ ವಿರಚಿತವಾದ ಈ ಗ್ರಂಥದ ಮೂರು ಅಧ್ಯಾಯಗಳೂ ಇದರಲ್ಲಿ ಮೂರು ಸಂಧಿಗಳಾಗಿ ಬರೆಯಲ್ಪಟ್ಟವೆ. ಈ ಗ್ರಂಥವು ಪಾರ್ವತಿಗೆ ಪರಮೇಶ್ವರನಿಂದ ಉಪದೇಶಿಸಲ್ಪಟ್ಟುದು.

ಇದೇ ಈಶ್ವರನು ಹೇಳಿರುವ ಅಧ್ಯಾತ್ಮರಾಮಾಯಣದಲ್ಲಿ ವೇದಾಂತ ರಹಸ್ಯಗಳು ಬಹಳವಾಗಿ ಸೇರಿವೆ, ರಾಮಾಯಣದ ಕಥೆಯು ಸರ್ವ ಜನರಿಗೂ ತಿಳಿದಿರುವುದರಿಂದ ಇದರಲ್ಲಿಯ ಕಥಾ ಭಾಗಗಳನ್ನು ಸಂಕ್ಷೇಪಿಸಿ, ವೇದಾಂತ ವಿಚಾರದಲ್ಲಿ ಹೇಳಿರುವ ಸಂವಾದ ಭಾಗಗಳನ್ನು ಈ ರಾಮಾಯಣದಿಂದ ಯಥೋಚಿತವಾಗಿ ಸಂಗ್ರಹಿಸಿ ನಾಲ್ಕನೆಯ ಸಂಧಿಯಲ್ಲಿ ವಿವರಿಸಿದೆ. ಐದನೇಯ ಸಂಧಿಯಲ್ಲಿ ಶ್ರೀರಾಮಸ್ತವರಾಜವೆಂಬ ಗ್ರಂಥದಲ್ಲಿ ವ್ಯಾಸಮಹರ್ಷಿಗಳು ಧರ್ಮರಾಯನಿಗೆ ನಿರೂಪಿಸಿದ ಮುಕ್ತಿ

ಕಾಂತಾ ಕಲ್ಯಾಣವು ಸಂಗ್ರಹಿಸಲ್ಪಟ್ಟಿದೆ. ಕೊನೆಯಲ್ಲಿ ವೇದಾಂತ ಮಹಾವಾಕ್ಯಗಳನ್ನು ತಾತ್ಪರ್ಯ ಸಹಿತವಾಗಿ ಬರೆದಿದೆ.

ಬಹು ಗಹನವಾದ ವೇದಾಂತ ವಿಚಾರವು ಸಾಮಾನ್ಯರಿಗೆ ಸುಲಭವಾಗಿ ತಿಳಿಯತಕ್ಕದಲ್ಲ, ಸದ್ಗುರುವಿನ ಉಪದೇಶದಿಂದಲೇ ಇದು ಸಿದ್ಧಿಯಾಗಬೇಕಾಗಿದೆ. ಈಗಿನ ಕಾಲದಲ್ಲಿ ಜನರಿಗೆ ಆಸ್ತಿಕ್ಯಬುದ್ಧಿಯು ಕಡಿಮೆಯಾಗಿ, ಲೌಕಿಕ ವ್ಯವಹಾರಗಳಲ್ಲಿಯೇ ಬುದ್ಧಿ ಓಡುತ್ತಿರುವುದರಿಂದಲೂ, ಕಲಿಮಹಿಮೆಯಿಂದ ಧರ್ಮಾಭಿಮಾನವೂ, ದೇವತಾಗುರುಭಕ್ತಿಯೂ ಕಡಿಮೆಯಾಗುತ್ತಾಬಂದಿರುವುದರಿಂದಲೂ, ಮಹರ್ಷಿಗಳಿಂದ ಹೇಳಲ್ಪಟ್ಟ ಇಂತಹ ಗ್ರಂಥಪಠನದಿಂದಲಾದರೂ ಸ್ವಲ್ಪಮಟ್ಟಿಗೆ ಜಾಗರೂಕತೆ ಹುಟ್ಟಿ, ಆತ್ಮವಿಚಾರದಲ್ಲಿ ಬುದ್ಧಿಯು ಪ್ರವೇಶವಾದರೆ ಸಂಸ್ಕಾರವಿಶೇಷದಿಂದ ತಕ್ಕ ಫಲವು ಲಭಿಸಬಹುದೆಂದು ನಂಬುತ್ತೇನೆ.

ಮಹಾತ್ಮರ ಅನುಗ್ರಹದಿಂದ ಜನರು ಜ್ಞಾನಸಂಪಾದನೆಮಾಡಿಕೊಳ್ಳಲು ಸ್ವಲ್ಪಮಟ್ಟಿಗಾದರೂ ಪ್ರಯತ್ನಿಸುವಂತೆ ಪ್ರೇರಿಸಿದರೆ ಸಾಕೆಂಬುದೇ ಮುಖ್ಯೋದ್ದೇಶವಾಗಿದೆ. ಇದು ಪೂರ್ವಗ್ರಂಥಗಳ ಭಾಷಾಂತರವೇ ಹೊರತು ಕಲ್ಪಿತವಲ್ಲ. ಕನ್ನಡಿಸುವುದರಲ್ಲಿ ಭ್ರಮಪ್ರಮಾದಾದಿಗಳಿಂದ ಉಂಟಾದ ದೋಷಗಳನ್ನು ವಾಚಕರು ದಯಮಾಡಿ ಕ್ಷಮಿಸಬೇಕೆಂದು ಪ್ರಾರ್ಥಿಸುತ್ತೇನೆ.

ಸಜ್ಜನ ವಿಧೇಯ,

ಕೆ. ರಾಮಸ್ವಾಮ್ಯಯ್ಯಂಗಾರ್ಯ.

ಸಪ್ತರ್ಷಿಕೃತ
ಶ್ರೀರಾಮಸ್ತವರಾಜಂ.

ಪಲ್ಲವಿ॥ ಶ್ರೀರಾಮಂಭಜಭೋಶರಣಂ । ಶ್ರೀರಘುರಾಮಂಭಜಶರಣಂ ॥
ಸೀತಾರಾಮಂಭಜಶರಣಂ । ಸ್ವಾತ್ಮಾರಾಮಂಭಜಶರಣಂ ॥

ತಾ॥ ಎಲೆ ಸ್ವಾಮಿಯೇ, ನಿನಗೆ ಶರಣಾಗತನಾಗಿದ್ದೇನೆ ಎಂದು ಶ್ರೀರಾಮನನ್ನು ಭಜಿಸು. ರಘುಕುಲೋತ್ಪನ್ನನಾದ ರಾಮದೇವನೇ ರಕ್ಷಕನೆಂದು ಭಜನೆಮಾಡು. ಸೀತಾಕಾಂತನಾದ ರಾಮಚಂದ್ರನನ್ನು ಮರೆಹೋಗು. ಆತ್ಮಾರಾಮನಾಗಿರುವ ರಾಮಭದ್ರನೇ ನನ್ನನ್ನು ಕಾಪಾಡೆಂದು ಪ್ರಾರ್ಥಿಸೆಂದು ಮನಸ್ಸನ್ನು ಕುರಿತು ಹೇಳಿದೆ.

(ಕಶ್ಯ)ನಿತ್ಯಂಕಿಂಧಾವಸಿಚಲವಿಷಯಾನ್।ಅನುಭವಿತುಂಸೌಖ್ಯಾಭಾಸಾನ್॥
ಉರುತರದುಃಖಾನತಿದುಸ್ಸಾಧ್ಯಾನ್ । ಅತ್ಯಂತಾಯಾಸಾನಂಹೋ ॥
ಮುಳಲಾನುಗ್ರಭಯಂಕರರೌರವ । ನಾರಕಗತಿಹೇತೂನೇತಾನ್ ॥
ಅಪಿಪರಿಹರಸೀತಾಪತಿಮಾಶು । ಸ್ವೇಶಂಪರಿಚರಭೋಚೇತಃ ॥೧॥

ತಾ॥ ಎಲೈ ಮನಸ್ಸೇ, ದುಃಖಹೇತುಗಳಾದ ವಿಷಯಸುಖಗಳನ್ನು ಅನುಭವಿಸುವುದಕ್ಕೋಸ್ಕರ ಏತಕ್ಕೆ ಓಡಿಹೋಗುತ್ತಿರುವೆ? ಸುಖಗಳೆಂದು ತೋರುವ ಆ ವಿಷಯಗಳು ಬಹು ಕ್ಲೇಶಕಾರಿಗಳು. ಅಸಾಧ್ಯವಾದುವುಗಳು ಮತ್ತು ಆಯಾಸಕಾರಿಗಳಾದ ಪಾಪಗಳನ್ನು ಹುಟ್ಟಿಸತಕ್ಕವುಗಳು. ಭಯಂಕರಗಳಾದ ರೌರವಾದಿ ನರಕಗಳಲ್ಲಿ ಕೆಡಹತಕ್ಕವುಗಳು. ಆದುದರಿಂದ ಅವುಗಳಕಡೆ ಆಶೆಗೊಳ್ಳದೆ, ಪರಿಹರಿಸಿಕೋ. ಪರಮೇಶ್ವರನಾದ ಸೀತಾಪತಿಯ ಸೇವೆಯನ್ನು ಮಾಡಿ ಧನ್ಯನಾಗು ಎಂದು ಕಶ್ಯಪಮುನಿ ಹೇಳಿದನು. ॥ ೧ ॥

(ಅತ್ರಿ) ಬಹುವಿಧಪಾಪವಶಾದಿಹನಾನಾ।ಯೋನಿಷುಜನನಮೃತೀಯಾತೋ॥
ದೇಹೀದೈವಾದುತ್ತಮಮಾನುಷ । ಪೌರುಷವಿದ್ಯಾಸಂಪನ್ನೋ ॥
(ಅ)ಪಿಬ್ರಹ್ಮಣಿಪರಮೇವಿಮುಖೋ। ದುಃಖೀದುರ್ವಿಷಯೈಷಿನಷ್ಟಃ ॥
ತೃಣಕಬಳಸ್ವೀಕರಣೇಕಾಲೇ।ಪಶುವಿವರೋಮಂಥಂಕುರ್ವನ್॥೨॥

ತಾ॥ ದೇಹಿಯು ಹಲವು ಬಗೆಯ ಪಾಪಗಳನ್ನು ಮಾಡಿದ್ದರ ದೆಸೆ

ಯಿಂದ ಈ ಲೋಕದಲ್ಲಿ ಹಲವು ಯೋನಿಗಳಲ್ಲಿ ಜನ್ಮವೆತ್ತಿ ಸಾಯುತ್ತಾ ಬಂದು, ಅದೃಷ್ಟವಿಶೇಷದಿಂದ ಉತ್ತಮವಾದ ಮನುಷ್ಯಜನ್ಮವನ್ನು ಪಡೆಯುವನು. ಈ ಜನ್ಮದಲ್ಲಿ ಪೌರುಷದಿಂದಲೂ ವಿದ್ಯೆಯಿಂದಲೂ ಐಶ್ವರ್ಯದಿಂದಲೂ ಕೂಡಿದವನಾಗಿದ್ದರೂಕೂಡ ಉತ್ತಮೋತ್ತಮನಾದ ಆ ಪರಬ್ರಹ್ಮನಲ್ಲಿ ವಿಮುಖನಾಗಿ, ದುರ್ವಿಷಯಗಳನ್ನು ಅಪೇಕ್ಷಿಸುತ್ತಾ ದುಃಖಗಳಿಗೆ ಸಿಕ್ಕಿ, ಹಸುಗಳು ಹುಲ್ಲುತಿಂದು ಅದನ್ನು ಜೀರ್ಣಿಸಿಕೊಳ್ಳಲು ಮೆಲುಕುಹಾಕುವಹಾಗೆ ಅಗಿದುದನ್ನೇ ಅಗಿಯುತ್ತಾ ಕೆಟ್ಟುಹೋಗುವನೆಂದು ಅತ್ರಿಮಹರ್ಷಿಯು ಹೇಳಿದನು ॥ ೨ ॥

(ಭರ)ತದುಪರ್ಯುಪರಿಮನೋರಥಜಾಲಂ। ವಿದ್ವಾನಪಿಕಾಮಯತೇಯತ್॥
ಸುತಧನಮಿತ್ರಕಳತ್ರವಿಷಯೇ । ವೇದಂನೋಪೈತಿಚಕಾಮೀ ॥
ವಿದ್ಯಾಸಂಪತ್ಕುಲಧನಯೌವನ । ಸೌಭಗಗರ್ವಾಗಾರೂಢೋ ॥
ಮೂಢಃಪಶ್ಚಾದಂಧೇತಮಸಿಪ । ತತ್ಯವಶೋಂಧಾವಂಧಇವ ॥೩॥

ತಾ॥ ತಾನು ವಿದ್ಯಾವಂತನಾಗಿದ್ದರೂಕೂಡ ಮೇಲೆ ಮೇಲೆ ಬರುತ್ತಿರುವ ಇಷ್ಟಾರ್ಥಸಮೂಹಗಳನ್ನು ಬಯಸುತ್ತಲೇ ಬರುವನು. ಹೆಂಡತಿ, ಮಕ್ಕಳು, ಸ್ನೇಹಿತರು, ದ್ರವ್ಯ ಮುಂತಾದುವುಗಳಲ್ಲಿ ಕಾಮುಕನಾಗಿ ವಿರಕ್ತಿಯನ್ನು ಪಡೆಯದೆಯೇ ಇರುವನು. ವಿದ್ಯಾಸಂಪತ್ತು, ಕುಲದ್ರವ್ಯ, ಪ್ರಾಯ, ಸೌಂದರ್ಯ, ಅಹಂಕಾರ, ಮುಂತಾದ ಮದಪರ್ವತವನ್ನು ಹತ್ತಿದವನಾಗಿ ಅಂತಹ ಮೂಢನು ಕಡೆಗೆ ನಿರಾಶ್ರಯನಾಗಿ, ಕುರುಡನಜತೆಸೇರಿದ ಕುರುಡನಂತೆ ಅಂಧತಮಸ್ಸೆಂಬ ನರಕದಲ್ಲಿ ಬಿದ್ದು ಸಂಕಟಪಡುವನೆಂದು ಭರದ್ವಾಜನು ಹೇಳಿದನು ॥೩॥

(ವಿಶ್ವಾ)ಅರಿಷಡ್ವರ್ಗಂಜಹಿತೃಷ್ಣಾಮಪಿ । ಮಾಯಾವಿಲಸಿತಮಿತಿಬುಧ್ವಾ॥
ದುರ್ಜನಸಂಗತಿಮತಿದೂರೀಕುರು।ಸಜ್ಜನಮಾಶ್ರಯಭೋಃಚೇತಃ॥
ಪರಧನಪರದಾರಾಭಿರತಿಂತ್ಯಜ । ಪಾರತ್ರಿಕವೈದಿಕಧರ್ಮಂ ॥
ಪರಿಚಿನುಪದ್ಮಾಪತಿಪದಪದ್ಮಂ।ಸೇವಯಬಂಧವಿಮುಕ್ತ್ಯರ್ಥಂ ॥

ತಾ॥ ಎಲೈ ಮನಸ್ಸೇ! ಕಾಮಕ್ರೋಧ ಲೋಭ ಮೋಹ ಮದ ಮತ್ಸರಗಳೆಂಬ ಅರಿಷಡ್ವರ್ಗಗಳನ್ನು ನಾಶಮಾಡು. ಆಶೆಯು ಮಾಯೆಯಿಂದ ತುಂಬಿದುದೆಂದು ಅದನ್ನು ದೂರಕ್ಕೆ ತೊಲಗಿಸು. ದುಷ್ಟರ ಸಹವಾಸವನ್ನು ವರ್ಜಿಸಿಬಿಟ್ಟು, ಸಾಧು ಜನರನ್ನು ಆಶ್ರಯಮಾಡು. ಪರ

ದ್ರವ್ಯದಲ್ಲಿಯೂ, ಪರಸ್ತ್ರೀಯರಲ್ಲಿಯೂ, ಅಭಿಲಾಷೆಯನ್ನು ಬಿಟ್ಟುಬಿಡು. ಪರಲೋಕಸಾಧನೆಗೆ ಬೇಕಾದ ವೈದಿಕಧರ್ಮಗಳನ್ನು ಹುಡುಕಿ ತಿಳಿದುಕೋ. ಈ ಸಂಸಾರ ಬಂಧದಿಂದ ಬಿಡುಗಡೆ ಹೊಂದುವುದಕ್ಕೋಸ್ಕರ ಲಕ್ಷ್ಮೀಕಾಂತನಾದ ಶ್ರೀನಾರಾಯಣನ ಪಾದಕಮಲಗಳನ್ನು ಸೇವಿಸೆಂದು ವಿಶ್ವಾಮಿತ್ರನು ಹೇಳಿದನು. ॥೪॥

(ಗೌತ)ಕರ್ಣಾಕರ್ಣಯವೈದೇಹೀವರ।ವರ್ಣ್ಯೋತ್ತಮಗುರುಸಚ್ಚರಿತಂ॥
ನಯನಾಲೋಕಯನಳಿನನಯನಮುಖ । ಸುಂದರಶಾರದಶಶಿಬಿಂಬಂ ॥
ಮಸ್ತಕಸಂಸ್ತುತಮಹಿಮಾನಂನಮ । ತಕಸ್ತೂರೀನಿಕರಾಕಾರಂ ॥
ಹಸ್ತಯುಗೋರ್ವೀಪಾಲಕಮರ್ಚಯ ।ರವಿಕುಲರತ್ನಂಭಜಚೇತಃ ॥

ತಾ॥ ಎಲೈ ಕಿವಿಯೇ! ಸೀತಾಕಾಂತನಾದ ಶ್ರೀರಾಮಚಂದ್ರನ ಉತ್ತಮ ಚರಿತ್ರಗಳನ್ನು ಕೇಳಿ ಧನ್ಯನಾಗು. ಎಲೈ ಕಣ್ಣುಗಳೇ! ಕಮಲದಳಗಳಂತಿರುವ ಕಣ್ಣುಗಳೂ ಶರತ್ಕಾಲದ ಚಂದ್ರಬಿಂಬದಂತೆ ಇರುವ ಮುಖವೂ ಉಳ್ಳ ಸುಂದರಾಕಾರನಾದ ಪರಮಾತ್ಮನನ್ನು ನೋಡಿ ಆನಂದಿಸು. ಎಲೆ ಶಿರಸ್ಸೇ! ಪ್ರಸಿದ್ಧ ಮಹಿಮನೆಂದು ಹೆಸರುಗೊಂಡಿರುವ ನೀಲಮೇಘಶ್ಯಾಮನಾದ ಶ್ರೀರಾಮಚಂದ್ರನಿಗೆ ನಮಸ್ಕರಿಸು. ಎಲೈ ಕೈಗಳೇ! ಸೂರ್ಯವಂಶಕ್ಕೆ ಭೂಷಣಪ್ರಾಯನಾದ ರಾಘವನನ್ನು ಅರ್ಚಿಸು. ಎಲೈ ಮನಸ್ಸೇ! ಶ್ರೀರಾಮಭಜನೆಮಾಡೆಂದು ಗೌತಮನು ಹೇಳಿದನು.

(ಜಮ)ಪರಾಪವಾದಂಪರಿಹರಜಿಹ್ವೇ । ಪಾರುಷ್ಯಂಚಾನೃತವಾದಂ ॥
ಸಂಕೀರ್ತಯಕೇಶವನಾರಾಯಣ। ವಾಮನಮಾಧವಗೋವಿಂದ ॥
ಶ್ರೀಧರವಿಷ್ಣೋವೈಕುಂಠಾಧಿಪ। ಲಕ್ಷ್ಮೀನಾಯಕನರಸಿಂಹ ।
ಸ್ವಾಮಿನ್ರಾಘವಬುಧಜನಮಾನಸ ಮಂದಿರಪಾಹೀತ್ಯನುದಿವಸಂ ॥

ತಾ॥ ಎಲೈ ನಾಲಿಗೆಯೇ! ನೀನು ಪರದೂಷಣೆಯನ್ನು ಬಿಟ್ಟುಬಿಡು. ಕಠಿನವಾಕ್ಯಗಳನ್ನೂ ಸುಳ್ಳಾಡುವುದನ್ನೂ ಕಲಿಯಬೇಡ. ನೀನು ನಿತ್ಯವೂ ಎಲೈ ಕೇಶವನೇ! ನಾರಾಯಣಾ, ಮಾಧವಾ, ವಾಮನಾ, ಗೋವಿಂದ, ಶ್ರೀಕಾಂತ, ರಾಮಚಂದ್ರ ಮುಂತಾದ ಅನಂತ ನಾಮಗಳುಳ್ಳ ಪರಬ್ರಹ್ಮಮೂರ್ತಿಯೇ ನನ್ನನ್ನು ರಕ್ಷಿಸೆಂದು ಸ್ತೋತ್ರಮಾಡುತ್ತಿರೆಂಬದಾಗಿ ಜಮದಗ್ನಿ ಮಹರ್ಷಿಯು ಹೇಳಿದನು. ॥೬॥

(ವಸಿಷ್ಠ)ನಿತ್ಯಾನಂದಂ ಸತ್ಯಮನಂತಂ ಬ್ರಹ್ಮಪರಾತ್ಪರಮದ್ವಿತಯಂ ॥
ಶುದ್ಧಂಬುದ್ಧಂಶಾಂತಂಶಾಶ್ವತ ಮಖಿಲಾಧ್ಯಾಸಾಧಿಷ್ಠಾನಂ ॥
ಸರ್ವಾಸಾ ಮುಪನಿಷದಾಮರ್ಥಃ ಶ್ರೀರಾಮಸ್ಸೀತೆಶಇತಿ ।
ಸ್ವಯಮಿಹಹರಚತುರಾಸ್ಯೇಂದ್ರಾದ್ಯೈಃಗೀತೋಯಸ್ತದ್ದಾಸೋಹಂ॥

ತಾ॥ ವಸಿಷ್ಠನು ಸ್ತೋತ್ರಮಾಡಿದ್ದು, ಸದಾ ಕಾಲವೂ ಆನಂದ ಮಯನಾಗಿಯೂ, ಸತ್ಯನಾಗಿಯೂ, ಅಂತ್ಯವಿಲ್ಲದವನಾಗಿಯೂ ಪರಾತ್ಪರ ನಾದ ಬ್ರಹ್ಮಸ್ವರೂಪನಾಗಿಯೂ, ಅದ್ವಯನಾಗಿಯೂ, ಬುದ್ಧಿವಂತನಾಗಿಯೂ, ತಾಳಿಮೆಯುಳ್ಳವನಾಗಿಯೂ, ಲಯವಿಲ್ಲದವನಾಗಿಯೂ (ನಿತ್ಯನಾಗಿಯೂ) ಸರ್ವ ವ್ಯಾಪಿಯಾಗಿಯೂ, ಇರುವ ಪರಮಾತ್ಮನು ಸೀತಾ ಕಾಂತನಾದ ಶ್ರೀರಾಮನೇ ಸರಿಯೆಂದು ಬ್ರಹ್ಮರುದ್ರೇಂದ್ರಾದಿಗಳಿಂದ ಹೇಳಲ್ಪಟ್ಟ ಶ್ರೀರಾಮಚಂದ್ರನಿಗೆ ನಾನು ದಾಸನಾಗಿರುವೆನು. ॥೩॥

ಅನು-ಪಲ್ಲವಿ॥ ಶ್ರಿತಚಿಂತಾಮಣಿಮತಿಕರುಣಾಕರ
ಮರಿಹರಮುರುತರಶರಕೋದಂ
ಡಂಭೋಚೇತಃಶ್ರೀರಾಮಂಭಜ
ಸ್ವಾತ್ಮಾರಾಮಂಭಜಶರಣಂ ॥

ತಾ॥ ಎಲೈ ಮನಸ್ಸೇ! ಭಕ್ತಚಿಂತಾಮಣಿಯಾಗಿಯೂ, ದಯಾ ಸಮುದ್ರನಾಗಿಯೂ, ಶತ್ರುವಿನಾಶಕನಾಗಿಯೂ, ಧನುರ್ಬಾಣ ಧರನಾಗಿಯೂ, ಇರುವ ಶ್ರೀರಾಮಚಂದ್ರನ ಶರಣುಹೊಂದಿ ಆತನನ್ನು ಭಜಿಸು.

ಮಂಗಳಂ ಕೋಸಲೇಂದ್ರಾಯ ಮಹನೀಯಗುಣಾಬ್ಧಯೇ ।
ಚಕ್ರವರ್ತಿತನೂಜಾಯ ಸಾರ್ವಭೌಮಾಯಮಂಗಳಂ ॥

ತಾ॥ ಕೋಸಲರಾಜ್ಯಕ್ಕೆ ರಾಜನಾಗಿಯೂ, ಸದ್ಗುಣ ಸಮುದ್ರನಾಗಿಯೂ, ದಶರಥ ಚಕ್ರವರ್ತಿಯ ಮಗನಾಗಿಯೂ, ಸಾರ್ವಭೌಮನಾಗಿಯೂ ಇರುವ ಶ್ರೀರಾಮಚಂದ್ರನಿಗೆ ಮಂಗಳವಾಗಲಿ.

ಶ್ರೀರಸ್ತು.

ಶ್ರೀ ಸೀತಾರಾಮಾಂಜನೇಯಸಂವಾದವೆಂಬ

ಶ್ರೀ ರಾಮ ತತ್ವಾಮೃತವು.

ಕಂ॥ ಸೀತಾರಾಮಪದಾಬ್ಜವ । ಪ್ರೀತಿಯೊಳಾಂಭಜಿಸುತಾಂಜನೇಯನನೆನೆಯು
ತ್ತಾತುಮವಿದ್ಯಾಮರ್ಣವ । ನಾತತ್ವದಸಾರಮಂವಿಚಾರಿಸಿ ಪೇಳ್ವೆಂ ॥

ಈ ಸಮಸ್ತ ಚರಾಚರ ಪ್ರಪಂಚದ ಸೃಷ್ಟಿ, ಸ್ಥಿತಿ ಲಯಗಳಿಗೆ ಕಾರಣ ಕರ್ತನಾಗಿಯೂ, ಆದಿಮಧ್ಯಾಂತರಹಿತನಾಗಿಯೂ, ಸಚ್ಚಿದಾನಂದ ಸ್ವರೂಪನಾಗಿಯೂ ಭೂಭಾರ ನಿವಾರಣಾರ್ಥವಾಗಿ ಅವತರಿಸಿ ದುಷ್ಟಶಿಕ್ಷಣೆಮಾಡಿ, ಲೋಕವನ್ನುದ್ಧರಿಸಿದ ಪರಬ್ರಹ್ಮಸ್ವರೂಪನಾದ ಶ್ರೀ ರಾಮಚಂದ್ರನನ್ನೂ, ಲೋಕಮಾತೆಯಾದ ಸೀತೆಯನ್ನೂ, ಈ ಪುರಾಣದಂಪತಿಗಳಿಂದ ಪರತತ್ವವನ್ನು ಗ್ರಹಿಸಿದ ಆಂಜನೇಯನನ್ನೂ ಧ್ಯಾನಿಸಿ, ಇವರ ಸಂವಾದರೂಪವಾದ ತತ್ವಸಂಗ್ರಹವನ್ನು ಕನ್ನಡಿಸುವೆನು.—

ಸುಖಪ್ರದವಾಗಿಯೂ, ಶುದ್ಧಸತ್ವಾವಾಸವಾಗಿಯೂ, ಪ್ರಕಾಶಿಸುತ್ತಿರುವ ಕೈಲಾಸಪರ್ವತದಲ್ಲಿ ಸತ್ಯಜ್ಞಾನಾನಂದಸ್ವರೂಪನಾಗಿಯೂ, ಸರ್ವಜ್ಞನಾಗಿಯೂ, ದೇವದೇವನಾಗಿಯೂ ಇರುವ ಪರಮೇಶ್ವರನು ಪ್ರಮಥಗಣಗಳೂ, ಬ್ರಾಹ್ಮೀಮೊದಲಾದ ಸಪ್ತಮಾತೃಕೆಯರೂ, ನಾರದಾದಿ ಮಹರ್ಷಿಗಳೂ, ಇಂದ್ರಾದಿ ದೇವತೆಗಳೂ ಸೇವಿಸುತ್ತಿರಲು, ಆತ್ಮಾರಾಮನಾಗಿ ಕುಳಿತಿರುವಾಗ ಆತನ ಅರ್ಧಶರೀರಿಣಿಯಾಗಿಯೂ, ಪರಾಪರಪ್ರಕೃತಿಸ್ವರೂಪಿಣಿಯಾಗಿಯೂ, ಲೋಕಮಾತೆಯಾಗಿಯೂ, ವಿಶ್ವಮೋಹಿನಿಯಾಗಿಯೂ ಇರುವ ಗೌರೀದೇವಿಯು ಪ್ರೀತಿಪೂರ್ವಕವಾಗಿ ಶುಶ್ರೂಷೆಯಿಂದ ಸೇವಿಸುತ್ತಾ ಭಕ್ತಿಯಿಂದ ಆರಾಧಿಸಲು ಆ ದೇವದೇವನು ಪ್ರಸನ್ನನಾಗಿ ಮುಗುಳುನಗೆಯಿಂದ " ದೇವೀ! ನಿನ್ನ ಸೇವೆಗೆ ನಾನು ಮೆಚ್ಚಿದೆನು. ನಿನ್ನ ಕೋರಿಕೆಯನ್ನು ಕೇಳಕೋ ಕೊಡುವೆನು. " ಎನ್ನಲಾ ಪಾರ್ವತಿಯು ಸಂತೋಷಚಿತ್ತಳಾಗಿ ಕೈಮುಗಿದುಕೊಂಡು ಬಿನ್ನವಿಸಿದಳು.

" ಎಲೈಪ್ರಾಣಕಾಂತನೇ! ಸಾಧ್ವಿಯಾದ ಸ್ತ್ರೀಗೆ ತನ್ನ ಪತಿಯ ಸೇವೆ ಮಾಡುವದಕ್ಕಿಂತ ಬೇರೆ ಕೆಲಸಗಳು ಯಾವುವೂ ಇಲ್ಲ. ನಿನ್ನ ಪಾದಸೇವೆಯೊಂದರಹೊರತು ಮತ್ತಾವಬಯಕೆಯೂ ನನಗಿಲ್ಲವು. ಆದರೂ ವರವನ್ನುಕೊಡುವೆನೆಂದು ಅಪ್ಪಣೆಕೊಡಿಸಿದುದರಿಂದ ತಮ್ಮ ಅನುಗ್ರಹವನ್ನು ತಿರಸ್ಕರಿಸುವುದು ನನಗೆ ಧರ್ಮವಲ್ಲ. ಮನುಷ್ಯರ ಹಿತಕ್ಕೋಸ್ಕರ ಒಂದು ವರವನ್ನು ಬೇಡುವೆನು. ಸಕಲ ಪಾಪಹರವಾಗಿಯೂ, ಸರ್ವಾಭೀಷ್ಟದಾಯಕವಾಗಿಯೂ ಅಕ್ಷಯ ಸುಖಪ್ರದವಾಗಿಯೂ ಇರುವ ಶ್ರೇಷ್ಠತಮವಾದ ಮಂತ್ರವನ್ನು ಕರುಣಿಸು. "

ಈ ಮಾತನ್ನು ಕೇಳಿ ಪರಮೇಶ್ವರ ನಿಂತೆಂದನು.

" ಎಲೌ ಸತಿಯೇ! ಕೇಳಕೂಡದ ರಹಸ್ಯವನ್ನು ನೀನು ಅಪೇಕ್ಷಿಸಿದೆ. ಆ ಮಂತ್ರವು ನನ್ನ ಹೃದಯ ನಿಕ್ಷೇಪವಾಗಿಯೂ ಅತಿಶ್ರೇಷ್ಠವಾಗಿಯೂ ಇರುವುದಾದರೂ ನಿನ್ನ ಕೋರಿಕೆಯಂತೆ ಅದನ್ನು ಹೇಳುವೆನು ಕೇಳು.

ಶ್ರೀರಾಮರಾಮರಾಮೇತಿ ರಮೇ ರಾಮೇ ಮನೋರಮೇ ।
ಸಹಸ್ರನಾಮತತ್ತುಲ್ಯಂ ರಾಮನಾಮವರಾನನೇ ॥

ಪ್ರಿಯಳೇ. ನಾನು ಸದಾಕಾಲವೂ ಶ್ರೀರಾಮ, ರಾಮ, ರಾಮ ಎಂಬಮಂತ್ರವನ್ನು ಜಪಿಸುತ್ತಾ ಆ ರಾಮನಲ್ಲಿಯೇ ಯಾವಾಗಲೂ ಕ್ರೀಡಿಸುತ್ತಿರುವೆನು. ಆ ಮಂತ್ರರಾಜವು ಶ್ರೀಮನ್ನಾರಾಯಣನ ಸಹಸ್ರನಾಮಗಳಿಗೆ ಸಮಾನವಾದುದು. ಈ ಎರಡಕ್ಷರಗಳನ್ನೊಮ್ಮೆ ಜಪಿಸಿದರೆ ಸಹಸ್ರನಾಮಗಳನ್ನು ಜಪಿಸಿದ ಫಲವು ಸಿದ್ಧಿಸುವುದು. ಈ ಮಂತ್ರವು ಧರ್ಮಾರ್ಥಕಾಮ ಮೋಕ್ಷಗಳೆಂಬ ಚತುರ್ವಿಧ ಪುರುಷಾರ್ಥಗಳಿಗೂ ಸಾಧಕವಾದುದು. ಶ್ರೀ ಪರಬ್ರಹ್ಮ ಪ್ರತಿಪಾದಕವಾದುದು. ಪರಮ ಪಾವನವಾದುದು. ಸತ್ಯಜ್ಞಾನಾನಂದಸ್ವರೂಪನಾಗಿಯೂ, ಅದ್ವಯನಾಗಿಯೂ ಇರುವ ಆ ಪರಬ್ರಹ್ಮನಲ್ಲಿ ಬ್ರಹ್ಮಾದಿಯೋಗೀಂದ್ರರೆಲ್ಲರೂ ಸದಾಕಾಲವೂ ರಮಿಸುತ್ತಿರುವರು. ಆದುದರಿಂದಲೇ ಆ ಪರಬ್ರಹ್ಮನಿಗೆ ರಾಮನೆಂಬ ಹೆಸರುಬಂತು. ಆ ರಾಮಪದವಾಚ್ಯನು ಆದಿನಾರಾಯಣನೇ. ಅವನಿಗೂ ನನಗೂ ಸ್ವಲ್ಪವೂ ಭೇದವಿಲ್ಲ. ಅದ್ವಯಬ್ರಹ್ಮಮಯನಾದುದರಿಂದ ನನ್ನಲ್ಲಿ ನಾನೇ ಕ್ರೀಡಿಸುತ್ತಿರುವೆನು. ಈ ರಾಮ ತಾರಕಮಂತ್ರವು ಪರಮ ಪಾವನವು. ಸಕಲ ಪಾಪಗಳನ್ನೂ ನಾಶಗೊಳಿಸುವುದು. ಇದರಮಹಿಮೆಯನ್ನು ವರ್ಣಿಸಲು ಶಕ್ಯವಲ್ಲ. ಆದರೂ ಸ್ವಲ್ಪಮಟ್ಟಿಗೆ ಹೇಳುವೆನು ಕೇಳು, ಈ ರಾಮನಾಮವು ಬ್ರಹ್ಮಹತ್ಯಾಪಾಪವೆಂಬ ಕತ್ತಲೆಗೆ ಸೂರ್ಯಬಿಂಬವು. ಮದ್ಯಪಾನದೋಷವೆಂಬ ಮೇಘಕ್ಕೆ ಬಿರುಗಾಳಿಯು. ಬಂಗಾರವನ್ನು ಕದಿಯುವ ಪಾಪವೆಂಬ ಬೆಟ್ಟಕ್ಕೆ ವಜ್ರಾಯುಧವು. ಗುರುಪತ್ನೀಗಮನವೆಂಬ ಆನೆಗೆ ಸಿಂಹವು. ತಾಯಿ, ತಂದೆ, ಸಹೋದರ, ಗೋವು, ಮುಂತಾದುವುಗಳನ್ನು ಕೊಂದ ಪಾಪವೆಂಬ ಕಾಡಿಗೆ ದಾವಾಗ್ನಿಯು. ಪರಸ್ತ್ರೀಗಮನ, ಪರಸ್ವಾಪಹರಣ, ಮುಂತಾದ ಪಾಪಗಳೆಂಬ ಸರ್ಪಕ್ಕೆ ಕ್ರೂರವಾದ ನವಿಲು. ಸುಳ್ಳಾಡುವ ಪಾಪವೆಂಬ ಬಳ್ಳಿಗೆ ಕುಡುಗೋಲು, ಸಮಸ್ತ ಪಾಪಗಳೆಂಬ ಸಮುದ್ರಕ್ಕೆ ಬಡಬಾಗ್ನಿಯು. ಇಂತಹ ಮಹಾಮಹಿಮೆಯುಳ್ಳ ರಾಮನಾಮವನ್ನು ಜಪಿಸುವವನು ತಾನು ಮಾಡಿದ ಪಾಪಗಳಿಗಾಗಿ ಸ್ವಲ್ಪವೂ ಭಯಪಡಬೇಕಾದುದಿಲ್ಲ. ಈ ರಾಮನಾಮವು ಧರ್ಮಾರ್ಥಿಗಳಿಗೆ ಸರ್ವಧರ್ಮಗಳನ್ನೂ ಉಂಟುಮಾಡುವುದು. ದ್ರವ್ಯಾಪೇಕ್ಷಿಗಳಿಗೆ ಬೇಕಾದಷ್ಟು ಐಶ್ವರ್ಯ ಕೊಡುವುದು, ಕಾಮಿಗಳಿಗೆ ಅವರವರು ಕೋರಿದ ವಸ್ತುಗಳನ್ನು ಕೊಡುವುದು. ಪುತ್ರಾರ್ಥಿಗಳಿಗೆ ಮಕ್ಕಳನ್ನೂ

ಸುಖಾಪೇಕ್ಷಿಗಳಿಗೆ ಸೌಖ್ಯವನ್ನೂ, ಕೀರ್ತಿ ಕಾಮಿಗಳಿಗೆ ಯಶಸ್ಸನ್ನೂ, ವಿದ್ಯಾಭಿಲಾಷಿಗಳಿಗೆ ವಿದ್ಯೆಯನ್ನೂ ಕೊಡುವುದಲ್ಲದೆ ಮತ್ತೆ ಯಾವಯಾವ ಅಸಾಧ್ಯ ವಿಷಯಗಳನ್ನು ಅಪೇಕ್ಷಿಸಿದರೂ ಆಯಾ ಫಲಗಳನ್ನು ಕೊಡುತ್ತಿರುವುದು. ಆದುದರಿಂದ ಶ್ರೀ ರಾಮನಾಮಸಂಕೀರ್ತನಮಾಡುವವರಿಗೆ ಐಹಿಕ ಸುಖಗಳು ಮಾತ್ರವಲ್ಲದೆ ಪರಲೋಕದಲ್ಲಿ ನಿತ್ಯಾನಂದ ಪರಿಪೂರ್ಣವಾದ ಮೋಕ್ಷವೂ ಲಭಿಸುವುದು.''

ಈರೀತಿಯಲ್ಲಿ ಪರಮೇಶ್ವರನು ತನ್ನ ಅರ್ಧಾಂಗಿಯಾದ ಗೌರೀದೇವಿಗೆ ಶ್ರೀರಾಮ ಮಂತ್ರವನ್ನೂ ಅದರ ಮಹಿಮೆಯನ್ನೂ ಉಪದೇಶಿಸಿದನು. ಆ ಪಾರ್ವತಿಯು ಅದನ್ನು ಕೇಳಿ ಪರಮಾನಂದ ಭರಿತಳಾಗಿ, ಭಕ್ತಿಪೂರ್ವಕ ಸಾಷ್ಟಾಂಗದಂಡಪ್ರಣಾಮಗಳನ್ನಾಚರಿಸಿ, "ಎನ್ನ ಪ್ರಾಣವಲ್ಲಭಾ? ಈ ಮಂತ್ರಾಧಿಷ್ಠಾನ ದೇವತೆಯಾರು? ಶ್ರೀರಾಮ ತತ್ವಸ್ವರೂಪವು ಎಂಥದು? ನಿಯಮಿಸಬೇಕು'' ಎಂದು ಪ್ರಾರ್ಥಿಸಿದಳು. ಆಗ ಪರಮೇಶ್ವರನು ಸ್ವಲ್ಪಹೊತ್ತು ಧ್ಯಾನಿಸಿ, "ಎಲೌ ಭಾರ್ಯೇ! ಶ್ರೀರಾಮ ಹೃದಯವೆಂಬ ಶ್ರೇಷ್ಠವಾದ ಇತಿಹಾಸವಿರುವುದು. ಅದರಲ್ಲಿ ಶ್ರೀರಾಮತತ್ವವು ಬಹು ಸ್ಪಷ್ಟವಾಗಿ ತಿಳಿಸಲ್ಪಟ್ಟಿರುವುದು. ಪರಮರಹಸ್ಯವಾದ ಆ ಇತಿಹಾಸವನ್ನು ಹೇಳುವೆನು. ಕೇಳು.'' ಎಂದು ಹೇಳಲಾರಂಭಿಸಿದನು.

ಎಲೌ ಪಾರ್ವತಿಯೇ ಕೇಳು. ಆರ್ತಪರಾಯಣನಾದ ಶ್ರೀಮದಾದಿನಾರಾಯಣನು ಲೋಕೋಪಕಾರಾರ್ಥವಾಗಿ ಅಯೋಧ್ಯಾದೇಶದರಸನಾದ ದಶರಥನಿಗೆ ಮಗನಾಗಿ ಅವತರಿಸಿದನು. ರಾಮನಾಮಾಲಂಕೃತನಾದ ಆ ದೇವನು ಬಾಲ್ಯದಲ್ಲಿಯೇ ವಿಶ್ವಾಮಿತ್ರಮುನಿಯಿಂದ ಯಾಚಿಸಲ್ಪಟ್ಟು, ಹೋಗಿ ಆತನ ಯಜ್ಞ ಸಂರಕ್ಷಣೆಮಾಡಿ ಜನಕರಾಜಪುತ್ರಿಯಾಗಿ ಜಗನ್ಮಾತೆಯೆನಿಸಿದ ಸೀತೆಯನ್ನು ಮದುವೆಯಾದನು. ಅಲ್ಲಿಂದ ಸ್ವದೇಶಕ್ಕೆ ಬಂದು ಕೆಲವುಕಾಲ ಸುಖವಾಗಿದ್ದನು. ಬಳಿಕ ತಂದೆಯು ಆ ಶ್ರೀರಾಮನಿಗೆ ರಾಜ್ಯದ ಪಟ್ಟಾಭಿಷೇಕ ಮಾಡಬೇಕೆಂದು ಪ್ರಯತ್ನಿಸಲು ಅವನ ಪ್ರೇಮಪತ್ನಿಯಾದ ಕೈಕೆಯಿಯು ತನ್ನ ಮಗ ಭರತನಿಗೆ ರಾಜ್ಯದ ಪಟ್ಟವನ್ನು ಕಟ್ಟಬೇಕೆಂತಲೂ ಶ್ರೀರಾಮನನ್ನು ಹದಿನಾಲ್ಕು ವರುಷಗಳ ಕಾಲ ಕಾಡಿಗೆ ಕಳುಹಿಸಿಬಿಡಬೇಕೆಂತಲೂ ಹಟಹಿಡಿದಳು. ಸತ್ಯ ಪ್ರತಿಜ್ಞನಾದ ದಶರಥನು ಪ್ರೀತಿಪಾತ್ರನಾದ ರಾಮನನ್ನು ಅಗಲಲಿ

ಕ್ಕಾಗಲಿ ಕೈಕಯಿಗೆ ಕೊಟ್ಟ ವಾಗ್ದಾನವನ್ನು ತಪ್ಪಲಿಕ್ಕಾಗಲಿ ತೋರದೆ ಚಿಂತಾಸಮುದ್ರದಲ್ಲಿ ಮುಳುಗಿ ತಡಿಗಾಣದೆ ಇದ್ದನು. ಆಗ ಶ್ರೀರಾಮನು ತಂದೆಗೆ ಧೈರ್ಯಹೇಳಿ ನಾರುಮಡಿಗಳನ್ನುಟ್ಟು, ತಂದೆಯ ಅಪ್ಪಣೆಪಡೆದು ತಮ್ಮನಾದ ಲಕ್ಷ್ಮಣನನ್ನೂ ಪತ್ನಿಯಾದ ಸೀತೆಯನ್ನೂ ಕರೆದುಕೊಂಡು ಕಾಡಿಗೆ ಹೋದನು, ಮಗನ ಮೇಲೆಯೇ ಪ್ರಾಣಗಳನ್ನಿರಿಸಿಕೊಂಡಿದ್ದ ದಶರಥನು ಪುತ್ರಶೋಕದಿಂದ ಅಯೋಧ್ಯೆಯಲ್ಲಿ ಮಡಿದನು. ಕೈಕೆಯಿಯ ಮಗನಾದ ಭರತನಿಗೆ ಪಟ್ಟ ಕಟ್ಟಬೇಕೆನ್ನಲು ಅವನು ಒಪ್ಪಲಿಲ್ಲ. ಶ್ರೀರಾಮನು ಕಾಡಿನಲ್ಲಿರುವುದರಿಂದ ಅವನನ್ನೇ ಕರೆದುತಂದು ರಾಜ್ಯವನ್ನು ಒಪ್ಪಿಸುವೆನೆಂದು ಭರತನು ನಿಶ್ಚಯಿಸಿ ಮಂತ್ರಿಪುರೋಹಿತಾದಿ ಜನರನ್ನು ಕರೆದುಕೊಂಡು ಅರಣ್ಯಕ್ಕೆ ಹೋಗಿ, ದಶರಥನ ಮೃತಿಯನ್ನು ಶ್ರುತಪಡಿಸಿ, ರಾಜ್ಯಪಾಳುವುದಕ್ಕೆ ಬರಬೇಕೆಂದು ಪ್ರಾರ್ಥಿಸಿದನು. ಅದಕ್ಕೆ ರಾಮನು "ತಮ್ಮಾ! ಪಿತೃವಾಕ್ಯ ಪರಿಪಾಲನೆಮಾಡದೆ, ಅವನ ಪ್ರತಿಜ್ಞೆಯನ್ನು ಸುಳ್ಳುಮಾಡಿದರೆ ನಾವು ಹುಟ್ಟಿ ಫಲವೇನು? ನೀನೇ ರಾಜ್ಯವನ್ನಾಳಿಕೊಂಡಿರು. ಅವಧಿ ಕಳೆದಮೇಲೆ ನಾನು ಬಂದು ರಾಜ್ಯವನ್ನು ಪಡೆಯುವೆನು." ಎಂದು ಸಮಾಧಾನಮಾಡಿ, ತನಗೆ ಪ್ರತಿನಿಧಿಯಾಗಿ, ತನ್ನ ಪಾದುಕೆಗಳನ್ನಿಟ್ಟುಕೊಂಡು ನೀನೇ ಆಳಿಕೊಂಡಿರು" ಎಂದು ಭರತನಿಗೆ ನೇಮಿಸಲು ಅವನು ಅಣ್ಣನೇ ತಂದೆಯೆಂದು ಭಾವಿಸಿ ಅವನ ಅಪ್ಪಣೆಯಂತೆ ರಾಮಪಾದುಕೆಗಳನ್ನು ಶಿರಸಾವಹಿಸಿ, ಅಯೋಧ್ಯೆಯ ಹತ್ತಿರವಿದ್ದ ನಂದಿಗ್ರಾಮವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಶ್ರೀ ರಾಮನ ಹೆಸರಿನಲ್ಲಿ ಪ್ರಭುತ್ವಮಾಡಿಕೊಂಡಿದ್ದನು.

ಇತ್ತ ಶ್ರೀರಾಮನು ದಂಡಕಾರಣ್ಯದ ಪಂಚವಟಿಯಲ್ಲಿ ಪರ್ಣಶಾಲೆ ಕಟ್ಟಿಕೊಂಡು ವಾಸಮಾಡುತ್ತಿದ್ದಾಗ ಲಂಕಾಧಿಪನಾದ ರಾವಣನ ತಂಗಿ ಶೂರ್ಪನಖಿ ಯೆಂಬವಳು ಆ ದಂಡಕಾರಣ್ಯಕ್ಕೆ ಬಂದಳು. ಅವಳು ಶ್ರೀರಾಮನ ಸುಂದರಾಕಾರವನ್ನು ಕಂಡು ಮನಸೋತು, ಪ್ರಾಯದ ಹೆಂಗಸಿನಂತೆ ವೇಷಧರಿಸಿ, ಆತನ ಬಳಿಗೆ ಬಂದು ನನ್ನನ್ನು ಮದುವೆಮಾಡಿಕೋ ಎಂದು ಪ್ರಾರ್ಥಿಸಿದಳು. ರಾಮನು ನಾನು ಏಕಪತ್ನೀವ್ರತದವನು, ನನ್ನ ತಮ್ಮ ಲಕ್ಷ್ಮಣನಿಗೆ ಹೆಂಡತಿ ಇಲ್ಲದಿರುವುದರಿಂದ ಅವನ ಬಳಿಗೆ ಹೋಗೆಂದು ಕಳುಹಿದನು. ಶೂರ್ಪನಖಿಯು ಅಲ್ಲಿಗೆ ಹೋಗಿ ಕೇಳಲು ಅವನು ನಾನೊಲ್ಲೆನೆಂದನು. ಪುನಃ ರಾಮನಬಳಿಗೆ ಬಂದಳು. ಹೀಗೆ ಸುತ್ತಿ ಸುತ್ತಿ

ಬೇಸತ್ತು, ರಾಮಪತ್ನಿಯಾದ ಸೀತೆಯನ್ನು ನುಂಗಿಬಿಟ್ಟರೆ ತಾನೇ ಮದುವೇಮಾಡಿಕೊಳ್ಳುವನೆಂದು ಯೋಚಿಸಿ, ಆ ಸಾಧ್ವಿಯನ್ನು ಹಿಡಿಯಲಿಕ್ಕೆ ಹೋದಳು. ಕೂಡಲೇ ರಾಮಾಜ್ಞೆಯಿಂದ ಲಕ್ಷ್ಮಣನು ಆ ರಾಕ್ಷಸಿಯ ಕಿವಿಮೂಗುಗಳನ್ನು ಕೊಯ್ದು ಹಾಕಿದನು. ಅವಳು ಅಳುತ್ತಾ, ಅಲ್ಲಿಂದ ಜನಸ್ಥಾನಕ್ಕೆ ಹೋಗಿ ಖರದೂಷಣಾದಿ ರಾಕ್ಷಸರಸಂಗಡ ತನ್ನ ದುಃಖವನ್ನು ಹೇಳಿಕೊಂಡಳು. ಅವರು ರಾಕ್ಷಸ ಸೈನ್ಯಸಮೇತವಾಗಿ ರಾಮನ ಮೇಲೆ ದಂಡೆತ್ತಿಬಂದು ಅವನ ಬಾಣಗಳಿಂದ ಎಲ್ಲರೂ ಹತರಾದರು.

ಬಳಿಕಲಾ ಶೂರ್ಪನಖಿಯು ಲಂಕಾದ್ವೀಪಕ್ಕೆ ಹೋಗಿ ರಾವಣನ ಸಂಗಡ ತನ್ನ ಮಾನಭಂಗವನ್ನು ಹೇಳಿದಳು. ಅವನು ಕೋಪಾಕ್ರಾಂತನಾಗಿ ರಾಮಲಕ್ಷ್ಮಣರನ್ನು ವಧಿಸಿ, ಸೀತೆಯನ್ನು ತರಬೇಕೆಂದು ಮಾರೀಚನನ್ನು ಸಹಾಯಕ್ಕೆ ಕರೆದುಕೊಂಡು ಪಂಚವಟಿಗೆ ಬಂದನು. ಮಾಯಾವಿಯಾದ ಮಾರೀಚನು ಚಿನ್ನದ ಜಿಂಕೆಯ ವೇಷವನ್ನು ಧರಿಸಿ, ರಾಮನಿದ್ದ ಪರ್ಣಶಾಲೆಯ ಸುತ್ತಲೂ ಸುಳಿದಾಡುತ್ತಿರಲು ಸೀತೆಯು ನೋಡಿ ಅದನ್ನು ತನಗೆ ತಂದುಕೊಡಬೇಕೆಂದು ಬೇಡಿದಳು. ಇದು ರಾಕ್ಷಸನ ಮಾಯೆಯೆಂದು ಲಕ್ಷ್ಮಣನು ಹೇಳಿದರೂ ಕೇಳದೆ ರಾಮನು ಅದರ ಬೆನ್ನುಹತ್ತಿ ಹೋದನು. ರಾಮನು ಆ ಮೃಗವನ್ನು ಕೊಲ್ಲಲು ಅದು ಹಾ ಸೀತೇ! ಹಾ! ಲಕ್ಷ್ಮಣಾ! ಎಂದು ಒರಲುತ್ತಾ ಪ್ರಾಣಗಳನ್ನು ಬಿಟ್ಟಿತು. ರಾಮನಗತಿ ಹೇಗೋ ಎಂದು ಚಿಂತಿಸುತ್ತಾ ಅವನನ್ನು ಹುಡುಕಿಕೊಂಡು ಬಾರೆಂದು ಸೀತೆಯು ಲಕ್ಷ್ಮಣನನ್ನು ಕಳುಹಿದಳು. ಆ ವೇಳೆಯಲ್ಲಿಯೇ ರಾವಣನು ಕಪಟ ಯತಿಯವೇಷವನ್ನು ಧರಿಸಿ ಪರ್ಣಶಾಲೆಗೆ ಹೊಕ್ಕು ಸೀತೆಯನ್ನು ಹಿಡಿದು ರಥದಮೇಲೆ ಕುಳ್ಳಿರಿಸಿಕೊಂಡು ಲಂಕೆಗೆಹೋಗಿ, ಅಶೋಕವನದಲ್ಲಿ ಅವಳನ್ನು ಸೆರೆ ಇಟ್ಟು ಹಲವು ರಾಕ್ಷಸಿಯರನ್ನು ಕಾವಲಾಗಿಡಿಸಿದನು.

ರಾಮ ಲಕ್ಷ್ಮಣರು ಪರ್ಣಶಾಲೆಗೆಬಂದು ನೋಡಲು ಸೀತೆ ಇರಲಿಲ್ಲ. ಕಾಡಿನಲ್ಲಿ ಹುಡುಕುತ್ತಾ ಬಂದರು. ರಾವಣನನ್ನು ತಡೆದು ಪೆಟ್ಟು ತಿಂದಿದ್ದ ಜಟಾಯುವು ಸೀತೆಯನ್ನು ರಾವಣನು ಅಪಹರಿಸಿದನೆಂದು ಹೇಳಿ ಪ್ರಾಣಬಿಟ್ಟನು. ಬಳಿಕಲಾ ಸಹೋದರರು ಅವನನ್ನು ಹುಡುಕುತ್ತಾ ಪಂಪಾತೀರಕ್ಕೆಬಂದು ಸುಗ್ರೀವನೆಂಬ ಕಪಿರಾಜನ ಸ್ನೇಹಮಾಡಿಕೊಂಡರು. ಅವನ ಅಣ್ಣನಾದ ವಾಲಿಯನ್ನು ರಾಮನು ಒಂದೇಬಾಣದಿಂದ

ಕೊಂದು ಅವನಿಗೆ ಕಿಷ್ಕಿಂಡಾರಾಜ್ಯದ ಪಟ್ಟಕಟ್ಟಿದನು. ಸುಗ್ರೀವನು ಸೀತೆಯನ್ನು ಹುಡುಕಲಿಕ್ಕೆ ಎಲ್ಲಾ ದಿಕ್ಕುಗಳಿಗೂ ಕಪಿಗಳನ್ನು ಕಳುಹಿದನು. ದಕ್ಷಿಣಕ್ಕೆ ಹೋಗಿದ್ದ ಹನುಮ ಜಾಂಬವಾದಿಗಳ ಹೊರತು ಉಳಿದವರೆಲ್ಲರೂ ಬಂದು ಸೀತೆಯು ಸಿಕ್ಕಲಿಲ್ಲವೆಂದು ಹೇಳಿದರು. ಹನುಮದಾದಿಗಳು ಸಂಪಾತಿಯೆಂಬ ಗೃಧ್ರರಾಜನಿಂದ ಸೀತಾವೃತ್ತಾಂತವನ್ನು ತಿಳಿದು ಸಮುದ್ರವನ್ನು ದಾಟುವುದು ಹೇಗೆಂದು ಚಿಂತಿಸುತ್ತಿದ್ದರು. ಪರಾಕ್ರಮಿಯಾದ ಆ ಆಂಜನೇಯನು ಈ ಕಾರ್ಯಕ್ಕೆ ಒಪ್ಪಿಕೊಂಡು, ಶತಯೋಜನ ವಿಸ್ತಾರವಾದ ಸಮುದ್ರವನ್ನು ದಾಟಿ, ಲಂಕಾಪಟ್ಟಣದಲ್ಲೆಲ್ಲಾ ಹುಡುಕಿ ಸೀತೆಯನ್ನು ಕಾಣದೆ ಕೊನೆಗೆ ಅಶೋಕವನದಲ್ಲಿ ಸೆರೆಯಿದ್ದ ಸೀತೆಯ ಸಂದರ್ಶನಮಾಡಿಕೊಂಡು ಶ್ರೀರಾಮನಾಮಾಂಕಿತವಾದ ಮುದ್ರಿಕೆಯನ್ನು ಆ ದೇವಿಗೆ ಒಪ್ಪಿಸಿ, ತಮ್ಮೊಡೆಯನಿಗೆ ಗುರುತು ತೋರಿಸುವದಕ್ಕೋಸ್ಕರ ಆಕೆಕೊಟ್ಟ ಚೂಡಾಮಣಿಯನ್ನು ತೆಗೆದುಕೊಂಡನು. ತಾನು ಬಂದಸುದ್ದಿ ರಾವಣನಿಗೆ ತಿಳಿಯಬೇಕೆಂದು ಆ ತೋಟವನ್ನೆಲ್ಲಾ ಧ್ವಂಸಮಾಡಿದನು. ಕಾವಲಿದ್ದ ರಾಕ್ಷಸರು ಮೇಲೆಬೀಳಲು ಅವರನ್ನೆಲ್ಲಾ ಕೊಂದುಬಿಟ್ಟನು. ರಾವಣನಿಗೆ ಈ ಸುದ್ದಿ ತಿಳಿದು ತನ್ನ ಮಕ್ಕಳನ್ನೂ ಮಂತ್ರಿಗಳನ್ನೂ ಕಳುಹಿದನು. ಆಂಜನೇಯನು ಯುದ್ಧದಲ್ಲಿ ಅವರನ್ನೆಲ್ಲಾ ಕೊಂದುಬಿಟ್ಟನು ಬಳಿಕ ಅವನ ಹಿರಿಯಮಗನಾದ ಇಂದ್ರಜಿತುವನ್ನು ಕಳುಹಿದನು. ಹನುಮಂತನು ಆತನ ಬ್ರಹ್ಮಾಸ್ತ್ರದಿಂದ ಬದ್ಧನಾಗಿ ರಾವಣನಸಭೆಗೆ ಒಯ್ಯಲ್ಪಟ್ಟನು. ಅಲ್ಲಿ ಸೀತೆಯನ್ನು ಒಪ್ಪಿಸಿ ರಾಮನಿಗೆ ಶರಣಾಗತನಾಗೆಂದು ಬೋಧಿಸಲು ರಾವಣನು ಇವನನ್ನು ಕೊಂದುಬಿಡಿರೆಂದು ಆಜ್ಞಾಪಿಸಿದನು. ದೂತವಧೆಯು ನಿಷಿದ್ಧವೆಂದು ವಿಭೀಷಣನು ತಡೆದುದರಿಂದ ಬಾಲಕ್ಕೆ ಬೆಂಕಿಹತ್ತಿಸಿ ಸುಟ್ಟುಬಿಡಿರೆಂದು ರಾವಣನು ಅಪ್ಪಣೆಮಾಡಿದನು. ಊರಿನಲ್ಲಿದ್ದ ಬಟ್ಟೆಗಳನ್ನೆಲ್ಲಾ ಎಣ್ಣೆಯಲ್ಲಿ ಅದ್ದಿ ತಂದು ಬಾಲಕ್ಕೆಸುತ್ತಿ ಬೆಂಕಿ ತೋರಿಸಲು ಅದೇ ಅಗ್ನಿಯಿಂದ ಲಂಕೆಯನ್ನೆಲ್ಲಾ ಸುಟ್ಟು ಸಮುದ್ರವನ್ನು ದಾಟಿ ಬಂದು ಶ್ರೀರಾಮನಿಗೆ ಈ ಸುದ್ದಿ ತಿಳಿಸಿ ಚೂಡಾಮಣಿಯನ್ನೊಪ್ಪಿಸಿದನು.

ಬಳಿಕ ಶ್ರೀರಾಮನು ಕಪಿಸೈನ್ಯದೊಂದಿಗೆ ಲಂಕಾಪಟ್ಟಣದಮೇಲೆ ಹೊರಟನು. ರಾವಣನ ತಮ್ಮನಾದ ವಿಭೀಷಣನು ಸೀತೆಯನ್ನು ಒಪ್ಪಿ

ಸುವುದು ಹಿತವೆಂದು ಅಣ್ಣನಿಗೆ ಬುದ್ಧಿ ಹೇಳಿದರೂ ಕೇಳದೆ ಅವನನ್ನು ಒದೆದು ಆಟ್ಟಿಬಿಡಲು ಅವನು ಶ್ರೀ ರಾಮನಬಳಿಗೆ ಬಂದು ಶರಣಾಗತನಾದನು. ಶ್ರೀರಾಮನು ಅವನನ್ನು ಮನ್ನಿಸಿ, ಅವನಿಗೆ ಲಂಕಾಧಿಪತ್ಯವನ್ನು ಕೊಟ್ಟು ಕಪಿಸೇನಾಪತಿಯಾದ ನಳನಿಂದ ಸಮುದ್ರಕ್ಕೆ ಸೇತುವನ್ನು ಕಟ್ಟಿಸಿ, ಸಮುದ್ರವನ್ನು ದಾಟಿಬಂದು ರಾವಣನ ಸೈನ್ಯದೊಂದಿಗೆ ಘೋರಯುದ್ಧಮಾಡಿದನು. ರಾವಣನ ತಮ್ಮನಾದ ಕುಂಭಕರ್ಣನೂ, ಮಕ್ಕಳಾದ ಅತಿಕಾಯ, ಇಂದ್ರಜಿತು ಮೊದಲಾದವರೂ, ಪ್ರಹಸ್ತಾದಿ ಮಂತ್ರಿಗಳೂ ಸಮಸ್ತ ಸೈನ್ಯವೂ, ಯುದ್ಧದಲ್ಲಿ ಲಯವಾದುವು. ಕೊನೆಗೆ ತಾನೇ ಎದುರಿಗೆಕಾದು ರಾಮಬಾಣಗಳಿಂದ ಮಡಿದು ಕೈವಲ್ಯಪದವಿಯನ್ನು ಪಡೆದನು.

ಬಳಿಕ ಶ್ರೀರಾಮನು ಅಗ್ನಿಶುದ್ಧಿಯಾದ ಸೀತೆಯನ್ನು ಪರಿಗ್ರಹಿಸಿ ವಿಜಯಶ್ರೀಯೊಂದಿಗೆ ಸುಗ್ರೀವಾಂಗದ ವಿಭೀಷಣಾದಿ ಸಮಸ್ತರನ್ನು ಕರೆದುಕೊಂಡು ರಾವಣನ ಪುಷ್ಪಕವಿಮಾನದಲ್ಲಿ ಕುಳಿತು, ವನವಾಸದ ಹದಿನಾಲ್ಕು ವರುಷಗಳ ಅವಧಿಯು ಪೂರೈಸುವವೇಳೆಗೆಸರಿಯಾಗಿ ಅಯೋಧ್ಯಾ ಪಟ್ಟಣಕ್ಕೆ ಬರಲು ಭರತನು ಭಕ್ತಿಪ್ರೇಮಗಳಿಂದ ಎದುರುಗೊಂಡು ಕರೆದುತಂದು ಆತನ ರಾಜ್ಯವನ್ನೊಪ್ಪಿಸಿದನು. ವಸಿಷ್ಠಾದಿಮಹರ್ಷಿಗಳು ಶ್ರೀರಾಮನನ್ನು ಸೀತಾಸಮೇತನಾಗಿ ರತ್ನಸಿಂಹಾಸನದಲ್ಲಿ ಕುಳ್ಳಿರಿಸಿ, ಸಮುದ್ರೋದಕದಿಂದಲೂ, ಪುಣ್ಯತೀರ್ಥೋದಕಗಳಿಂದಲೂ ಅಭಿಷೇಕಮಾಡಿ, ಅಯೋಧ್ಯಾರಾಜ್ಯದ ಪಟ್ಟವನ್ನು ಕಟ್ಟಿದರು. ಉತ್ಸವಕ್ಕೆ ಬಂದ ಬಂಧುಮಿತ್ರ ಸಾಮಂತಾದಿ ಸಮಸ್ತಜನಗಳಿಗೂ ಅವರವರ ಯೋಗ್ಯತಾನುಗುಣವಾಗಿ ಮರ್ಯಾದೆಮಾಡಿ ದಿವ್ಯಾಂಬರಗಳಿಂದ ಅವರನ್ನು ತೃಪ್ತಿಪಡಿಸಿ, ಒಡ್ಡೋಲಗವನ್ನು ಕೊಡುತ್ತಿದ್ದನು.

ಬಳಿಕಲಾ ಶ್ರೀರಾಮನು ಪುಣ್ಯಕೀರ್ತಿಯುಳ್ಳವನಾಗಿಯೂ ಕೃತಕಾರ್ಯನಾಗಿಯೂ, ನಿರಪೇಕ್ಷನಾಗಿಯೂ, ನಿತ್ಯಾನಿತ್ಯವಸ್ತು ವಿವೇಕಯುಕ್ತನಾಗಿಯೂ, ಭೋಗವಿರಕ್ತನಾಗಿಯೂ, ಶಮದಮಾದಿ ಸದ್ಗುಣಸಂಪನ್ನನಾಗಿಯೂ, ಮುಮುಕ್ಷುವಾಗಿಯೂ, ಬುದ್ಧಿವಂತನಾಗಿಯೂ, ತನ್ನ ಪುರೋಭಾಗವರ್ತಿಯಾಗಿಯೂ, ನಿಟಲ ತಟಘಟಿತಾಂಜಲಿಯಾಗಿಯೂ ಇದ್ದ ಹನುಮಂತನನ್ನು ನೋಡಿ, ಕರುಣಾರಸಾರ್ದ್ರದೃಷ್ಟಿಯಿಂದ ಜಾನಕಿಯ ಮುಖವನ್ನುನೋಡಿ, "ದೇವೀ ! ನಮ್ಮ ನಿತ್ಯ



ಭಕ್ತನಾಗಿಯೂ ಮದೀಯಜ್ಞಾನಾಸಕ್ತನಾಗಿಯೂ, ಭಾಗವತಾಗ್ರಣಿಯಾಗಿ ಇರುವ ಈತನಿಗೆ ನನ್ನ ದಿವ್ಯತತ್ವಸ್ವರೂಪವನ್ನು ಉಪದೇಶಿಸೆಂದು" ಹೇಳಿದನು. ಚಿನ್ನಕ್ಕೆ ಪರಮಳವನ್ನು ಕೊಟ್ಟಂತೆ ಪತಿಯ ವಾಕ್ಯದಿಂದಲಾ ಸೀತಾದೇವಿಯು ಸಂತೋಷದಿಂದ ಉಬ್ಬಿ, ಮಂದಸ್ಮಿತವದನಾರವಿಂದೆಯಾಗಿ ಆ ಆಂಜನೇಯನಿಗೆ ಅಭಿಮುಖಳಾಗಿ ಇಂತೆಂದಳು.

(ವಿಶೇಷವಿಷಯ) "ಸಾಧನಚತುಷ್ಟಯಗಳು ನಾಲ್ಕು ಯಾವುವೆಂದರೆ? (೧) ನಿತ್ಯಾನಿತ್ಯವಸ್ತು ವಿವೇಕವು ಪರಬ್ರಹ್ಮವೇ ಸತ್ಯವೆಂತಲೂ, ನಾಮ ರೂಪ ಕ್ರಿಯೆಗಳುಳ್ಳದ್ದಾಗಿ ಅಸತ್ಯ, ಜಡ, ಖಂಡ, ದುಃಖ, ಮಲಿನ ಇವೇ ಸ್ವರೂಪವಾಗಿ ಉಳ್ಳ ಪಿಪೀಲಿಕಾದಿ ಬ್ರಹ್ಮಪರ್ಯಂತವಾದ ಸಮಸ್ತ ಪ್ರಾಣಿಗಳಿಂದ ಕೂಡಿದ ಲೋಕವೇ ಅನಿತ್ಯವೆಂತಲೂ ತಿಳಿಯತಕ್ಕದ್ದು. (೨) ಭೋಗವಿರಕ್ತಿಯೆಂದರೆ ಈ ಲೋಕದಲ್ಲಿರುವ ಪುಷ್ಪ, ಗಂಧ, ವಸ್ತ್ರ, ಸ್ತ್ರೀಯರು, ಮನೆ, ಮಠ ಮುಂತಾದವುಗಳ ಭೋಗದಲ್ಲಿಯೂ, ಪರಲೋಕಗಳಾದ ಸ್ವರ್ಗ, ಸತ್ಯಲೋಕ, ಕೈಲಾಸ, ವೈಕುಂಠ ಮುಂತಾದ ಲೋಕಗಳಲ್ಲಿಯೂ ಸಾಲೋಕ್ಯ ಸಾರೂಪ್ಯ ಸಾಮೀಪ್ಯ ಸಾಯುಜ್ಯಗಳೆಂಬ ಪದವಿಗಳಲ್ಲಿಯೂ, ವಾಂತಿಯಾದ ಅನ್ನ ಅಥವಾ ಮಲಮೂತ್ರಾದಿಗಳಂತೆ ಆಶೆಯನ್ನು ಬಿಟ್ಟು ಇರುವುದು. (೩) ಶಮದಮಾದಿ ಸದ್ಗುಣಗಳೆಂದರೆ, ಅಂತರಿಂದ್ರಿಯ ನಿಗ್ರಹರೂಪವಾದದ್ದು ಶಮೆ, ಬಹಿರಿಂದ್ರಿಯ ನಿಗ್ರಹರೂಪವಾದದ್ದು ದಮೆ, ವಿಹಿತವಾದ ಸಕಲ ಕರ್ಮಗಳನ್ನೂ ಜ್ಞಾನನಿಷ್ಠಾದಿ ವಿಧಿಯಿಂದ ಕ್ರಮಕ್ರಮವಾಗಿ ತ್ಯಜಿಸುವುದು ಸನ್ಯಾಸ, ಶೀತೋಷ್ಣ ಸುಖದುಃಖಾದಿ ದ್ವಂದ್ವಗಳನ್ನು ಸಹಿಸುವುದು ತಿತೀಕ್ಷೆ, ಗುರುಗಳಲ್ಲಿಯೂ ವೇದಾಂತ ಶಾಸ್ತ್ರಗಳಲ್ಲಿಯೂ ಈಶ್ವರನಲ್ಲಿಯೂ ವಿಶ್ವಾಸವುಳ್ಳವನಾಗಿರುವುದು ಶ್ರದ್ಧೆ, ಸದ್ಗುರುವು ಉಪದೇಶಿಸಿದ ಮಹಾವಾಕ್ಯಾರ್ಥಗಳನ್ನು ಶಾಸ್ತ್ರಗಳಲ್ಲಿ ನೋಡಿಕೊಂಡು ಮನಸ್ಸಿನಲ್ಲಿ ದೃಢಪಡಿಸಿಕೊಳ್ಳುವುದು ಸಮಾಧಾನವು. ಇವು ಆರಕ್ಕೂ ಷಡ್ಗುಣವೆಂದು ಹೆಸರು. ಇವೇ ಸದ್ಗುಣಗಳು. ಆಂಜನೇಯನು ಬುದ್ಧಿವಂತನೆಂದು ಹೇಳಲ್ಪಟ್ಟಿದೆ. ಆ ಬುದ್ಧಿಯು ಏಳುವಿಧ.

(೧) ತತ್ವವನ್ನು ತಿಳಿದುಕೊಳ್ಳುವ ಬುದ್ಧಿಯು ಪಂಡವೆನಿಸುವುದು. (೨) ಕೇಳಿದುವುಗಳನ್ನೆಲ್ಲಾ ಮರೆಯದೆ ಜ್ಞಾಪಕದಲ್ಲಿಟ್ಟುಕೊಳ್ಳುವ ಬುದ್ಧಿಯು ಮೇಧಾ. (೩) ಊಹಾಪೋಹಗಳಲ್ಲಿ ಚಾತುರ್ಯವುಳ್ಳ ಬುದ್ಧಿಗೆ

ಚಾರ್ವಿಯೆಂದು ಹೆಸರು. (೪) ವಿಷಯಗಳನ್ನು ಚೆನ್ನಾಗಿ ಕೇಳಿ ಬೇಸರವಿಲ್ಲದೆ ತಿಳಿದುಕೊಳ್ಳುವ ಬುದ್ಧಿಯು ಚತ್ವ. (೫) ಹೇಳಿದುದನ್ನು ತಪ್ಪದೆ ಗ್ರಹಿಸುವುದರಲ್ಲಿ ಚತುರತೆಯುಳ್ಳ ಬುದ್ಧಿಯು ಗೃಹೀತಿ. (೬) ಗುರುಶುಶ್ರೂಷೆಗಳಲ್ಲಿ ಸಹನೆಯುಳ್ಳ ಬುದ್ಧಿಯು ಶ್ರೌತಿ. (೭) ಯಾವುದಾದರೂ ಒಂದು ವಿಷಯವನ್ನು ಹೇಳಬೇಕಾಗಿ ಬಂದಾಗ ವಾಗ್ಧೋರಣೆಯುಳ್ಳದ್ದಾಗಿ ಸಮಯಕ್ಕೆ ತಕ್ಕಂತೆ ಶ್ರುತಿ, ಸ್ಮೃತಿ, ಇತಿಹಾಸ, ಮತ್ತು ಅನುಭವಗಳಲ್ಲಿ ಹಲವನ್ನು ಹೇಳಿ, ಇತರರು ಪ್ರಶ್ನೆಮಾಡಲಿಕ್ಕೇನೇ ಅವಕಾಶವಿಲ್ಲದಂತೆ ತಿಳಿಸುವ ಬುದ್ಧಿಯು ಪ್ರತಿಭ. ಇವೇಳೂ ಸಪ್ತವಿಧ ಬುದ್ಧಿಗಳೆನಿಸುವುವು.''

ಎಲೈ ಬುದ್ಧಿವಂತನಾದ ಆಂಜನೇಯನೇ ಕೇಳು. ಪರಬ್ರಹ್ಮಸ್ವರೂಪನಾದ ಈ ಶ್ರೀರಾಮಚಂದ್ರನು ವಿಕಾರರಹಿತನು (ಇರುವುದು, ಹುಟ್ಟುವುದು, ಬೆಳೆಯುವುದು, ಪರಿಣಮಿಸುವುದು, ತಗ್ಗುವುದು ನಾಶವಾಗುವುದು. ಇವು ಆರಕ್ಕೂ ವಿಕಾರಗಳೆಂದು ಹೆಸರು. ಇವುಗಳಿಲ್ಲದವನು.) ಯಾವಾಗಲೂ ಶುದ್ಧವಾಗಿರುವವನು. ಜ್ಞಾನಸ್ವರೂಪನು. ಮನಸ್ಸಿನಿಂದ ಇವನಿಂತವನೆಂದು ಊಹಿಸುವುದಕ್ಕೂ, ಬಾಯಿಂದ ಇಂತದೆಂದು ಹೇಳುವುದಕ್ಕೂ, ಬುದ್ಧಿಯಿಂದ ಇಂತದೆಂದು ನಿಶ್ಚಯಿಸಲಿಕ್ಕೂ, ಮನಸ್ಸಿನಿಂದ ಈ ವಸ್ತುವಾಗಿರಬಹುದೆ? ಎಂದು ಶಂಕಿಸುವುದಕ್ಕೂ, ಕಣ್ಣುಗಳಿಂದ ದಶವಿಧ ರೂಪಗಳಲ್ಲಿ ಈ ರೂಪವಾಗಿರುವುದೆಂದು ನೋಡುವುದಕ್ಕೂ ಅಶಕ್ಯವಾಗಿರುವವನು. ಇಲ್ಲಿರುವನು ಅಲ್ಲಿ ಇಲ್ಲ, ಈ ಕಾಲದಲ್ಲಿರುವನು ಆ ಕಾಲದಲ್ಲಿ ಇಲ್ಲ, ಈ ವಸ್ತುವಿನಲ್ಲಿರುವನು, ಆ ವಸ್ತುವಿನಲ್ಲಿಲ್ಲ ಎಂದು ಹೇಳಲಿಕ್ಕೇನೇ ಅವಕಾಶವಿಲ್ಲದವನು. ಸ್ವಯಂಪ್ರಕಾಶನು ಅಂದರೆ ತನ್ನಷ್ಟಕ್ಕೆ ತಾನೇ ಬೆಳಗುತ್ತಿರುವವನು. ಮಾನಾವಮಾನಗಳು, ಸುಖದುಃಖಗಳು, ವೃದ್ಧಿಕ್ಷಯಗಳು ಮುಂತಾದ ದ್ವಂದ್ವಗಳಿಲ್ಲದವನು. ಸಂಕಲ್ಪ ವಿಕಲ್ಪಗಳಿಲ್ಲದೆಯೂ, ಸ್ಥೂಲಸೂಕ್ಷ್ಮಕಾರಣ ದೇಹಗಳಿಲ್ಲದೆಯೂ, ಸಚ್ಚಿದಾನಂದ ಸ್ವರೂಪನಾಗಿಯೂ ಪ್ರಕಾಶಿಸುವ ಪರಬ್ರಹ್ಮನೇ ಈ ಶ್ರೀರಾಮನೆಂದು ತಿಳಿಯಯ್ಯಾ, ಈ ದೇವದೇವನು ವಿಕಾರವಿಲ್ಲದವನಾಗಿದ್ದರೂ ಚಿನ್ನವು ವಿಕಾರವಾಗಿ ಹಲವು ಬಗೆಯ ಆಭರಣಗಳಾಗುವಂತೆ ಇವನೇ ಆಕಾಶವಾಗಿಯೂ, ಭೂಮಿಯಾಗಿಯೂ, ಸೂರ್ಯನಾಗಿಯೂ, ಚಂದ್ರನಾಗಿಯೂ, ಸರ್ವಾತ್ಮನಾಗಿಯೂ ಪ್ರಕಾಶಿಸುತ್ತಿರುವನು. ಸತ್ವರ

ಜಸ್ತಮೋಗುಣಗಳೆಂಬ ತ್ರಿಗುಣಾತ್ಮಕಳಾಗಿ ಸಮಸ್ತಲೋಕಗಳನ್ನೂ ಸೃಷ್ಟಿಸಿ, ರಕ್ಷಿಸಿ, ಸಂಹರಿಸತಕ್ಕ ಮೂಲಪ್ರಕೃತಿಯೂ ನಾನೇ ಎಂದು ತಿಳಿ. ಈ ಮಾತು ಸತ್ಯವು. ನಿರ್ಮಲನಾದ ಈ ಸ್ವಾಮಿಯ ಸಾನ್ನಿಧ್ಯದಿಂದ ನಾನೇ ಈ ಪ್ರಪಂಚವನ್ನೆಲ್ಲಾ ಸೃಷ್ಟಿಸುವೆನು. ತ್ರಿಗುಣಗಳಿಂದ ಆದ ಸೃಷ್ಟಿಯ ವಿವರಣೆಯನ್ನು ಕೇಳು.

ಸತ್ವಗುಣದಿಂದ— ಬ್ರಹ್ಮನೇ ಮೊದಲಾದ ಮುವ್ವತ್ತುಮೂರು ಕೋಟಿ ದೇವತೆಗಳೂ, ರಜೋಗುಣದಿಂದ ಮನುಷ್ಯರು; ಮೃಗಗಳು, ಪಕ್ಷಿಗಳು, ಕ್ರಿಮಿಗಳು, ಜಲಚರಗಳು ಮುಂತಾದ ಸಕಲಜಂಗಮ ಪ್ರಾಣಿಗಳೂ, ತಮೋಗುಣದಿಂದ ಭೂಮಿ, ಪರ್ವತ, ವೃಕ್ಷಮುಂತಾದ ಸಕಲ ಸ್ಥಾವರ ವಸ್ತುಗಳೂ ಹುಟ್ಟಿದುವು. ಮತ್ತು ಈ ತ್ರಿಗುಣಗಳು ಒಂದರೊಂದಿಗೆ ಬಂದು ಸೇರಿ, (೧) ಸತ್ವಸತ್ವ, ಸತ್ವರಾಜಸ, ಸತ್ವತಾಮಸ (೨) ರಜಸ್ಸತ್ವ, ರಜೋರಜಸ್ಸು, ರಜಸ್ತಾಮಸ (೩) ತಮಸ್ಸತ್ವ, ತಮೋರಜಸ್ಸು, ತಮಸ್ತಾಮಸ ಎಂದು ಒಂಭತ್ತು ಭೇದಗಳಾದುವು. ಇವುಗಳ ವಿವರವನ್ನು ಹೇಳುವೆನು ಕೇಳು.

೧. ಸತ್ವಸತ್ವದಿಂದ- ವಿರಾಟ್ಪುರುಷನು, ಸೂತ್ರೇಶ್ವರನು ಮೊದಲಾದವರು ಹುಟ್ಟಿದರು. ೨. ಸತ್ವರಾಜಸದಿಂದ- ದೇವತೆಗಳೂ, ಅರುವತ್ತು ಕೋಟಿ ವಾಲಖಿಲ್ಯರು, ವೈಖಾನಸರು ಮೊದಲಾದವರು ಜನಿಸಿದರು. ೩. ಸತ್ವತಾಮಸದಿಂದ—ಯಕ್ಷರು, ರಾಕ್ಷಸರು, ವಿದ್ಯಾಧರರು ಮೊದಲಾದವರು. ೪. ರಜಸ್ಸತ್ವದಿಂದ—ಜನಸಂಘಗಳೂ. ೫. ರಜೋರಜಸ್ಸಿನಿಂದ—ನಾಲ್ಕು ಕಾಲುಗಳುಳ್ಳ ಪಶುಗಳು, ಮೃಗಗಳು ಮುಂತಾದುವೂ. ೬. ರಜೋತಮಸ್ಸಿನಿಂದ—ಹೇನು, ಕೂರೆ ಮೊದಲಾದ ಸ್ವೇದಜಗಳೂ, ಮೀನು, ಕಪ್ಪೆ ಮುಂತಾದ ಜಲಚರಗಳೂ. ೭. ತಮಸ್ಸತ್ವದಿಂದ—ಪೈರುಗಳೂ, ಹುಲ್ಲುಸೊಪ್ಪು ಮೊದಲಾದ ಉದ್ಭಿಜ್ಜಗಳೂ, ೮. ತಮೋರಜಸ್ಸಿನಿಂದ—ಗಿಡಗಳೂ, ಪೊದರುಗಳೂ, ಬಳ್ಳಿಗಳೂ, ೯. ತಮೋತಮಸ್ಸಿನಿಂದ—ಭೂಮಿ, ಬೆಟ್ಟ, ಕಲ್ಲು, ಲೋಹಗಳು ಮುಂತಾದ ಸ್ಥಾವರಗಳೂ ಹುಟ್ಟಿದುವು.

ಮತ್ತು ಈ ಒಂಭತ್ತು ಮಿಶ್ರಗುಣಗಳೂ ಒಂದೊಂದರೊಂದಿಗೆ ಕಲೆತು ಇಪ್ಪತ್ತೇಳು ಸಂಕರಗುಣಗಳಾಗಿ ಸೃಷ್ಟಿಗೆ ಅನುಕೂಲಿಸಿದುವು ಅವು ಯಾವುವೆಂದರೆ—

೧. ಸತ್ವತಮಸ್ತಮಸ್ಸು— ಇದರಿಂದ ಶೇಷನು, ವಾಸುಕಿ, ಕರ್ಕೋಟಕನೇ ಮೊದಲಾದ ಸರ್ಪಗಳೂ, ಹಾಹಾ ಹೂಹೂ ಮೊದಲಾದ ಗಂಧರ್ವರೂ, ಕಿಂನರರೂ, ಕಿಂಪುರುಷರೂ, ಕಾಮರೂಪಿಗಳಾದ ಮೂವತ್ತಾರುಮಂದಿ ತುಷಿತರೂ, ನೈರುತಿ ಮುಂತಾದ ರಾಕ್ಷಸರೂ, ಅರುವತ್ತಾರು ಕೋಟಿ ದೈತ್ಯರೂ, ಕುಬೇರನೇ ಮೊದಲಾದ ಯಕ್ಷರೂ ಹುಟ್ಟಿದರು.

೨. ಸತ್ವತಮೋರಜಸ್ಸು— ಇದರಿಂದ ಮೂವತ್ತು ಮೂರು ಕೋಟಿ ದೇವತೆಗಳೂ, ಯಮನೂ, ಅಂಗಿರಸನೂ, ಅಗ್ನಿಷ್ವತ್ತನೂ, ಕವ್ಯವಾಹನನೂ, ಅಜಾನುಜಾನುಗಳು ಮೊದಲಾದ ಪಿತೃದೇವತೆಗಳೂ ಹುಟ್ಟಿದರು.

೩. ಸತ್ವತಮಸ್ಸತ್ವ—ಇದರಿಂದ ಭೂಲೋಕದಲ್ಲಿಯ ಜನರಿಗೆ ಅಗ್ನಿಷ್ಟೋಮಾದಿ ವೈದಿಕಕರ್ಮಗಳಲ್ಲಿ ಬುದ್ಧಿಯನ್ನು ಹುಟ್ಟಿಸಲಿಕ್ಕೂ, ಅವರಿಗೆ ತಮ್ಮ ಸಾರೂಪ್ಯಪದವಿಗಳನ್ನು ಕೊಡಲಿಕ್ಕೂ ಶಕ್ತರಾಗಿ ದೇವಲೋಕದಲ್ಲಿರುವ ಕರ್ಮದೇವತೆಗಳೂ, ಸೂರ್ಯನು ಮೊದಲಾದ ನವಗ್ರಹಗಳೂ, ಅವುಗಳ ಪರಿವಾರಗಳು ವಾಸಮಾಡುವ ಲೋಕಗಳೂ ಹುಟ್ಟಿದುವು.

೪. ಸತ್ವರಜಸ್ತಮಸ್ಸು— ಇದರಿಂದ ಅಣಿಮಾದಿಸಿದ್ಧಿಗಳನ್ನು ಪಡೆದಿರುವ ವಿಶ್ವಾವಸು, ಪರಾವಸು ಮುಂತಾದ ಸಿದ್ಧರೂ, ಮನು, ಹನುಮಂತ, ವಿಷ್ಣು, ಧರ್ಮ, ನಾರಾಯಣ ಮೊದಲಾದ ಸಾಧ್ಯರೂ, ಸನಕಾದಿ ಬ್ರಹ್ಮರ್ಷಿಗಳೂ ಹುಟ್ಟಿದರು.

೫. ಸತ್ವರಜೋರಜಸ್ಸು—ವಸಿಷ್ಠ, ಅಗಸ್ತ್ಯ ಮೊದಲಾದ ನಿತ್ಯ ಪವಿತ್ರರಾದ ಋಷಿಗಳೂ, ಶುಕ ಜಾಬಾಲಿ, ವಾಮದೇವಾದಿ ಮೌನಿಗಳೂ, ಪ್ರಹ್ಲಾದ,ನಾರದ, ಅಂಬರೀಷಾದಿ ಪರಮಭಾಗವತರೂ ಹುಟ್ಟಿದರು.

೬. ಸತ್ವರಜಸ್ಸತ್ವ— ಈ ಗುಣದಿಂದ ಇಂದ್ರನೇ ಮೊದಲಾದ ದಿಕ್ಪಾಲಕರೂ ದೇವತೆಗಳೂ, ಬ್ರಹ್ಮ ವಿಷ್ಣು ರುದ್ರೇಶ್ವರ ಸದಾಶಿವರೂ, ಬೃಹಸ್ಪತಿ ವಿಶ್ವಕರ್ಮ ನಂದಿಕುಮಾರ ಗಣನಾಥಾದಿಗಳೂ, ದೂರ್ವಾಸ ದತ್ತಾತ್ರೇಯಾದಿ ಮಹರ್ಷಿಗಳೂ, ಕಾಲಾಗ್ನಿರುದ್ರ ಹಾಟಕೇಶ್ವರಾದಿಗಳೂ ಹುಟ್ಟಿದರು.

೭. ಸತ್ವಸತ್ವತಮಸ್ಸು— ವಿರಾಟ್ಪುರುಷ, ಹಿರಣ್ಯಗರ್ಭ ಮುಂತಾದವರು.

೮. ಸತ್ವಸತ್ವರಜಸ್ಸು— ಬ್ರಹ್ಮವಿದನೇ ಮೊದಲಾದ ಜೀವನ್ಮುಕ್ತರು.

೯. ಸತ್ವಸತ್ವಸತ್ವ— ಸರ್ವಜ್ಞತ್ವ, ಸರ್ವೇಶ್ವರತ್ವಾದಿ ಮಹಾಗುಣಗಳೂ, ಸೃಷ್ಟಿ, ಸ್ಥಿತಿ, ಲಯ, ತಿರೋಧಾನ ಅನುಗ್ರಹಗಳೆಂಬ ಪಂಚಕೃತ್ಯಗಳನ್ನುಳ್ಳ ಪರಮೇಶ್ವರನೂ ಹುಟ್ಟಿದರು.

೧೦. ರಜಸ್ತಮಸ್ತಮಸ್ಸು- ಕಾಡುನೊಣ, ಚೇಳು, ಇರುವೆ, ಹುಳು ಮುಂತಾದುವು ಹುಟ್ಟಿದುವು.

೧೧. ರಜಸ್ತಮೋರಜಸ್ಸು - ಮೊಸಳೆಗಳು, ಏಡಿಕಾಯಿಗಳು, ಕಪ್ಪೆಚಿಪ್ಪು, ಶಂಖಗಳು, ಮೀನುಗಳು, ಆಮೆಗಳು, ಮುಂತಾದ ಜಲಚರಗಳು.

೧೨. ರಜಸ್ತಮಸ್ಸತ್ವ- ಕಾಗೆ, ಗುಬ್ಬಚ್ಚಿ, ಗಿಣಿ, ಗೊರವಂಕ ಮೊದಲಾದ ಹಕ್ಕಿಗಳು.

೧೩. ರಜೋರಜಸ್ತಮಸ್ಸು - ಸಿಂಹ, ಹುಲಿ, ಕಾಡುಹಂದಿ ಮುಂತಾದುವು.

೧೪. ರಜೋರಜೋರಜಸ್ಸು- ಕೋತಿ, ಆನೆ, ಕುದುರೆ, ಕುರಿ, ಎಮ್ಮೆ ಇತ್ಯಾದಿ.

೧೫. ರಜೋರಜಸ್ಸತ್ವ - ಹಸುಗಳು, ಚಮರೀಮೃಗ, ಜಿಂಕೆ ಮುಂತಾದವು.

೧೬. ರಜಸ್ಸತ್ವತಮಸ್ಸು- ಶೂದ್ರರು, ಬೇಡರು, ಹೊಲೆಯರು, ಮುಂತಾದವರು.

೧೭. ರಜಸ್ಸತ್ವರಜಸ್ಸು- ರಾಜರು, ವ್ಯಾಪಾರಮಾಡುವ ವೈಶ್ಯರು ಇತ್ಯಾದಿ.

೧೮. ರಜಸ್ಸತ್ವಸತ್ವ- ಬ್ರಹ್ಮವಾದಿಗಳೂ, ವೇದಾಧ್ಯಯನ ಸಂಪನ್ನರೂ ಆದ ಆಂಧ್ರ, ಕರ್ಣಾಟಕ, ದ್ರಾವಿಡ, ಘೂರ್ಜರ, ಮಹಾರಾಷ್ಟ್ರರೆಂಬ ಪಂಚದ್ರಾವಿಡರೂ, ಉತ್ಕಲ, ಮೈಥಿಲ, ಕನೋಜ, ಸಾರಸ್ವತ, ಸೌರ್ವರ್ಯರೆಂಬ ಪಂಚಗೌಡರೂ ಹುಟ್ಟಿದರು. ಇವರೇ ದಶವಿಧ ಬ್ರಾಹ್ಮಣರು.

೧೯. ತಮಸ್ತಮಸ್ತಮಸ್ಸು—ನೀರಿಲ್ಲದ ನೆಲಗಳೂ, ಬೆಟ್ಟಗಳೂ ಭೂತಬೇತಾಳಾದಿ ದುಷ್ಟಗ್ರಹನಿವಾಸಗಳೂ, ತಾಮಸ ತಪಸ್ಸುಮಾಡುವ ನೀಚರು ವಾಸಮಾಡುವ ಗ್ರಾಮಗಳೂ ಹುಟ್ಟಿದುವು.

೨೦. ತಮಸ್ತಮೋರಜಸ್ಸು—ಸಾರವಂತಗಳಾಗಿ ಬೆಳೆಯುವ ಭೂಮಿಗಳೂ,ದೇವಬ್ರಾಹ್ಮಣನಿವಾಸ ಯೋಗ್ಯಗಳಾದದೇಶಗಳೂ ಹುಟ್ಟಿದುವು

೨೧. ತಮಸ್ತಮಸ್ಸತ್ವ—ಪುಣ್ಯಕ್ಷೇತ್ರಗಳೂ, ಗಂಗಾದಿ ಪುಣ್ಯನದಿಗಳೂ. ಪುಣ್ಯಭೂಮಿಗಳೂಉಳ್ಳ ಕ್ಷೇತ್ರಗಳು ಹುಟ್ಟಿದುವು.

೨೨. ತಮೋರಜಸ್ತಮಸ್ಸು—ಹೂವು ನೆರಳುಗಳಿಲ್ಲದ ಮುಳ್ಳುಗಳು ಬೆಳೆಯುವ ಭೂಮಿಗಳು, ನಿದ್ರಾಲಸ್ಯ ಮುಂತಾದ ತಾಮಸಗುಣವುಳ್ಳ ದುರ್ಜನರ ಮತ್ತು ಪಿಶಾಚಾದಿ ದುಷ್ಟಜನ ಸಂಚಾರ ಯೋಗ್ಯಗಳಾದ ಗ್ರಾಮಗಳು.

೨೩. ತಮೋರಜೋರಜಸ್ಸು—ಯೋಗ್ಯವಾದ ಫಲಪತ್ರ ಪುಷ್ಪಗಳಿಂದ ಕೂಡಿದ ನಿಂಬೆ, ದಾಳಿಂಬೆ, ನೇರಿಳೆ ಮುಂತಾದ ಮರಗಳೂ, ಮನುಷ್ಯರ ಉಪಭೋಗಾರ್ಹವಾದ ಹೂವು, ಹಣ್ಣು ಮುಂತಾದುವುಗಳೂ ಹುಟ್ಟಿದುವು.

೨೪. ತಮೋರಜಸ್ಸತ್ವ—ಬಾಳೆ' ಹಲಸು, ಮಾವು ಮೊದಲಾದ ಫಲವೃಕ್ಷಗಳೂ, ತಾವರೆ, ಮಲ್ಲಿಗೆ ಮೊದಲಾದ ಪುಷ್ಪಜಾತಿಗಳೂ, ಹುಟ್ಟಿದುವು.

೨೫. ತಮಸ್ಸತ್ವತಮಸ್ಸು—ಹುರುಳಿ, ಜೋಳ, ಹಾರಕ ಮೊದಲಾದ ಕ್ಷುದ್ರಧಾನ್ಯಗಳೂ, ಸಾಸುವೆ, ಮೆಣಸು, ಮೆಣಸಿನಕಾಯಿ ಮುಂತಾದುವೂ ಹುಟ್ಟಿದುವು.

೨೬. ತಮಸ್ಸತ್ವರಜಸ್ಸು—ತೊಗರಿ, ಅವರೆ, ಹರಳು ಮುಂತಾದ ಪೈರುಗಳೂ, ಜಾಯಿಕಾಯಿ, ಲವಂಗ, ಮೊದಲಾದ ಸುಗಂಧದ್ರವ್ಯಗಳೂ, ಬೆಳೆಯುವ ನೆಲಗಳು.

೨೭. ತಮಸ್ಸತ್ವಸತ್ವ—ಬತ್ತ, ಗೋಧುವೆ, ಹೆಸರು ಮುಂತಾದ ಸಾತ್ವಿಕಾಹಾರ ವಸ್ತುಗಳನ್ನು ಬೆಳೆಯುವ ಭೂಮಿಗಳು ಹುಟ್ಟಿದುವು.

ಈರೀತಿಯಲ್ಲಿ ಸಮಷ್ಟಿರೂಪವಾದ ಮೂಲಾವಿದ್ಯೆಯೂ, ವ್ಯಷ್ಟಿರೂಪವಾದ ತೂಲಾವಿದ್ಯೆಯೂ ಎಂಬೆರಡು ರೂಪಗಳನ್ನುಳ್ಳ ಮಲಿನ ಸತ್ವಪ್ರಧಾನಳಾದ ಮೂಲಪ್ರಕೃತಿಯು ತನ್ನ ಗುಣತ್ರಯದಿಂದ ಮೊದಲು

ತ್ರಿಶಕ್ತಿಗಳಾಗಿ ತೋರಿ ಆಬಳಿಕ ತ್ರಿಗುಣಗಳ ಪರಸ್ಪರಸಂಮೇಳನದಿಂದ ಒಂಭತ್ತು ವಿಧಗಳಾಗಿ, ಅಮೇಲೆ ಅವುಗಳ ಅನ್ಯೋನ್ಯ ಸಮ್ಮಿಳಿತದಿಂದ ಇಪ್ಪತ್ತೇಳು ವಿಧಗಳಾಗಿ ಬಿಳಿಯುವಸ್ತ್ರದಲ್ಲಿ ಚಿತ್ರಗಳನ್ನು ಕಲ್ಪಿಸಿದಂತೆ ಶುದ್ಧ ಪರಬ್ರಹ್ಮದಲ್ಲಿ ಮೇಲೆಹೇಳಿದ ಇಪ್ಪತ್ತೇಳುಬಗೆಯ ಸೃಷ್ಟಿಯುಂಟಾಗುವಂತೆ ಕಾಣಿಸಿತು. ಮತ್ತು ವೇದಪುರುಷನು ಈ ೨೭ ಬಗೆಯ ಸೃಷ್ಟಿಗೆ ಕಾರಣವಾದ ಪ್ರಕೃತಿಮಯವಾದ ಗಾಯತ್ರಿಯು ಮೂರು ಪಾದಗಳೂ, ಭೂರ್ಭುವಸ್ಸುವಃ ಎಂಬ ವ್ಯಾಹೃತಿತ್ರಯದೊಂದಿಗೆ ಇಪ್ಪತ್ತೇಳು ಅಕ್ಷರಗಳುಳ್ಳದಾಗಿರುವುದೆಂದು ಹೇಳಿ ಅದನ್ನು ಬ್ರಹ್ಮ ಕ್ಷತ್ರಿಯ ವೈಶ್ಯರೆಂಬ ದ್ವಿಜರಿಗೆ ಉಪಾಸ್ಯವೆಂದು ತಾರತಮ್ಯಾನುಗುಣವಾಗಿ ನಿರ್ಣಯಿಸಿದನು. ಮತ್ತು ಆ ಗಾಯತ್ರಿಗೆ ಪ್ರತಿರೂಪವಾದ ಯಜ್ಞೋಪವೀತವು ಮೂರು ಸೂತ್ರಗಳುಳ್ಳದ್ದು, ಅದರಲ್ಲಿ ಒಂದೊಂದಕ್ಕೆ ಮೂರರಂತೆ ಅಂತರಸೂತ್ರಗಳಿರುವುವು. ಆ ಅಂತರಸೂತ್ರಗಳಲ್ಲಿ ಒಂದೊಂದಕ್ಕೆ ಮೂರುಮೂರು ಎಳೆಗಳಿರುವುವು. ಆ ಎಳೆಗಳೇ ಇಪ್ಪತ್ತೇಳು ಭೇದವುಳ್ಳ ಜಗತ್ತು. ಆ ಜಗದ್ರೂಪವಾದ ಯಜ್ಞೋಪವೀತವನ್ನೇ ಗಾಯತ್ರಿಯೆಂದು ಬ್ರಾಹ್ಮಣರು ಧರಿಸಿ, ಪರಬ್ರಹ್ಮವನ್ನು ಉದ್ದೇಶಿಸಿ ಸರ್ವಕರ್ಮಗಳನ್ನೂ ಮಾಡಬೇಕೆಂತಲೂ, ಆದನ್ನು ಧರಿಸಿರುವ ತನಕ ಕರ್ಮಕಾಂಡವನ್ನು ಅನುಷ್ಠಿಸಬೇಕೆಂತಲೂ, ಆಮೇಲೆ ಸದ್ಗುರುವಿನ ಕರುಣೆಯಿಂದ ವಿಜ್ಞಾನವುಂಟಾಗಿ, ಗಾಯತ್ರೀ ಯಜ್ಞೋಪವೀತ ಪ್ರಪಂಚವಿಚಾರಣೆಮಾಡಿ, ಆ ಯಜ್ಞೋಪವೀತದ ಮೂರು ತಂತುಗಳಿಗೆ ಕೂಟಸ್ಥಾನವಾದ ಗಂಟೇ ಬ್ರಹ್ಮಮುಡಿಯೆಂತಲೂ, ಅದೇ ಅಮಲಸತ್ವಪ್ರಧಾನವಾದ ಗುಣಸಾಮ್ಯಾವಸ್ಥೆಯೆಂತಲೂ, ತಿಳಿದು ಆ ಯಜ್ಞೋಪವೀತವನ್ನು ಪರಿತ್ಯಜಿಸುವುದೇ ಸನ್ಯಾಸವೆಂತಲೂ ಆತನೇ ಬ್ರಹ್ಮಕಾಂಡವನ್ನು ಅನುಷ್ಠಿಸತಕ್ಕವನೆಂತಲೂ ತಿಳಿಯತಕ್ಕದ್ದು.

ಎಲೈ ಆಂಜನೇಯನೇ! ನಾನು ಈ ಶ್ರೀರಾಮನಸನ್ನಿಧಿಯಲ್ಲಿರುವುದರಿಂದ ಸ್ವಲ್ಪವೂ ಪಾಲುಮಾರಿಕೆಯಿಲ್ಲದೆ ಗುಣತ್ರಯಗಳಿಂದ ಸಗುಣಬ್ರಹ್ಮಾದಿ ಸ್ಥಾವರಾಂತವಾದ ಸೃಷ್ಟಿಯನ್ನು ಮಾಡುತ್ತಿರುವೆನು. ಹೀಗೆ ನನ್ನಿಂದ ಸೃಷ್ಟವಾದ ಜಗತ್ತು ಯಾವ ಸಂಬಂಧವೂ ಇಲ್ಲದ ಶ್ರೀರಾಮನಿಂದ ಸೃಷ್ಟಿಸಲ್ಪಟ್ಟಿತೆಂದು ಮೂಢರು ಹೇಳಿಕೊಳ್ಳುವರು. ಅದು ಹೇಗಂದರೆ.—

ಅಯೋಧ್ಯಾಪಟ್ಟಣದಲ್ಲಿ ನಿರ್ಮಲವಾದ ರಘುವಂಶದಲ್ಲಿ ಈತನು ಹುಟ್ಟಿದ್ದು, ವಿಶ್ವಾಮಿತ್ರನಿಗೆ ಸಹಾಯಕನಾಗಿ ಆತನ ಯಜ್ಞ ಸಂರಕ್ಷಣೆ ಮಾಡಿದ್ದು ಶಿಲೆಯಾಗಿದ್ದ ಅಹಲ್ಯೆಯನ್ನು ಸ್ತ್ರೀಯಾಗಿಮಾಡಿ ಅವಳ ಶಾಪ ವಿಮೋಚನೆಮಾಡಿದ್ದು, ಶಿವನ ಧನುಸ್ಸನ್ನು ಮುರಿದು ಸಸ್ನನ್ನು ಮದುವೆ ಯಾದ್ದು, ಅಯೋಧ್ಯೆಗೆ ಹಿಂದಿರುಗಿ ಬರುವಾಗ ಪರಶುರಾಮನ ಗರ್ವಭಂಗ ಮಾಡಿದ್ದು, ಪುರಪ್ರವೇಶಮಾಡಿ ಕೆಲವುದಿನಗಳಾದಮೇಲೆ ರಾಜ್ಯಾಭಿಷೇಕಕ್ಕೆ ಪ್ರಯತ್ನವಾಗಲು ಅದಕ್ಕೆ ವಿಘ್ನವನ್ನು ತಂದೊಡ್ಡಿ ವನವಾಸಕ್ಕೆ ಹೊರಟದ್ದು, ವಿರಾಧನನ್ನು ಕೊಂದದ್ದು, ಶೂರ್ಪನಖಿಯ ಕಿವಿ ಮೂಗುಗಳನ್ನು ಕೊಯ್ದುಹಾಕಿದ್ದು, ಖರದೂಷಣಾದಿ ರಾಕ್ಷಸರನ್ನುಕೊಂದು ಮಾಯಾಮಾರೀಚನನ್ನು ವಧಿಸಿದ್ದು, ಮಾಯಾಸೀತೆಯನ್ನು ರಾವಣನು ಅಪಹರಿಸಿಕೊಂಡು ಹೋದದ್ದು, ಜಟಾಯುಕಬಂಧರಿಗೆ ಮುಕ್ತಿಯನ್ನಿತ್ತು ಶಬರಿಯ ಆತಿಥ್ಯವನ್ನು ಕೈಕೊಂಡದ್ದು, ಸುಗ್ರೀವನೊಂದಿಗೆ ಸ್ನೇಹವನ್ನು ಬೆಳೆಯಿಸಿ ವಾಲಿಯನ್ನು ಕೊಂದುಹಾಕಿದ್ದು. ಸೀತೆಯನ್ನು ಹುಡುಕಿಸಿದ್ದು, ಸಮುದ್ರಕ್ಕೆ ಸೇತುವನ್ನು ಕಟ್ಟಿದ್ದು, ಲಂಕೆಗೆ ಮುತ್ತಿಗೆ ಹಾಕಿದ್ದು, ಭ್ರಾತೃ ಪುತ್ರ ಮಿತ್ರ ಬಾಂಧವ ಸಹಿತನಾದ ರಾವಣನನ್ನು ಘೋರಯುದ್ಧದಲ್ಲಿ ವಧಿಸಿದ್ದು, ವಿಭೀಷಣನಿಗೆ ರಾಜ್ಯಪ್ರದಾನಮಾಡಿದ್ದು ಸನ್ನೊಂದಿಗೆ ಪುಷ್ಪಕಾರೋಹಣಮಾಡಿ ಅಯೋಧ್ಯಾಪಟ್ಟಣಕ್ಕೆ ಬಂದುದು ಸಾಕೇತರಾಜ್ಯಾಭಿಷಿಕ್ತನಾದ್ದು ಮೊದಲಾದ ಸಮಸ್ತಕಾರ್ಯಗಳೂ ನನ್ನಿಂದಲೇ ಆಚರಿಸಲ್ಪಟ್ಟವೆ. ಹೀಗಿರುವಲ್ಲಿ ನಿರ್ವಿಕಾರನಾಗಿಯೂ, ನಿಖಿಲಾತ್ಮಕನಾಗಿಯೂ ಇರುವ ಈ ರಾಮನೇಮಾಡಿದನೆಂದು ಹೇಳುವುದು ಜ್ಞಾನಿಗಳಮಾತಲ್ಲ, ಆದುದರಿಂದ ಈ ಶ್ರೀರಾಮನು ನಿರ್ವಿಕಾರನು, ನಿತ್ಯನು, ನಿರಾಮಯನು, ನಾಶವಿಲ್ಲದವನು, ನಿಷ್ಕಾಮನು, ಇಂದ್ರಿಯಗಳಿಗೆ ಗೋಚರನಾಗದವನು, ಜನ್ಮರಹಿತನು. ನಿಸ್ಸಂಗನು. ಈತನು ಕರ್ತೃವೂ ಅಲ್ಲ, ಭೋಕ್ತೃವೂ ಅಲ್ಲ, ಈತನು ನಿರ್ವಿಕಲ್ಪನಾಗಿಯೂ ನಿರಂಜನನಾಗಿಯೂ ಅದ್ವಯನಾಗಿಯೂ, ಪರಂಧಾಮನಾಗಿಯೂ ಇರುವನು. ಇವನಲ್ಲಿ ಗುಣಗಳನಾಲೋಪಿಸುವುದು ಮೂಢತ್ವವು. (ವಿ. ವಿ)

ರಾಗದ್ವೇಷಾದಿ ವಿಕಾರಗಳು ಅಂದರೆ ದುರ್ಗುಣಗಳ ವಿವರ.—

೧. ರಾಗವು—ಪರಸ್ತ್ರೀಯರ ವಿಷಯದಲ್ಲಿ ಉಂಟಾಗುವಮನೋ

ವೃತ್ತಿ. ಈ ದುರ್ಗುಣದಿಂದ ಬಲಶಾಲಿಯಾದ ರಾವಣನು ಸೀತಾದೇವಿಯನ್ನು ಸೆರೆಹಿಡಿದು ಪುತ್ರಮಿತ್ರ ಪರಿವಾರಸಮೇತನಾಗಿ ಮಡಿದನು.

೨. ದ್ವೇಷ—ಒಬ್ಬನು ತನಗೆ ಅಪಕಾರಮಾಡಿದರೆ ಅದಕ್ಕೆ ಬದಲಾಗಿ ಅವನಿಗೆ ಅಪಕಾರಮಾಡಬೇಕೆಂಬ ಮನೋವೃತ್ತಿ. ದುರಾಚಾರಿಯಾಗಿದ್ದ ತನ್ನ ತಮ್ಮ ಹಿರಣ್ಯಾಕ್ಷನನ್ನು ವಿಷ್ಣುವು ವರಾಹರೂಪದಿಂದ ಕೊಂದನೆಂಬ ದ್ವೇಷದಿಂದ ಹಿರಣ್ಯಕಶಿಪುವು ಆ ಮಾಧವನನ್ನು ಕೊಲ್ಲಬೇಕೆಂದು ಪ್ರತಿಜ್ಞೆ ಮಾಡಿ, ನರಸಿಂಹರೂಪದಿಂದ ಅವತರಿಸಿದ ಆ ಸ್ವಾಮಿಯಿಂದ ತಾನೇ ಹತನಾದನು.

೩. ಕಾಮ—ಮನೆ, ಹಣ, ಹೊಲ, ಧಾನ್ಯ, ಪಶುಗಳು, ಸ್ತ್ರೀಯರು ಮೊದಲಾದುವುಗಳನ್ನು ಬಹು ಹೆಚ್ಚಾಗಿ ಸಂಪಾದಿಸಬೇಕೆಂಬ ಚಿತ್ತವೃತ್ತಿ. ಇದರಿಂದ ನರಕಾಸುರನು ಹದಿನಾರುಸಾವಿರಮಂದಿ ಸ್ತ್ರೀಯರನ್ನು ಹಿಡಿದು ಸೆರೆಯಲ್ಲಿಟ್ಟು ಶ್ರೀ ಕೃಷ್ಣನದೆಸೆಯಿಂದ ಮೃತನಾದನು.

೪. ಕ್ರೋಧ—ತಾನುಮಾಡಿರತಕ್ಕ ಕೆಲಸಗಳಿಗೆ ವಿಘ್ನಮಾಡಲಿಕ್ಕೆ ಬರುವವರನ್ನು ಶಿಕ್ಷಿಸಬೇಕೆಂಬ ಕೋಪದಿಂದ ಉಂಟಾಗುವ ಚಿತ್ತವೃತ್ತಿ—ಇದರಿಂದ ಬಕಾಸುರನು ಏಕಚಕ್ರಪುರದಲ್ಲಿ ವಾಸಮಾಡಿಕೊಂಡಿದ್ದ ಬ್ರಾಹ್ಮಣರನ್ನು ಬಾಧಿಸುತ್ತಿದ್ದು ಅವರ ಪ್ರೇರಣೆಯಿಂದ ಬಂದ ಭೀಮನೊಂದಿಗೆ ಹೋರಾಡಿ ಕಥಾಶೇಷನಾದನು.

೫. ಲೋಭ—ತನಗೆ ಲಭಿಸಿದ ಪದಾರ್ಥಗಳನ್ನು ತಾನೇ ಅನುಭವಿಸಬೇಕು. ಇತರರಿಗೆ ಕೊಡಬಾರದೆಂಬ ಚಿತ್ತವೃತ್ತಿ. ಇದರಿಂದ ದುರ್ಯೋಧನನು ತನ್ನ ಜ್ಞಾತಿಗಳಾದ ಪಾಂಡವರಿಗೆ ನ್ಯಾಯವಾಗಿ ಸಲ್ಲಬೇಕಾದ ಅರ್ಧರಾಜ್ಯವನ್ನು ಕೊಡದೆಹೋಗಲು ಕುರುಕ್ಷೇತ್ರದ ಯುದ್ಧದಲ್ಲಿ ತನ್ನ ಪುತ್ರಮಿತ್ರ ಭ್ರಾತೃ ಬಾಂಧವಸಹಿತನಾಗಿ ಮಡಿದನು.

೬. ಮೋಹ—ಪುತ್ರಕಳತ್ರ ದ್ರವ್ಯಾದಿಗಳಲ್ಲಿ ಹೆಚ್ಚುಪ್ರೇಮವನ್ನಿಟ್ಟುಕೊಂಡು ಯುಕ್ತಾಯುಕ್ತ ವಿಚಾರವಿಲ್ಲದೆ ಇರುವ ಚಿತ್ತವೃತ್ತಿ—ದಶರಥರಾಯನು ಹೆಂಡತಿಯಾದ ಕೈಕೆಯಮೇಲಣ ಪ್ರೀತಿಯಿಂದ ಸತ್ಯಸೌಶೀಲ್ಯಾದಿ ಸದ್ಗುಣಸಿಧಿಯಾದ ಶ್ರೀ ರಾಮಚಂದ್ರನನ್ನು ಕಾಡಿಗೆ ಕಳುಹಿ ಪುತ್ರನ ಅಗಲಿಕೆಯದುಃಖದಿಂದ ತಾನೂ ಪ್ರಾಣಗಳನ್ನು ಬಿಟ್ಟನು.

೭. ಮದ—ಸಕಲ ಸಂಪತ್ತೂ ನನ್ನಲ್ಲಿ ಒಪ್ಪಿವೆ, ನಾನು ಏನು ಮಾಡಿದರೂ ಸಲ್ಲುವುದು ಎಂಬ ಗರ್ವೋದ್ರೇಕದಿಂದ ಇತರರನ್ನು ಅಲಕ್ಷ್ಯ

ಮಾಡುವ ಚಿತ್ತವೃತ್ತಿ. ಕಾರ್ತವೀರ್ಯಾರ್ಜುನನ ಮಕ್ಕಳು ದುರಹಂಕಾರದಿಂದ ಜಮದಗ್ನಿಮುಹರ್ಷಿಯ ಹೋಮಧೇನುವನ್ನು ಅಪಹರಿಸಿ, ಪರಶುರಾಮನನ್ನು ಎದುರಿಸಲು, ಆ ಭಾರ್ಗವನ ಕೋಪಾಗ್ನಿಯಿಂದ ತಮ್ಮ ತಂದೆಯೊಂದಿಗೆ ತಾವೂ ಮೃತರಾದುದಲ್ಲದೆ, ಆ ಮಹಾತ್ಮನ ಹೆಸರು ಹೇಳಿದರೆ ಈ ಲೋಕದಲ್ಲಿ ಕ್ಷತ್ರಿಯರೇ ಇಲ್ಲವೆನ್ನಿಸುವನೆಂಬಂತೆ ಕುಲವನ್ನೇ ಹಾಳುಮಾಡಿಕೊಂಡರು.

೮. ಮಾತ್ಸರ್ಯ—ಇತರರು ತನಗಿಂತಲೂ ವಿದ್ಯೆ, ಐಶ್ವರ್ಯ, ಸೌಂದರ್ಯ, ಭೋಗ, ವರ್ಚಸ್ಸು, ದೇಹಬಲ, ಪರಾಕ್ರಮ ಇವುಗಳಲ್ಲಿ ಹೆಚ್ಚಿದವರಾಗಿದ್ದರೆ ನೋಡಿ ಸಹಿಸಲಾರದೆ ತಾವು ಉರಿದುಬೀಳುವ ಚಿತ್ತವೃತ್ತಿ. ಧರ್ಮರಾಜನು ಮಾಡಿದ ರಾಜಸೂಯದಲ್ಲಿ ಶ್ರೀಕೃಷ್ಣನಿಗೆ ಪಾಂಡವರು ಅಗ್ರಪೂಜೆಮಾಡಿದುದನ್ನುನೋಡಿ, ಸೈರಿಸದೆ ಶಿಶುಪಾಲನು ಆ ಸ್ವಾಮಿಯನ್ನು ಅವಾಚ್ಯಪದಗಳಿಂದ ಬೈದು, ಆ ದೇವದೇವನ ಚಕ್ರಾಯುಧಕ್ಕೆ ಬಲಿಬಿದ್ದನು.

೯. ಈರ್ಷ್ಯೆ—ನನಗೆ ಬಂದ ಕಷ್ಟಗಳು ಇತರರಿಗೂ ಬರಬೇಕೆಂದು ಅಪೇಕ್ಷಿಸುವ ಚಿತ್ತವೃತ್ತಿ. ಇದರಿಂದ ಅರುಣಾಕ್ಷನೆಂಬವನು ತನಗೆ ಸಮಾನನಾದ ಬಾಣನಿಗೆ ದುಃಖಗಳು ಸಂಭವಿಸಲಿ ಎಂದು ಕೋರಿ ಆತನ ದೆಸೆಯಿಂದ ಪ್ರಾಣಗಳನ್ನು ಕಳೆದುಕೊಂಡನು.

೧೦. ಅಸೂಯೆ—ತನಗೆ ಉಂಟಾಗಿರುವಷ್ಟು ಸುಖಗಳು ಇತರರಿಗೆ ಉಂಟಾಗಬಾರದೆಂಬ ಚಿತ್ತವೃತ್ತಿ. ಇದರಿಂದ ಪುಂಡ್ರಕರಾಜನಾದ ವಾಸುದೇವನು ಈ ಹೆಸರು ತನಗಲ್ಲದೆ ಮತ್ತೊಬ್ಬರಿಗೆ ಸಲ್ಲದೆಂದು ಹೆಮ್ಮೆಯಿಂದ ಶ್ರೀಕೃಷ್ಣನಲ್ಲಿ ವಿರೋಧಿಸಿ ತನಗೆತಾನೇ ಕೇಡುತಂದುಕೊಂಡನು.

೧೧. ದಂಭ—ತಾನುಮಾಡಿದ ಕೆಲಸವನ್ನು ಪರರುನೋಡಿ, ತನ್ನನ್ನುಮೆಚ್ಚಿ ಹೊಗಳಬೇಕೆಂಬ ಚಿತ್ತವೃತ್ತಿ. ಅಪೂರ್ವನೆಂಬುವನು ತನ್ನ ಯಜ್ಞವನ್ನು ನೋಡಬೇಕೆಂದು ದುರ್ವಾಸನಿಗೆ ಹೇಳಲು ಇದು ದಾಂಭಿಕವೆಂದು ಆ ಮಹರ್ಷಿಯು ಹೇಳಿದನು. ಇದರಿಂದ ಅವನು ಕೋಪಿಸಿ, ದುರ್ವಾಸನನ್ನು ದೂಷಿಸಿ ತನ್ನನ್ನು ಹೊಗಳಿಕೊಂಡುದರಿಂದ ಯಾಗದ ಫಲವನ್ನು ಹಾಳುಮಾಡಿಕೊಂಡನು.

೧೨. ದರ್ಪ—ನಾನು ಸರ್ವವಿಷಯದಲ್ಲಿಯೂ ಸಮರ್ಥನು, ನನ್ನ ಸಮಾನ ಎಲ್ಲಿಯೂ ಆಗಲಿ ಯಾರೂ ಇಲ್ಲವೆಂಬ ಚಿತ್ತವೃತ್ತಿ. ತ್ರಿಲೋಕಕಂ

ಟಕನಾದ ರಾವಣನು ಕೊಬ್ಬಿನಿಂದ ತನಗೆ ಯಾರೂ ಸರಿಯಿಲ್ಲವೆಂದು ಮೆರೆಯುತ್ತಿರಲು ಮಹಾವಿಷ್ಣುವು ಶ್ರೀ ರಾಮನಾಗಿ ಜನಿಸಿ ಆ ರಾವಣನನ್ನು ಕೊಂದು ಅವನ ದರ್ಪವನ್ನು ಮುರಿದನು.

೧೩. ಅಹಂಕಾರ—ನಾನು ಹಿಡಿದ ಕೆಲಸವನ್ನು ಕೊನೆಮುಟ್ಟಿಸದೆ ಬಿಡೆನು. ನಿನ್ನನ್ನು ಮಟ್ಟಹಾಕದೆ ಬಿಟ್ಟೇನೇ? ಎಂದು ಇತರರನ್ನು ಹೆದರಿಸುವ ಚಿತ್ತವೃತ್ತಿ. ಇದರಿಂದ ಮಧುಕೈಟಭರೆಂಬ ರಾಕ್ಷಸರಿಬ್ಬರೂ ಅಹಂಕಾರದಿಂದ ಮಹಾವಿಷ್ಣುವಿನೊಂದಿಗೆ ಕಲಹಿಸಿ, ಲಯವಾದರು.

ಈರೀತಿಯಾದ "ರಾಗದ್ವೇಷಾದಿ ದುರ್ಗುಣಗಳು" ಹದಿಮೂರುವಿಕಾರಗಳೆನಿಸುವುವು. ಶ್ರೀರಾಮನಿಗೆ ಇವು ಇಲ್ಲದ್ದರಿಂದ ನಿರ್ವಿಕಾರನೆಂದು ಹೇಳಲ್ಪಟ್ಟಿದೆ. ಹೀಗೆಯೇ ವಿಶೇಷವಿಷಯಗಳನ್ನು ಹೇಳುತ್ತಾ ಹೋದರೆ ಗ್ರಂಥವು ಬೆಳೆದು ಬಿಡುವುದೆಂದು ತಿಳಿದು ಅಗತ್ಯವಾದ ಸಂದರ್ಭಗಳಲ್ಲಿಮಾತ್ರ ವಿಸ್ತರಿಸಿದೆ.

ಬಳಿಕ ಸೀತಾದೇವಿಯು ಹನುಮಂತನಿಗಿಂತೆಂದಳು.

ಎಲೈ ಪ್ರಾಜ್ಞನೇಕೇಳು! ಇವನು ಮಾಯಾಗುಣಗಳನ್ನು ಹೊಂದಿದವನಾಗಿ ಚರಾಚರಾತ್ಮಕವಾದ ಪ್ರಪಂಚವನ್ನೆಲ್ಲಾ ಇವನೇ ನಿರ್ಮಿಸುತ್ತಿರುವನೆಂದು ಕಾಣಬಂದರೂ ಇವನು ನಿಸ್ಸಂಗನಾದುದರಿಂದ ಏನೂ ಮಾಡುವುದೇಇಲ್ಲವೆಂದುದನ್ನು ಕೇಳಿ ಹನುಮಂತನಿಂತೆಂದನು. "ಎಲೌ ತಾಯಿ—ನನ್ನೊಡೆಯನಾದ ಶ್ರೀರಾಮಚಂದ್ರನೇ ತಾರಕಬ್ರಹ್ಮನೆಂಬುದೇ ಸತ್ಯವಾಗಿರಲಿ. ಸರ್ವಾತ್ಮನಾದ ಈ ಮಹಾಮಹಿಮನನ್ನು ಸುಲಭನಾಗಿ ನೋಡುವ ಮಾರ್ಗವನ್ನು ದಯಮಾಡಿ ನನಗೆ ತಿಳಿಸಮ್ಮಾ" ಎಂದು ಪ್ರಾರ್ಥಿಸಲಾದೇವಿಯು ನಗುತ್ತಾ "ಎಲೈ ಆಂಜನೇಯನೇಕೇಳು, ಪ್ರತ್ಯಗಾತ್ಮಸ್ವರೂಪಳಾಗಿ ಪ್ರಕಾಶಿಸುವ ನನಗೂ, ನನ್ನಪತಿಯಾದ ಶ್ರೀ ರಾಮಚಂದ್ರಪರಮಾತ್ಮನಿಗೂ ಅಭಿನ್ನವಾದ ಐಕ್ಯಾನುಸಂಧಾನವಾವುದೋ ಅದೇ ಬ್ರಹ್ಮನಿಷ್ಠೆಯು. ಅದಕ್ಕೇನೇ ಯೋಗವೆಂದು ಹೆಸರು. ಇದೇ ಪರಮೋಪಾಯವು. ಅದು ಅಭ್ಯಾಸಯೋಗವೆಂತಲೂ ಜ್ಞಾನಯೋಗವೆಂತಲೂ ಎರಡುವಿಧವು. ಅದರಲ್ಲಿ ಅಭ್ಯಾಸಯೋಗವು ಪ್ರಾಣಾಯಾಮವೆಂಬ ಹೆಸರಿನಿಂದ ಪ್ರಕಾಶಿಸುವುದು. ಅದು ಪ್ರಾಕೃತ, ವೈಕೃತ, ಕೇವಲಕುಂಭಕವೆಂದು ಮೂರುವಿಧವು. ಅದರಲ್ಲಿ ಪ್ರಾಕೃತವು ಮಂತ್ರಯೋಗ, ವೈಕೃತವು ಲಯಯೋಗ, ಕೇವಲ ಕುಂಭಕವು ಹಟಯೋಗ,

ಈ ಮೂರು ಬಗೆಯ ಪ್ರಾಣಾಯಾಮ ಯೋಗಗಳಿಗೆ ಯಮ, ನಿಯಮ ಆಸನ, ಪ್ರಾಣಾಯಾಮಗಳು ಪೂರ್ವಾಂಗಗಳು. ಪ್ರತ್ಯಾಹಾರ, ಧ್ಯಾನ, ಧಾರಣ, ಸಮಾಧಿಗಳು ಉತ್ತರಾಂಗಗಳು. ಇವುಗಳ ಲಕ್ಷಣ—೧. ಯಮವೆಂದರೆ ಅಹಿಂಸೆ, ಸತ್ಯ, ಕದಿಯದೆ ಇರುವುದು, ಬ್ರಹ್ಮಚರ್ಯ, ದಾನವನ್ನು ಪಡೆಯದೆ ಇರುವುದು. ಈ ಗುಣಗಳು. ೨. ನಿಯಮದ ಲಕ್ಷಣಗಳು. ಶೌಚವೆಂದರೆ ಒಳಗೂ ಹೊರಗೂ ಶುಚಿಯಾಗಿರುವುದು ತಪಸ್ಸೆಂದರೆ ಮನೋವಾಕ್ಕಾಯಗಳಿಂದ ದೋಷಮಾಡದೆ ಇರುವುದು. ಸಂತೋಷವು, ವೇದಪಾರಾಯಣವು, ಈಶ್ವರಪೂಜೆಯು ಇವೈದೂ ನಿಯಮವು. (೩) ಆಸನ—ವೀರಾಸನ, ಸ್ವಸ್ತಿಕಾಸನ, ಪದ್ಮಾಸನ, ಯೋಗಾಸನ, ಕೂರ್ಮಾಸನ, ಭದ್ರಾಸನ, ಸಿದ್ಧಾಸನ, ಸಿಂಹಾಸನ ಮೊದಲಾದ ಎಂಭತ್ತು ನಾಲ್ಕು ಆಸನಗಳು. ಇವುಗಳ ಲಕ್ಷಣ. ೧. ವೀರಾಸನ—ಒಂದು ತೊಡೆಯಮೇಲೆ ಒಂದು ಪಾದವನ್ನೂ ಒಂದು ಪಾದದ ಮೇಲೆ ಒಂದು ತೊಡೆಯನ್ನೂ ಇಟ್ಟು, ಶರೀರವನ್ನು ಕದಲದಹಾಗೆ ನಿಲ್ಲಿಸುವುದು. ೨. ಸ್ವಸ್ತಿಕಾಸನ—ಮೊಳಕಾಲಿಗೂ ತೊಡೆಗೂ ನಡುವೆ ಪಾದಗಳನ್ನು ನುಗ್ಗಿಸಿ, ಶರೀರವನ್ನು ಸ್ಥಿರವಾಗಿ ನಿಲ್ಲಿಸುವುದು. ೩. ಪದ್ಮಾಸನ—ಎಡತೊಡೆಯಮೇಲೆ ಬಲಪಾದವನ್ನೂ, ಬಲತೊಡೆಯಮೇಲೆ ಎಡಪಾದವನ್ನೂ ಇಟ್ಟು ಹಿಂದುಗಡೆ ಬಲಗೈಯಿಂದ ಎಡತೊಡೆಯಮೇಲಿರುವ ಬಲಗಾಲಿನ ಹೆಬ್ಬೆಟ್ಟನ್ನೂ, ಎಡಗೈಯಿಂದ ಬಲತೊಡೆಯಮೇಲಿರುವ ಎಡಗಾಲಿನ ಹೆಬ್ಬೆರಳನ್ನೂ ಹಿಡಿದುಕೊಂಡು, ಎದೆಯಲ್ಲಿ ಗಡ್ಡವನ್ನಿಟ್ಟು ಭ್ರೂಮಧ್ಯದಲ್ಲಿ ದೃಷ್ಟಿಯನ್ನು ನಿಲ್ಲಿಸುವುದು. ೪. ಯೋಗಾಸನ—ಹಂಸದಂಡವನ್ನು ಮೊಳಕಾಲಿನ ಕೆಳಗೆ ಇಟ್ಟುಕೊಂಡು, ಪಾದಗಳನ್ನು ನೆಲದಮೇಲೆ ನಿಲ್ಲಿಸಿ, ತೊಡೆಗಳನಡುವೆ ಕೈಗಳನ್ನು ನುಗ್ಗಿಸಿ, ಆತ್ಮಾವಲೋಕನಮಾಡಿಕೊಂಡಿರುವುದು. ೫. ಕೂರ್ಮಾಸನವು-ಆಧಾರಕ್ಕೆ ಎರಡುಕಡೆಗಳಲ್ಲಿಯೂ ಎರಡುಕಾಲುಗಳ ಮಡಿಮೆಗಳನ್ನು ತಗಲಿಸಿ, ಚೆನ್ನಾಗಿ ಕುಳಿತುಕೊಳ್ಳುವುದು. ೬. ಉತ್ತಾನ ಕೂರ್ಮಾಸನ—ಕುಕ್ಕುಟಾಸನದಿಂದ ಕುಳಿತು, ಎರಡು ಕೈಗಳಿಂದ ಕುತ್ತಿಗೆಯನ್ನು ಹಿಡಿದುಕೊಂಡು ಕೂರ್ಮದಂತೆ ಅಂಗತ್ತನಾಗಿರುವುದು. ೭. ಭದ್ರಾಸನ—ಅಂಡಗಳ ಕೆಳಪಕ್ಕದಲ್ಲಿ ಕೀಲುಮಂಡಿಗಳನ್ನಿಟ್ಟು, ಮಂಡಿಗಳೆರಡನ್ನೂ ಎರಡು ಕೈಗಳಿಂದ ಹಿಡಿದು, ಕದಲದೆ ಇರುವುದು. ಈ ಆಸನದಲ್ಲಿರುವವನು ವಿಷಗ

ಳನ್ನೂ ರೋಗಗಳನ್ನೂ ಜಯಿಸುವನು. ೮. ಸಿದ್ಧಾಸನ—ಎಡಗಾಲು ಮಂಡಿಯನ್ನು ಮೂಲಾಧಾರದಲ್ಲಿಯೂ ಬಲಕಾಲುಮಂಡಿಯನ್ನು ಲಿಂಗ ಸ್ಥಾನದಲ್ಲಿಯೂ ಇಟ್ಟು, ತಲೆ, ಕತ್ತು, ಭುಜ ಇವುಗಳನ್ನು ಚೆನ್ನಾಗಿ ನಿಗುರಿಸಿ, ಭ್ರೂಮಧ್ಯವನ್ನು ನೋಡುತ್ತಿರುವುದು. ೯. ಸಿಂಹಾಸನ— ಅಂಡಗಳ ಕೆಳಭಾಗದಲ್ಲಿ ತೊಡೆಗಳ ಹಿಂಭಾಗಗಳು ಸೋಕುವಹಾಗೆ ಎಡ ಬಲಮಂಡಿಗಳನ್ನು ಬದಲಾಯಿಸಿಟ್ಟು ಎಡಬಲಕೈ ಬೆರಳುಗಳನ್ನು ಮೊಳ ಕಾಲಿನಮೇಲೆ ಸವ್ಯವಾಗಿಯೂ ಅಗಲವಾಗಿಯೂ ಇಟ್ಟು, ನಿಗುರಿಸಿ ಕುಳಿತುಕೊಂಡು ಬಾಯಿತರೆದುಕೊಂಡು, ಭ್ರೂಮಧ್ಯದಲ್ಲಿರುವ ಚಿದ್ಬಿಂ ದುವನ್ನು ನೋಡುತ್ತಲಿರುವುದು. ೧೦. ಕುಕ್ಕುಟಾಸನ—ಪದ್ಮಾಸನ ದಲ್ಲಿದ್ದು ಮೊಳಕಾಲುಗಳನ್ನು ತೊಡೆಗಳ ಸಂದುಗಳಲ್ಲಿ ತೂರಿಸಿ, ಕೈಗಳನ್ನು ನೆಲದಲ್ಲಿ ಊರಿ ಮೇಲಕ್ಕೆ ಹಾರುವಂತೆ ಕುಳಿತಿರುವುದು. ೧೧. ಗೋಮುಖಾಸನ—ಎಡಗಾಲಿನ ಮಂಡಿಯನ್ನು ಬಲಬೆನ್ನಿನ ಕಡೆಗೂ, ಬಲಗಾಲಮಂಡಿಯನ್ನು ಎಡಬೆನ್ನಿನಕಡೆಗೂ, ಮೊಳಕಾಲಿನ ಮೇಲೆ ಮೊಳಕಾಲು ಕೂಡುವಂತೆ ಇಟ್ಟು ಹೊಟ್ಟೆಯನ್ನು ಚೆನ್ನಾಗಿ ನಿಗುರಿಸಿ ಭ್ರೂಮಧ್ಯವನ್ನು ನೋಡುತ್ತಿರುವುದು. (೧೨) ಧನುರಾಸನ:- ಪಾದಾಂಗುಷ್ಠಗಳೆರಡನ್ನು ಎರಡು ಕೈಗಳಿಂದ ಬಿಲ್ಲಿನ ಆಕಾರವಾಗಿ, ಬೆನ್ನಿನ ಹಿಂದುಗಡೆ ಕಿವಿಗಳಿಗೆ ಸರಿಯಾಗಿ ಹಿಡಿದುಕೊಳ್ಳುವುದು. (೧೩) ಮಯೂರಾಸನ:- ಕೈಗಳನ್ನು ನೆಲದಲ್ಲಿ ಊರಿ ಮೊಳಕೈಗಳನ್ನು ನಾಭಿಯ ಎರಡು ಪಕ್ಕಗಳಲ್ಲಿಯೂ ಇಟ್ಟು ಮುಖವನ್ನು ಮೇಲಕ್ಕೆತ್ತಿ, ಕಾಲುಗ ಳನ್ನು ಚಾಚಿ, ನವಿಲಿನ ಬಾಲದಂತೆ ಮೇಲಕ್ಕೆತ್ತುವುದು. ಇದರಿಂದ ಉದರಗುಲ್ಮಾದಿರೋಗಗಳು ನಿವೃತ್ತಿಯಾಗಿ ಜಠರಾಗ್ನಿ ಪ್ರಜ್ವಲಿಸುವುದ ರಿಂದ ವಿಷವುಕೂಡ ಸುಲಭವಾಗಿ ಜೀರ್ಣಿಸುವುದು. (೧೪) ಕಪಾಲಾ ಸನ:- ತಲೆಕೆಳಗಾಗಿ ನಿಂತುಕೊಂಡು ಭ್ರೂಮಧ್ಯದಲ್ಲಿಯ ಚಿದ್ಬಿಂದು ವನ್ನು ನೋಡುತ್ತಿರುವುದು. (೧೫) ಮುಕ್ತಾಸನ:- ಎಡಕಾಲಿನ ಮಂಡಿ ಯಿಂದ ಮೂಲಾಧಾರವನ್ನು ಮುಚ್ಚಿ, ಬಲಪಾದವನ್ನು ಎಡ ತೊಡೆಯ ಮೇಲಿಟ್ಟುಕೊಳ್ಳುವುದು. (೧೬) ಟಿಟ್ಟಿಭಾಸನ;- ಪಾದಗಳನ್ನು ಅಂಗ ತ್ತಾಗಿ ತಲೆಯಮೇಲೆ ಸೇರಿಸಿ ಕೈಗಳನ್ನೂರಿಕೊಂಡು ನಿಂತು ಹಿಂಭಾಗ ವನ್ನು ಮೇಲಕ್ಕೆ ಎತ್ತುವುದು. (೧೭) ಪಶ್ಚಿಮತಾಣ:- ನೆಲದ ಮೇಲೆ ಎರಡು ಕಾಲುಗಳನ್ನೂ ಚೆನ್ನಾಗಿನೀಡಿ, ಎರಡು ಕಾಲುಗಳ ಹೆಬ್ಬೆರಳು

ಗಳನ್ನು ಎರಡು ಕೈಗಳಿಂದಲೂ ಹಿಡಿದುಕೊಂಡು, ಮೊಳಕಾಲಿನ ಮೇಲೆ ಹಣೆಯನ್ನು ಸೇರಿಸಿಡುವುದು. (೧೮) ಪೂರ್ವತಾಣುವಾಸನ:- ಕಾಲು ಬೆರಳುಗಳನ್ನು ಮಡಿಸಿ, ನೆಲದಮೇಲೆ ನಿಲ್ಲಿಸಿ, ಮಂಡಿಗಳನ್ನೂ ಪಿರ್‍ರ್ರಗಗಳನ್ನೂ ಸೇರಿಸಿ, ತಲೆಯನ್ನು ಕೈಗಳಿಂದಲೂ, ಸೊಂಟವನ್ನು ಮೊಳಕೈಗಳಿಂದಲೂ ಆದುಮಿ ಹಿಡಿದುಕೊಂಡು ನಿಗುರಿದರೆ ಪೂರ್ವತಾಣುವದು. (೧೯) ಪಿರ್‍ರ್ರಗಳನ್ನು ಕೆಳಗೆ ಊರಿ, ಅಥವಾ ಊರದೆ ಕುಳಿತುಕೊಂಡು, ಮೊಳಕಾಲುಗಳ ಮೇಲೆ ತಲೆಯನ್ನಿಟ್ಟುಕೊಂಡು, ಮೊಳಕಾಲುಗಳನ್ನು ಕೈಗಳಿಂದ ಸುತ್ತಿ ಹಿಡಿದು ಕೊಳ್ಳುವುದು. (೨೦) ಕಾಮದಹನಾಸ್ಯ:- ಕಾಲುಬೆರಳುಗಳನ್ನು ನೆಲದ ಮೇಲೆ ನಿಲ್ಲಿಸಿ, ಮೊಳಕಾಲುಗಳನ್ನು ಕೆಳಕ್ಕೂರದೆ ಪಿರ್‍ರ್ರಗಳೂ ಮಂಡಿಗಳೂ ಕೂಡುವಂತೆ ಇಟ್ಟು, ಹಂಸದಂಡದ ಮೇಲೆ ಕೈಗಳನ್ನೂರಿ, ನಿಗುರಿ ಭ್ರೂಮಧ್ಯಾವಲೋಕನ ಮಾಡುವುದು. ಹೀಗೆಯೇ ೮೪ ಆಸನ ಭೇದಗಳನ್ನು ಪ್ರಾಜ್ಞರಾದ ಯೋಗಿಗಳಿಂದ ತಿಳಿದು ಕೊಳ್ಳತಕ್ಕದ್ದು.

ಯಮನಿಯಮಾಸನಗಳೆಂಬ ಈ ಮೂರನ್ನು ಅಭ್ಯಾಸಮಾಡಿ, ಆಮೇಲೆ ಪ್ರಾಣನಿರೋಧವನ್ನು ಮಾಡಬೇಕು, ಇದೇ ಪ್ರಾಣಾಯಾಮವು ಅದರಲ್ಲಿ ಸ್ವಭಾವನಿಯತ ರೇಚಕ ಪೂರಕ ಕುಂಭಕ ಕ್ರಮಗಳಿಂದ ಇಪ್ಪತ್ತೊಂದುಸಾವಿರದ ಆರುನೂರು ಸಂಖ್ಯೆಯ ಮಂತ್ರಾನುಷ್ಠಾನಗಳ ಜಪವೇ ಮಂತ್ರಯೋಗವು, ಪ್ರತಿದಿನವೂ ಅಭ್ಯಾಸಮಾಡಿ ರೇಚಕ ಪೂರಕ ಕುಂಭಕಗಳೆಂಬ ಮೂರು ಬಗೆಯ ವಾಯುಗಳನ್ನು ಸಂಯಮನ ಪೂರ್ವಕವಾಗಿ ಪ್ರಾಣವೃತ್ತಿಯಲ್ಲಿ ಅಪಾನವನ್ನು, ಆಸನವೃತ್ತಿಯಲ್ಲಿ ಪ್ರಾಣವನ್ನೂ ಲಯಮಾಡುವುದೇ ಲಯಯೋಗವು. ಮೂಲಬಂಧ, ಉಡ್ಯಾಣಬಂಧ. ಜಾಲಂಧರಬಂಧ ಪೂರ್ವಕವಾಗಿ ರೇಚಕ ಪೂರಕಗಳನ್ನು ಉಡುಗಿಸಿ ಪ್ರಾಣಾಪಾನಗಳೆರಡನ್ನೂ ಏಕರೀತಿಯಾಗಿ ರಾತ್ರೀ ಹಗಲೂ ಗುಂಭಿಸುವುದೇ ಹಠಯೋಗವು, ಇವೇ ಮೂರು ಬಗೆಯ ಪ್ರಾಣಾಯಾಮಗಳೆನಿಸುವುವು, ನೇತ್ರಾದಿ ಇಂದ್ರಿಯಗಳನ್ನು ವಿಷಯಗಳ ದೆಸೆಯಿಂದ ಹಿಂದಿರುಗಿಸುವುದೇ ಪ್ರತ್ಯಾಹಾರವು, ಸಗುಣ ನಿರ್ಗುಣಾತ್ಮಕವಾದ ವಸ್ತುವನ್ನು ಚಿಂತಿಸುವುದೇ ಧ್ಯಾನವೆನಿಸುವುದು, ಮನಸ್ಸನ್ನು ಮೂಲಾಧಾರಾದಿ ಪ್ರದೇಶಗಳಲ್ಲಿ ಸೇರಿಸುವುದೇ ಧಾರಣವೆಂಬ ಯೋಗವು. ನಿರ್ಮಲವಾಗಿಯೂ, ನಿಶ್ಚಲವಾಗಿಯೂ, ಇರುವ ಚಿತ್ತವೃ

ತ್ತಿಯಿಂದ ನಿರ್ಗುಣ ಬ್ರಹ್ಮತ್ವವನ್ನು ಸಂಪಾದಿಸುವುದು ಸವಿಕಲ್ಪ ನಿರ್ವಿಕಲ್ಪಾತ್ಮಕವಾದ ಸಮಾಧಿಯೋಗವು, / ಹೀಗೆ ಅಷ್ಟಾಂಗಯೋಗಗಳುಳ್ಳದ್ದಾಗಿ ಅಭ್ಯಾಸಯೋಗವು ಪ್ರಕಾಶಿಸುವುದು./ ಅದು ಪರಿಪಕ್ವಚಿತ್ತವುಳ್ಳವರಿಗೆ ಸಾಧ್ಯವೇ ಹೊರತು ಇತರರಿಗೆ ಅತಿ ದುರ್ಲಭವು. ಇದು ಅಣಿಮಾ ಮಹಿಮಾ, ಗರಿಮಾ, ಲಘಿಮಾ, ಪ್ರಾಪ್ತಿ, ಪ್ರಾಕಾಮ್ಯ, ಈಶಿತ್ವ, ವಶಿತ್ವ ಎಂಬ ಅಷ್ಟೈಶ್ವರ್ಯಗಳನ್ನು ಕೊಡುತ್ತಾ ಆತ್ಮಜ್ಞಾನವನ್ನು ಪ್ರಕಟಪಡಿಸುವುದು. / ಮತ್ತು ನಿರ್ಮಲಚಿತ್ತರಿಗೆ ಜೀವಬ್ರಹ್ಮರು ಒಂದೇ ಎಂಬ ಜ್ಞಾನವನ್ನುಂಟುಮಾಡುವ ಅತಿಸುಲಭವಾದ ವಿಜ್ಞಾನಯೋಗವು. ಇದನ್ನೆ ರಾಜಯೋಗವೆಂದು ಹೇಳುವರು. ಈ ಎರಡು ಬಗೆಯ ಯೋಗಗಳಿಗೂ ಶ್ರೀರಾಮನ ಚರಣ ಭಕ್ತಿಯೇ ಕಾರಣವು. ಅದಕ್ಕೆ ವೈರಾಗ್ಯವು ಮೂಲವು. ಪರಮರಹಸ್ಯವಾದ ಆ ರಾಜಯೋಗವನ್ನು ಸಾಧಿಸಲಾರದೆ ಜನರೆಲ್ಲರೂ ಮೂಢರಾಗಿ ಸಂಸಾರವೆಂಬ ಸಮುದ್ರದಲ್ಲಿ ಮುಳುಗುತ್ತಿರುವರು. ಈ ರಾಜಯೋಗವನ್ನು ಭಗವತ್ಕಟಾಕ್ಷಕ್ಕೆ ಪಾತ್ರರಾದ ಭಕ್ತರು ಹೊರತು ಉಳಿದವರು ಗ್ರಹಿಸಲಾರರು. ರಾಜಯೋಗವೇ ಮೋಕ್ಷಕ್ಕೆ ರಾಜಮಾರ್ಗವಾಗಿರುವುದು. ಇದು ಸಾಂಖ್ಯ, ತಾರಕ, ಅಮನಸ್ಕವೆಂದು ಮೂರು ವಿಧವಾಗಿರುವುದು ಸಾಂಖ್ಯವು ಆತ್ಮಸ್ವರೂಪ ವಿಚಾರಕವು, ತಾರಕವು ಮನಶ್ಶುದ್ಧಿಗೆ ಕಾರಕವಾಗಿರುವುದು, ಅನುಭವ ಜ್ಞಾನವು ಅಮನಸ್ಕವೆನಿಸುವುದು, ಯೋಗಾಭ್ಯಾಸದಿಂದ ಚಿತ್ತೇಂದ್ರಿಯಗಳ ದರ್ಪವು ಅಡಗುವುದು. ಇದರಿಂದ ರಾಗದ್ವೇಷಾದಿ ದುರ್ಗಣಗಳು ತೊಲಗುವುವು. ಆತ್ಮಸುಖಾನುಭವ ಉಂಟಾಗುವುದು. ಆದುದರಿಂದ ಮೋಕ್ಷವನ್ನು ಅಪೇಕ್ಷಿಸುವವನಿಗೆ ಯೋಗಾಭ್ಯಾಸವು ಅವಶ್ಯ ಕರ್ತವ್ಯವು. ಅದರ ಸ್ವರೂಪವನ್ನು ಕೇಳು, ಏನೂ ತಿನ್ನದೆ ಇರುವವನಿಗೂ, ಹೆಚ್ಚಾಗಿ ತಿಂದು ತೇಗುವವನಿಗೂ ಯಾವಾಗಲೂ ನಿದ್ರೆಯಲ್ಲಿ ಬಿದ್ದಿರುವವನಿಗೂ, ಯಾವಾಗಲೂ ನಿದ್ರೆ ಮಾಡದೆ ಎಚ್ಚರಿಕೆಯಿಂದಲೇ ಇರುವವನಿಗೂ ಈ ಯೋಗಾಭ್ಯಾಸವು ಸಾಧ್ಯವಲ್ಲವು. ಯೋಗಾಭ್ಯಾಸಿಯು ಆಹಾರ ವಿಹಾರಗಳಲ್ಲಿ ಮಿತನಾಗಿರಬೇಕು. ಜಾಗ್ರತೆ, ಸ್ವಪ್ನ, ನಿದ್ರೆ ಇವುಗಳಲ್ಲಿ ಮಿತವಾಗಿರಬೇಕು. ವೈದಿಕಕರ್ಮಗಳಲ್ಲಿ ಮಿತವಾಗಿ ಪ್ರವರ್ತಿಸಬೇಕು. ವಿಸ್ತಾರವಾಗಿಯೂ ವಿಜನವಾಗಿಯೂ, ಸುಖವಾಗಿಯೂ ಇರುವ ಪ್ರದೇಶದಲ್ಲಿ ಹಳ್ಳ ತಿಟ್ಟುಗಳಿಲ್ಲದೆ ಸಮವಾಗಿರುವ ನೆಲದಲ್ಲಿ ದರ್ಭೆ, ಹುಲ್ಲು, ಕೃಷ್ಣಾಜಿನ, ವಸ್ತ್ರ

ಇವುಗಳನ್ನು ಹಾಸಿ, ಅದರ ಮೇಲೆ ಸ್ಥಿರವಾಗಿ ಪದ್ಮಾಸನದಲ್ಲಿ ಕುಳಿತುಕೊಂಡು, ನಡುವನ್ನೂ ಕತ್ತನ್ನೂ ಚೆನ್ನಾಗಿ ನಿಲ್ಲಿಸಿ, ದೃಷ್ಟಿಯನ್ನು ಮೂಗಿನಮೇಲೆ ಸರಿಯಾಗಿ ನಿಲ್ಲಿಸಿ, ಇತರ ಯಾವ ದಿಕ್ಕನ್ನು ನೋಡದೆ ದಶೇಂದ್ರಿಯಗಳನ್ನೂ ಬಿಗಿಹಿಡಿದು, ಯೋಗವನ್ನು ಅಭ್ಯಾಸಮಾಡಬೇಕು. ಬುದ್ಧಿಯನ್ನು, ಮನಸ್ಸನ್ನು, ವಾಯುಗಳನ್ನು, ದಶೇಂದ್ರಿಯಗಳನ್ನು ಸ್ಥಿರವಾಗಿಟ್ಟುಕೊಂಡು, ಕಾಮಕ್ರೋಧಾದಿ ವಿಕಾರಗಳನ್ನು ತುಳಿದು ನಿರ್ಭಯನಾಗಿ, ನಿಯಮದಿಂದ ಬ್ರಹ್ಮಚರ್ಯವನ್ನವಲಂಬಿಸಿ, ಶಾಂತಚಿತ್ತನಾಗಿ ತನ್ನ ಸದ್ಗುರುವು ಉಪದೇಶಿಸಿದ ಪ್ರಕಾರದಿಂದ ಎರಡು ಜಾವದತನಕ ಯೋಗಾಭ್ಯಾಸಮಾಡತಕ್ಕದ್ದು. ಖೇಚರಿ, ಭೂಚರಿ, ಮಧ್ಯಮ, ಷಣ್ಮುಖಿ ಶಾಂಭವಿ ಎಂಬ ಐದು ಮುದ್ರೆಗಳನ್ನು ಗುರೂಪದಿಷ್ಟ ಕ್ರಮದಿಂದ ತಿಳಿದುಕೊಂಡು, ಪ್ರಣವದಲ್ಲಿಯ ನಾದ, ಬಿಂದು, ಕಳೆಗಳನ್ನು ಶೋಧನೆಮಾಡಿ ತಾರಕವನ್ನು ಹೊಂದುವನು. ಅದು ಹೇಗೆಂದರೆ,—

೧ ಖೇಚರಿ, ಕಣ್ಣುಗಳನ್ನು ಮುಚ್ಚಿಕೊಂಡು, ಅಥವಾ ತೆರೆದು, ಹುಬ್ಬಿನನಡುವೆ ದೃಷ್ಟಿಯನ್ನು ನಿಲ್ಲಿಸಿ, ಊರ್ಧ್ವಮುಖನಾಗಿ ನೋಡುತ್ತಿರುವ ಮುದ್ರೆ. (೨) ಭೂಚರಿ:- ಕಣ್ಣುಗಳನ್ನು ಕದಲಿಸದೆ ಗುರುವು ಹೇಳಿದ ಕ್ರಮದಿಂದ ಯಾವಾಗಲೂ ನಾಸಿಕಾಗ್ರವನ್ನು ನೋಡುತ್ತಿರುವುದು. (೩) ಕಣ್ಣುಗಳನ್ನು ಅರ್ಧಮಟ್ಟಿಗೆ ಮುಚ್ಚಿಕೊಂಡು, ಮೂಗಿನ ಮಧ್ಯದಲ್ಲಿ ಚದರಿಸದೆ ದೃಷ್ಟಿಯನ್ನಿಟ್ಟುಕೊಂಡು, ಮೇಲುಗಡೆ ಇರುವ ಹಣೆಯನ್ನು ನೋಡುತ್ತಿರುವುದು ಮಧ್ಯಮವೆಂಬ ಮುದ್ರೆ. (೪) ಷಣ್ಮುಖಿ:- ಕಿವಿ, ಕಣ್ಣು, ಮೂಗುಗಳನ್ನು ಮುಚ್ಚಿಕೊಂಡು, ಭ್ರೂಮಧ್ಯದಲ್ಲಿ ದೃಷ್ಟಿಯನ್ನು ನಿಲ್ಲಿಸಿ, ನಾದಬಿಂದು ಚಿತ್ಕಳೆಗಳನ್ನು ಕಂಡುಹಿಡಿಯುವುದು. (೫) ಶಾಂಭವಿ:- ವಾಯುವನ್ನು ನಿರೋಧಮಾಡಿ, ಅಂತರ್ದೃಷ್ಟಿಯನ್ನು ಹೊರಕ್ಕೆ ಪ್ರಸರಿಸಿ, ಚೇಷ್ಟೆಗಳಿಲ್ಲದಂತೆ ನಿಲ್ಲಿಸುವುದು. ಇವೇ ಪಂಚಮುದ್ರೆಗಳ ಲಕ್ಷಣ. ಇಂದ್ರಿಯಗಳನ್ನು ಮನಸ್ಸಿನಲ್ಲಿ ನಿಲ್ಲಿಸಿ, ನಾದಬಿಂದು ಕಳೆಗಳನ್ನು ನೋಡುತ್ತಾ ಸ್ವಯಂಪ್ರಕಾಶವಾದ ಚಿತ್ಸುಖವನ್ನು ಪಡೆಯುವನು. ಜನರು ಕಣ್ಣಿಗೆ ಅಂಜನವನ್ನು ಹಚ್ಚಿಕೊಂಡು ನಿಕ್ಷೇಪವಾದ ದ್ರವ್ಯವನ್ನು ಕಂಡುಹಿಡಿಯುವಂತೆ ನಿರಂಜನವಾದ ತಾರಕಯೋಗದಿಂದ ಪರತತ್ವವನ್ನು ತಿಳಿಯಬಹುದು. ಮಾಂಸವನ್ನು ತೋರಿಸಿ ಗಿಡುಗಪಕ್ಷಿಯನ್ನು ಹಿಡಿದುಕೊಳ್ಳುವಹಾಗೆ ಅಮೃತಕ್ಕೆ ಸಮಾನವಾದ ನಾದ

ಬಿಂದು ಕಳೆಗಳನ್ನು ಸ್ವಾಧೀನಪಡಿಸಿಕೊಂಡು ಇಂದ್ರಿಯಗಳನ್ನೂ ಮನಸ್ಸನ್ನೂ ಜಯಿಸತಕ್ಕದ್ದು. ಸದ್ಗುರುವು ಹೇಳಿರುವ ಮುದ್ರೆಯಿಂದ ಕಿವಿಗಳೆರಡನ್ನೂ ಮುಚ್ಚಿಕೊಂಡು ಕೇಳುತ್ತಿದ್ದರೆ ಓಂಕಾರವು ಟಿಣಿಯೆಂದು ಮೊರೆಯುತ್ತಿರುವುದು. ಆ ಮೇಲೆ ಭರತನೆಯ್ಯುಸಾರಿ ಜೇಣಿಜೇಣಿಯೆಂದು ಎರಡುಸಲ ಮೊರೆಯುವುದು. ಘಂಟಾನಾದದ ಹಾಗೆ ಓಂಕಾರವು ಮನಸ್ಸಿನಲ್ಲಿಯೂ ಆಕಾಶದಲ್ಲಿಯೂ ಮೊರೆಯುತ್ತಿರುವುದನ್ನು ನೋಡಬಹುದು. ವೀಣಾವಾದ್ಯದಂತೆ ಈ ಓಂಕಾರವು ಶಬ್ದಿಸುತ್ತಿರುವುದನ್ನು ಕೇಳಿ, ಮನೋವಾಯುಗಳನ್ನೇ ತಾಳಗಳಾಗಿ ಮಾಡಿಕೊಂಡು ಹಾಡುತ್ತಿದ್ದರೆ ಬೃಂದಾವದಲ್ಲಿ ಗೋಪಿಕಾಸ್ತ್ರೀಯರು ಸುತ್ತಲೂ ನೆರೆದಿರುವಾಗ ಗೋಪಾಲಕೃಷ್ಣನು ವೇಣುವನ್ನೂದಿದಂತೆ ಆನಂದಮಯವಾದ ಸ್ವರವು ಕೇಳಬರುವುದು. ಆಗ ಇಂದ್ರಿಯಗಳೆಲ್ಲಾ ಸಂತೋಷದಿಂದ ನವಿಲುಗಳಂತೆ ಕುಣಿಯುತ್ತಿರುವುವು. ಹೀಗೆ ಜೇಣೀ ನಾದವೂ ಜೇಣೀಜೇಣೀ ನಾದವೂ ಘಂಟಾನಾದವೂ, ಶಂಖನಾದವೂ, ವೀಣಾನಾದವೂ, ತಾಳನಾದವೂ, ವೇಣುನಾದವೂ, ಭೇರೀನಾದವೂ, ಮೃದಂಗನಾದವೂ, ಮೇಘನಾದವೂ, ಸೇರಿ ಹತ್ತು ಬಗೆಯ ಶಬ್ದಗಳಿಂದ ಓಂಕಾರವು ಮೊರೆಯುತ್ತಿರುವುದನ್ನು ಗುರೂಪದೇಶಕ್ರಮದಿಂದಲೂ ಶ್ರುತಿಯುಕ್ತಿ ಅನುಭವಗಳಿಂದಲೂ ತಿಳಿದುಕೊಳ್ಳತಕ್ಕದ್ದು. ಈ ಓಂಕಾರದಲ್ಲಿ ಅಕಾರ ಉಕಾರ ಮಕಾರಗಳೆಂಬ ಮೂರಕ್ಷರಗಳು ಸೇರಿರುವುವು. ಈ ಪ್ರಣವನಾದರಸನವೆಂಬ ಅಮೃತಪಾನಮಾಡಿದವನಿಗೆ ಅನಿಮಿಷತ್ವವಂದರೆ ದೇವತ್ವವು ಸಿದ್ಧಿಸುವುದು. ಮನಸ್ಸೇ ಈ ದೇವತೆಯ ದೇವಾಲಯವು. ಇನ್ನು ಅಂತರ್ದೃಷ್ಟಿ ಬಹಿರ್ದೃಷ್ಟಿ ಮಧ್ಯದೃಷ್ಟಿ ಇವುಗಳಿಂದ ನೋಡಲ್ಪಡುವ ಚಿತ್ಕಳಾವಿಭೂತಿಯನ್ನು ಹೇಳುವೆನು ಕೇಳು.

ಗುರುವಿನ ಅನುಮತಿಯಿಂದ ಎರಡು ಕಣ್ಣುಗಳನ್ನೂ ಮುಚ್ಚಿಕೊಂಡು, ಹುಬ್ಬುಗಳ ನಡುವೆ ಇರುವ ದ್ವಿದಳಕಮಲವೆಂಬ ಆಜ್ಞಾಚಕ್ರದಲ್ಲಿ ದೃಷ್ಟಿಯನ್ನು ನಿಲ್ಲಿಸಿ, ಅಂತರಿಂದ್ರಿಯ ನಿಗ್ರಹಮಾಡಿ ಚಿತ್ಕಳೆಯ ಕಾಂತಿಯನ್ನು ನೋಡಬೇಕು. ಹೃದಯಾಕಾಶದ ಮಾರ್ಗವನ್ನು ಮುಂದಾಗಿ ಕಂಡುಹಿಡಿಯುವುದು ಮನಸ್ಸೇ ಆದುದರಿಂದ ಅದರಲ್ಲಿಯೇ ಪಂಚಾಕಾಶಗಳನ್ನು ಕಾಣಬಹುದು. ನೋಡುವುದು, ಕೇಳುವುದು, ವಾಸನೆಯನ್ನು ಗ್ರಹಿಸುವುದು, ಮುಂತಾದ ಕಾರ್ಯಗಳನ್ನು ಮನಸ್ಸೇ ಮಾಡಿ

ಸುವುದರಿಂದ ಇದಕ್ಕೇನೇ ಪಂಚಾಕಾಶವೆಂದು ಹೆಸರು. ಇಂತಹ ಹೃದಯಾಕಾಶದಲ್ಲಿ ಕೇವಲನಿರಾಕಾರವಾಗಿ ನಿರ್ಗುಣವಾಗಿರುವ ಆಕಾಶವೂ, ಗಾಢಾಂಧಕಾರವಾಗಿರುವ ಪರಾಕಾಶವೂ, ಪ್ರಳಯಕಾಲದ ಉರಿಯಂತೆ ಪ್ರಕಾಶಿಸುತ್ತಿರುವ ಮಹಾಕಾಶವೂ, ವಿವಿಧ ಕಾಂತಿಗಳಿಂದ ತುಂಬಿರುವ ತತ್ವಾಕಾಶವೂ, ಕೋಟಿಸೂರ್ಯ ಪ್ರಭಾಭಾಸಮಾನವಾದ ಸೂರ್ಯಾಕಾಶವೂ ಇರುವುದರಿಂದ ಇವುಗಳನ್ನು ಕಂಡುಕೊಳ್ಳಬೇಕು. ಈ ಪಂಚಾಕಾಶಗಳ ಮಧ್ಯದಲ್ಲಿ ಚಿತ್ಕಳೆಯು ಪ್ರಕಾಶಮಾನವಾಗಿ ಬೆಳಗುತ್ತಿರುವುದು.

ಸಕಲ ಕರ್ಮಗಳಿಗೂ ಸಾಕ್ಷಿಯಾಗಿಯೂ ಸ್ವಯಂ ಪ್ರಕಾಶದಿಂದ ತಮೋನಾಶಕನಾಗಿಯೂ, ಚಕ್ಷುರಾದಿ ಇಂದ್ರಿಯಗಳನ್ನು ಪ್ರೇರಿಸತಕ್ಕದಾಗಿಯೂ ಇರುವ ಚಿತ್ಸೂರ್ಯನು ಭ್ರೂಮಧ್ಯವೆಂಬ ಉದಯಪರ್ವತದಲ್ಲಿ ಮೊದಲು ಕಾಣಿಸಿಕೊಂಡು ತಾನೇ ತಾನಾಗಿ ಹೊಳೆಯುತ್ತಿರುವನು. ನೀನು ಆ ಸೂರ್ಯೋದಯವಾಗುವುದಕ್ಕೆ ಮುಂಚೆಯೇ ಅಪರೋಕ್ಷಜ್ಞಾನವೆಂಬ ಕಣ್ಣನ್ನು ತೆರದು. ಅಜ್ಞಾನವೆಂಬ ಸ್ತ್ರೀಯ ಆಲಿಂಗನವನ್ನು ತೊರೆದು, ಪಂಚಕೋಶಾತ್ಮಕವಾದ ದೇಹವೆಂಬ ಹಾಸಿಗೆಯಿಂದಿಳಿದು ವೈರಾಗ್ಯ, ವಿಜ್ಞಾನ, ಉಪರತಿಗಳಿಂದ ಮಾನಸಸ್ನಾನಮಾಡಿ, ಬುದ್ಧೀಂದ್ರಿಯ ಪ್ರೇರಕನಾದ ಪ್ರತ್ಯಗಾತ್ಮನೆಂಬ ಸೂರ್ಯನಿಗೆ ನಿನ್ನ ಆನಂದ ಬಾಷ್ಪಜಲದಿಂದ ಅರ್ಘ್ಯಪ್ರದಾನಮಾಡಿ, ಸಂದೇಹವೆಂಬ ಮಂದೇಹರಾಕ್ಷಸರನ್ನು ವಧಿಸು, ಮೌನವೆಂಬ ಜಪವನ್ನೂ, ಅಂತಃಕರಣ ವೃತ್ತಿರಾಹಿತ್ಯವೆಂಬ ಧ್ಯಾನವನ್ನೂ ಮಾಡಿ, ಕರ್ಮೇಂದ್ರಿಯ ವ್ಯಾಪಾರಗಳನ್ನು ತೊರೆಯುವುದೆಂಬ ಆತ್ಮಾರ್ಪಣಮಾಡಿ ಚಿದಖಂಡಾನಂದವನ್ನು ಅನುಭವಿಸು. ಆ ಮೇಲೆ ಚಿತ್ತವಿಶ್ರಾಂತಿಯೆಂಬ ತಾಂಬೂಲವನ್ನು ಸೇವಿಸಿ ಮುಕ್ತಿಕಾಂತೆಯೊಂದಿಗೆ ವಿನೋದದಿಂದಿರು.

ಎಲೈ ಆಂಜನೇಯನೇ, ಹಣೆಯಲ್ಲಿ ದೃಷ್ಟಿಯೂ, ಅದರ ತುದಿಯಲ್ಲಿ ಕುಂಡಲಿಯೆಂಬ ಸರ್ಪರಾಜನೂ, ಸಹಸ್ರಾರವೆಂಬ ತಲೆಯಲ್ಲಿ ಅಮೃತಕಿರಣನಾದ ಚಂದ್ರನೂ ಇಪ್ಪತ್ತಿರಲು ನೀನೇ ಸಾಕ್ಷಾತ್ಪರಮೇಶ್ವರನಾಗುವೆ. ಎಲೈ ಮಾರುತಿಯೇ, ಕಾಮಕ್ರೋಧ ಮೊದಲಾದ ದುರ್ಗುಣಸಂಘವೆಂಬ ಮೇಕೆಗಳನ್ನು ಓಂಕಾರಮಂತ್ರದಿಂದ ವಧಿಸಿ, ಆತ್ಮವಿಷಯಗಳೆಂಬ ಸಮಿತ್ತುಗಳಿಂದ ಸೇರುವಹಾಗೆ ವಾಸನಾತ್ರಯ (ಲೋಕವಾಸನೆ, ಶಾಸ್ತ್ರವಾಸನೆ, ದೇಹವಾಸನೆ) ಗಳೆಂಬ ತುಪ್ಪದಿಂದ ಚಿತ್ತೆಂಬ

ಯಜ್ಞೇಶ್ವರನಲ್ಲಿ ಹೋಮಮಾಡಿ ಬ್ರಹ್ಮಾನಂದವೆಂಬ ಸೋಮರಸವನ್ನು ಪಾನಮಾಡು. ಹಿರಣ್ಮಯಮಂಡಲವು ಆಜ್ಞಾಚಕ್ರದಲ್ಲಿ ಸ್ವಯಂಪ್ರಕಾಶವಾಗಿರುವ ಚಿತ್ಕಳಾಗ್ರಮಧ್ಯದಲ್ಲಿ ಮಹಾತೇಜಸ್ಸಿನಿಂದ ಪ್ರಕಾಶಿಸುತ್ತಿರುವುದು. ಕೋಟಿಸೂರ್ಯ ಪ್ರಕಾಶಮಾನವಾಗಿರುವ ಆ ಬೆಳಕನ್ನು ನೋಡಪ್ಪಾ ಮಗುವೇ.

ಹೀಗೆ ಭ್ರೂಮಧ್ಯ ವೀಧಿಯಲ್ಲಿಯ ಹೃದಯಾಕಾಶದಲ್ಲಿ ವಿಯನ್ಮಂಡಲ, ತಮೋಮಂಡಲ, ಮೇಘಮಂಡಲ, ವಿದ್ಯುನ್ಮಂಡಲ, ತಾರಾಮಂಡಲ ಜ್ಯೋತಿರ್ಮಂಡಲ, ಸೂರ್ಯಮಂಡಲ, ಚಂದ್ರಮಂಡಲ, ಅಗ್ನಿಮಂಡಲ, ಹಿರಣ್ಮಯ ಮಂಡಲಗಳೆಂಬ ದಶವಿಧಮಂಡಲಗಳಲ್ಲಿಯೂ ಹತ್ತು ಬಗೆಯ ನಾದಗಳು ಹುಟ್ಟುತ್ತಿರುವುವು. ಇವುಗಳನ್ನು ಬೇರೆಬೇರೆ ವಿಭಾಗಮಾಡಿ ತಿಳಿಯುವವನೇ ಪರಿಪೂರ್ಣ ಸಚ್ಚಿದಾನಂದ ಸ್ವರೂಪ ಪ್ರತ್ಯಗಭಿನ್ನ ಪರಮಾತ್ಮ ರಾಮನಾಗುವನು. /ಬಿಂದುನಾದ ಕಳಾತ್ಮಿಕಳಾದ ನನ್ನನ್ನು ಆಶ್ರಯಿಸಿ, ಅದ್ವಿತೀಯನಾಗಿಯೂ, ಅಪರೋಕ್ಷ ಬ್ರಹ್ಮಚೈತನ್ಯ ಸ್ವರೂಪಕನಾಗಿಯೂ ಇರುವ ಈ ಆತ್ಮಾರಾಮನಲ್ಲಿ ನೀನು ಏಕೀಭೂತನಾಗಿ ನಿವಾತದೀಪದಂತೆಯೂ, ಅಲೆಗಳಿಲ್ಲದ ಸಮುದ್ರದಂತೆಯೂ, ನಿಶ್ಚಲನಾಗಿ, ನಿರ್ವಿಕಲ್ಪನಾಗಿ, ನಿರಾಕಾರ ಸುಖಸ್ವರೂಪನಾಗಿ ರಾಜಯೋಗ ಸಮಾಧಿಯನ್ನು ಹೊಂದು. ಅಂತಹ ಪೂರ್ಣಸಮಾಧಿಯು ಮನೋವಾಯುಗಳ ಚಲನವನ್ನು ನಿಲ್ಲಿಸಿದ ಹೊರತು ಗೋಚರವಾಗತಕ್ಕದ್ದಲ್ಲ. ಬಿಂದುವಿನ ಚಾಂಚಲ್ಯವನ್ನು ಅಡಗಿಸಿದ ಹೊರತು ಹಂಸತತ್ವವನ್ನು ತಿಳಿಯಲಿಕ್ಕೆ ಬಾರದು. ಅದರ ಸ್ವರೂಪವನ್ನು ಹೇಳುವೆನು ಕೇಳು.

ಆ ಹಂಸಚಕ್ರವು ಅಷ್ಟದಳಪದ್ಮದಂತೆ ಬ್ರಹ್ಮಸಂಸ್ಥಾನವಾಗಿ ಮನಸ್ಸಿಗೆ ಸಂತೋಷಕರವಾಗಿರುವುದು. ಹಾಲನ್ನೂ ನೀರನ್ನೂ ಪ್ರತ್ಯೇಕಿಸತಕ್ಕ ಶಕ್ತಿಯುಳ್ಳ ಹಂಸಪಕ್ಷಿಯ ಹಾಗೆ ಆ ಪರಬ್ರಹ್ಮ ಸ್ವರೂಪನಾದ ಹಂಸನು ನಿಸ್ಸಾರವಾದ ಪ್ರಪಂಚವನ್ನೂ, ಪ್ರಪಂಚವಿಲಕ್ಷಣವಾಗಿ ಸಾರಭೂತನಾದ ಪರಮಾತ್ಮನನ್ನೂ ಪ್ರತ್ಯೇಕಿಸಲು ಶಕ್ತಿಯುಳ್ಳವನಾಗುವನು. ಆ ಹಂಸತತ್ವಾರ್ಥವು ಅತಿರಹಸ್ಯವಾಗಿರುವುದರಿಂದ ಅದನ್ನು ವಿವರಿಸುವೆನು./ ಈ ಸ್ಥೂಲಶರೀರದಲ್ಲಿ ಎಪ್ಪತ್ತೆರಡುಸಾವಿರ ನಾಡಿಗಳಿರುವುವು. ಅದರಲ್ಲಿ ಗುದಕ್ಕಿಂತಎ ರಡಂಗುಲದ ಮೇಲೆ ಲಿಂಗಕ್ಕಿಂತಎ ರಡಂಗುಲ ಕೆಳಭಾಗದಲ್ಲಿ ಅಧೋಮುಖಾಗ್ರವಾಗಿ ಮೂರುಕೋಣಗಳಿಂದ ಕೂಡಿ, ದೇಹ

ಮಧ್ಯಮಸ್ಥಾನದಲ್ಲಿ ಮೂಲಾಧಾರ ಚಕ್ರವು ಒಪ್ಪುತ್ತಿರುವುದು. ಅದು ಮೊದಲುಗೊಂಡು ಸಹಸ್ರಾರ ಚಕ್ರವೇ ತುದಿಯಾಗಿ ಪೃಷ್ಠಭಾಗದಲ್ಲಿ ವೀಣೆಯ ದಂಡದ ಹಾಗೆ ಸಮಸ್ತ ನಾಡಿಗಳಿಗೂ ಮೂಲಕಂದವಾದ ತುದಿ ಮೊದಲುಗಳನ್ನು ಕಡಿದ ಬಿದಿರಿನಂತೆ ಇರುವ ಷಡಾಧಾರದಿಂದ ಕೂಡಿದ ಉದ್ದವಾದ ಮೂಳೆಯು ಬ್ರಹ್ಮದಂಡಿಯೆನ್ನಲ್ಪಡುವುದು, ಆ ಬ್ರಹ್ಮದಂಡಿಯೂ ಮೂಲಾಧಾರಾಗ್ರ ಕೋಣದಲ್ಲಿ ಮಂಡಲಿಯೆಂಬ ಪರಾಶಕ್ತಿಯಿಂದ ಕೂಡಿ, ಪ್ರಾಣಾಗ್ನಿ ಬಿಂದುನಾದಗಳಿಗೆ ಸ್ಥಾನವಾಗಿ, ಸಾವಿತ್ರೀ ಸರಸ್ವತಿಗಳೆಂಬ ಹೆಸರನ್ನು ಪಡೆದು, ಬ್ರಹ್ಮರಂಧ್ರಗತವಾದ ಸುಷುಮ್ನಾ ನಾಡಿಯಿರುವುದು, ಅದರ ಎಡಬಲ ಭಾಗಗಳಲ್ಲಿ ಆಧಾರವು ಮೊದಲುಗೊಂಡು ನಾಸಿಕಾಗ್ರಪರ್ಯಂತವೂ ವ್ಯಾಪಿಸಿ, ನಾಡೀ ಚಕ್ರದಲ್ಲಿ ಸೇರಿಕೊಂಡು, ಪಿತೃಯಾನ ದೇವಯಾನಗಳೆಂಬ ಸಂಜ್ಞೆಗಳುಳ್ಳ ಇಡಾಪಿಂಗಳಗಳೆಂಬ ಎರಡು ನಾಡಿಗಳು ಇರುವುವು. ನಾಭಿಮಂಡಲವನ್ನಾಶ್ರಯಿಸಿ, ಕುಕ್ಕುಟಾಂಡ (ಕೋಳಿಯಮೊಟ್ಟೆ) ದ ಹಾಗೆ ನಾಡೀ ಚಕ್ರವು ಪ್ರಕಾಶಿಸುವುದು. ಗಾಂಧಾರಿ, ಹಸ್ತಿ ಜಿಹ್ವೆಯೆಂಬ ನಾಡಿಗಳು ಕಣ್ಣಿನ ಕೊನೆಯತನಕ ವ್ಯಾಪಿಸಿರುವುವು. ಪೂಷಾ, ಅಲಂಪೂಷಾ ಎಂಬ ನಾಡಿಗಳು ಎರಡು ಕಿವಿಳಗಲ್ಲಿಯೂ ವ್ಯಾಪಿಸಿರುವುವು. ಶುಕ್ಲವೆಂಬ ನಾಡಿಯು ಭ್ರೂಮಧ್ಯದಲ್ಲಿರುವುದು, ಮೂಗಿನ ಹೊಳ್ಳೆಗಳೆರಡು, ಕಿವಿಯ ರಂಧ್ರಗಳೆರಡು, ಭ್ರೂಮಧ್ಯವೊಂದು, ಇವುಗಳು ಕೂಡುವಸ್ಥಳವು ನಾಲ್ಕು ರಸ್ತೆಗಳು ಕೂಡಿದಂತೆ ಇರುವುದು. ಗಂಗಾಯಮುನಾ ಸರಸ್ವತಿಗಳೆಂಬ ಹೆಸರುಗಳನ್ನುಳ್ಳ ಇಡಾಪಿಂಗಳಾ ಸುಷುಮ್ನಾ ನಾಡಿಗಳು ಕೂಡಿದ ಭ್ರೂಮಧ್ಯಸ್ಥಾನವು ತ್ರಿಕೂಟವೆಂತಲೂ ತ್ರಿವೇಣೀ ಸಂಗಮವೆಂತಲೂ ಹೆಸರುಗೊಂಡಿರುವುದು. ವಾಕ್ಪ್ರಸಾರಿಣಿಯಾದ ಸರಸ್ವತೀನಾಡಿಯೂ, ಜಿಹ್ವಾಂತಗಾಮಿನಿಯಾದ ವಿಶ್ವೋದರೀ ನಾಡಿಯೂ, ಚತುರ್ವಿಧಾನ್ನಗಳನ್ನೂ ಭಕ್ಷಿಸುವ ಕಂಠಸ್ಥವಾದ ಪಯಸ್ವಿನೀ ನಾಡಿಯೂ, ಹಸಿವು ಬಾಯಾರಿಕೆಗಳನುಂಟುಮಾಡುತ್ತಾ ಜಲಪಾನಮಾಡುತ್ತಿರುವುದು. ಮತ್ತು ನಾಡೀ ಚಕ್ರದಲ್ಲಿ ಹುಟ್ಟಿದ ಮೂರು ನಾಡಿಗಳು ಕೆಳಮುಖವಾಗಿರುವುವು. ಅದರಲ್ಲಿ ರಕ್ತವೆಂಬ ನಾಡಿಯು ಶುಕ್ಲವನ್ನೂ, ಸಿನೀವಾಲಿಯೆಂಬ ನಾಡಿಯು ಮೂತ್ರವನ್ನೂ, ಕುಹೂ ಎಂಬ ನಾಡಿಯು ಮಲವನ್ನು, ಹೊರಗೆಡಹುತ್ತಿರುವುವು. ಶಂಖಿನಿ ಮತ್ತು ಧಾಮಿನಿಯೆಂಬ ಎರಡು ನಾಡಿಗಳು ತಿಂದ ಅನ್ನರಸಗಳನ್ನು ಗ್ರಹಿಸಿ,

ಕಪಾಲಕುಹರಕ್ಕೆ ಸೇರಿ ತಲೆಯಲ್ಲಿ ಅಮೃತವನ್ನುಂಟುಮಾಡುವುದು. ಇದು ಅಲ್ಲದೆ ಹೃದಯದಲ್ಲಿ ನೂರೊಂದು ನಾಡಿಗಳಿರುವುವು. ಅವುಗಳಲ್ಲೊಂದು ನಾಡಿಯು ಮೇಲಕ್ಕೆ ಹೋಗಿರುವುದು. ಆ ನಾಡಿಯು ಮಾರ್ಗವೇ ಮೋಕ್ಷಮಾರ್ಗವೆಂದು ವೇದಾಂತಿಗಳು ಹೇಳುವರು. ಈಗ ಹೇಳಿದುವೆಲ್ಲಾ ಮುಖ್ಯನಾಡಿಗಳು, ಇವುಗಳಲ್ಲಿ ಇಡಾ, ಪಿಂಗಳಾ, ಸುಷುಮ್ನಾ ಇವು ಶ್ರೇಷ್ಠ ನಾಡಿಗಳೆಂದು ಹೇಳುವರು. ಬ್ರಹ್ಮನಾಡಿಯೆಂಬುದು ಸಕಲ ನಾಡಿಗಳಿಗೂ ಶಿರೋಮಣಿಯಾಗಿರುವುದು. ಈ ರೀತಿಯಲ್ಲಿ ಅಡ್ಡವಾಗಿಯೂ, ಮೇಲುಮುಖವಾಗಿಯೂ ಕೆಳಮುಖವಾಗಿಯೂ ಇರುವ ಎಪ್ಪತ್ತೆರಡು ಸಾವಿರ ನಾಡಿಗಳಲ್ಲಿ ಚಲನ, ಓಡುವುದು, ನಡುಗುವುದು, ಸಂಕೋಚವಾಗುವುದು, ಬಾಗುವುದು, ಈ ಧರ್ಮಗಳುಳ್ಳ ಹತ್ತುವಿಧಗಳು ಇರುವುವು. ಇವರಲ್ಲಿ ಪ್ರಾಣನು ಹೃದಯದಲ್ಲಿ ವಾಸಮಾಡಿಕೊಂಡು ಇಡಾ, ಪಿಂಗಳಾ, ನಾಡಿಗಳೆಂಬ ಎರಡು ರಂಧ್ರಗಳಿಂದಲೂ ಉಛ್ವಾಸರೂಪದಿಂದ ಹೊರಕ್ಕೆ ಹೊರಟು ಹನ್ನೆರಡು ಅಂಗುಲ ಪರ್ಯಂತ ಬಂದು ಅಲ್ಲಿ ಅಡಗುವುದು, ಅಪಾನವಾಯುವು ಗುದಸ್ಥಾನದಿಂದ ಹೊರಟು, ನಿಶ್ವಾಸರೂಪದಿಂದ ಪ್ರಾಣನಿಗೆ ಅಧೋಮುಖವಾಗಿ ಎದುರಿಗೆ ನಡೆಯುತ್ತಾ ಅಧೋಮುಖವಾದ ಮೂರು ನಾಡಿಗಳಿಂದ ಮಲ, ಮೂತ್ರ, ಶುಕ್ಲಗಳನ್ನು ಹೊರಡಿಸುತ್ತಿರುವುದು. ಉದಾನವಾಯುವು ಕಂಠದೇಶದಲ್ಲಿ ವಾಸಮಾಡಿಕೊಂಡಿದ್ದು, ಮನಸ್ಸಿನಲ್ಲಿಯ ಸಂಕಲ್ಪ ವಿಕಲ್ಪಗಳನ್ನು ನಾಲಿಗೆ ಮೊದಲಾದ ಅಷ್ಟಸ್ಥಾನಗಳಿಂದ (ನಾಲಿಗೆ, ದವಡೆ, ಕತ್ತು, ತಲೆ, ಹಲ್ಲುಗಳು, ತುಟಿಗಳು, ಮೂಗು, ಮಿಶ್ರಗಳು ಇವು ಅಷ್ಟಸ್ಥಾನಗಳು) ಶಬ್ದರೂಪವಾಗಿ ನುಡಿಸುತ್ತಾ ನಿದ್ರೆಮಾಡುತ್ತಿರುವಾಗ ಸಕಲೇಂದ್ರಿಯಗಳನ್ನು ಸಂಗ್ರಹಿಸಿ, ಉಪಶಮನ ಮಾಡಿಸುತ್ತಿರುವುದು. ಮತ್ತು ಎಚ್ಚರವಾಗಿರುವಾಗ ಅವುಗಳನ್ನೆಲ್ಲಾ ಯಥಾಸ್ಥಾನಗಳಲ್ಲಿರಿಸುತ್ತಾ ಇರುವುದು. ಇದಲ್ಲದೆ ಲೋಕಾಂತರಗಮನಾಗಮನಗಳಲ್ಲಿ ಸಾಮರ್ಥ್ಯವನ್ನುಳ್ಳದ್ದಾಗಿ, ಅಗ್ನಿಷ್ಟೋಮಮಯವಾಗಿ, ಸುಷುಮ್ನಾ ರಂಧ್ರವನ್ನಾಶ್ರಯಿಸಿ, ಬ್ರಹ್ಮರಂಧ್ರಕ್ಕೆ ಉದ್ಗಮಿಸುತ್ತಿರುವುದು. ವ್ಯಾನವಾಯುವು ಸರ್ವಶರೀರದಲ್ಲಿಯೂ ವ್ಯಾಪಿಸಿ ಹೊರಗಿನ ಶೀತೋಷ್ಣಗಳನ್ನು ಒಳಕ್ಕೂ ಒಳಗಿನ ಶೀತೋಷ್ಣಗಳನ್ನು ಹೊರಕ್ಕೂ ಕೊಡುತ್ತಾ, ಭಕ್ಷಿಸಿದ ಅನ್ನರಸವನ್ನು ಎಲ್ಲಾ ಕಡೆಗೂ ಹರಡುತ್ತಾ ಇರುವುದು. ಸಮಾನವಾಯುವು ನಾಭಿಸ್ಥಾ

ನದಲ್ಲಿ ಇದ್ದುಕೊಂಡು, ಜಠರಾಗ್ನಿಯನ್ನು ಪ್ರಜ್ವಲನಗೊಳಿಸಿ, ಪ್ರಾಣಿಯು ತಿಂದ ಚತುರ್ವಿಧಾನ್ನಗಳನ್ನೂ ಪಚನಮಾಡಿ, ಎಲ್ಲ ನಾಡಿಗಳಿಗೂ ಹಂಚುತ್ತಿರುವುದು. ನಾಗನು ಉದ್ಗಾರವನ್ನೂ, ಕೂರ್ಮನು ಉನ್ಮೀಲನವನ್ನೂ, ಕೃಕರನು ಕ್ಷುತವನ್ನೂ, ದೇವದತ್ತನು ವಿಜೃಂಭಣವನ್ನೂ, ಸರ್ವವ್ಯಾಪಿಯಾದ ಧನಂಜಯನು ಸತ್ತರೂ ಬಿಡದೆ ದೇಹದ ಸ್ಥೌಲ್ಯವನ್ನೂ ಉಂಟು ಮಾಡುತ್ತಿರುವುವು. ಹೀಗೆ ದಶವಾಯುಗಳಿಂದ ಕೂಡಿ, ದಶೇಂದ್ರಿಯಗಳುಳ್ಳದ್ದಾಗಿ, ಕಾಮರಾಗದ್ವೇಷಾದಿ ವಿಕಾರಸಹಿತವಾಗಿ, ವಿಷಯ ಸುಖಗ್ರಹಣಕ್ಕೋಸ್ಕರ ಅಧೋಮುಖವಾಗಿ, ಶ್ರವಣೇಂದ್ರಿಯದಿಂದ ಎರಡುಬಗೆಯ ಶಬ್ದಗಳನ್ನೂ (ಧ್ವನಿ, ಅಕ್ಷರ) ತ್ವಗಿಂದ್ರಿಯ (ಚರ್ಮ) ದಿಂದ ಐದುಬಗೆಯ ಸ್ಪರ್ಶಗಳನ್ನೂ (ಮೃದು, ಕಠಿನ, ಶೀತ, ಉಷ್ಣ, ಮಿಶ್ರ ಇವೈದು ಸ್ಪರ್ಶಗಳು) ನೇತ್ರೇಂದ್ರಿಯದಿಂದ ಆರು ಬಗೆಯ ಬಣ್ಣಗಳನ್ನೂ (ಕೆಂಪು, ಬಿಳುಪು, ಕಪ್ಪು, ಹಸುರು, ಹಳದಿ, ಮಿಶ್ರವರ್ಣ ಇವು ಆರು) ಜಿಹ್ವೇಂದ್ರಿಯ (ನಾಲಿಗೆ) ದಿಂದ ಆರು ಬಗೆಯ ರಸಗಳನ್ನೂ (ಉಪ್ಪು, ಹುಳಿ, ಸಿಹಿ, ಕಹಿ, ಕಾರ, ಒಗರು, ಇವು ಷಡ್ರಸಗಳು) ಘ್ರಾಣೇಂದ್ರಿಯದಿಂದ ಸುಗಂಧ, ದುರ್ಗಂಧ, ಮಿಶ್ರವೆಂಬ ಮೂರು ಬಗೆಯ ವಾಸನೆಗಳನ್ನೂ, ಅನುಭವಿಸುತ್ತಿರುವುದು. ಮತ್ತು ವಾಕ್ಪಾಣಿಪಾದಪಾಯೂಪಸ್ಥಗಳ ಸಂಗಡಸೇರಿ, ಮಾತನಾಡುವುದು, ತೆಗೆದುಕೊಳ್ಳುವುದು, ನಡೆಯುವುದು, ವಿಸರ್ಜಿಸುವುದು, ಆನಂದಪಡುವುದು ಎಂಬ ಐದು ಬಗೆಯ ಕರ್ಮಗಳನ್ನು ಮಾಡುತ್ತಾ ಮನಸ್ಸು ಪ್ರವರ್ತಿಸುತ್ತಿರುವುದು. ಆ ಮನಸನ್ನೇ ಕರಣವಾಗಿ ಮಾಡಿಕೊಂಡು, ಆ ಪವನಮನೋಗ್ರಸ್ಥಿತವಾಗಿಯೂ, ಕರ್ತೃತ್ವ ಭೋಕ್ತೃತ್ವಾದಿ ಧರ್ಮ ಸಮೇತವಾಗಿಯೂ ಇರುವ ಬುದ್ಧಿಯು ಪ್ರಕಾಶಿಸುತ್ತಿರುವುದು. ಇದಕ್ಕೇನೇ ಬಿಂದುವೆಂದು ಹೆಸರು. ಇದು ಸರ್ವಕಾರ್ಯ ಕಾರಣಗಳಿಗೆ ಆಶ್ರಯವಾಗಿಯೂ ನಿಖಿಲವಾಸನಾ ವಾಸಿತವಾಗಿಯೂ ಇರುವುದರಿಂದ ಆ ಮಾನಸ ಮೂರು ಶೇಂದ್ರಿಯ ಶರೀರಗಳೊಂದಿಗೆ ಸೇರಿ ವಿಷಯಾಭಿಮುಖವಾಗಿ ಅದರ ಚಾಂಚಲ್ಯದಿಂದ ತಾನೂ ಚಲಿಸುತ್ತಾ ಬಹಿರಂತರ್ವಿಷಯಗಳನ್ನು ಅನುಭವ ಮಾಡುತ್ತಾ ನಿದ್ರಾಕಾಲಗಳಲ್ಲಿ ಅಜ್ಞಾನವುಳ್ಳದ್ದಾಗಿಯೂ, ಜಾಗ್ರತ್ಸ್ವಪ್ನಗಳಲ್ಲಿ ಬುದ್ಧಿಯೇ ಮೊದಲಾದ ಆಕಾರವಾಗಿ ತೋರುತ್ತಲೂ ಅನಾದಿ ಕಾಲದಿಂದಲೂ ಮುಕ್ತಿಪರ್ಯಂತವಾಗಿ ಅನಂತ ಕರ್ಮಗಳನ್ನು ಮಾಡುತ್ತಾ

ತತ್ತತ್ಫಲಗಳಾದ ಸುಖದುಃಖಗಳನ್ನು ಅನುಭವಿಸುತ್ತಾ, ಅವಿಕಾರರೂಪವಾಗಿಯೂ, ಯಾವಾಗಲೂ ತಿರುಗುತ್ತಿರುವ ಸ್ವಭಾವವುಳ್ಳದ್ದಾಗಿಯೂ ಇರುವುದು. ಅನ್ನಮಯ, ಪ್ರಾಣಮಯ, ಮನೋಮಯ, ಎಂಬ ಕೋಶಗಳತುದಿಯಲ್ಲಿರುವ ವಿಜ್ಞಾನಮಯ ಕೋಶವೇ ಬಿಂದುವೆನ್ನಲ್ಪಡುವದು. ಅದರಲ್ಲಿ ಪ್ರತಿಬಿಂಬಿಸುವ ಪರಮಾತ್ಮನಿಗೆ ಕಳೆಯೆಂದು ಹೆಸರು. ಪ್ರಾಣಾದಿವಾಯುಗಳ ಉನ್ನತಘೋಷವೇ ನಾದವೆನ್ನಲ್ಪಡುವುದು. ಈ ನಾದಬಿಂದುಕಳೆಗಳಲ್ಲಿ ಕಾಣಬರುತ್ತಿರುವವನನ್ನು ಕಾಣುವ ಪುರುಷನೇ ಪ್ರಜ್ಞಾನಘನನಾದ ಶ್ರೀರಾಮನು. ಇವನು ನಾನಾವಿಧ ತತ್ವಗಳಿಗೂ ಪ್ರಭುವಾಗಿರುವನು. ಆ ತತ್ವಗಳು ಯಾವುವೆಂದರೆ—ಆಕಾಶಾದಿ ಪಂಚಭೂತಗಳು, ಶಬ್ದಾದಿ ಪಂಚಗುಣಗಳು, ಜ್ಞಾನೇಂದ್ರಿಯಗಳು ಐದು ಕರ್ಮೇಂದ್ರಿಯಗಳು ಐದು, ಪ್ರಾಣಾಪಾನಾದಿ ದಶವಾಯುಗಳು. ಮನಸ್ಸು, ಬುದ್ಧಿ, ಅಹಂಕಾರ, ಚಿತ್ತ, ಇವುಗಳಿಗೆ ಕಾರಣಭೂತವಾದ ಅವಿದ್ಯೆಯು, ಪಶುವು, ಇದಕ್ಕೆ ಪರದಲ್ಲಿರುವವನೇ ಜಗತ್ಕರ್ತನಾದ ಪರಮೇಶ್ವರನು ಇವು ಮೂವತ್ತಾರು ತತ್ವಗಳು—

ಅಂತಹ ಶ್ರೀರಾಮ ತತ್ವಾಭಾಸವಾದ ಕಳೆಯಿಂದ ಕೂಡಿದ ಬಿಂದುವು ಯಾವಾಗಲೂ ಸೂರ್ಯಚಂದ್ರಾಗ್ನಿ ಮಂಡಲಗಳಿಂದ ಕೂಡಿದ ಜ್ಞಾನನೇತ್ರದಕೆಳಗೆ ಹೃತ್ಕಮಲದಲ್ಲಿ ಬಹಿರ್ಮುಖವಾಗಿ ವಿಷಯಾನುಭವಮಾಡುತ್ತಾ ಪ್ರಾಣಾದಿ ದಶವಾಯುಗಳು, ಮನಸ್ಸು ಜ್ಞಾನಕರ್ಮೇಂದ್ರಿಯಗಳು, ಶರೀರತ್ರಯಗಳು ಇವುಗಳ ಸಹವಾಸದಿಂದ ಎಡೆಬಿಡದೆ ತಿರುಗಾಡುತ್ತಿರುವುದು. ಆದುದರಿಂದ ದಶನಾಡಿಗಳ (ಇಡಾ, ಪಿಂಗಳಾ, ಸುಷುಮ್ನಾ, ಗಾಂಧಾರಿ, ಹಸ್ತಿಜಿಹ್ವಾ, ಪೂಷಾ, ಅಲಂಪೂಷಾ, ಶುಕ್ಲ, ಶಂಖಿನೀ, ದಾಮಿನೀ ಇವು ಹತ್ತು) ನಡುವೆ ಇರುವ ಜ್ಞಾನೇಂದ್ರಿಯ ಕರ್ಮೇಂದ್ರಿಯಗಳನ್ನೂ, ಪ್ರಾಣಾದಿ ಹತ್ತುವಾಯುಗಳನ್ನೂ ಮನೋಬುದ್ಧಿ ಚಿತ್ತಾಹಂಕಾರಗಳನ್ನು ಅಷ್ಟದಳ ಕಮಲಾಂತರ್ವರ್ತಿಯಾದ ಜೀವತ್ವದ ಅನುಭವದಿಂದ ಅಡಗಿಸಿ ನಿಶ್ಚಲವಾಗಿರುವಂತೆ ಮಾಡಬೇಕು. ತರುವಾಯ ಇಂದ್ರಿಯಗಳನ್ನು ನಿಗ್ರಹಿಸಿ, ಪ್ರಾಣಗಳೊಂದಿಗೆ ಮನಸ್ಸನ್ನು ಸೇರಿಸಿ, ಅವುಗಳೊಂದಿಗೆ ಪುರುಷಪ್ರಕೃತಿಮಯಗಳಾಗಿರುವ ಹಕಾರ ಸಕಾರಗಳನ್ನು ಮಧ್ಯದಲ್ಲಿ ಬಿಂದುವನ್ನೂ ಸೇರಿಸಿ (ಹಂಸ) ಭಜಿಸಬೇಕು. ಆಂದರೆ ರೇಚಕ

ಪೂರಕ ಕುಂಭಕಗಳಿಂದ ಸಕಾರ ಹಕಾರ ಬಿಂದುಗಳನ್ನು ಕೂಡಿಸಿ ಭಜಿಸಬೇಕು. ಆ ಕ್ರಮವೆಂತೆಂದರೆ—

ಪದ್ಮಾಸನದಲ್ಲಿ ಕುಳಿತು ನಾಸಿಕಾಗ್ರದಲ್ಲಿ ದೃಷ್ಟಿಯನ್ನು ನಿಲ್ಲಿಸಿ, ಇಂದ್ರಿಯುಗಳನ್ನೆಲ್ಲಾ ಮತ್ತೆಲ್ಲಿಗೂ ಹೋಗದಂತೆ ಮನಸ್ಸಿನಲ್ಲಿ ಸ್ಥಿರವಾಗಿ ಬಿಗಿದುಕಟ್ಟಿ, ಪ್ರಾಣಾದಿ ಹತ್ತು ವಾಯುಗಳನ್ನ ವಿಕಾರಗಳು ಹತ್ತದಂತೆ ಸ್ವಚ್ಛವಾಗಿರಿಸಿ, ಮನಸ್ಸಿನಲ್ಲಿ ಕಾಮರಾಗಾದಿ ಸಂಕಲ್ಪಗಳು ಸೇರದಂತೆ ಓಡಿಸಿ, ಪ್ರಾಣವಾಯುಗಳು, ಮನಸ್ಸು ಇವುಗಳೊಂದಿಗೆ ಹಂಸಮಂತ್ರವನ್ನು (ಸೋಽಹಂ) ಜಪಿಸುತ್ತಾ ಹೃದಯಾಕಾಶದಲ್ಲಿ ಬುದ್ಧಿಯು ಚದರದ ಹಾಗೆ ನಾದಕಳೆಗಳನ್ನು ನೋಡುತ್ತಿರಬೇಕು. ನಾದಬಿಂದು ಕಳೆಗಳಿಗೆ ಆದಿಕಾರಣನಾಗಿಯೂ ಸಾಕ್ಷಿಯಾಗಿಯೂ, ವಿಲಕ್ಷಣನಾಗಿಯೂ ಇರುವ ಶ್ರೀರಾಮತತ್ವವೇ ಹಕಾರವು, ದೇಹ (ತ್ರಿಶರೀರಗಳು) ಇಂದ್ರಿಯ (ಜ್ಞಾನೇಂದ್ರಿಯಗಳೈದು, ಕರ್ಮೇಂದ್ರಿಯಗಳೈದು) ಮನೋಬುದ್ಧಿ ಚಿತ್ತಾಹಂಕಾರಗಳು ಈ ಇಪ್ಪತ್ತುನಾಲ್ಕು ದೃಶ್ಯಗಳನ್ನೆ ಆಕಾರವುಳ್ಳದ್ದಾಗಿಯೂ, ಅಜ್ಞಾನಸ್ವರೂಪವಾಗಿಯೂ, ಸತ್ವಾದಿ ತ್ರಿಗುಣಾತ್ಮಕವಾಗಿಯೂ, ಅನಾದಿಯಾಗಿಯೂ, ಷಡ್ಭಾವ ವಿಕಾರಗಳುಳ್ಳದ್ದಾಗಿಯೂ ಇರುವ ಚಿತ್ ಎಂಬ ಶಕ್ತಿಯೇ ಸಕಾರವು, ಆ ಪುರುಷಪ್ರಕೃತಿಗಳ ಸೇರಿಕೆಯಾಗಿ ಮಧ್ಯದಲ್ಲಿರುವ ಬಿಂದುವು ಸೇರಿ ಹಂಸನೆಂಬ ಜೀವನು ಮನೋವಾರುತಯುಕ್ತನಾಗಿ ಮೆರೆಯುತ್ತಿರುವನು. ಇಂಥ ನಿರ್ವಿಕಾರನಾದ ಪುರುಷನಿಗೂ, ಕೇವಲ ಜಡಾತ್ಮಕವಾದ ಪ್ರಕೃತಿಗೂ ಪ್ರತ್ಯೇಕವಾಗಿ ಕರ್ತೃತ್ವ ಭೋಕ್ತೃತ್ವ, ಮೊದಲಾದ ಸ್ವರೂಪವುಳ್ಳ ಸಂಸಾರವು ಳ್ಳಸಂಸಾರವು ಘಟಿಸುವುದಿಲ್ಲ. ಆದ್ದರಿಂದ ಹಕಾರಸ್ವರೂಪನಾದ ಆತ್ಮನು ಆತ್ಮಶಕ್ತಿಯಾದ ಸಕಾರದೊಂದಿಗೆ ತಾದಾತ್ಮ್ಯಧ್ಯಾನರೂಪದಿಂದ ಕೂಡಿ ಹಂಸಸ್ವರೂಪಕನಾದ ಜೀವನಾಗಿ, ನವದ್ವಾರ (ಒಂಭತ್ತು ದ್ವಾರಗಳು) ಗಳುಳ್ಳ ದೇಹವೆಂಬ ಪಟ್ಟಣದಲ್ಲಿ ಪ್ರವೇಶಿಸಿ, ಬಗೆಬಗೆಯ ಇಂದ್ರಿಯಗಳಿಂದಲೂ, ಪ್ರಾಣಮನಸ್ಸುಗಳಿಂದಲೂ ಕೂಡಿ, ಪಂಜರದಲ್ಲಿ ಬಂಧಿಸಲ್ಪಟ್ಟ ಹುಳುವಿನಂತೆ ಸಿಕ್ಕಿಕೊಂಡು, ಹೊರಕ್ಕೆ ಹೋಗಲು ಉಪಾಯ ತಿಳಿಯದೆ ನಾನಾವಿಧ ಭೋಗಗಳನ್ನು ಅನುಭವಿಸುತ್ತಾ ಕ್ರೀಡಿಸುತ್ತಿರುವನು. ಅಂತಹ ಹಂಸನಿಗೆ ಅಗ್ನಿ ಸೋಮರೇ ಎರಡು ರೆಕ್ಕೆಗಳು, ಓಂಕಾರವೇ ಶಿರಸ್ಸು, ಪೂರಣೆಯು ಕಣ್ಣಾಗ ಜ್ಞಾನನೇತ್ರವೇ ಮುಖವು

ರುದ್ರಬೀಜವಾದ ಹಕಾರವೂ ಶಕಿ ಬೀಜವಾದ ಸಕಾರವೂ ಎರಡು ಪಾದಗಳು, ಆಗಿರಲು ಕೋಟಿಸೂರ್ಯ ಪ್ರಕಾಶಮಾನನಾಗಿ ಕಾಷ್ಠಗಳಲ್ಲಿ ಬೆಂಕಿಯೂ, ಎಳ್ಳುಗಳಲ್ಲಿ ಎಣ್ಣೆಯೂ, ಹಾಲುಗಳಲ್ಲಿ ತುಪ್ಪವೂ ವ್ಯಾಪಿಸಿಕೊಂಡಿರುವಂತೆ ಬ್ರಹ್ಮಾದಿ ಸ್ತಂಭಪರ್ಯಂತವಾದ ಸರ್ವಭೂತಗಳಲ್ಲಿಯೂ, ಹೃದಯಕಮಲವನ್ನು ಅಧಿಷ್ಠಿಸಿಕೊಂಡಿರುವನು. ಆ ಹೃದಯಕಮಲವು ಸಹಸ್ರಾರವೆಂದರೆ ಸಾವಿರ ಸಣ್ಣ ಸಣ್ಣ ಎಸಳುಗಳುಳ್ಳದ್ದಾಗಿರುವುದು. ಅದನ್ನು ಎಂಟುಪಾಲು (ಅಷ್ಟದಳಪದ್ಮ) ಮಾಡಿದರೆ ಒಂದೊಂದಕ್ಕೆ ೧೨೫ ಸಣ್ಣ ದಳಗಳುಳ್ಳ ಒಂದು ದೊಡ್ಡ ದಳವಾಗುವುದು. ಅವುಗಳಲ್ಲಿ ಪೂರ್ವದಿಕ್ಕಿನ ದಳದಲ್ಲಿ ಸದ್ಬುದ್ಧಿಯೂ, ಆಗ್ನೇಯ ದಳದಲ್ಲಿ ನಿದ್ರಾಲಸ್ಯ ಮೊದಲಾದುವೂ, ದಕ್ಷಿಣದಳದಲ್ಲಿ ಕ್ರೂರಬುದ್ಧಿಯೂ, ನೈರುತ್ಯ ದಳದಲ್ಲಿ ಪಾಪಬುದ್ಧಿಯೂ, ಪಶ್ಚಿಮದಳದಲ್ಲಿ ಕ್ರೀಡೆಗಳೂ, ವಾಯುವ್ಯ ದಳದಲ್ಲಿ ಗಮನವೇ ಮೊದಲಾದಬುದ್ಧಿಯೂ, ಉತ್ತರ ದಳದಲ್ಲಿ ರತಿಪ್ರೀತಿಯೂ, ಈಶಾನ್ಯ ದಳದಲ್ಲಿ ಹಣವನ್ನು ಪಡೆಯಬೇಕೆಂಬ ಆಶೆಯೂಇರುವುವು. ಮತ್ತು ಆ ಹೃತ್ಪದ್ಮದ ಮಧ್ಯಭಾಗದಲ್ಲಿ ವೈರಾಗ್ಯವೂ, ಕೇಸರಗಳಲ್ಲಿ ಜಾಗ್ರದವಸ್ಥೆಯೂ,ಇರುವುವು. ಆ ಹಂಸನುಇವುಗಳನ್ನು ಅನುಭವಿಸುತ್ತಿರುವನು.ಅವನು ಯಾವಾಗ ಈ ಸಹಸ್ರಾರಪದ್ಮವನ್ನು ಬಿಟ್ಟುಬಿಡುವನೋ ಅಗಅಖಂಡಸಚ್ಚಿದಾನಂದ ಪರಬ್ರಹ್ಮನಲ್ಲಿ ಐಕ್ಯವಾಗುವನು. ಅ ಐಕ್ಯಾವಸ್ಥೆಯೇ ತುರೀಯವೆನ್ನಲ್ಪಡುವುದು. ಪ್ರಣವವಾಚ್ಯವಾದ ಆ ಪರಬ್ರಹ್ಮವು ಆಧಾರಚಕ್ರದಿಂದ ಸಹಸ್ರಾರಚಕ್ರದವರಿಗೆ ಶುದ್ಧಸ್ಫಟಿಕ ಸಂಕಾಶವಾಗಿಯೂ ಸಂಪೂರ್ಣವಾಗಿಯೂ ಇರುವುದು. ಆ ಪರಬ್ರಹ್ಮವೇ ಪರಮಾರ್ಥ ತತ್ವರಹಸ್ಯವೆಂದು ಯೋಗೀಶ್ವರರು ಹೇಳುತ್ತಿರುವರು. ಗುರುವಿನ ಉಪದೇಶದಿಂದಲೂ, ವಿವೇಕದೃಷ್ಟಿಯಿಂದಲೂ ಆ ನಾದಲಯಸ್ಥಾನವು ಸುಷುಮ್ನಾದೇಶವೆಂದು ತಿಳಿಯತಕ್ಕದ್ದು. ಆ ಬಳಿಕ ಸರ್ವಭೂತಗಳ ಹೃದಯಕಮಲಗಳಲ್ಲಿ ಸಮತ್ವದಿಂದ ಪ್ರಾಣವಾಯು ಮನಸ್ಸುಗಳಿಂದ "ಹಂಸ" ಎಂದು ಹೇಳುವವನೇ ನಾನೆಂದು (ಸೋಹಂ) ತಿಳಿದುಕೊಂಡು ಮನನಮಾಡಿದರೆ ಆ ಅನುಸಂಧಾನವು ಲಯವಾಗುವುದು. ಈ ರಹಸ್ಯವನ್ನು ತಿಳಿದು ಏಕಾಗ್ರಚಿತ್ತನಾಗಿ ಯಾವಾಗಲೂ ಧ್ಯಾನಿಸಲಿಕ್ಕೆ ಸಮರ್ಥನಾದರೆ ಪ್ರಾಣವಾಯುವೂ ಮನಸ್ಸೂ ಹಂಸವೊಂದಿಗೆ ಸೇರಿ, ಬಿಂದುತ್ರಯಾತೀತವಾದ ಪೂರ್ಣಚೈತನ್ಯದಲ್ಲಿ ಲಯವಾಗುವುದು. ರೇಚಕ

ಕುಂಭಕ, ಪೂರಕಗಳೆಂಬ ಮೂರು ಗತಿಗಳಿಂದ ವಿಹರಿಸುವ ಈ ಪ್ರಾಣವಾಯುವೂ ಮನಸ್ಸೂ ಸೇರಿ ಜೀವವೆಂಬ ಹಂಸವು ಒಪ್ಪುವುದು. ಪೂರಕದಲ್ಲಿ ಹಕಾರವನ್ನೂ ಕುಂಭಕದಲ್ಲಿ ಬಿಂದುವನ್ನೂ, ರೇಚಕದಲ್ಲಿ ಸಕಾರವನ್ನೂ ನೋಡಿ, ಆ ಪುರುಷಪ್ರಕೃತಿಗಳನ್ನು ತಿಳಿಯುವ ಜ್ಞಾನವೇ "ನಾನು" ಎಂಬುದು.

ಹೀಗೆ ಹಂಸವು ಆರು ಕಮಲಗಳಲ್ಲಿ ಅಹೋರಾತ್ರಗಳಲ್ಲಿಯೂ, ಲೀಲೆಯಿಂದ ೨೧೬೦೦ ಸಾರಿ ವಿಹರಿಸುತ್ತಿರುವುದು. ಗುದಸ್ಥಾನದಲ್ಲಿ ವಶಷಸ ವರ್ಣಗಳಿಂದ ನಾಲ್ಕು ದಳಗಳುಳ್ಳದ್ದಾಗಿಯೂ, ಚಿನ್ನದ ಬಣ್ಣದಿಂದ ಭೂನಿಲಯವಾಗಿ ಘ್ರಾಣಕಾರಣವಾಗಿಯೂ ಇರುವ ಮೂಲಾಧಾರ ಚಕ್ರವುಂಟು. ಅದರಲ್ಲಿ ವಿನಾಯಕನಿಗೆ ಆರುನೂರೂ, ಲಿಂಗಸ್ಥಾನದಲ್ಲಿ ಬಭಮಯರಲ ವರ್ಣಗಳುಳ್ಳದ್ದಾಗಿ ಆರು ದಳಗಳಿಂದ ಕೂಡಿ, ರಕ್ತವರ್ಣದಿಂದ ನೀರಿಗೆ ಸ್ಥಾನವಾಗಿ ನಾಲಿಗೆಗೆ ಕಾರಣವಾದ ಸ್ವಾಧಿಷ್ಠಾನ ಚಕ್ರವಿರುವುದು. ಅದರಲ್ಲಿ ಬ್ರಹ್ಮನಿಗೆ ಆರು ಸಾವಿರವೂ, ನಾಭಿಸ್ಥಾನದಲ್ಲಿ ಡಢಣ ತ ಥ ದ ಧ ನ ಪ ಫ ವರ್ಣಗಳುಳ್ಳದ್ದಾಗಿ ಹತ್ತು ದಳಗಳಿಂದ ಕೂಡಿ ತೇಜೋನಿವಾಸವಾಗಿ ಹಸುರು ಬಣ್ಣದಿಂದ ನೇತ್ರಕ್ಕೆ ಕಾರಣವಾದ ಮಣಿಪೂರಕ ಚಕ್ರವು ಒಪ್ಪುವುದು. ಅದರಲ್ಲಿ ಮಹಾವಿಷ್ಣುವಿಗೆ ಆರು ಸಾವಿರವೂ, ಹೃದಯಸ್ಥಾನದಲ್ಲಿ ಕ ಖ ಗ ಘ ಙ ಚ ಛ ಜ ಝ ಞ ಟ ಠ ವರ್ಣಗಳುಳ್ಳದ್ದಾಗಿ, ಹನ್ನೆರಡು ದಳಗಳಿಂದ ಕೂಡಿ, ವಾಯುವಿಗೆ ನಿವಾಸವಾಗಿ ತ್ವಗಿಂದ್ರಿಯಕಾರಣವಾಗಿ ಅನಾಹತ ಚಕ್ರವಿರುವುದು. ಅದರಲ್ಲಿ ರುದ್ರನಿಗೆ ಆರು ಸಾವಿರವೂ, ಕಂಠಸ್ಥಾನದಲ್ಲಿ ಅಕಾರಾದಿ ಹದಿನಾರು ಸ್ವರಗಳುಳ್ಳದ್ದಾಗಿ, ಹದಿನಾರು ದಳಗಳಿಂದ ಕೂಡಿ, ನೀಲವರ್ಣವಾಗಿ ಆಕಾಶಕ್ಕೆ ಸ್ಥಾನವಾಗಿ ಕಿವಿಗೆ ಕಾರಣವಾಗಿ ವಿಶುದ್ಧ ಚಕ್ರವಿರುವುದು. ಅದರಲ್ಲಿ ಜೀವಾತ್ಮನಿಗೆ ಒಂದು ಸಾವಿರವೂ, ಭ್ರೂಮಧ್ಯ ಸ್ಥಾನದಲ್ಲಿ ಹಂ ಕ್ಷಂ ಎಂಬ ವರ್ಣಗಳುಳ್ಳದ್ದಾಗಿ ಎರಡು ದಳಗಳಿಂದ ಕೂಡಿ, ಮಾಣಿಕ್ಯವರ್ಣವುಳ್ಳದ್ದಾಗಿ ಅಂತಃಕರಣಕ್ಕೆ ಸ್ಥಾನವಾಗಿ ಆಜ್ಞಾ ಚಕ್ರವಿರುವುದು. ಅದರಲ್ಲಿ ಪರಮಾತ್ಮನಿಗೆ ಒಂದು ಸಾವಿರವೂ, ಬ್ರಹ್ಮರಂಧ್ರ ಸ್ಥಾನದಲ್ಲಿ ಓಂಕಾರವರ್ಣವುಳ್ಳದ್ದಾಗಿ ಸಹಸ್ರದಳಶೋಭಿತವಾಗಿ, ಕೋಟಿಸೂರ್ಯಪ್ರಕಾಶಮಾನವಾಗಿ ಬುದ್ಧಿಯ ಲಯಸ್ಥಾನವಾಗಿ ಸಹಸ್ರಾರ ಚಕ್ರವಿರುವುದು. ಅದರಲ್ಲಿ ಶ್ರೀಗುರುಸ್ವಾಮಿಗೆ ಒಂದು ಸಾವಿರವೂ, ಗುರೂಪದೇಶ

ಕ್ರಮದಿಂದ ಆಸನ, ಮುದ್ರೆ, ಲಕ್ಷ್ಯ, ಮಂತ್ರ, ಧ್ಯಾನ, ಕ್ರಮಪೂರ್ವಕವಾಗಿ ಸಮರ್ಪಿಸಿದರೆ ಜೀವನ್ಮುಕ್ತನಾಗುವನು. ಮತ್ತು ಉಛ್ವಾಸನಿಶ್ವಾಸ ವಾಯುಗಳು ಬಲ ಮತ್ತು ಎಡನಾಡಿಗಳಲ್ಲಿ ಸಂಚರಿಸುತ್ತಿರುವುವು. ಮನಸ್ಸು ಆ ಉಛ್ವಾಸನಿಶ್ವಾಸ ವಾಯುಗಳ ಪ್ರವರ್ತನವನ್ನು ಕಂಡುಹಿಡಿಯುತ್ತಾ ಮಧ್ಯಮಾರ್ಗವಾದ ಸುಷುಮ್ನಾನಾಳದಲ್ಲಿ ಸಂಚರಿಸುತ್ತಿರುವುದು. ಆ ಇಡಾಪಿಂಗಳಾ ನಾಡಿಗಳಿಗೆ ನಡುವೆ ಇರುವ ವಿಲಕ್ಷಣವಾದ ಸುಷುಮ್ನಾ ನಾಡಿಯಲ್ಲಿ ಪ್ರಣವಕುಂಡಲಿಯಲ್ಲಿ ಹಂಸನು ಆತ್ಮಾರಾಮನಾಗಿಯೂ, ಸರ್ವಸಾಕ್ಷಿಯಾಗಿಯೂ ಪ್ರಕಾಶಿಸುತ್ತಿರುವನು. ನಿಶ್ಚಲವಾದ ಆ ಹಂಸರೂಪವು ಎಲ್ಲಿ ಸಂಭವಿಸುವುದೋ ಎಲ್ಲಿ ಸಂಚರಿಸುವುದೋ ಮತ್ತು ಎಲ್ಲಿ ಅಡಗುವುದೋ ಅದೇ ಸುಷುಮ್ನಾನಾಡಿಯು. ಅದೇ ಮನೋಬುದ್ಧಿಗಳೆಂಬ ಎರಡುದಳಗಳನ್ನುಳ್ಳ ಆಜ್ಞಾ ಚಕ್ರವು. ಅದನ್ನು ತಿಳಿಯಬೇಕಾದರೆ ನಿರ್ಮಲವಾದ ಜ್ಞಾನದೃಷ್ಟಿಯು ಅಗತ್ಯ. ಜೀವನು ಮತ್ತು ಈಶ್ವರನು ಎಂಬ ಎರಡು ಅರಣೀಮರಗಳಲ್ಲಿ ಹುಟ್ಟಿದ ಅಪರೋಕ್ಷಜ್ಞಾನವೆಂಬ ಅಗ್ನಿಯು ವಿಶೇಷವಾಗಿ ಪ್ರಜ್ವಲಿಸುತ್ತಾ ತನ್ನ ಉತ್ಪತ್ತಿಗೆ ಕಾರಣಗಳಾದ ಜೀವೇಶ್ವರರೆಂಬ ಅರಣಿಗಳನ್ನು ಪರಬ್ರಹ್ಮನಲ್ಲಿ ಐಕ್ಯಮಾಡುವಾಗ ಸ್ವಸ್ವರೂಪವನ್ನಾಗಿಯೇ ಮಾಡಿಬಿಡುವುದು, ಪ್ರಣವಾಂಗವಾದ ಜೀವನೇ ನಿರ್ಮಲಬಿಂದುವು. ಈಶ್ವರರೂಪವಾದ ಜ್ಯೋತಿಯೇ ನಾದವು. ಲಿಂಗಸ್ವರೂಪನಾದ ಈಶ್ವರನ ಮತ್ತು ಅಂಗಸ್ವರೂಪನಾದ ಜೀವನ ಅಭೇದವಾದ ಐಕ್ಯವೇ ಪರಮಶಿವಕಳೆಯು, ಎಂದು ಗ್ರಹಿಸು. ಎಲೈ ಆಂಜನೇಯನೇ ಕೇಳು,—ಕಳೆ ಮತ್ತು ಹಂಸನಾದಗಳ ರೂಪವನ್ನು ಅಡಗಿಸಿ, ತನ್ನ ರೂಪವಾಗಿ ಮಾಡಿಕೊಂಡು ತಾನೇ ತಾನಾಗಿ ಪರಬ್ರಹ್ಮನಲ್ಲಿ ಆ ಜ್ಞಾನವು ಐಕ್ಯಹೊಂದುವುದು. ಹಾಗೆ ಐಕ್ಯವಾಗುವಾಗ ಕರ್ಪೂರದ ದೀಪವು ಆರಿಹೋಗುವಂತೆ, ಸರ್ವೇಂದ್ರಿಯಗಳಿಂದ ಕೂಡಿದ ಚಿತ್ತಚಾಂಚಲ್ಯವು ಶೂನ್ಯವಾಗಿಹೋಗುವುದು. ಆಗ ಗಾಳಿಯ ಹೊಡೆತಕ್ಕೆ ಸಿಕ್ಕದೆ ಇರುವ ದೀಪದಂತೆ ಸಚ್ಚಿದಾನಂದಪರಬ್ರಹ್ಮವು ನಿಶ್ಚಲವಾಗಿಯೂ ಸಂಪೂರ್ಣವಾಗಿಯೂ ಒಪ್ಪುತ್ತಿರುವುದು. ಹೀಗೆ ಹಂಸನಾದಬಿಂದುಕಳೆಗಳೊಂದಿಗೆ ಇಂದ್ರಿಯಗಳಿಂದ ಕೂಡಿದ ಮನಃಪ್ರಾಣಗಳು ಯಾವಾಗ ಲಯವಾಗುವುದೋ ಆ ಅವಸ್ಥೆಯೇ ತುರೀಯವು. ಇದಕ್ಕೇನೇ ಉನ್ಮನಿ, ಸಹಜಾಮನಸ್ಕ ಎಂಬ ಹೆಸರುಗಳಿರುವುವು. ಅಂತಹ ನಿರ್ವಿಕಲ್ಪಸಮಾಧಿ

ಯಲ್ಲಿ ಅಪರೋಕ್ಷ ಸಚ್ಚಿದಾನಂದಸ್ವರೂಪನಾಗಿಇರು. ಪರಮಹಂಸವನ್ನು ರಾತ್ರಿಯೂ ಹಗಲೂ ಚಿಂತಿಸುತ್ತಿದ್ದರೆ ಬಿಂದುವು ಕಂಪಿಸದೆ ಇರುವುದು ಹತ್ತು ಬಗೆಯಪ್ರಣವಧ್ವನಿಗಳನ್ನು ಕೇಳಿದರೆ ಘಂಟಾನಾದವೊರೆಯುತ್ತಿರುವುದು. ಅಂತರ್ಬಹಿರ್ಮಧ್ಯಲಕ್ಷಣಗಳನ್ನು ನಿದಾನಿಸಿನೋಡಿದರೆ ಸ್ವಯಂಜ್ಯೋತಿಯು ಕಾಣಿಸುವುದು. ಯೋಗಾರೂಢನಾಗಿ ದಿನಂಪ್ರತಿ ಎರಡುಜಾವಗಳತನಕ ಧ್ಯಾನಮಾಡಿದರೆ ತನ್ಮಯತ್ವವುಂಟಾಗುವುದು. ಹೀಗೆ ನಿತ್ಯವೂ ತಪ್ಪದೆ ಅಭ್ಯಾಸಮಾಡುತ್ತಾ ಬಂದರೆ ನಿರ್ಮಲಚಿತ್ತನಿಗೆ ಆರುತಿಂಗಳಿಗೂ, ಮಂದಪ್ರಜ್ಞನಿಗೆ ಒಂದುವರುಷಕ್ಕೂ, ಬಹುದಡ್ಡನಾದವನಿಗೆ ಹನ್ನೆರಡುವರುಷಗಳಿಗೂ ಯೋಗಸಿದ್ಧಿಯಾಗುವುದು.

ಎಂದು ಬೋಧಿಸಿದ ತತ್ವವನ್ನು ಕೇಳಿ ಆಂಜನೇಯನು ಆ ಸೀತಾದೇವಿಗೆ ಕೈಮುಗಿದುಕೊಂಡು, ತನ್ನ ಮನಸ್ಸಿನ ಸಂಶಯಗಳನ್ನು ಆಕೆಯ ಸಂಗಡ ಹೇಳಿದನು.

ಮೊದಲನೆಯಸಂಧಿ ಮುಗಿದುದು.



ಎರಡನೆಯ ಸಂಧಿ.

ಪರಮೇಶ್ವರನು ತನ್ನ ಅರ್ಧಾಂಗಿಯೂದ ಪಾರ್ವತಿಯನ್ನು ನೋಡಿ ಇಂತೆಂದನು. ದೇವಿಯೇ ಕೇಳು. ಆಗ ಶ್ರೀರಾಮನು ಆಂಜನೇಯನನ್ನು ನೋಡಿ " ಎಲೈ ಪರಮ ಭಕ್ತನೇ. ಸೀತಾದೇವಿಯು ಈಗ ಹೇಳಿದ ತಾರಕಯೋಗದ ರೀತಿಯೆಲ್ಲವೂ ತಿಳಿಯಿತೆ ? ಈಗ ಸಾಂಖ್ಯಯೋಗವನ್ನು ತಿಳಿಸುವೆನು ಕೇಳು. ಸಾಂಖ್ಯಾಮನಸ್ಕಯೋಗಗಳು ವೇದಾಂತಾರ್ಥಗಳನ್ನು ಬೋಧಿಸತಕ್ಕವುಗಳು. ಜ್ಞಾನೇಂದ್ರಿಯಗಳು ಐದು. ಕರ್ಮೇಂದ್ರಿಯಗಳು ಐದು, ಪ್ರಾಣಗಳು ಐದು, ವಿಷಯಗಳು ಐದು, ಅಂತಃಕರಣಗಳು ನಾಲ್ಕು ಇವೆಲ್ಲಾ ಕೂಡಿ ಇಪ್ಪತ್ತುನಾಲ್ಕು ತತ್ವಗಳು. ಇಪ್ಪತ್ತೈದನೇ ತತ್ವವೇ ಜೀವನು. ಇಪ್ಪತ್ತಾರನೆಯ ತತ್ವವು ಈಶ್ವರನು. ಈ ಜೀವೇಶ್ವರಸಂಮೇಳನವೇ ಇಪ್ಪತ್ತೇಳನೆಯ ತತ್ವವಾದ ಪರಬ್ರಹ್ಮನು. ಈ ಪರಬ್ರಹ್ಮನೇ ನಾನೆಂದು ಅನುಸಂಧಾನಮಾಡುವುದೇ ಸಾಂಖ್ಯಯೋಗವು. ಅಮನಸ್ಕವೆಂದರೆ ಮನೋಲಯವು. ನಿರ್ಗುಣವಾಗಿಯೂ ನಿಷ್ಕಾರಣವಾಗಿಯೂ, ನಿರೀಹವಾಗಿಯೂ ನಿಷ್ಕಂಪವಾಗಿಯೂ, ನಿಷ್ಕಳಂಕವಾಗಿಯೂ ಇರುವುದೇ ಬ್ರಹ್ಮವೆನಿಸುವುದು. ಉಪನಿಷದ್ಭಾಷ್ಯ, . ಗೀತಾಭಾಷ್ಯ, ಸೂತ್ರಭಾಷ್ಯ ಇವು ಮೂರೂ ಪ್ರಸ್ಥಾನತ್ರಯವೆನಿಸುವುವು. ಜಾಗ್ರತೆ, ಸ್ವಪ್ನ, ಸುಷುಪ್ತಿ ಇವು ಮೂರೂ ಅವಸ್ಥೆಗಳು. ಇವುಗಳಿಗೆ ಸಾಕ್ಷಿಭೂತನಾಗಿರುವವನೇ ಆ ಪರಬ್ರಹ್ಮನೆಂದು ತಿಳಿ. ಆ ಪರಬ್ರಹ್ಮನೇ ಅನಾದಿಯು. ಅಪರಿಛ್ಛೇದ್ಯನು. ಅವಿದ್ಯೆಯೆಂಬ ಮಾಯೆಯನ್ನು ಪರಿಹರಿಸುವವನು. ಅವನ ಸ್ವರೂಪವು ಇಂತಹದೆಂದು ತಿಳಿಯುವುದು ಕಷ್ಟ. ಅಂತಹ ಪರಿಪೂರ್ಣತತ್ವನಾದ ನಾನು ಪೂರ್ವಕಲ್ಪದ ಕೊನೆಯಲ್ಲಿ ಈ ಲೋಕಸೃಷ್ಟಿಗೆ ಮೊದಲು ನಿರಂಜನನಾಗಿಯೂ ಅದ್ವಯನಾಗಿಯೂ ಸ್ವಯಂಪ್ರಕಾಶನಾಗಿಯೂ ಹೊಳೆಯುತ್ತಿರುವೆನು. ಅಂತಹ ನನ್ನಲ್ಲಿ ಅನಾದಿಯಾದ ಅವ್ಯಕ್ತಶಕ್ತಿಯು ನೆಲೆಗೊಂಡಿರುವುದು. ಹಗ್ಗವು ಹಾವಿನಂತೆಯೂ, ಸ್ಥಾಣುವಾದ ಮೋಟುಮರವು ಪುರುಷನಂತೆಯೂ ತೋರುವಂತೆ ಪರಿಪೂರ್ಣನಾದ ನನ್ನನ್ನು ಅದ್ವಯನೆಂದು ಪಂಡಿತರು ಮಾತ್ರವೇ ತಿಳಿಯಬಲ್ಲರು. ಆದಿಮಧ್ಯಾಂತಗಳಿಲ್ಲದೆ ಇರುವ ಪ್ರಕೃತಿಯು ಆದಿಮಧ್ಯಾಂತಗಳಿರುವಂತೆ

ತೋರಿ ಆತ್ಮನನ್ನು ಮಾಯೆಯು ಮುಚ್ಚಿಕೊಂಡಿರುವುದು. ಆ ಮೂಲ ಪ್ರಕೃತಿಯು ಮಾಯೆ, ಅವಿದ್ಯೆಯೆಂದು ಎರಡುವಿಧವಾಗಿರುವುದು. ನಿರ್ಮಲಸತ್ವಪ್ರಧಾನವಾದ ಆ ಮಾಯೆಯಲ್ಲಿ ಅದಕ್ಕೆ ಅಧಿಷ್ಠಾನವಾದ ನಾನುಪ್ರತಿಫಲಿಸಿ ಅಮಾಯಕನಾಗಿ ಇರುವೆನು. ಆ ಈಶ್ವರನೇನಾನು. ಈ ಸೀತಾದೇವಿಯೇ ಮಾಯಾಸ್ವರೂಪಿಣಿಯು. ಸರ್ವೇಶ್ವರನಾದ ನಾನು ಈ ಮಾಯೆಯನ್ನು ವಶಪಡಿಸಿಕೊಂಡಿರುವುದರಿಂದ ಸಕಲಜಗತ್ತುಗಳನ್ನೂ ಸೃಷ್ಟಿಸಿ, ಅದರ ಸಂರಕ್ಷಣೆಗೋಸ್ಕರ ಪೂರ್ವದಲ್ಲಿ ಮತ್ಸ್ಯ, ಕೂರ್ಮ, ವರಾಹ ನಾರಸಿಂಹ, ವಾಮನ, ಪರಶುರಾಮರೆಂಬ ಅವತಾರಗಳನ್ನುಧರಿಸಿ ದುಷ್ಟನಿಗ್ರಹಶಿಷ್ಟಾನುಗ್ರಹಗಳನ್ನು ಮಾಡಿದೆನು. ಈಗ ರಾಮರೂಪದಿಂದ ಅವತರಿಸಿ, ದುಷ್ಟರಾದ ರಾವಣಕುಂಭಕರ್ಣಾದಿ ರಾಕ್ಷಸರನ್ನು ಸಂಹಾರಮಾಡಿ ಈ ಭೂಭಾರನಿವಾರಣೆ ಮಾಡಿದೆನು. ಇನ್ನುಮುಂದೆ ನಾನು ಬಲರಾಮಕೃಷ್ಣಕಲ್ಕಿರೂಪಗಳಿಂದ ಅವತರಿಸುವೆನು. ನನ್ನ ಚರಿತ್ರಗಳು ಲೋಕತ್ರಯಪವಿತ್ರಗಳಾಗಿರುವುವು. ನನ್ನನ್ನು ಕೆಲವರು ಬ್ರಹ್ಮನೆಂತಲೂ, ಕೆಲವರು ವಿರಾಟ್ಪುರುಷನೆಂತಲೂ, ಕೆಲವರು ಮಹಾದೇವನೆಂತಲೂ, ಕೆಲವರು ಮುಕುಂದನೆಂತಲೂ, ಕೆಲವರು ವಿನಾಯಕನೆಂತಲೂ ಬಗೆಬಗೆಯ ಹೆಸರುಗಳನ್ನಿಟ್ಟುಕೊಂಡು ಉಪಾಸನೆಮಾಡುತ್ತಿರುವರು. ನಾನು ಈ ಜಗತ್ತಿಗೆ ಉಪಾದಾನಕಾರಣನಾಗಿಯೂ, ನಿಮಿತ್ತಕಾರಣನಾಗಿಯೂ ಇದ್ದುಕೊಂಡು, ಜೇಡನಹುಳುವಿನಂತೆ ಪ್ರಕಾಶಿಸುತ್ತಿರುವೆನು. ಈ ಪ್ರಕಾರವಾಗಿ ಸರ್ವೇಶ್ವರನಾದ ನನಗೆ ಮಹಾನಂದಕೋಶವಾದ ಸಮಸ್ತಭೂತಸಮಷ್ಟಿಯ ಅಜ್ಞಾನವೇಕಾರಣಶರೀರವಾಗಿರುವುದು. ಮಹಾಸುಷುಪ್ತಿಯೇ ಅವಸ್ಥೆಯಾಗಿರುವುದು. ಬ್ರಹ್ಮಾದಿಸ್ತಂಭಪರ್ಯಂತವಾದ ಸಕಲ ಭೂತಗಳೇ ಅವಯವಗಳು. ಜಗತ್ತಿನ ಉತ್ಪತ್ತಿಸ್ಥಿತಿಲಯಗಳೆಂಬುವೇ ವ್ಯಾಪಾರಗಳಾಗಿರುವುವು. ವೇದಶಾಸ್ತ್ರಗಳೇ ನನ್ನ ನಿಶ್ವಾಸಗಳು. ಹೀಗೆ ಮಲಿನಸತ್ವಪ್ರಧಾನವಾದ ಅವಿದ್ಯೆಯೂ, ಅದರಲ್ಲಿ ಅಧಿಷ್ಠಾನವಾದ ನಾನು ಪ್ರತಿಫಲಿಸುತ್ತಿರುವೆವು.

ಜೀವನೆಂಬುವನು ಅವಿದ್ಯಾವಶನಾಗಿ ಸ್ಥೂಲಸೂಕ್ಷ್ಮಗಳೆಂಬ ಶರೀರವಾಸನೆಗಳನನ್ನು ಭಾವಿಸುತ್ತಲೂ ಸೇವಿಸುತ್ತಲೂ, ಮೂಢಪ್ರವೃತ್ತಿಯಿಂದ ಕ್ರೀಡಿಸುತ್ತಿರುವನು. ಆ ಜೀವನೇ ಪ್ರಾಜ್ಞನೆನಿಸಿಕೊಂಡು ಆನಂದಮಯನಾಗಿ, ವೃಷ್ಟಿಕಾರಣಾಂಗವಶನಾಗಿ ಪಾರಮಾರ್ಥಿಕನೆನಿಸಿಕೊಳ್ಳುವನು. ಇನ್ನು ಸೂಕ್ಷ್ಮಶರೀರದ ಸೃಷ್ಟಿಕ್ರಮವನ್ನು ಹೇಳುವನು.

ಕೇಳು. ಸತ್ವಪ್ರಧಾನವಾದ ಮಾಯಾಸಮನ್ವಿತೇಶ್ವರವಾದ ನಾನು ಸೃಷ್ಟಿ ಮಾಡಬೇಕೆಂಬ ಇಚ್ಛೆಯಿಂದ ತಮೋಗುಣ ಪ್ರಧಾನವಾದ ಮಾಯೆಯನ್ನು ಅಖಿಲಚೇತನ ಕರ್ಮ ಸಹಾಯವಾಗಿ ನೋಡಿದೆನು. ಹೀಗೆ ನೋಡಿದಕೂಡಲೆ ನನ್ನ ಚಿತ್ತ ತನ್ಮಯದಿಂದ ಶಬ್ದ ಗುಣವುಳ್ಳ ಆಕಾಶವೂ, ಅದರಿಂದ ಸ್ಪರ್ಶಗುಣವುಳ್ಳ ವಾಯುವೂ, ಅದರಿಂದ ರೂಪಗುಣವುಳ್ಳ ಅಗ್ನಿಯೂ, ಆ ಅಗ್ನಿಯಿಂದ ರಸಗುಣವುಳ್ಳ ಜಲವೂ ಆ ಜಲದಿಂದ ಗಂಧಗುಣಾತ್ಮಕವಾದ ಪೃಥ್ವಿಯೂ ಹುಟ್ಟಿದುವು. ಇವೇ ಪಂಚೀಕೃತವಾದ ಸೂಕ್ಷ್ಮ ಭೂತಗಳೆಂತಲೂ ಪಂಚತನ್ಮಾತ್ರೆಗಳೆಂತಲೂ ಹೇಳಲ್ಪಡುವುವು. ಈ ಭೂತಪಂಚಕಗಳಿಂದ ಕ್ರಮವಾಗಿ ದಿಕ್ಕು, ವಾಯುವು, ಸೂರ್ಯನು, ಪ್ರಚೇತನನು, ಅಶ್ವಿನೀದೇವತೆಗಳು ಇವುಗಳಿಂದ ಕೂಡಿದ ಕಿವಿ, ಚರ್ಮ ಕಣ್ಣು, ನಾಲಿಗೆ, ಮೂಗು, ಇವು ಹುಟ್ಟಿದುವು. ಇವು ಸತ್ವಗುಣಾರ್ಧದಿಂದ ಹುಟ್ಟಿದುವು. ಉಳಿದ ಅರ್ಧಗುಣದಿಂದ ಚಂದ್ರನು, ಗುರುವು, ರುದ್ರನು, ಕ್ಷೇತ್ರಜ್ಞನು. ಈ ನಾಲ್ಕು ದೇವತೆಗಳಿಂದ ಕೂಡಿದ ಮನಸ್ಸು ಬುದ್ಧಿ, ಅಹಂಕಾರ, ಚಿತ್ತ ಎಂಬಿವುಹುಟ್ಟಿದುವು. ರಜೋಗುಣಾರ್ಧದಿಂದ ಅಗ್ನಿ, ಇಂದ್ರ, ಉಪೇಂದ್ರ, ಮೃತ್ಯು, ಪ್ರಜಾಪತಿಯೆಂಬ ಪಂಚದೇವತಾ ಸಮೇತವಾಗಿ ವಾಕ್ಕು, ಪಾಣಿ, ಪಾದ, ಪಾಯು, ಉಪಸ್ಥಗಳು ಹುಟ್ಟಿದುವು. ಉಳಿದ ರಜೋಗುಣಾರ್ಧದಿಂದ ವಿಶಿಷ್ಟ, ವಿಶ್ವಕರ್ತೃ, ವಿಶ್ವಯೋನಿ, ಅಜ, ಛಾಯ, ಎಂಬ ದೇವತಾಕಗಳಾದ ಪ್ರಾಣ, ಅಪಾನ, ವ್ಯಾನ, ಉದಾನ, ಸಮಾನಗಳು ಹುಟ್ಟಿದುವು. ಹೀಗೆ ಉತ್ಪನ್ನಗಳಾದ ಜ್ಞಾನೇಂದ್ರಿಯಗಳು ಐದೂ, ಅಂತಃಕರಣ ಚತುಷ್ಟಯವೂ, ಕರ್ಮೇಂದ್ರಿಯಗಳೈದೂ, ಪ್ರಾಣಾದಿ ಪಂಚವಾಯುಗಳೂ ಸೇರಿ ಹತ್ತೊಂಭತ್ತು ಅವಯವಗಳುಳ್ಳದಾಗಿ ಲಿಂಗ ಶರೀರವು ಉತ್ಪನ್ನವಾಯಿತು. ಈ ಸೂಕ್ಷ್ಮ ಶರೀರವು ವೃಕ್ಷವನಗಳ ಹಾಗೆ ಬಂದು ವ್ಯಷ್ಟಿಯೆಂತಲೂ. ಸರ್ವವೂ ಸಮಷ್ಟಿಯೆಂತಲೂ ಹೇಳಲ್ಪಡುವುವು. ಇವುಗಳಿಗೆ ವ್ಯಷ್ಟಿ, ಸಮಷ್ಟಿ, ಸ್ವಪ್ನ ಎಂಬಿವು ಮೂರುಅವಸ್ಥೆಗಳಾಗಿರುವುವು. ಈ ವ್ಯಷ್ಟಿ ಸೂಕ್ಷ್ಮಾಂಗಸ್ವಪ್ನವೆಂಬಿವು ಅವಸ್ಥೆಗಳಾಗಿರುವುವು. ಈ ವ್ಯಷ್ಟಿ ಸೂಕ್ಷ್ಮಾಂಗ ಸ್ವಪ್ನಗಳಲ್ಲಿ ಆ ಪ್ರಾಜ್ಞನು ಅಭಿಮಾನವುಳ್ಳವನಾಗಿ, ಪ್ರಾತಿಭಾಸಿಕ, ಸ್ವಪ್ನಕಲ್ಪಿತ, ತೈಜಸ ಎಂಬ ಹೆಸರುಗಳಿಂದ ಪ್ರವರ್ತಿಸುವನು. ಆ ಸಮಷ್ಟಿ ಸೂಕ್ಷ್ಮಾಂಗ ಸ್ವಪ್ನವಿಶಿಷ್ಟನಾದ ನಾನೇ ಈಶ್ವರನಾಗಿ, ಹಿರಣ್ಯಗರ್ಭನಾಗಿಯೂ, ಸೂತ್ರಾತ್ಮಕನಾಗಿಯೂ, ಪ್ರಾಣನೆಂದು ಸರ್ವ ಜೀವೋಪಾಸ್ಯನಾಗಿಯೂಇರುವೆನು. ಇದೇ ಸೂಕ್ಷ್ಮಸೃಷ್ಟಿಕ್ರಮವು.

ಸೂಕ್ಷ್ಮಶರೀರ ಪಂಚೀಕರಣ ಚಕ್ರವು.

	ಅಪಂಚೀಕೃತ ಪಂಚಸೂಕ್ಷ್ಮ ಭೂತಗಳು.	ಆಕಾಶ	ವಾಯು	ಅಗ್ನಿ	ಜಲ	ಪೃಥ್ವಿ	ಸತ್ವ ರಜಸ್ಸೂಕ್ಷ್ಮ ಭೂತಗಳು
ಸತ್ವಸೂಕ್ಷ್ಮ ಪಂಚಭೂತಗಳು	ಸತ್ವಸಮಷ್ಟಿ ಸೂಕ್ಷ್ಮ ಪಂಚಭೂತಗಳು		ಮನಸ್ಸು ಚಂದ್ರ	ಬುದ್ಧಿ ಬೃಹಸ್ಪತಿ	ಚಿತ್ತ ಜೀವನು	ಅಹಂಕಾರ ರುದ್ರನು	ಅಂತಃಕರಣ ಅಧಿದೇವತೆಗಳು
	ಸತ್ವವ್ಯಷ್ಟಿ ಸೂಕ್ಷ್ಮ ಪಂಚಭೂತಗಳು	ಕಿವಿ ದಿಕ್ಕುಗಳು	ಚರ್ಮ ವಾಯುವು	ಕಣ್ಣು ಸೂರ್ಯನು	ನಾಲಿಗೆ ವರುಣನು	ಮೂಗು ಅಶ್ವಿನಿಗಳು	ಜ್ಞಾನೇಂದ್ರಿಯಗಳು ಅಧಿದೇವತೆಗಳು
ರಜಸ್ಸೂಕ್ಷ್ಮ ಪಂಚಭೂತಗಳು	ರಜಸ್ಸಮಷ್ಟಿ ಸೂಕ್ಷ್ಮ ಪಂಚಭೂತಗಳು	ಸಮಾನ ಜಯ	ವ್ಯಾನ ವಿಶ್ವಯೋನಿ	ಉದಾನ ಬ್ರಹ್ಮನು	ಪ್ರಾಣ ವಿಶಿಷ್ಟನು	ಅಪಾನ ವಿಶ್ವಕರ್ತನು	ಪಂಚಪ್ರಾಣಗಳು ಅಧಿದೇವತೆಗಳು
	ರಜೋವ್ಯಷ್ಟಿ ಸೂಕ್ಷ್ಮ ಪಂಚಭೂತಗಳು	ವಾಕ್ಕು ವಹ್ನಿ	ಪಾಣಿ ಇಂದ್ರ	ಪಾದ ವಿಷ್ಣುವು	ಪಾಯು ಬ್ರಹ್ಮನು	ಉಪಸ್ಥ ಮೃತ್ಯುವು	ಕರ್ಮೇಂದ್ರಿಯಗಳು ಅಧಿದೇವತೆಗಳು

ಎಲೈ ಆಂಜನೇಯನೇ, ಇನ್ನು ಸ್ಥೂಲಶರೀರದ ಸೃಷ್ಟಿಕ್ರಮ ವನ್ನು ತಿಳಿಸುವೆನು. ತಮೋಗುಣ ಪ್ರಧಾನಗಳಾದ ಪಂಚಭೂತಗಳ ನ್ನೂ ಕ್ರಮವಾಗಿ ಎರಡು ಭಾಗವಮಾಡಿ, ಆ ಪಂಚಭೂತಗಳಲ್ಲಿ ಅರ್ಧ, ಅರ್ಧವನ್ನು ಬೇರೆಬೇರೆ ನಾಲ್ಕು ಭಾಗಗಳಾಗಿ ವಿಂಗಡಿಸಿ, ಭಾಗಿಸದೆ ಇರುವ ಅರ್ಧಭಾಗವನ್ನು, ಉಳಿದಿರುವ ಪಂಚಭೂತದ ಶೇಷಗಳೊಂದಿಗೆ ಸೇರಿಸಿದರೆ ಅವು ಪಂಚೀಕೃತಗಳಾಗಿ ಸ್ಥೂಲವಾಗಿಯೂ ಸ್ಪಷ್ಟವಾಗಿ ಯೂ ಕಾಣಿಸುವುವು. ಇವುಗಳಿಂದ ಸಕಲ ಜಗತ್ತುಗಳೂ, ಚರಾಚರ ವಸ್ತುಗಳೂ, ಬಹು ವಿಧಗಳಾದ ಅನ್ನಗಳೂ, ಘಟಪಟಗೃಹಾದಿ ದೃಶ್ಯಗ ಳಾದ ಸಕಲ ಪದಾರ್ಥಗಳೂ ಸಂಭವಿಸಿದುವು. ಈ ಸ್ಥೂಲಪಂಚೀಕರ ಣದ ವಿವರಣೆ.

ಆಕಾಶ:— ಆಕಾಶದ ಅರ್ಧಭಾಗವನ್ನು ನಾಲ್ಕಾಗಿ ಭಾಗಿಸಿ ಇತರ ಭೂತಾರ್ಧಭಾಗಗಳನ್ನು ಸೇರಿಸುವುದರಿಂದ ಪ್ರ ಟಾಗುವ ತತ್ವಗಳ ವಿವ ರವು. (೧) ನಾಲ್ಕಾಗಿ ಭಾಗಿಸಲ್ಪಟ್ಟ ಆಕಾಶಭಾಗಗಳಲ್ಲಿ ಒಂದುಸಾಲಿ ನೊಂದಿಗೆ ನಾಲ್ಕಾಗಿ ಭಾಗಿಸಲ್ಪಟ್ಟ ಪೃಥ್ವೀಭಾಗಗಳಲ್ಲಿ ಒಂದನ್ನು ಸೇರಿ ಸುವುದರಿಂದ ಅಹಂಕಾರವೂ. (೨) ಆಕಾಶಭಾಗದೊಂದಿಗೆ ಜಲಭಾಗ ವು ಸೇರುವುದರಿಂದ ಚಿತ್ತವೂ. (೩) ಆಕಾಶ ಭಾಗದೊಂದಿಗೆ ತೇಜೋ ಭಾಗವು ಸೇರುವುದರಿಂದ ಬುದ್ಧಿಯೂ, (೪) ಆಕಾಶ ಭಾಗದೊಂದಿಗೆ ವಾಯುಭಾಗವು ಸೇರುವುದರಿಂದ ಮನಸ್ಸೂ ಹುಟ್ಟಿದುವು. ನಾಲ್ಕಾಗಿ ಭಾಗಿಸದ ಆಕಾಶಾರ್ಧಾಂಶವು ಅಂತಃಕರಣವಾಯಿತು.

ವಾಯುವು:— (೧) ವಾಯುವಿನ ಭಾಗಗಳು ನಾಲ್ಕರಲ್ಲಿ ಒಂದ ರೊಂದಿಗೆ ಪೃಥ್ವಿಯ ನಾಲ್ಕು ಭಾಗಗಳಲ್ಲಿ ಒಂದು ಭಾಗವು ಸೇರುವುದ ರಿಂದ ಅಪಾನವೂ. (೨) ವಾಯು ಭಾಗದೊಂದಿಗೆ ಜಲಭಾಗವು ಸೇರು ವುದರಿಂದ ಪ್ರಾಣವಾಯುವೂ. (೩) ವಾಯು ಭಾಗದ ಸಂಗಡ ತೇಜೋ ಭಾಗವು ಸೇರುವುದರಿಂದ ಉದಾನವಾಯುವೂ. (೪) ವಾಯುಭಾಗ ದೊಂದಿಗೆ ಆಕಾಶಭಾಗವು ಸೇರುವುದರಿಂದ ಸಮಾನವಾಯುವೂ ಹುಟ್ಟಿ ದುವು. ಭಾಗಿಸದೆ ಇರುವ ಅರ್ಧಭಾಗವು ವ್ಯಾನವಾಯುವಾಯಿತು.

ತೇಜಸ್ಸು— ೧ ತೇಜೋಭಾಗದೊಂದಿಗೆ ಭೂಭಾಗವುಸೇರುವು ದರಿಂದ ಘ್ರಾಣೇಂದ್ರಿಯವೂ, ೨. ತೇಜೋಭಾಗದೊಂದಿಗೆ ಜಲಭಾಗವು

ಸೇರುವುದರಿಂದ ರಸನೇಂದ್ರಿಯವು ನಾಲಿಗೆ ೩ ತೇಜೋಭಾಗದೊಂದಿಗೆ ವಾಯುಭಾಗವು ಸೇರುವುದರಿಂದ ತ್ವಗಿಂದ್ರಿಯವೂ (ಚರ್ಮ) ೪ ತೇಜೋಭಾಗದೊಂದಿಗೆ ಆಕಾಶಭಾಗವು ಸೇರುವುದರಿಂದ ಶ್ರೋತ್ರೇಂದ್ರಿಯವೂ ಹುಟ್ಟಿದುವು. ಭಾಗಿಸದೆ ಇರುವ ಅರ್ಧಭಾಗ ತೇಜಸ್ಸು ಚಕ್ಷು (ಕಣ್ಣು) ರಿಂದ್ರಿಯವಾಯಿತು

ಜಲ— ೧ ಜಲಭಾಗದೊಂದಿಗೆ ಭೂಭಾಗವು ಸೇರುವುದರಿಂದ ಗಂಧವೂ ೨ ಜಲಭಾಗದೊಂದಿಗೆ ತೇಜೋಭಾಗವು ಸೇರುವುದರಿಂದ ರೂಪವೂ, ೩ ಜಲಭಾಗದೊಂದಿಗೆ ವಾಯುಭಾಗವು ಸೇರುವುದರಿಂದ ಸ್ಪರ್ಶವೂ, ಜಲಭಾಗದೊಂದಿಗೆ ಆಕಾಶಭಾಗವು ಸೇರುವುದರಿಂದ ಶಬ್ದವೂ ಹುಟ್ಟಿದುವು. ಭಾಗಿಸದೆ ಇದ್ದ ಅರ್ಧಭಾಗವೂ ರಸವಾಯಿತು.

ಪೃಥಿವೀ— ೧ ಪೃಥ್ವೀಭಾಗದೊಂದಿಗೆ ಜಲಭಾಗವು ಸೇರುವುದರಿಂದ ಉಪಸ್ಥೇಯಿಂದ್ರಿಯವೂ, ಪೃಥ್ವೀಭಾಗದೊಂದಿಗೆ ತೇಜೋಭಾಗವು ಸೇರುವುದರಿಂದ ಪಾದೇಂದ್ರಿಯವೂ, ಪೃಥ್ವೀಭಾಗದೊಂದಿಗೆ ವಾಯುಭಾಗವು ಸೇರುವುದರಿಂದ ಪಾಣೀಂದ್ರಿಯವೂ, ಪೃಥ್ವೀಭಾಗದೊಂದಿಗೆ ಆಕಾಶಭಾಗವು ಸೇರುವುದರಿಂದ ವಾಗಿಂದ್ರಿಯವೂ ಹುಟ್ಟಿದುವು. ಭಾಗಿಸದೆ ಇದ್ದ ಪೃಥ್ವೀಭಾಗದ ಅರ್ಧಾಂಶವು ಪಾಯುರಿಂದ್ರಿಯವಾಯಿತು.

ಪಂಚೀಕರಣ ಕದಂಬವು.

೧ ಅಂತಃಕರಣ, ಸಮಾನವಾಯುವು, ಶ್ರೋತ್ರೇಂದ್ರಿಯ, ಶಬ್ದ, ವಾಕ್ಕು, ಇವೈದೂ ಆಕಾಶಕದಂಬವು. ೨ ಮನಸ್ಸು, ವ್ಯಾನವಾಯುವು, ತ್ವಗಿಂದ್ರಿಯವು, ಸ್ಪರ್ಶವು, ಪಾಣಿಯು ಇವೈದೂ ವಾಯುಕದಂಬವು. ೩ ಬುದ್ಧಿಯು, ಉದಾನವಾಯುವು, ಚಕ್ಷುರಿಂದ್ರಿಯವು, ರೂಪವು, ಪಾದವು ಇವೈದೂ ತೇಜಃಕದಂಬವು. ೪ ಚಿತ್ತವು, ಪ್ರಾಣವಾಯುವು, ರಸನೇಂದ್ರಿಯವು, ರಸವು, ಉಪಸ್ಥೇಂದ್ರಿಯ ಇವೈದೂ ಜಲಕದಂಬವು. ೫ ಅಹಂಕಾರವು, ಅಪಾನವು, ಘ್ರಾಣೇಂದ್ರಿಯವು, ಗಂಧವು, ಪಾಯುರಿಂದ್ರಿಯವು ಇವೈದೂ ಪೃಥ್ವೀಕದಂಬವು.

ಸ್ಥೂಲಪಂಚೀಕರಣಕ್ರಮವು.

ಆತ್ಮ				
೧	೨	೩	೪	೫
ಆಕಾಶ ಅಂತಃಕರಣ	ಮನಸ್ಸು	ಬುದ್ಧಿ	ಚಿತ್ತವು	ಅಹಂಕಾರವು
ಸಮಾನವಾಯು	ವಾಯು ವ್ಯಾನವಾಯು	ಉದಾನ ವಾಯು	ಪ್ರಾಣವಾಯು	ಅಪಾನವಾಯು
ಶ್ರೋತ್ರೇಂದ್ರಿಯ	ತ್ವಗಿಂದ್ರಿಯ	ತೇಜಸ್ಸು ಚಕ್ಷುರಿಂದ್ರಿಯ	ರಸನೇಂದ್ರಿಯ	ಘ್ರಾಣೇಂದ್ರಿಯ
ಶಬ್ದ	ಸ್ಪರ್ಶ	ರೂಪ	ಜಲ ರಸವು	ಗಂಧವು
ವಾಕ್ಕು	ಪಾಣಿ	ಪಾದ	ಉಪಸ್ಥೇಂದ್ರಿಯ	ಪೃಥ್ವಿ ಪಾಯ್ವಿಂದ್ರಿಯ

ಜೀವಸ್ಥೂಲದೇಹ ತತ್ವಾಧಿದೇವತೆಗಳೇ ಈಶ್ವರಸ್ಥೂಲದೇಹತತ್ವಗಳು.॥

ಬ್ರಹ್ಮಾಂಡಪಂಚೀಕರಣ ಚಕ್ರದಲ್ಲಿ ಸ್ಥೂಲಶರೀರ ನಿರ್ಣಯವು. (ಶ್ರುತಿಃ) ಬ್ರಹ್ಮಣೋಽವ್ಯಕ್ತಃ, ಅವ್ಯಕ್ತಾನ್ಮಹತಃ, ಮಹತೋಽಹಂಕಾರಃ, ಅಹಂಕಾರಾತ್ಪಂಚತನ್ಮಾತ್ರಾಣಿ, ಪಂಚತನ್ಮಾತ್ರೇಭ್ಯೋ ಪಂಚಮಹಾಭೂತಾನಿ, ಪಂಚಮಹಾಭೂತೇಭ್ಯಃ ಅಖಿಲಂಜಗತ್. (ಅಂದರೆ) ಅದ್ವಿತೀಯಪರಬ್ರಹ್ಮನಿಂದ ಅವ್ಯಕ್ತವೂ, ಅದರಿಂದ ಮಹತ್ತು, ಅದರಿಂದ ಅಹಂಕಾರ, ಅದರಿಂದ ಪಂಚತನ್ಮಾತ್ರಗಳು, ಅದರಿಂದ ಪಂಚಭೂತಗಳು, ಅದರಿಂದ ಹದಿನಾಲ್ಕು ಲೋಕಗಳು ಹುಟ್ಟಿದುವು. ಇದನ್ನು ಸ್ಪಷ್ಟಗೊಳಿಸುವುದಕ್ಕೆ ಇಲ್ಲಿ ಬ್ರಹ್ಮಾಂಡಪಂಚೀಕರಣಚಕ್ರ ಕೊಡಲ್ಪಡುವುದು.

I. ಪಂಚತನ್ಮಾತ್ರಗಳು.

ಶಬ್ದ	ಸ್ಪರ್ಶ	ರೂಪ	ರಸ	ಗಂಧ
ಸತ್ವಗುಣಾಕಾಶ	ಸತ್ವಗುಣವಾಯು	ಸತ್ವಗುಣತೇಜಸ್ಸು	ಸತ್ವಗುಣಜಲ	ಸತ್ವಗುಣ ಪೃಥಿವೀ
ರಜೋಗುಣಾಕಾಶ	ರಜೋಗುಣವಾಯು	ರಜೋಗುಣತೇಜಸ್ಸು	ರಜೋಗುಣಜಲ	ರಜೋಗುಣಪೃಥಿವೀ
ತಮೋಗುಣಾಕಾಶ	ತಮೋಗುಣವಾಯು	ತಮೋಗುಣತೇಜಸ್ಸು	ತಮೋಗುಣಜಲ	ತಮೋಗುಣಪೃಥಿವೀ
ತಮೋಗುಣಾಕಾಶದ ಅರ್ಧವು ಅಂತಃಕರಣ ಉಳಿದಅರ್ಧ ಜಲಾದಿ ಸೇರಿ ಮಾನಸಾದಿ	ತಮೋ-ಆಕಾಶಾರ್ಧದಲ್ಲಿ ಒಂದುಭಾಗ ತಾಮಸ ವಾಯು ಸೇರಿಮನೋಗೋಳಕ	ಎರಡನೇ ಭಾಗವು ತಾಮಸ ವಾಯುವಿನಲ್ಲಿ ಸೇರಿ ಬುದ್ಧಿಗೋಳಕ	ಮೂರನೇಭಾಗವು ತಾಮಸ ಜಲದಲ್ಲಿಸೇರಿ ಚಿತ್ತ ಗೋಳಕ	ನಾಲ್ಕನೆಯ ಭಾಗವು ತಾಮಸಪೃಥ್ವಿಯಲ್ಲಿ ಸೇರಿ ಅಹಂಕಾರಸ್ಥಾನ

ತಮೋಗುಣ ವಾಯುವಿನ ಅರ್ಧದನಾಲ್ಕು ತುಂಡುಗಳಲ್ಲಿ ೧ ತಾಮಸಾಕಾಶ ಸೇರಿ ಸಮಾನವಾಯು	ತಮೋ, ಅರ್ಧವ್ಯಾನ ಸಮಾನೋದಾನಾಪಾನ ಪ್ರಾಣ ಗೋಳಕಗಳು.	ಉದಾನವಾಯು ಗೋಳಕ	ಪ್ರಾಣವಾಯು ಗೋಳಕ	ಅಪಾನವಾಯು ಗೋಳಕ
ತಮೋಗುಣ, ತೇಜಸ್ಸಿನ ಅರ್ಧಭಾಗದ ೪ ಶಕಲಗಳಲ್ಲಿ, ತಾಮಸಾಕಾಶದಲ್ಲಿ ಕಲೆತುಶ್ರೋತ್ರ	ಸ್ಪರ್ಶ ಗೋಳಕ	ಚಕ್ಷುಗೋಳಕ ಶ್ರೋತ್ರತ್ವಗ್ಜಿಹ್ವಾ ಘ್ರಾಣ ಗೋಳಕಗಳು	ಜಿಹ್ವಾಗೋಳಕ	ಘ್ರಾಣಗೋಳಕ
ತಮೋಗುಣಜಲಾರ್ಧ ಭಾಗದ ಶಕಲಗಳಲ್ಲಿ ೧ ತಾಮಸಾಕಾಶದಲ್ಲಿ ಸೇರಿ ಶಬ್ದ ಗೋಳಕ	ಸ್ಪರ್ಶಗೋಳಕ	ರೂಪಗೋಳಕ	ರಸಗೋಳಕ ಶಬ್ದಸ್ಪರ್ಶರೂಪರಸ ಗಂಧಗೋಳಕಗಳು	ಗಂಧಗೋಳಕ
ತಮೋಗುಣ ಪೃಥ್ವಿ ಅರ್ಧಭಾಗದ ೪ ಶಕಲಗಳಲ್ಲಿ ೧ ತಾಮಸಾಕಾಶದಲ್ಲಿ ಸೇರಿ ವಾಕ್-ಗೋಳಕ	ಪಾಣಿಗೋಳಕ	ಪಾದಗೋಳಕ	ಗುಹ್ಯಗೋಳಕ	ವಾಯುಗೋಳಕ ವಾಕ್ಪಾಣಿಪಾದ ಗುಹ್ಯ ಗೋಳಕಗಳು

ಬ್ರಹ್ಮಾಂಡ ಪಂಚೀಕರಣ ಚಕ್ರದಲ್ಲಿ ಸೂಕ್ಷ್ಮಶರೀರನಿರ್ಣಯವು.

ಸತ್ವಗುಣಾಕಾಶ	ಸತ್ವಗುಣವಾಯುವು	ಸತ್ವಗುಣಾಗ್ನಿ	ಸತ್ವಗುಣಜಲವು	ಸತ್ವಗುಣಪೃಥಿವಿ
ರಜೋಗುಣಕಾಶ	ರಜೋಗುಣವಾಯುವು	ರಜೋಗುಣಾಗ್ನಿ	ರಜೋಗುಣಜಲವು.	ರಜೋಗುಣಪೃಥಿವಿ.
ಸತ್ವಗುಣಾಕಾಶಾದಿಪಂಚಭೂಶಾರ್ಧ ಸಮಷ್ಟಿಯು ಅಂತಃಕರಣಗೋಳಕದಲ್ಲಿದ್ದು ಜೀವನೆಂಬಹೆಸರಿನಿಂದ ವಿಭುತ್ವಮಾಡುವನು	ಮನೋಗೋಳದ ಸಂಕಲ್ಪವು	ಬುದ್ಧಿಗೋಳದ ಸಂಕಲ್ಪವು	ಚಿತ್ತಗೋಳದ ಆಲೋಚನೆ	ಅಂತಃಕರಣನಿಯಾಮಕ
ರಜೋಗುಣಾನಿಲಾರ್ಧಭಾಗ ಅನ್ನರಸವನ್ನು ಎಲ್ಲಾನಾಡಿಗಳಿಗೂ ಹಂಚುವುದು	ಭಕ್ಷಿತಾನ್ನರ ಸವನ್ನು ಶರೀರವೆಲ್ಲಾ ವ್ಯಾಪನಗೊಳಿಸುವುದು.	ನೀರುಕುಡಿಯುತ್ತಿರುವುದು	ಉಛ್ವಾಸದಿಂದ ಹೊರಕ್ಕೆ ಬರುತ್ತಿರುವುದು,	ಪ್ರಾಣನುನಿಶ್ವಾಸದಿಂದ ಹಂಸವನ್ನು ಒಳಕ್ಕೆಬಿಡುವುದು
ಶಬ್ದವನ್ನು ಗ್ರಹಿಸುವುದು	ಶೀತೋಷ್ಣಾದಿ ಸ್ಪರ್ಶವನ್ನು ಗ್ರಹಿಸುವುದು	ರೂಪವನ್ನು ಗ್ರಹಿಸುವುದು	ರಸವನ್ನು ಗ್ರಹಿಸುವುದು	ಗಂಧವನ್ನು ಗ್ರಹಿಸುವುದು
ಸತ್ವಗುಣಾಕಾಶದಲ್ಲಿ ಹುಟ್ಟಿದಶಬ್ದ	ಸತ್ವಗುಣವಾಯುವಿನಲ್ಲಿ ಹುಟ್ಟಿದಸ್ಪರ್ಶ	ಸತ್ವಗುಣಾಗ್ನಿಯಲ್ಲಿ ಹುಟ್ಟಿದರೂಪ	ಸತ್ವಗುಣಜಲದಲ್ಲಿ ಹುಟ್ಟಿದರಸ	ಸತ್ವಗುಣಪೃಥಿವಿಯಲ್ಲಿ ಹುಟ್ಟಿದಗಂಧವು
ವಾಗ್ಗೋಳದಲ್ಲಿ ಹುಟ್ಟಿದಶಬ್ದವು	ಪಾಣಿಗೋಳದಲ್ಲಿ ಹುಟ್ಟಿದ ದಾನಪ್ರತಿಗ್ರಹಗಳು	ಪಾದಗೋಳದಲ್ಲಿ ನಿಂತು ಗಮನಾದಿಕ್ರಿಯೆಗಳು	ಗುಹ್ಯಗೋಳದಲ್ಲಿ ನಿಂತು ಸುರತಾನಂದಹೊಂದುವುದು	ಪಾಯುಗೋಳದಲ್ಲಿ ನಿಂತು ಮಲವಿಸರ್ಜನೆಮಾಡುವುದು

ಈಪ್ರಕಾರವಾಗಿ ಶಬ್ದಗುಣಕವಾದ ಆಕಾಶವೂ, ಶಬ್ದಸ್ಪರ್ಶಗುಣಕವಾದ ವಾಯುವೂ, ಶಬ್ದಸ್ಪರ್ಶರೂಪಗುಣಕವಾದ ಅಗ್ನಿಯೂ, ಶಬ್ದಸ್ಪರ್ಶರೂಪರಸಗುಣಕವಾದ ಜಲವೂ, ಶಬ್ದಸ್ಪರ್ಶರೂಪರಸಗಂಧಗುಣಕವಾದ ಪೃಥಿವಿಯೂ ಪಂಚೀಕೃತಗಳಾಗಿ, ಮಹಾಸ್ಥೂಲಗಳಾಗಿ ಕಾಣಿಸಿಕೊಂಡುವು. ಈ ಮಹಾಭೂತಗಳಿಂದ ಅತಲ ವಿತಲ ಸುತಲ ರಸಾತಲ ತಲಾತಲ ಮಹಾತಲ ಪಾತಾಳಗಳೆಂಬ ಏಳು ಅಧೋಲೋಕಗಳೂ, ಭೂಲೋಕ ಭುವರ್ಲೋಕ ಸ್ವರ್ಲೋಕ ಮಹರ್ಲೋಕ ಜನೋಲೋಕ ತಪೋಲೋಕ ಸತ್ಯಲೋಕಗಳೆಂಬ ಏಳು ಊರ್ಧ್ವಲೋಕಗಳೂ, ಆಯಾಲೋಕಗಳಿಗೆ ಉಚಿತಗಳಾದ ಜರಾಯುಜ. ಅಂಡಜ, ಉದ್ಭಿಜ್ಜ, ಸ್ವೇದಜರೂಪಗಳಾದ ಚತುರ್ವಿಧ ಭೂತಗ್ರಾಮಗಳೂ, ಆಯಾಪ್ರಾಣಿಗಳಿಗೆ ಯೋಗ್ಯಗಳಾದ ಅನ್ನಪಾನಾದಿಗಳೂ, ಘಟಪಟಾದಿ ಸರ್ವಪದಾರ್ಥಗಳೂ, ಸಂಭವಿಸಿದುವು. ಇವಿಷ್ಟೂಕೂಡಿ, ಸ್ಥೂಲಪ್ರಪಂಚವಾಗುವುದು. ಇದಕ್ಕೆ ವ್ಯಷ್ಟಿಸಮಷ್ಟ್ಯಾತ್ಮಕವಾದ ಜಾಗ್ರದವಸ್ಥೆಯಾಗುವುದು. ಆದರಲ್ಲಿ ಒಂದೊಂದು ವ್ಯಷ್ಟಿಯು ಸ್ಥೂಲಶರೀರ ಜಾಗರಗಳಲ್ಲಿ ಆಲಿಂಗದೇಹೋಪಾಧಿಕನಾದ ತೈಜಸನು ಅಭಿಮಾನಮಾಡಿ, ಚಿದಾಭಾಸನೆಂತಲೂ ವ್ಯಾವಹಾರಿಕನೆಂತಲೂ, ವಿಶ್ವನೆಂತಲೂ, ಹೆಸರಿಸಿಕೊಳ್ಳುವ ಹಿರಣ್ಯಗರ್ಭನಾದ ನಾನು ಸಮಷ್ಟಿ ಸ್ಥೂಲವಿಗ್ರಹ ಜಾಗ್ರದ್ವಿಶಿಷ್ಟನಾಗಿ ರಾಜಸನೆಂತಲೂ ವೈಶ್ವಾನರನೆಂತಲೂ, ವಿರಾಟ್ಪುರುಷನೆಂತಲೂ ಹೆಸರುಪಡೆದು ಸಕಲಜಗತ್ತುಗಳಿಂದಲೂ ಆರಾಧ್ಯನಾಗಿ ಪ್ರಕಾಶಿಸುತ್ತಿರುವೆನು.

ನನಗೆ ಭೂಮಿಯೇ ಪಾದವು, ವಿಸ್ತಾರವಾದ ಸ್ವರ್ಗವೇ ಶಿರಸ್ಸು. ಆಕಾಶವೇ ನಾಭಿಯು. ಸೂರ್ಯಚಂದ್ರರೇ ಕಣ್ಣುಗಳು. ದಿಕ್ಕುಗಳೇ ಕಿವಿಗಳು. ಅಗ್ನಿಯೇ ಮುಖವು. ವಾಯುವೇ ಪ್ರಾಣಗಳು. ವಿಶ್ವಶರೀರನಾದ ನಾನೇ ವಿರಾಟ್ಸ್ವರೂಪನು. ಮತ್ತು ನನಗೆ ಮುಖದಲ್ಲಿ ಬ್ರಾಹ್ಮಣರೂ ಭುಜಗಳಲ್ಲಿ ಕ್ಷತ್ರಿಯರೂ ತೊಡೆಗಳಲ್ಲಿ ವೈಶ್ಯರೂ, ಪಾದಗಳಲ್ಲಿ ಶೂದ್ರರೂ ರೋಮಗಳಲ್ಲಿ ವೃಕ್ಷಲತಾದಿಗಳೂ ಹುಟ್ಟಿದುವು. ಪರ್ವತಗಳೇ ನನ್ನ ಎಲುಬುಗಳು, ನದಿಗಳೇ ನಾಡಿಗಳು, ಸಮುದ್ರವೇ ಹೊಟ್ಟೆಯು, ತ್ರಿಸಂಧ್ಯಾಕಾಲಗಳೇ ವಸ್ತ್ರಗಳು. ನೀಲಮೇಘಗಳೇ ನನ್ನ ಕೇಶಪಾಶಗಳಾಗಿವೆ. ಮತ್ತು ಭೂಮಿಯು ಆಧಾರಚಕ್ರವಾಗಿಯೂ ನೀರು ಮಣಿಪೂರಕವಾಗಿಯೂ, ಅಗ್ನಿಯು ಸ್ವಾಧಿಷ್ಠಾನವಾಗಿಯೂ, ವಾಯುವು

ಅನಾಹತಚಕ್ರವಾಗಿಯೂ, ಆಕಾಶವುವಿಶುದ್ಧ ಚಕ್ರವಾಗಿಯೂ ಪ್ರಕೃತಿಯು ಆಜ್ಞಾ ಚಕ್ರವಾಗಿಯೂ ಉತ್ಪತ್ತಿರುವುವು, ಎಲೈಮಾರುತಿಯೇ, ಮೇರು ಪರ್ವತವೇ ನನ್ನಬೆನ್ನುಮೂಳೆಯು. ದಕ್ಷಿಣಾಯನ ಉತ್ತರಾಯನಗಳು ಇಡಾಪಿಂಗಳನಾಡಿಗಳಾಗಿಯೂ ಪರಮಪದವೇ ನನ್ನಸುಷುಮ್ನಾನಾಡಿಯಾಗಿಯೂ ಆಗಿರುವುವೆಂದುತಿಳಿ. ಇನ್ನೂ ವಿವರಿಸುವೆನುಕೇಳು. ಅತಲವೇನನ್ನಪಾದಗಳು, ವಿತಲವೇ ಗುಲ್ಫಗಳು, ಸುತಲವೇ ಮೊಳಕಾಲುಗಳು, ರಸಾತಲವೇಮುಂಡಿಗಳು, ಮಹಾತಲವೇ ತೊಡೆಗಳು, ತಲಾತಲವೇ ನನ್ನನಡುವು, ಪಾತಾಳವೇ ನಾಭಿಯ ಕೀಳ್ಭಾಗವು, ಭೂರ್ಭುವಸ್ವರ್ಲೋಕಗಳೇ ನಾಭಿಯು, ಮಹರ್ಲೋಕವೇ ಎದೆ ಹೊಟ್ಟೆಗಳು, ಜನಲೋಕವೇ ನನ್ನಕಂಠವು, ತಪೋಲೋಕವೇ ಭ್ರೂಮಧ್ಯವು, ಸತ್ಯಲೋಕವೇ ಶಿರಸ್ಸು. ಇಂತಹ ವಿಶ್ವರೂಪಧರನಾಗಿರುವೆನು. ಹೀಗೆ ಸರ್ವಾಧಿಷ್ಠಾನವೂ ಸರ್ವಪರಿಪೂರ್ಣವೂ, ನಾಮರೂಪ ಗುಣ ಧರ್ಮ ಕರ್ಮ ವಿಕಾರಗಳಿಂದರಹಿತವಾದ ಅಖಂಡ ಪರಬ್ರಹ್ಮ ಸಚ್ಚಿದಾನಂದ ಪರಬ್ರಹ್ಮನಾದನಾನುಸಮಷ್ಟಿಕಾರಣವಾದ ಸೂಕ್ಷ್ಮಸ್ಥೂಲ ಶರೀರಗಳ ಉಪಾಧಿವಿಶಿಷ್ಟತ್ವದಿಂದ ಅವ್ಯಾಕೃತನೆಂತಲೂ ಹಿರಣ್ಯಗರ್ಭನೆಂತಲೂ, ವಿರಾಟ್ಪುರುಷನೆಂತಲೂ, ಸಕಲಜೀವಗಳಿಂದ ಪೂಜಿಸಲ್ಪಡುತ್ತಾ ಪ್ರಕಾಶಿಸುತ್ತಿರುವೆನು. ನಾನೇ ಅಜ್ಞಾನವಶನಾಗಿ ಜೀವನೆನಿಸಿಕೊಂಡು, ಈಶ್ವರೋಪಾಸಕನಾಗಿ, ಪ್ರವರ್ತಿಸುವಂತೆ ತೋರುವೆನು. ಈ ಜೀವೇಶ್ವರತತ್ವಗಳು ಅವಿದ್ಯಾಕಲ್ಪಿತಗಳಾಗಿ ಮೊಲದಕೋಡಿನಂತೆಯೂ, ಗಗನಕುಸುಮದಂತೆಯೂ ಇರುವುದರಿಂದನನ್ನಲ್ಲಿ ನನ್ನನ್ನುತಿಳಿದಂತೆ ಆಗುವುದು.

ಇನ್ನು ಜೀವೇಶ್ವರೈಕ್ಯವನ್ನು ಹೇಳುವೆನು. ಕೇಳು, ಕಲಶವೂ, ಮೇಘವೂ, ಆ ಕಲಶದಲ್ಲಿದ್ದ ನೀರನ್ನು ತಳ್ಳಿಬಿಟ್ಟರೆ ಅದರಲ್ಲಿಪ್ರತಿಬಿಂಬವಿಲ್ಲದ್ದರಿಂದ ಆಕಾಶವು ನಿರಾಕಾರವಾಗಿ ಎಲ್ಲಾಕಡೆಯೂ ತುಂಬಿರುವುದು, ಹಾಗೆಯೇ ಜೀವೇಶ್ವರರ ಸ್ಥೂಲಸೂಕ್ಷ್ಮಕಾರಣ ಶರೀರಗಳನ್ನೂ ಮಾಯೆಯನ್ನೂ ಅವಿದ್ಯೆಯನ್ನೂ ಪರಿತ್ಯಜಿಸಿದರೆ ಆ ಜೀವೇಶ್ವರರು ಪ್ರಕಾಶಿಸದೆಹೋಗುವುದರಿಂದ ಅಖಂಡಾದ್ವಿತೀಯವಾದ ಬ್ರಹ್ಮತೇಜಸ್ಸು ಹೊಳೆಯುವುದು. ಆ ಸ್ಥೂಲಸೂಕ್ಷ್ಮಕಾರಣಗಳಿಗೂ, ಜಾಗ್ರತ್ಸ್ವಪ್ನ ಸುಷುಪ್ತಿಗಳೆಂಬ ಅವಸ್ಥೆಗಳಿಗೂ, ಪ್ರಭುವಾದ ಆತ್ಮನು ಸರ್ವಸಾಕ್ಷಿಯಾಗಿರುವನು. ಅವನೇ ಕೂಟಸ್ಥನು, ಪ್ರತ್ಯಗಾತ್ಮನು, ಅಕ್ಷರನು, ಪುರುಷನು, ಕ್ಷೇತ್ರಿಯು

ಮತ್ತು ಪರಮಾತ್ಮನೂ ಆಗಿರುವನು. ಈಶ್ವರನ ಸ್ಥೂಲಸೂಕ್ಷ್ಮಕಾರಣ ದೇಹಗಳಿಗೂ ಜಾಗ್ರತೆ ಸ್ವಪ್ನ ಸುಷುಪ್ತಿಗಳೆಂಬ ಅವಸ್ಥೆಗಳಿಗೂ ಸಾಕ್ಷಿಯಾಗಿ ವಿರಾಟ್ಪುರುಷನಾದ ಈಶ್ವರನು ನೋಡುತ್ತಿರುವನು. ಅವನೇ ಪರಮಾತ್ಮನು, ಅವನೇ ಪರಬ್ರಹ್ಮನು. ಅವನೇ ಪೂರ್ಣಚೈತನ್ಯ ಸ್ವರೂಪನು, ನಿರ್ವಿಕಲ್ಪನೂ, ನಿರ್ವಿಕಾರನೂ, ಅದ್ವಿತೀಯನೂ, ಅನಂತನೂ ಆಗಿರುವನು. ಮೊಗೆಗಡಿಗೆಯೆಂಬ ಹೆಸರುಗಳನ್ನು ಬಿಟ್ಟು, ಅವುಗಳನ್ನು ಸಿದ್ಧಮಾಡಿದಮಣ್ಣು ಒಂದೇ ಆಗಿರುವಂತೆಯೂ, ಘಟತಟಾಕಗಳನ್ನು ಏಕಕಾಲದಲ್ಲಿಬಿಟ್ಟು ಆ ನೀರು ಅಭಿನ್ನವಾಗಿ ಕಾಣಿಸುವಂತೆಯೂ, ದೀಪ ಮತ್ತು ದೀವಟಿಗೆ ಬತ್ತಿಗಳನ್ನು ತ್ಯಜಿಸಿಬಿಟ್ಟು ಆ ತೇಜಸ್ಸು ಒಂದೇಎಂದು ತಿಳಿಯುವಹಾಗೆಯೂ, ಘಟಮಠಗಳನ್ನು ಬಿಟ್ಟುಬಿಟ್ಟು ಆಕಾಶವನ್ನು ಒಂದೇ ಎಂದು ತಿಳಿಯುವಂತೆಯೂ ಈಶ್ವರನಸ್ಥೂಲ, ಸೂಕ್ಷ್ಮ, ಕಾರಣಗಳೆಂಬ ಮೂರು ಉಪಾಧಿಗಳ ಜತೆಗಳನ್ನು ಜ್ಞಾನವೆಂಬ ಕಣ್ಣಿನಿಂದ ತಿರಸ್ಕರಿಸಿ, ಪರಿಪೂರ್ಣ ಶುದ್ಧಚೈತನ್ಯನಾದ ಪರಮಾತ್ಮನನ್ನು ಅಭಿನ್ನವಾಗಿ ನೋಡತಕ್ಕದು.

ಇನ್ನು "ತತ್ತ್ವಮಸಿ" ಎಂಬ ಮಹಾವಾಕ್ಯದ ತಾತ್ಪರ್ಯವನ್ನು ಹೇಳುವೆನು. ಜೀವನಿಗೆ ಸ್ಥೂಲ, ಸೂಕ್ಷ್ಮ, ಕಾರಣಗಳೆಂಬ ಮೂರು ಬಗೆಯ ಶರೀರಗಳುಂಟು, ಜಾಗ್ರತೆ, ಸ್ವಪ್ನ, ಸುಷುಪ್ತಿಗಳೆಂಬ ಅವಸ್ಥೆಗಳು ಮೂರು. ಅವರಿಗೆ ವಿಶ್ವನು, ತೈಜಸನು, ಪ್ರಾಜ್ಞನು ಎಂಬ ಮೂರು ಹೆಸರುಗಳಿರುವುವು. ಅವಿದ್ಯೋಪಾಧಿಯುಳ್ಳ ಆ ಜೀವನ ಸ್ವರೂಪವನ್ನು ಅಜ್ಞರಾದವರು "ನಾನು ಸುಖಪಡುತ್ತೇನೆ, ನಾನು ದುಃಖಪಡುತ್ತೇನೆ" ಎಂದು ಮುಂತಾಗಿ ಹೇಳಿಕೊಳ್ಳುವ ಅಲ್ಪಗುಣಗಳು ಸೇರಿ ತ್ವಂ ಎಂಬ ಪದದ ವಾಚ್ಯಾರ್ಥವಾಗುವುದು. ಮೇಲೆ ಹೇಳಿದ ಸ್ಥೂಲಾದಿ ಮೂರು ಬಗೆಯ ಶರೀರಗಳೂ ವಿಲಕ್ಷಣವಾದುದಾಗಿಯೂ ಜಾಗ್ರತೆ ಮೊದಲಾದ ಮೂರು ಬಗೆಯ ಅವಸ್ಥೆಗಳಿಗೂ ಸಾಕ್ಷಿಯಾಗಿಯೂ, ಅನ್ನಮಯ, ಪ್ರಾಣಮಯ, ವಿಜ್ಞಾನಮಯ, ಮನೋಮಯ, ಆನಂದಮಯಗಳೆಂಬ ಪಂಚಕೋಶಗಳಿಗೂ ಅತೀತವಾಗಿಯೂ, ಸಚ್ಚಿದಾನಂದ ಸ್ವರೂಪವಾಗಿಯೂ ಇರುವ ಪ್ರತ್ಯಗಾತ್ಮ ಸ್ವರೂಪವೇ ತ್ವಂ ಪದದ ಲಕ್ಷ್ಯಾರ್ಥವು.

ಕಾರ್ಯೋಪಾಧಿರಯಂಜೀವಃ । ಕಾರಣೋಪಾಧಿರೀಶ್ವರಃ ॥

(ಭಗವದ್ಗೀತೆ) ಈಶ್ವರನ ಸ್ಥೂಲ ಸೂಕ್ಷ್ಮ ಕಾರಣಗಳೆಂಬ ಉಪಾಧಿಗಳೂ, ಜಾಗ್ರತ್ಸ್ವಪ್ನ ಸುಷುಪ್ತಿಗಳೆಂಬ ಅವಸ್ಥೆಗಳೂ ಸ್ವರೂಪವಾಗಿ ಉಳ್ಳ ಮಾಯೆಯೂ, ವೈಶ್ವಾನರ, ಹಿರಣ್ಯಗರ್ಭ, ಅವ್ಯಾಕೃತ ಎಂಬ ಹೆಸರುಳ್ಳ ಸಮಷ್ಟಿ ಉಪಾಧಿಯಲ್ಲಿ ಪ್ರತಿಫಲಿಸಿದ ಕಾರಣೋಪಾಧಿಕನಾದ ಈಶ್ವರನ ಸ್ವರೂಪವೂ, ಸರ್ವಜ್ಞತ್ವ, ಸರ್ವೇಶ್ವರತ್ವ, ಸರ್ವಾಂತರ್ಯಾಮಿತ್ವ ಮೊದಲಾದ ಆರು ಬಗೆಯ ಕಲ್ಯಾಣಗುಣಗಳೂ ಸೇರಿ "ತತ್" ಎಂಬ ಪದದ ವಾಚ್ಯಾರ್ಥವಾಗುವುದು. ದೇಶಕಾಲ ವಸ್ತುಗಳಿಂದ ಅಪರಿಚ್ಛಿನ್ನವಾಗಿಯೂ, ಸ್ವಜಾತೀಯ ವಿಜಾತೀಯಗಳೆಂಬ ಭೇದಗಳಿಲ್ಲದ್ದಾಗಿಯೂ, ಸತ್ಯಜ್ಞಾನಾನಂದ ಸ್ವರೂಪವಾಗಿಯೂ, ಪರಿಪೂರ್ಣಾದ್ವಿತೀಯವಾಗಿಯೂ ಇರುವ ಜ್ಞಾನಸ್ವರೂಪವಾದ ಪರಬ್ರಹ್ಮವೇ ತತ್ಪದದ ಲಕ್ಷ್ಯಾರ್ಥವು. ಪರಸ್ಪರ ವಿರುದ್ಧಧರ್ಮಗಳುಳ್ಳ ಜೀವೇಶ್ವರರೂಪಗಳಿಗೂ ಸ್ವಭಾವಧರ್ಮಗಳುಳ್ಳ ಪ್ರತ್ಯಗ್ಬ್ರಹ್ಮಗಳಿಗೂ ಐಕ್ಯವು ಸಂಭವಿಸುವುದಿಲ್ಲ. ಇದರಿಂದ ಒಂದು ದೇಶದಲ್ಲಿ ಒಂದು ಕಾಲದಲ್ಲಿ ಒಂದು ರೂಪದಲ್ಲಿರುವ ಪುರುಷನನ್ನು ಮತ್ತೊಂದು ದೇಶದಲ್ಲಿ ಮತ್ತೊಂದು ಕಾಲದಲ್ಲಿ ಮತ್ತೊಂದು ರೂಪದಿಂದ ಇರುವುದನ್ನು ಕಂಡುಕೊಂಡು, ಆ ದೇಶಕಾಲ ರೂಪಗಳನ್ನೂ, ಈ ದೇಶಕಾಲರೂಪಗಳನ್ನೂ ಲಕ್ಷ್ಯಮಾಡದೆ ಆ ಪುರುಷನೇ ಇವನೆಂದು ತಿಳಿದುಕೊಳ್ಳುವಂತೆ ತತ್ಪದತ್ವಂಪದಗಳಿಗೆ ವಾಚ್ಯಾರ್ಥಗಳಾದ ಜೀವೇಶ್ವರರನ್ನು ತ್ಯಜಿಸಿ, ಎರಡು ಬಗೆಗಳಾಗಿಯೂ, ತತ್, ತ್ವಂಪದಗಳಿಗೆ ಲಕ್ಷ್ಯಾರ್ಥಗಳಾಗಿಯೂ ಇರುವ ಪ್ರತ್ಯಗಾತ್ಮ ಪರಮಾತ್ಮರುಗಳಿಗೆ ಐಕ್ಯವೇ ಎಂದು ತಿಳಿದುಕೋ. ಇದೇ ಅಸಿ ಯೆಂಬ ಪದದ ಅರ್ಥವು. ನೀನು ಬ್ರಹ್ಮನು, ನೀನು ಬ್ರಹ್ಮನಾಗಿದ್ದೀಯೆ. ಎಂಬುದೇ ಇದರ ತಾತ್ಪರ್ಯವು. ಇದೇ ತತ್ತ್ವಮಸಿ ಎಂಬ ಸಾಮವೇದದ ಮಹಾವಾಕ್ಯಾರ್ಥವು. ಪ್ರಜ್ಞಾನಂ ಬ್ರಹ್ಮ, ಅಹಂಬ್ರಹ್ಮಾಸ್ಮಿ, ಅಯಮಾತ್ಮಾ ಬ್ರಹ್ಮ, ಎಂಬ ಮಹಾ ವಾಕ್ಯಾರ್ಥಗಳು ಮುಂದೆ ವಿವರಿಸಲ್ಪಡುವುವು.

ಆಕಾಶವು, ಹಗ್ಗವು, ಮರವು, ಬಿಸಿಲುದೊರೆ, ಮುತ್ತಿನಚಿಪ್ಪು ಇವುಗಳ ಗುಂಪುಗಳು ಆದಿಮಧ್ಯಾಂತಗಳಲ್ಲಿ ಅವವುಗಳ ಸ್ವಸ್ವರೂಪದಿಂದ ನಿವಸಿಸುತ್ತಿರಲು ಅಜ್ಞಾನವಶದಿಂದ ಕ್ರಮವಾಗಿ ನೀಲತ್ವ, ಹಾವು, ಮನುಷ್ಯನು, ನೀರು ಬೆಳ್ಳಿಗಳಾಗಿ ಕಂಡುಬಂದು, ಚೆನ್ನಾಗಿ ಪರಿಶೋಧಿಸಿ ನೋಡಿದಮೇಲೆ ಕಲ್ಪಿತರೂಪಗಳಾಗಿ ನೀಲತ್ವಾದಿಗಳು ಅಸತ್ಯಗಳಾಗಿ

ಹೋದಮೇಲೆ ಯಥಾರ್ಥವಾದ ವಸ್ತುಗಳೇ ಹೇಗೆ ಕಾಣಲ್ಪಡುವವೋ ಹಾಗೆಯೇ ಪ್ರತ್ಯಗಾತ್ಮನು ಪರಬ್ರಹ್ಮನಾಗಿದ್ದರೂ ಅವಿದ್ಯಾಬಲದಿಂದ ಜೀವರೂಪನಾಗಿ ತೋರಿ, ಕಡೆಗೆ ತನ್ನ ನಿಜಸ್ವರೂಪವನ್ನು ತಿಳಿದುಕೊಂಡಾಗ ಅದ್ವಯಾನಂದಸ್ವರೂಪನಾಗಿ ಪ್ರಕಾಶಿಸುವನು. ಹೀಗೆ ರಜ್ಜುವಿನ ಅಜ್ಞಾನದಿಂದ ರಜ್ಜುವಿನಲ್ಲಿ ಸರ್ಪವು ಆರೋಪಿಸಲ್ಪಟ್ಟು, ಆಪ್ತವಾಕ್ಯಗಳಿಂದ ಆ ಸರ್ಪವೆಂಬ ಭ್ರಾಂತಿಯು ತೊಲಗಿದ ಮೇಲೆ ರಜ್ಜುವು ಹಗ್ಗವೇ ಆಗುವಂತೆ ಅಖಂಡಸಚ್ಚಿದಾನಂದ ಸ್ವರೂಪನಾದ ಆತ್ಮನು ಅಜ್ಞಾನವಶದಿಂದ ತನಗೆ ತಾನೇ ಜೀವನಾಗಿ ತೋರಿ, ಆ ಬಳಿಕ ಶ್ರೀಗುರು ವಾಕ್ಯದಿಂದ "ನೀನು ಜೀವನಲ್ಲವು, ಪರಿಪೂರ್ಣ ಚೈತನ್ಯಮಾತ್ರನು" ಎಂದು ಯಾವಾಗ ಎಚ್ಚರಿಸಲ್ಪಡುವನೋ ಆಗ, ಆತನು ದೇಹೇಂದ್ರಿಯಪ್ರಾಣಮನೋಬುದ್ಧಿ ಚಿತ್ತಾಹಂಕಾರ ಆತ್ಮ ಭ್ರಾಂತಿಯು ನಿವರ್ತಿಯಾಗುತ್ತಿರಲು ಪ್ರತ್ಯಗಭಿನ್ನವಾದ ಅದ್ವಿತೀಯಪರಬ್ರಹ್ಮಚೈತನ್ಯಮಾತ್ರನಾಗುವನು. ಇದೇ ಜೀವ ಬ್ರಹ್ಮೈಕ್ಯವು.

ಎಲೈ ಆಂಜನೇಯನೇ ಇನ್ನು ಓಂಕಾರದ ಸ್ವರೂಪವನ್ನು ನಿರೂಪಿಸುವೆನು ಕೇಳು. ವ್ಯಷ್ಟಿ ಸಮಷ್ಟ್ಯಾತ್ಮಕಗಳಾದ ಸ್ಥೂಲ ದೇಹಗಳೂ, ಜಾಗ್ರದವಸ್ಥೆಗಳೂ, ವಿಶ್ವನಾಮಕನಾದ ಜೀವನೂ, ವಿರಾಟ್ಟೆಂಬ ಈಶ್ವರನೂ ಸೇರಿ ಆಕಾರ ಪ್ರಣವಾರ್ಥವಾಗುವುದು. (ಪ್ರಣವವೆಂದರೆ ಓಂಕಾರವು ಇದರಲ್ಲಿ ಅಕಾರ ಉಕಾರ ಮಕಾರಗಳು ಸೇರಿರುವುವು) ವ್ಯಷ್ಟಿಸಮಷ್ಟ್ಯಾತ್ಮಕಗಳಾದ ಸೂಕ್ಷ್ಮದೇಹಗಳೂ, ಉಭಯಶರೀರಾವಸ್ಥೆಗಳಾದ ಸ್ವಪ್ನಗಳೂ, ತೈಜಸನೆಂಬ ಜೀವನೂ, ಹಿರಣ್ಯಗರ್ಭನೆಂಬ ಈಶ್ವರನೂ ಉಕಾರ ಪ್ರಣವಾರ್ಥವಾಗುವುದು. ವ್ಯಷ್ಟಿ ಸಮಷ್ಟಿ ಕಾರಣ ಶರೀರಗಳೂ, ಉಭಯ ನಿದ್ರಾವಸ್ಥೆಗಳೂ, ಪ್ರಾಜ್ಞನಾದ ಜೀವನೂ, ಸರ್ವೇಶ್ವರನೂ ಬ್ರಹ್ಮ ಪ್ರಣವದಲ್ಲಿಯ ಆನಂದಪಾದ ಸ್ವರೂಪವಾದ ಮಕಾರ ಪ್ರಣವಾರ್ಥವಾಗುವುದು. ಸತ್ ಅಂದರೆ ಶಾಶ್ವತವಾಗಿಯೂ, ಚಿತ್ತು ಅಂದರೆ ಜ್ಞಾನಸ್ವರೂಪವಾಗಿಯೂ, ಆನಂದವೆಂದರೆ ಸುಖಸ್ವರೂಪವಾಗಿಯೂ, ಇರುವ ಪ್ರತ್ಯಗ್ಬ್ರಹ್ಮ ಚೈತನ್ಯವು ಓಂಕಾರವಾಗುವುದು

ಇದು ತುರೀಯ ಪಾದಾತ್ಮಕವಾಗಿ ಅರ್ಧಮಾತ್ರೆಯಾಗಿರುವುದರಿಂದ ಅವಿದ್ಯಾವಿದ್ಯಾನಂದ ಪಾದಾತ್ಮಕಗಳಾದ ಅಕಾರ ಉಕಾರ ಮಕಾರಗಳೂ, ಇವುಗಳ ಸಂಮೇಳನರೂಪವಾಗಿ ತುರೀಯ ಪಾದಾತ್ಮಕವಾದ ಸಾಮ್ಯಾವಸ್ಥೆಯೂ, ಅವಿದ್ಯಾರೂಪವಾದ ವಾಚ್ಯಾರ್ಥವಾಗುವುದು. ಆದುದರಿಂದ ಇದನ್ನು ತಿಳಿದು ಶುದ್ಧೋಂಕಾರ ಸ್ವರೂಪನು ನಾನೇ ಎಂಬ ಲಕ್ಷ್ಯಾರ್ಥವನ್ನು ಗ್ರಹಿಸಿ, ಅಂದರೆ.

ಶ್ಲೋ॥ ಅಷ್ಟಾಂಗಂಚ ಚತುಷ್ಪಾದಂ ತ್ರಿಸ್ಥಾನಂ ಪಂಚದೈವತಂ ॥
ಓಮಿತ್ಯೇವಂ ನಜಾನಾತಿ ಬ್ರಾಹ್ಮಣೋನಭವೇತ್ಸಹಿ ॥೧॥
ಪ್ರಥಮಂತಾರಕಂಚೈವ ದ್ವಿತೀಯಂದಂಡಮುಚ್ಯತೇ।
ತೃತೀಯಂಕುಂಡಲಾಕಾರಂ ಚತುರ್ಥಂತ್ವರ್ಧಚಂದ್ರಕಂ॥೨॥
ಪಂಚಮಂ ಬಿಂದುಸಂಯುಕ್ತಂ ಓಮಿತಿ ಜ್ಯೋತಿರೂಪಕಂ॥
ಚತುಷ್ಪಾತ್ಪರಬ್ರಹ್ಮಾ ! ಪಾದೋಸ್ಯವಿಶ್ವಾಭೂತಾನಿ ।
ತ್ರಿಪಾದಸ್ಯಾಮೃತಂದಿವಿ। ಅಸ್ಯೈಕಪಾದೋಅವಿದ್ಯಾಸ್ಯಾತ್. ।
ವಿರವದ್ಯಾತ್ರಿಪಾದಭೂತ್ । ಓಮಿತಿಬ್ರಹ್ಮಾ। ಓಮಿತೀದಗ್ಂ
ಸರ್ವಂ॥

ಎಂಬಿತ್ಯಾದಿ ಶ್ರುತಿವಾಕ್ಯಗಳಿಂದ ಲಕ್ಷ್ಯಾರ್ಥವನ್ನು ತಿಳಿದು, ಬ್ರಹ್ಮಪ್ರಣವ ಲಕ್ಷ್ಯಾರ್ಥವಾದ ಪರಬ್ರಹ್ಮನು ನಾನೇ ಎಂದು ಊಹಿಸಬೇಕು.

ಹೀಗೆ ದೇಹತ್ರಯಾದಿ- ಮುಕ್ತಿತ್ರಯಾತ್ಮಕವಾದ ವರ್ಣತ್ರಯವು ವಾಚ್ಯಾರ್ಥವಾದುದರಿಂದ ಅಕಾರವು ಉಕಾರದಲ್ಲಿಯೂ ಉಕಾರವು ಮಕಾರದಲ್ಲಿಯೂ, ಮಕಾರವು ಓಂಕಾರದಲ್ಲಿಯೂ ಸೇರಿಸಿ, ಆದನ್ನು ಪರಿಪೂರ್ಣವಾಗಿಯೂ, ತುರೀಯವಾಗಿಯೂ, ಅಕ್ಷರವಾಗಿಯೂ ಇರುವ ಶುದ್ಧೋಂಕಾರಮಾತ್ರವಾಗಿ ನೋಡಿಕೊಂಡು ಆ ಸ್ವರೂಪಮಾತ್ರನಾಗಿ ಪ್ರಕಾಶಿಸುತ್ತಿರು.

ಬ್ರಹ್ಮಪ್ರಣವಚಕ್ರವು.

ಅಕಾರ ಉಕಾರ ಮಕಾರ ಅರ್ಧಮಾತ್ರೆಗಳೆಂಬ ನಾಲ್ಕು ವಿಭಾಗಗಳು	ಅವಿದ್ಯಾ ವಿದ್ಯಾನಂದ ತುರೀಯ ಪಾದಗಳೆಂಬ ನಾಲ್ಕು ವಿಭಾಗಗಳು	ಸ್ಥೂಲಾದಿ ದೇಹಚತುಷ್ಟಯವು ನಾಲ್ಕು ವಿಭಾಗ	ಅವಸ್ಥಾ ಚತುಷ್ಟಯವು ನಾಲ್ಕು ವಿಭಾಗಗಳು	ಜೀವ ಚತುಷ್ಟಯವೆಂಬ ವಿಭಾಗಗಳು	ಈಶ್ವರ ಚತುಷ್ಟಯವೆಂಬ ನಾಲ್ಕು ವಿಭಾಗಗಳು	ಜೀವೇಶ್ವರ ಚತುಷ್ಟ, ಶಿವಕ್ಕೆ ಜ್ಞಾನ ಚತುರ್ವಿಭಾಗಗಳು.

ಅಕಾರ - ಅವಿದ್ಯಾಪಾದ - ಸ್ಥೂಲದೇಹ - ಜಾಗ್ರದವಸ್ಥೆ - ವಿಶ್ವನು - ವಿರಾಟ್ಟು - ಓತ - ಇವುಸೇರಿಬ್ರಹ್ಮಪೀಠವು, ಸದ್ಯೋಜಾತಮುಖ - ಪೃಥ್ವೀತತ್ವ - ನಕಾರ - ನಿವೃತ್ತಿಕಳೆ - ತಾರಕ.

ಅಕಾರದಲ್ಲಿ ಅಕಾರವು	ಅಕಾರದಲ್ಲಿ ಉಕಾರ	ಅಕಾರದಲ್ಲಿ ಮಕಾರ	ಅಕಾರದಲ್ಲಿ ಅರ್ಧಮಾತ್ರ
ಅವಿದ್ಯಾ ಪಾದದಲ್ಲಿ ಅವಿದ್ಯಾ ಪಾದವು	ಅವಿದ್ಯಾ ಪಾದದಲ್ಲಿ ವಿದ್ಯಾಪಾದವು	ಅವಿದ್ಯಾ ಪಾದದಲ್ಲಿ ಆನಂದಪಾದವು	ಅವಿದ್ಯಾ ಪಾದದಲ್ಲಿ ತುರೀಯ ಪಾದವು
ಸ್ಥೂಲದೇಹದಲ್ಲಿ ಸ್ಥೂಲದೇಹ	ಸ್ಥೂಲದೇಹದಲ್ಲಿ ಸೂಕ್ಷ್ಮದೇಹ	ಸ್ಥೂಲದೇಹದಲ್ಲಿ ಕಾರಣದೇಹ	ಸ್ಥೂಲದೇಹದಲ್ಲಿ ಮಹಾಕಾರಣ ದೇಹವು

ಜಾಗ್ರದವಸ್ಥೆಯಲ್ಲಿ ಜಾಗ್ರತೆ	ಜಾಗ್ರತೆಯಲ್ಲಿ ಸ್ವಪ್ನ	ಜಾಗ್ರತೆಯಲ್ಲಿ ಸುಷುಪ್ತಿ	ಜಾಗ್ರತೆಯಲ್ಲಿ ತುರೀಯವು
ವಿಶ್ವನಲ್ಲಿ ವಿಶ್ವನು	ವಿಶ್ವನಲ್ಲಿ ತೈಜಸನು	ವಿಶ್ವನಲ್ಲಿ ಪ್ರಾಜ್ಞನು	ವಿಶ್ವನಲ್ಲಿ ಪ್ರತ್ಯಗಾತ್ಮನು
ವಿರಾಟ್ಟನಲ್ಲಿ ವಿರಾಟ್ಟು	ವಿರಾಟ್ಟನಲ್ಲಿ ಹಿರಣ್ಯ ಗರ್ಭನು	ವಿರಾಟ್ಟನಲ್ಲಿ ಅವ್ಯಾಕೃತನು	ವಿರಾಟನಲ್ಲಿ ಪರಮಾತ್ಮನು
ಓತದಲ್ಲಿ ಓತ	ಓತದಲ್ಲಿ ಅನುಜ್ಞಾತ	ಓತದಲ್ಲಿ ಅನುಜ್ಞೈಕರಸನು	ಓತದಲ್ಲಿ ಅವಿಕಲ್ಪನು

ಉಕಾರ - ವಿದ್ಯಾಪಾದ - ಸೂಕ್ಷ್ಮದೇಹ - ಸ್ವಪ್ನಾವಸ್ಥೆ - ತೈಜಸ - ಹಿರಣ್ಯಗರ್ಭ - ಅನುಜ್ಞಾತ ಇವೆಲ್ಲಾ ಸೇರಿ ವಿಷ್ಣುಪೀಠ ವಾಮದೇವಮುಖ - ಜಲತತ್ವ - ಮಕಾರ - ಪ್ರತಿಷ್ಠಾಕಳೆ - ದಂತ.

ಉಕಾರದಲ್ಲಿ ಅಕಾರ	ಉಕಾರದಲ್ಲಿ ಉಕಾರ	ಉಕಾರದಲ್ಲಿ ಮಕಾರ	ಉಕಾರದಲ್ಲಿ ಅರ್ಧಮಾತ್ರ
ವಿದ್ಯಾಪಾದದಲ್ಲಿ ಅವಿದ್ಯಾಪಾದ	ವಿದ್ಯಾಪಾದದಲ್ಲಿ ವಿದ್ಯಾಪಾದ	ವಿದ್ಯಾಪಾದದಲ್ಲಿ ಆನಂದಪಾದ	ವಿದ್ಯಾಪಾದದಲ್ಲಿ ತುರೀಯಪಾದ
ಸೂಕ್ಷ್ಮದೇಹದಲ್ಲಿ ಸ್ಥೂಲದೇಹ	ಸೂಕ್ಷ್ಮದೇಹದಲ್ಲಿ ಸೂಕ್ಷ್ಮದೇಹವು	ಸೂಕ್ಷ್ಮದೇಹದಲ್ಲಿ ಕಾರಣದೇಹ	ಸೂಕ್ಷ್ಮದಲ್ಲಿ ಮಹಾಕಾರಣದೇಹ

ಸ್ವಪ್ನದಲ್ಲಿ ಜಾಗ್ರತೆ	ಸ್ವಪ್ನದಲ್ಲಿ ಸ್ವಪ್ನ	ಸ್ವಪ್ನದಲ್ಲಿ ಸುಷುಪ್ತಿ	ಸ್ವಪ್ನದಲ್ಲಿ ತುರೀಯ
ತೈಜಸನಲ್ಲಿ ವಿಶ್ವನು	ತೈಜಸನಲ್ಲಿ ತೈಜಸನು	ತೈಜವನಲ್ಲಿ ಪ್ರಾಜ್ಞನು	ತೈಜಸನಲ್ಲಿ ಪ್ರತ್ಯಗಾತ್ಮನು
ಹಿರಣ್ಯಗರ್ಭನಲ್ಲಿ ವಿರಾಟ್ಟು	ಹಿರಣ್ಯಗರ್ಭನಲ್ಲಿ ಹಿರಣ್ಯಗರ್ಭ	ಹಿರಣ್ಯಗರ್ಭನಲ್ಲಿ ಅವ್ಯಾಕೃತ	ಹಿರಣ್ಯಗರ್ಭನಲ್ಲಿ ಪರಮಾತ್ಮ
ಅನುಜ್ಞಾತವಲ್ಲಿ ಓತ	ಅನುಜ್ಞಾತನಲ್ಲಿ ಅನುಜ್ಞಾತ	ಅನುಜ್ಞಾತನಲ್ಲಿ ಅನುಜ್ಞೈಕರಸನು	ಅನುಜ್ಞಾತನಲ್ಲಿ ಅವಿಕಲ್ಪ
ಮಕಾರವು - ಆನಂದಪಾದವು - ಕಾರಣದೇಹವು - ಸುಷುಪ್ತಿ ಅವಸ್ಥೆ - ಪ್ರಾಜ್ಞನು - ಅವ್ಯಾಕೃತನು ಅನುಜ್ಞೈಕರಸನು - ಇವುಸೇರಿರುವರುದ್ರಪೀಠ - ಅಘೋರಮುಖ - ಅಗ್ನಿತತ್ವ - ಶಿಕಾರ - ವಿದ್ಯಾಕಳೆ - ಕುಂಡಲಾಕೃತಿ.			
ಮಕಾರದಲ್ಲಿ ಅಕಾರ	ಮಕಾರದಲ್ಲಿ ಉಕಾರ	ಮಕಾರದಲ್ಲಿ ಮಕಾರ	ಮಕಾರದಲ್ಲಿ ಅರ್ಧಮಾತ್ರ
ಆನಂದಪಾದದಲ್ಲಿ ಅವಿದ್ಯಾಪಾದ	ಆನಂದಪಾದದಲ್ಲಿ ವಿದ್ಯಾಪಾದ	ಆನಂದಪಾದದಲ್ಲಿ ಆನಂದಪಾದ	ಆನಂದಪಾದದಲ್ಲಿ ತುರೀಯಪಾದ
ಕಾರಣದೇಹದಲ್ಲಿ ಸೂಲದೇಹ.	ಕಾರಣದೇಹದಲ್ಲಿ ಸೂಕ್ಷ್ಮದೇಹ	ಕಾರಣದೇಹದಲ್ಲಿ ಕಾರಣದೇಹ	ಕಾರಣದೇಹದಲ್ಲಿ ಮಹಾಕಾರಣ ದೇಹ

ಸುಷುಪ್ತಿಯಲ್ಲಿ ಜಾಗ್ರತೆ	ಸುಷುಪ್ತಿಯಲ್ಲಿ ಸ್ವಪ್ನ	ಸುಷುಪ್ತಿಯಲ್ಲಿ ಸುಷುಪ್ತಿ	ಸುಷುಪ್ತಿಯಲ್ಲಿ ತುರೀಯ
ಪ್ರಾಜ್ಞನಲ್ಲಿ ವಿಶ್ವನು	ಪ್ರಾಜ್ಞನಲ್ಲಿ ತೈಜಸನು	ಪ್ರಾಜ್ಞನಲ್ಲಿ ಪ್ರಾಜ್ಞನು	ಪ್ರಾಜ್ಞನಲ್ಲಿ ಕೂಟಸ್ಥನು
ಅವ್ಯಾಕೃತನಲ್ಲಿ ವಿರಾಟ್ಟು	ಅವ್ಯಾಕೃತನಲ್ಲಿ ಹಿರಣ್ಯಗರ್ಭ	ಅವ್ಯಾಕೃತನಲ್ಲಿ ಅವ್ಯಾಕೃತ	ಅವ್ಯಾಕೃತನಲ್ಲಿ ಪರಮಾತ್ಮನು
ಅನುಜ್ಞೈಕರಸನಲ್ಲಿ ಓತನು	ಅನುಜ್ಞೈಕರಸನಲ್ಲಿ ಅನುಜ್ಞೈಕ	ಅನುಜ್ಞೈಕರಸನಲ್ಲಿ ಅನುಜ್ಞೈಕರಸನು	ಅನುಜ್ಞೈಕರಸನಲ್ಲಿ ಅವಿಕಲ್ಪನು
ಅರ್ಧಮಾತ್ರ - ತುರೀಯಪಾದ - ಮಹಾಕಾರಣದೇಹ - ತುರೀಯಾವಸ್ಥೆ - ಕೂಟಸ್ಥನು - ಪರಮಾತ್ಮನು - ಅವಿಕಲ್ಪನು ಎಲ್ಲಾ ಸೇರಿ ಮಹೇಶ್ವರಪೀಠ - ತತ್ಪುರುಷಮುಖ - ವಾಯುತತ್ವ - ಮಕಾರ - ಶಾಂತಿಕಳೆ - ಅರ್ಧಚಂದ್ರ.			
ಅರ್ಧಮಾತ್ರದಲ್ಲಿ ಅಕಾರ	ಅರ್ಧಮಾತ್ರದಲ್ಲಿ ಉಕಾರ	ಅರ್ಧಮಾತ್ರದಲ್ಲಿ ಮಕಾರ	ಅರ್ಧಮಾತ್ರದಲ್ಲಿ ಅರ್ಧಮಾತ್ರ
ತುರೀಯಪಾದದಲ್ಲಿ ಅವಿದ್ಯಾಪಾದ	ತುರೀಯಪಾದದಲ್ಲಿ ವಿದ್ಯಾಪಾದ	ತುರೀಯಪಾದದಲ್ಲಿ ಆನಂದಪಾದ	ತುರೀಯಪಾದದಲ್ಲಿ ತುರೀಯಪಾದ
ಮಹಾಕಾರಣದೇಹದಲ್ಲಿ ಸ್ಥೂಲ ದೇಹ	ಮಹಾಕಾರಣದೇಹದಲ್ಲಿ ಸೂಕ್ಷ್ಮ ದೇಹ	ಮಹಾಕಾರಣದೇಹದಲ್ಲಿ ಕಾರಣ ಶರೀರ	ಮಹಾಕಾರಣಶರೀರದಲ್ಲಿ ಮಹಾ ಕಾರಣಶರೀರ

ತುರೀಯದಲ್ಲಿ ಜಾಗ್ರತೆ	ತುರೀಯದಲ್ಲಿ ಸ್ವಪ್ನ	ತುರೀಯದಲ್ಲಿ ಸುಷುಪ್ತಿ	ತುರೀಯದಲ್ಲಿ ತುರೀಯ
ಕೂಟಸನಲ್ಲಿ ವಿಶ್ವನು	ಕೂಟಸ್ಥನಲ್ಲಿ ತೈಜಸನು	ಕೂಟಸ್ಥನಲ್ಲಿ ಪ್ರಾಜ್ಞನು	ಕೂಟಸ್ಥನಲ್ಲಿ ಕೂಟಸ್ಥನು
ಪರಮಾತ್ಮನಲ್ಲಿ ವಿರಾಟ್ಟು	ಪರಮಾತ್ಮನಲ್ಲಿ ಹಿರಣ್ಯಗರ್ಭ	ಪರಮಾತ್ಮನಲ್ಲಿ ಅವ್ಯಾಕೃತ	ಪರಮಾತ್ಮನಲ್ಲಿ ಪರಮಾತ್ಮನು
ಅವಿಕಲ್ಪನಲ್ಲಿ ಓತ	ಅವಿಕಲ್ಪನಲ್ಲಿ ಅನುಜ್ಞಾತ	ಅವಿಕಲ್ಪನಲ್ಲಿ ಅನುಜ್ಞೈಕರಸನು	ಅವಿಕಲ್ಪನಲ್ಲಿ ಅವಿಕಲ್ಪನು

ಮೇಲೆಹೇಳಿದುವೆಲ್ಲಾ ಸೇರಿ ಸದಾಶಿವಪ್ರೀತ-ಈಶಾನಮುಖ-ಆಕಾಶತತ್ವ-ಯುಕಾರವು-ಶಾಂತ್ಯತೀತಕಳೆ-ಬಿಂದುರೂಪ-ಶಕ್ತಿತತ್ವಗಳು.

ಇದು ಶಿವತತ್ವವು. ಶಿವತತ್ವವನ್ನೂ ಮೀರಿದುದೇ ನಿರ್ಗುಣ ಪರಬ್ರಹ್ಮವು, ಅದು ನಿಷ್ಕಳವು, ನಿರೀಹವು, ನಿಷ್ಪ್ರಪಂಚವು, ನಿರ್ಮಲವು, ನಿರಂಜನವು, ನಿರ್ವಿಕಾರವು, ನಿರಾಲಂಬವು, ನಿರ್ಮುಕ್ತವು, ನಿತ್ಯವು, ಬುದ್ಧವು, ಕೇವಲವು, ಅಖಂಡವು, ಅಪ್ರಮೇಯವು. ಅದ್ವಿತೀಯವು, ಆದ್ಯಂತವಿಹೀನವು, ಪರಾತ್ಪರವು, ಅಪರೋಕ್ಷವು, ಸ್ವಯಂಜ್ಯೋತಿಯು, ಸರ್ವವ್ಯಾಪಕವು, ನಿರತಿಶಯಾನಂದವು.

—ಓಂ—

ಈ ಪ್ರಕಾರವಾಗಿ ಶ್ರೀರಾಮನು ಬೋಧಿಸಿದ್ದನ್ನು ಕೇಳಿ ಅಂಜನೇಯನು ಆ ಆತ್ಮಾರಾಮನನ್ನು ನೋಡಿ 'ಸ್ವಾಮಿ! ವಾಚ್ಯಾರ್ಥವನ್ನು ಏಕಕಾಲದಲ್ಲಿಯೇ ಬಿಟ್ಟಮಾತ್ರದಿಂದ ಲಕ್ಷ್ಯಾರ್ಥವಾದ ಸತ್ಯ ಪರಬ್ರಹ್ಮವನ್ನು ನೋಡಲಿಕ್ಕೆ ಏನಾದರೂ ಉಪಾಯವಿದೆಯೇ? ಅದನ್ನು ಅನುಗ್ರಹಿಸಿ ಹೇಳಬೇಕು.' ಎಂದು ಕೈಮುಗಿದು ಬೇಡಿಕೊಂಡನು. ಆಗ ಶ್ರೀರಾಮನು ಭಕ್ತನಾದ ಆಂಜನೇಯನಿಗೆ ಇಂತೆಂದನು:— 'ಅಯ್ಯಾ! ಕೇಳು. ಅನ್ನದಿಂದ ಹುಟ್ಟಿದ ರೇತಸ್ಸಿನಿಂದ ಹುಟ್ಟಿದ್ದಾಗಿಯೂ ಅನ್ನದಿಂದಲೇ ವೃದ್ಧಿಯಾಗುತ್ತಿರುವುದಾಗಿಯೂ ಇರುವ ಶರೀರವು ಅನ್ನಮಯ ಕೋಶವೆನಿಸುವುದು. ಪ್ರಾಣಿಗಳ ಕರ್ಮೇಂದ್ರಿಯಗಳೈದರಿಂದ ಕೂಡಿ ಪ್ರಾಣಮಯಕೋಶವಾಗುವುದೂ. ನೇತ್ರಾದಿಜ್ಞಾನೇಂದ್ರಿಯಗಳಿಂದ ಕೂಡಿದ ಮನಸ್ಸೂ ಚಿತ್ತವೂ ಕೂಡಿ ಮನೋಮಯ ಕೋಶವೆನಿಸುವುದು. ಶಬ್ದ ಮೊದಲಾದ ವಿಷಯಾದಿಗಳೈದರಿಂದ ಕೂಡಿದ ಬುದ್ಧಿಯು ವಿಜ್ಞಾನಮಯ ಕೋಶವೆನಿಸುವುದು. ಮೋಹದಿಂದ ಹುಟ್ಟಿದ ಸಂತೋಷ ಇಷ್ಟದರ್ಶನದಿಂದ ಹುಟ್ಟಿದ ಸಂತೋಷ, ಲಭಿಸಿದ ವಸ್ತುವನ್ನು ಅನುಭವಿಸುವುದರಿಂದ ಉಂಟಾಗುವ ಸಂತೋಷ, ಈ ಮೂರು ವೃತ್ತಗಳಿಂದ ಕೂಡಿದ ಅಜ್ಞಾನಾಂಧಕಾರವು ಆನಂದಮಯಕೋಶವೆನಿಸುವುದು. ಇವುಗಳಲ್ಲಿ ಅನ್ನಮಯಕೋಶವೇ ಪರಬ್ರಹ್ಮವೆಂದು ಕೆಲವರು ಹೇಳುವರು ಮನೋಮಯಕೋಶವೇ ಸಚ್ಚಿದಾನಂದ ಸ್ವರೂಪವೆಂದು ಕೆಲವರು ಹೇಳುವರು. ಮತ್ತೆ ಕೆಲವರು ವಿಜ್ಞಾನಮಯಕೋಶವೇ ಆತ್ಮನೆಂತಲೂ, ಕೆಲವರು ಆನಂದಮಯಕೋಶವೇ ಆತ್ಮನೆಂತಲೂ, ಹೇಳುವರು. ಇವೆಲ್ಲವೂ ಬುದ್ಧಿಯಿಲ್ಲದ ಅಜ್ಞರ ಮಾತುಗಳು. ಪರಬ್ರಹ್ಮನು ಸರ್ವವಸ್ತುಗಳಲ್ಲಿಯೂ ತುಂಬಿರುವ ಸ್ವರೂಪವುಳ್ಳವನೆಂದು ತಿಳಿದುಕೊಳ್ಳಲು ಜ್ಞಾನವಿಲ್ಲದುದ

ರಿಂದ ಆತನು ಪರಮಾಣುವೆಂತಲೂ ಮಧ್ಯಮ ಪರಿಮಾಣನೆಂತಲೂ, ವಿಭುವೆಂತಲೂ, ಪರನೆಂತಲೂ ವಾದಿಸುವರು. ಮೋಹಾಂಧರಾದ ಇವರಿಗೆ ಸಚ್ಚಿತ್ಸುಖಮಯನಾಗಿಯೂ ಭಾವಾತೀತನಾಗಿಯೂ ಅದ್ವಯಾತ್ಮನಾಗಿಯೂ ಇರುವ ಪರತತ್ವವನ್ನು ತಿಳಿದುಕೊಳ್ಳಲಿಕ್ಕೆ ಶಕ್ತಿಯಿಲ್ಲ. ಒಂದು ಗಡಿಗೆಯನ್ನು ನೋಡುವವನು ತಾನು ಗಡಿಗೆಯಲ್ಲದೆ ಪ್ರತ್ಯೇಕವಾಗಿರುವ ಹಾಗೆ ದೃಢವಾದ ಶರೀರಕ್ಕೆ ಸಾಕ್ಷಿಯಾಗಿಯೂ ಶ್ರೇಷ್ಠನಾಗಿಯೂ ಆನಂದರೂಪನಾಗಿಯೂ ಇರುವ ಪರಮಾತ್ಮನು ನಾಮರೂಪಾದಿಗಳಿಲ್ಲದವನಾಗಿ ಇದ್ದರೂ ಕಾರ್ಯೋಪಾಧಿಯಾದ ಅವಿದ್ಯೆಯಿಂದ ಕಲ್ಪಿತವಾಗಿ ಪ್ರತ್ಯೇಕವೆಂದು ತಿಳಿಯುವನು. ದೃಶ್ಯವಾದ ದಶೇಂದ್ರಿಯಗಳನ್ನು ಪಂಚಪ್ರಾಣಗಳನ್ನು ಚಿತ್ತಮನೋಬುದ್ಧ್ಯಹಂಕಾರಗಳನ್ನು ನೋಡುತ್ತ ಪರಬ್ರಹ್ಮ ಸ್ವರೂಪನಾಗಿ ಒಪ್ಪುವ ನಾನು ಆ ಶರೀರಾದಿಗಳಾಗಿ ಎಂದಿಗೂ ಆಗಲಾರೆನು. ಅವುಗಳ ಉತ್ಪತ್ತಿ ಲಯಗಳು ನನಗಿಲ್ಲ. ಆದರೂ ಮನುಷ್ಯನು 'ಇದು ನನ್ನ ಮನೆ, ಇದು ನನ್ನ ಹಣ, ಇವಳು ನನ್ನ ಹೆಂಡತಿ,' ಎಂದು ಅವುಗಳಿಗೆ ವಿಲಕ್ಷಣಸಾಕ್ಷಿಯಾಗಿ ಇರುವಂತೆ 'ಇದು ನನ್ನ ಶರೀರ, ಇವು ನನ್ನ ಪ್ರಾಣಗಳು, ಇವು ನನ್ನ ಇಂದ್ರಿಯಗಳು,' ಎಂದು ಮುಂದಾಗಿ ಕಾಣಬರುತ್ತಿರುವ ಆಕಾರಗಳನ್ನೆಲ್ಲ ನನ್ನವುಗಳೆಂದು ತಿಳಿದುಕೊಳ್ಳುವನು. ನಿಶ್ಚಯವಾಗಿ ಅವುಗಳನ್ನೂ ಮಾಡಿಸುತ್ತಿರುವ ವಿಲಕ್ಷಣಸಾಕ್ಷಿಯು ನಾನು ಆಗುವೆನೇ ಹೊರತು ಆ ವಸ್ತುಗಳಲ್ಲಿ ಒಂದೂ ನಾನಲ್ಲ. ಬುದ್ಧಿ ಅಹಂಕಾರಗಳೆಂಬ ಸೇರಿಕೆಗಳಿಂದ ನಾನು ನಾನೆಂಬುವೆನೇ ನಾನಾಗಿರುವೆನು. ಕಿವಿಗಳಿಂದ ಶಬ್ದಗಳನ್ನೇರ್ಪಡಿಸಿ ತಿಳಿದುಕೊಳ್ಳುವ ಜ್ಞಾನವೇ ನಾನು. ಸ್ಪರ್ಶೇಂದ್ರಿಯಗಳಿಂದ ಮೃದುಕಠಿನಾದಿ ಭೇದಗಳನ್ನೇರ್ಪಡಿಸಿ ತಿಳಿದುಕೊಳ್ಳುವ ಜ್ಞಾನವೂ ನಾನೇ. ನೇತ್ರೇಂದ್ರಿಯಗಳಿಂದ ರೂಪಗಳನ್ನೇರ್ಪಡಿಸಿ ತಿಳಿದುಕೊಳ್ಳುವ ಜ್ಞಾನವೂ ನಾನೇ. ನಾಲಿಗೆಯಿಂದ ಎಲ್ಲ ರಸಗಳನ್ನೂ ಏರ್ಪಡಿಸಿ ಅವುಗಳನ್ನು ತಿಳಿಯುವವನೂ ನಾನೇ. ಮೂಗಿನಿಂದ ಸರ್ವ ಗಂಧಗಳನ್ನೂ ಏರ್ಪಡಿಸಿ ತಿಳಿದುಕೊಳ್ಳುವ ವ್ಯಕ್ತಿಯೂ ನಾನೇ. ಮನಸ್ಸಿನಿಂದ ಸಂಕಲ್ಪಗಳನ್ನೆಲ್ಲ ಏರ್ಪಡಿಸಿ ತಿಳಿಯುವ ಜ್ಞಾನವೂ ನಾನೇ. ಮಾತುಗಳೂ ದಾನಾದಾನಗಳೂ ಗಮನಾಗಮನಗಳೂ ಮುಂತಾದುವುಗಳನ್ನು ತಿಳಿದುಕೊಳ್ಳುವ ಜ್ಞಾನವೂ ನಾನೇ ನಾನು ಸ್ಥೂಲ ಸೂಕ್ಷ್ಮಗಳಲ್ಲಿ ಕಾರಣಗಳೆಂಬ ದೇಹಗ ವಾಸಮಾಡಿಕೊಂಡು

ಸರ್ವೇಂದ್ರಿಯ ವ್ಯಾಪಾರಗಳನ್ನೂ ಬೇಗಬೇಗ ಮಾಡಿಸುತ್ತ ಅವುಗಳಲ್ಲಿ ಒಂದನ್ನೂ ಮುಟ್ಟದೆ ಸರ್ವದಲ್ಲಿಯೂ ಪ್ರಕಾಶಿಸುವ ಬ್ರಹ್ಮನಾಗಿದ್ದೇನೆ. ನಾನು ಸಂಪೂರ್ಣನು; ನಾಶವಿಲ್ಲದವನು; ನಿತ್ಯನು; ಜ್ಯೋತಿರ್ಮಯ ನಾಗಿ ಸೂರ್ಯ ಚಂದ್ರಾಗ್ನಿಗಳನ್ನು ಬೆಳಗಿಸುತ್ತಾ ಎಲ್ಲದರಲ್ಲಿಯೂ ಏಕ ರೂಪನಾಗಿ ಪ್ರಕಾಶಿಸುತ್ತಿರುವೆನು. ನನಗೆ ಶರೀರೋಪಾಧಿಗಳ ಹೆಸರು ಗಳಾಗಲಿ ರೂಪಗಳಾಗಲಿ ಇಲ್ಲ. ಸರ್ವವ್ಯಾಪಿಯಾದ ನಾನು ಜ್ಞಾನಸ್ವ ರೂಪನಾಗಿ ಎಲ್ಲವನ್ನೂ ನೋಡುತ್ತಿರುವೆನು. ನಾನು ಶರೀರವೂ ಅಲ್ಲ; ಇಂದ್ರಿಯಗಳೂ ಅಲ್ಲ; ಪ್ರಾಣಗಳೂ ಅಲ್ಲ; ಮನಸ್ಸೂ ಅಲ್ಲ; ಚಿತ್ತವೂ ಅಲ್ಲ; ಅಹಂಕಾರವೂ ಅಲ್ಲ: ಶೂನ್ಯವೂ ಅಲ್ಲ; ಬುದ್ಧಿಯೂ ಅಲ್ಲ; ದೀರ್ಘ ವೂ ಅಲ್ಲ; ಹ್ರಸ್ವವೂ ಅಲ್ಲ; ಸೂಕ್ಷ್ಮವೂ ಅಲ್ಲ; ಸ್ಥೂಲವೂ ಅಲ್ಲ; ಕೃಷ್ಣ ರಕ್ತಶ್ವೇತ ಪೀತವರ್ಣಗಳೂ ಪಂಚಭೂತಗಳೂ ನಾನಲ್ಲ. ಆದರೆ ಇವು ಗಳನ್ನು ನೋಡುವವನೂ ಮಾಡಿಸುವವನೂ ನಾನೇ, ಆದರೂ ಪ್ರಕೃತಿ ವಿಕಾರಗಳೊಂದೂ ನನ್ನನ್ನು ಅಂಟುವುದಿಲ್ಲ. ದೀಪವು ಘಟಾದಿಪದಾರ್ಥ ಗಳನ್ನು ಪ್ರಕಾಶಗೊಳಿಸುತ್ತಾ ತಾನೂ ಪ್ರಕಾಶಿಸುವ ಹಾಗೆ ನಾನು ಸಮ ಸ್ತವನ್ನೂ ನೋಡುತ್ತಾ ಇದ್ದರೂ ನಿರ್ವಿಕಾರವಾಗಿ ಪ್ರಕಾಶಿಸುತ್ತಿರುವೆನು.

ಜನರು ಸೂರ್ಯನ ತೇಜಸ್ಸನ್ನು ಹೊಂದಿ ತಮ್ಮ ಸ್ವಭಾವಕರ್ಮಗ ಳಲ್ಲಿ ಪ್ರವರ್ತಿಸುತ್ತಿರುವಂತೆ ನನ್ನ ಪ್ರಕಾಶವನ್ನು ಹೊಂದಿ ಬುದ್ಧಿ, ಮನಸ್ಸು, ಇಂದ್ರಿಯಗಳು ತಮ್ಮ ತಮ್ಮ ಕಾರ್ಯಗಳನ್ನು ಅಭಿಮಾನ ಪೂರ್ವಕಮಾಡಿಕೊಂಡಿರುವುವು. ಜ್ಞಾನಾಜ್ಞಾನಗಳನ್ನು ತಿಳಿದುಕೊಳ್ಳುವವನೂ ನಾನೇ. ವಿಧಿನಿಷೇಧಗಳನ್ನು ತಿಳಿದುಕೊಳ್ಳುವವನೂ ನಾನೇ, ನಾನು, ನಾನು, ಎಂದುವಿವರಿಸುವ ಪ್ರೇರೇಪಕನೂ ನಾನೇ. ಜ್ಞಾನಾನಂದಮಯನಾದ ನನ್ನ ನ್ನುಗುಣಶಾಲಿಯಾದವನು ತಿಳಿಯುವನೇ ಹೊರತು ಮೂರ್ಖನೆಂದಿಗೂ ತಿಳಿ ಯಲಾರನು. ನಾನೆಂದರೆ ಶರೀರಕ್ಕೂ ಅಭಿಮಾನಕ್ಕೂ ಅರ್ಥವಾಗುವುದು. ಇದು ಪ್ರಮಾದವು. ಕೇವಲ ಆತ್ಮಸ್ವರೂಪನಾದ ನಾನು ಶರೀರಕ್ಕೂ ಅಹಂಕಾರಕ್ಕೂ ಬೇರೆಯಾಗಿದ್ದೇನೆ. 'ಬ್ರಹ್ಮೈವಾಹಮಸ್ಮಿ' ಎಂದರೆ ಸತ್ಯಜ್ಞಾನಾನಂದಸ್ವರೂಪನಾದ ಪರಮಾತ್ಮನು ನಾನೇ, ಎಂದು ತಿಳಿ. ಮನಸ್ಸು ಯಾವ ಕೆಲಸಮಾಡಿದರೂ ನಾನೇ ಅದನ್ನು ಮಾಡಿದೆನೆಂದು ಮ ನಸ್ಸಿನಲ್ಲಿ ತೋರುತ್ತಿರುವುದು. ಶಾಶ್ವತವಾಗಿಯೂ ಪ್ರಕಾಶಮಾನವಾ ಗಿಯೂ ಆತ್ಮಸ್ವರೂಪವಾಗಿಯೂ ಇರುವ ನಮಗೆ ಹೀಗೆ ತೋರುವುದು

ಕಲ್ಪಿತವೇ ಹೊರತು ನಿಜವಲ್ಲ. ಮನಸ್ಸಿನಲ್ಲಿ ಯಾವಾಗಲೂ ಪ್ರಕಾಶಿಸುತ್ತಿರುವ ಪರಬ್ರಹ್ಮನ ತೇಜಸ್ಸೇ ನಾನೆಂದು ನಿಜವಾಗಿನಂಬು. ಹುಟ್ಟುಸಾವುಗಳೂ ರೂಪವರ್ಣಗಳೂ ಕರ್ತೃಭರ್ತೃಗಳೂ ನನಗೆ ಬಂದುದೇ ಇಲ್ಲ. ಈ ಪ್ರಪಂಚವೇ ಶೂನ್ಯವೆಂದು ಭಾವಿಸಿದರೆ ವಿರಕ್ತಿಯುಂಟಾಗುವುದು. ವಿಷಯೇಚ್ಛೆಗಳೆಲ್ಲ ಓಡಿಹೋಗುವುವು. ಅಭಿಮಾನವು ಹಾಳಾಗುವುದು. ನಾನು ನಾನೆಂಬ ಬುದ್ಧಿಯನ್ನು ಜ್ಞಾನದಿಂದ ವಿಚಾರಿಸಿದರೆ ನಾನು ಪರಬ್ರಹ್ಮನಿಗಿಂತ ಬೇರೆಯಲ್ಲವೆಂಬ ಪರತತ್ವವೇ ನಿಶ್ಚಿತವಾಗುವುದು. ಅನುಭವ ಜ್ಞಾನದೃಷ್ಟಿಯಿಂದ ಪರಿಶೀಲನೆ ಮಾಡಿನೋಡಿದರೆ ಅಜ್ಞಾನದಿಂದಲೇ ಇವೆಲ್ಲ ಹುಟ್ಟಿತೆಂದು ತಿಳಿಯುವುದು. ಪ್ರಕೃತಿಯನ್ನು ಲಯಗೊಳಿಸಿ ಪ್ರಜ್ಞಾನದಿಂದ ಅತಿಶಯಿಸಿ ನಾನೇ ಪರಬ್ರಹ್ಮನೆಂದು ಭಾವಿಸಿದರೆ ಸಮೀಪದಲ್ಲಿಯೇ ಮುಕ್ತಿಪದವನ್ನು ಹೊಂದುವನು. ಶಬ್ದಾದಿವಿಷಯಗಳೂ ಶ್ರವಣಾದಿ ಇಂದ್ರಿಯಗಳೂ ಮನೋಬುದ್ಧ್ಯಹಂಕಾರಗಳೂ ದೃಶ್ಯಗಳು, ಇವುಗಳಿಗೆ ಕೇವಲ ಆತ್ಮನಾದ ನಾನೇ ಅಧಿಷ್ಠಾನನು. ಬ್ರಹ್ಮಾದಿ ಪಿಪೀಲಿಕಾಂತವಾದ ಪ್ರಪಂಚವೆಲ್ಲವೂ ಪರಬ್ರಹ್ಮಸ್ವರೂಪನಾದ ನನಗೆ ಅಭಿನ್ನವಾಗಿವೆ. ನೋಡುವವನೂ ನಾನೇ, ನೋಟವೂ ನಾನೇ. ಮೂರು ಜೀವಗಳೂ ಮೂರು ದೇಹಗಳೂ, ಮೂರು ಅವಸ್ಥೆಗಳೂ, ಇವುಗಳಿಗೆ ಅತಿರಿಕ್ತನಾಗಿ ಇವುಗಳ ಭಾವಾಭಾವಗಳನ್ನು ಬಲ್ಲ ಚಿನ್ಮಯಾತ್ಮಕವಾದ ನಾನೇ ಪರಮಾತ್ಮನೆಂದು ಭಾವಿಸು.

ಕ್ಷರಾಕ್ಷರ ವಿಚಾರ.

ಪೃಥ್ವ್ಯಾದಿ ಪಂಚಭೂತಗಳೂ ಬುದ್ಧಿಯೂ ಅಹಂಕಾರವೂ ಮೂಲಪ್ರಕೃತಿಯೂ ಜ್ಞಾನೇಂದ್ರಿಯಗಳೈದೂ ಕರ್ಮೇಂದ್ರಿಯಗಳೈದೂ ಇವಕ್ಕೆ ಅಧಿಷ್ಠಾನವಾದ ಮನಸ್ಸೂ ಶಬ್ದಾದಿಪಂಚವಿಷಯಗಳೂ ಮನೋವೃತ್ತಿಯೂ ಕೋರಿಕೆಯೂ ದ್ವೇಷವೂ ಸುಖದುಃಖಗಳೂ ದೇಹೇಂದ್ರಿಯಾದಿ ಸಂಘಾತಗಳೂ ಧೈರ್ಯವೂ ಇವು ಕ್ಷರವೆಂತಲೂ ಕ್ಷೇತ್ರವೆಂತಲೂ ಹೇಳಲ್ಪಡುವುವು. ಈ ಮೂಲಪ್ರಕೃತಿಯೊಂದಿಗೆ ಸೇರಿ ವರ್ತಿಸುವ ಜೀವನೇ ಅಕ್ಷರನೆಂತಲೂ ಕ್ಷೇತ್ರಜ್ಞನೆಂತಲೂ ಹೇಳಲ್ಪಡುವನು. ಅಕ್ಷರನು ಅಜ್ಞಾನದಿಂದ ಕ್ಷರವೆಂಬ ಈ ದೇಹವನ್ನು ನಾನೇ ಎಂದು ತಿಳಿಯುವಹಾಗೆ ಅನುಭವ ಜ್ಞಾನದಿಂದ ಆ ಅಕ್ಷರಪುರುಷನನ್ನು ಸತ್ಯವಾಗಿ ಇಲ್ಲದೆ ಹೋಗುವುದರಿಂದ ನಾನೇ ಎಂದು ತಿಳಿದುಕೊಳ್ಳುವನು. ಪರಮಾತ್ಮನಾದ

ನನಗೂ ಪ್ರತ್ಯಗಾತ್ಮನಿಗೂ ವಿಜ್ಞಾನದೃಷ್ಟಿಯಿಂದ ನಿಧಾನಿಸಿ ನೋಡಿದರೆ ಸ್ವಲ್ಪವೂ ಭೇದವಿಲ್ಲ. ಈ ಪ್ರಕಾರವಾಗಿ ಪೃಥ್ವಿ, ಅಪ್ಪು, ತೇಜಸ್ಸು ವಾಯು, ಆಕಾಶಗಳೂ, ಮನಸ್ಸು, ಬುದ್ಧಿ ಅಹಂಕಾರ ಮತ್ತು ಇವುಗಳಿಗೆ ಕಾರಣವಾದ ಅವ್ಯಕ್ತವೂ ನೇತ್ರಾದಿ ದಶೇಂದ್ರಿಯಗಳೂ ಶಬ್ದಾದಿ ಪಂಚವಿಷಯಗಳೂ ಕೂಡಿ ಇಪ್ಪತ್ತುನಾಲ್ಕು ತತ್ವಗಳಾಗುವುವು. ಕೆಲವರು ವಾಕ್‌ಮೊದಲಾದ ಐದು ಕರ್ಮೇಂದ್ರಿಯಗಳನ್ನೂ ಕಿವಿ,ಮೊದಲಾದ ಐದು ಜ್ಞಾನೇಂದ್ರಿಯಗಳನ್ನು ಶಬ್ದ ಸ್ಪರ್ಶರೂಪ ರಸಗಂಧಗಳೆಂಬ ಐದು ವಿಷಯಗಳನ್ನೂ ಪ್ರಾಣ ಅಪಾನ ಸಮಾನ ಉದಾನ ವ್ಯಾನಗಳೆಂಬ ಪಂಚಪ್ರಾಣಗಳನ್ನೂ, ಮನಸ್ಸು, ಬುದ್ಧಿ, ಚಿತ್ತ ಅಹಂಕಾರಗಳೆಂಬ ನಾಲ್ಕು ಅಂತರಿಂದ್ರಿಯಗಳನ್ನೂ ಸೇರಿಸಿ ಇಪ್ಪತ್ತುನಾಲ್ಕು ತತ್ವಗಳೆಂದು ಹೇಳುವರು. ಇವುಗಳಲ್ಲದೆ ಸ್ಥೂಲ ಸೂಕ್ಷ್ಮ ಕಾರಣಗಳೆಂಬ ಶರೀರತ್ರಯಗಳನ್ನೂ ಅನ್ನಮಯ ಪ್ರಾಣಮಯ ಮನೋಮಯ ವಿಜ್ಞಾನಮಯ ಆನಂದಮಯ ಎಂಬ ಪಂಚಕೋಶಗಳನ್ನೂ ಇದೇ ಎಂದು ಹೇಳುವರು. ನನ್ನ ಸಂಬಂಧವಾದ ಪರಾ ಎಂಬ ಈ ಪ್ರಕೃತಿಯು ಕ್ಷೇತ್ರವೆಂತಲೂ ಕ್ಷರವೆಂತಲೂ ಪ್ರಕೃತಿಯೆಂತಲೂ ಅನಾತ್ಮನೆಂತಲೂ ದೃಶ್ಯನೆಂತಲೂ ಅಸತ್ ಎಂತಲೂ ಜಡವೆಂತಲೂ ದುಃಖಸ್ವರೂಪವೆಂತಲೂ ಸಂಸಾರವೆಂತಲೂ ಹೇಳಲ್ಪಡುವುದು. ಕೆಂಪಾಗಿ ಸುಡಲ್ಪಟ್ಟ ಕಬ್ಬಿಣದ ಗುಂಡಿನೊಂದಿಗೆ ಸೇರಿ ಪ್ರಕಾಶಿಸುವ ಅಗ್ನಿಯುಹಾಗೆ ಮಿಥ್ಯಾಸ್ವರೂಪವಾದ ಪ್ರಕೃತಿಯೇ ನಾನು ಎಂಬ ಭಾವದಿಂದ ಈ ಪ್ರಕೃತಿಯೊಂದಿಗೆ ಸೇರಿ ಸಂಚರಿಸುತ್ತಿರುವ ನನ್ನ ಅಂಶದಿಂದ ಹುಟ್ಟಿದ ಜೀವನೇ ಇಪ್ಪತ್ತೈದನೆಯ ತತ್ವವು. ಈ ಜೀವನು ನನ್ನ ಸಂಬಂಧವಾದ ಪರಾ ಎಂಬ ಪ್ರಕೃತಿಯು. ಕ್ಷೇತ್ರಜ್ಞನೆಂತಲೂ ಅಕ್ಷರನೆಂತಲೂ ಪುರುಷನೆಂತಲೂ ಆತ್ಮನೆಂತಲೂ ಹೇಳಲ್ಪಡುವನು. ಅದು ಹೇಗೆಂದರೆ—

ಮೇಲೆ ಹೇಳಿದ ಇಪ್ಪತ್ತುನಾಲ್ಕು ತತ್ವಗಳಲ್ಲಿ ಮುಖ್ಯವಾದುದಾಗಿಯೂ, ಶಬ್ದಾದಿಕಾರ್ಯಗಳಿಗೂ, ಇಂದ್ರಿಯಗಳಿಗೂ ಆಧಾರವಾಗಿಯೂ, ಮಲಿನಶುದ್ಧಮಿಶ್ರರೂಪವಾದ ಸಂಸಾರಸ್ವರೂಪವಾಗಿಯೂ, ಅನಾದಿಯಾದ ಪ್ರಕೃತಿಯಿಂದ ಕಲ್ಪಿತವಾದ ನಿಶ್ಚಯಾತ್ಮಕವಾದ ಬುದ್ಧಿಯೂ ಅಹಂಕಾರವೂ ಸ್ವರೂಪವಾಗಿಉಳ್ಳವು. ಅಂತಃಕರಣವೃತ್ತಿಯಲ್ಲಿ ನೀರಿನ ಗಡಿಗೆಯಲ್ಲಿ ಸೂರ್ಯಪ್ರತಿಬಿಂಬವೂ, ಕನ್ನಡಿಯಲ್ಲಿ ಮುಖ

ಪ್ರತಿಬಿಂಬವೂ, ಕಾಣಬರುವಹಾಗೆ ನನ್ನ ನೆರಳು ಪ್ರತಿಫಲಿಸಿ, ಅದರ ಉಪಾಧಿಕನಾಗಿ ಶಬ್ದಾದಿ ವಿಷಯುಗಳನ್ನು ಅನುಭವಿಸುತ್ತಾ ಕರ್ತೃವಾಗಿಯೂ ಭೋಕ್ತೃವಾಗಿಯೂ, ಜ್ಞಾತನಾಗಿಯೂ, ಶ್ರೋತೃವಾಗಿಯೂ, ಸ್ಪಷ್ಟೃವಾಗಿಯೂ, ದೃಷ್ಟೃವಾಗಿಯೂ ಇರುವ ಜೀವನೆಂದು ಪ್ರಸಿದ್ಧನಾಗಿ, ಜಾಗ್ರತ್ಸ್ವಪ್ನಸುಷುಪ್ತಿಗಳೆಂಬ ಅವಸ್ಥಾತ್ರಯಕ್ಕೆ ಅಭಿಮಾನಿಯಾಗಿ ಪ್ರಾಜ್ಞನೆಂದು ಹೆಸರುಗೊಂಡು, ನಿಖಿಲವಾಸನಾಸಮೇತನಾಗಿ, ಸೂಜೀಕಲ್ಲಿನ ಸಾನ್ನಿಧ್ಯದಿಂದ ಕಬ್ಬಿಣವು ಚಲಿಸುವಹಾಗೆ ಪುರಾಣಪುರುಷನಾದ ತನಗೆ ಇಪ್ಪತ್ತಾರನೆಯ ತತ್ತ್ವವಾದ ಪರಮಾತ್ಮನೇ ನಾನಾಗಿರುವೆನು. ನನ್ನ ಸನ್ನಿಧಾನದಿಂದ ನನ್ನನ್ನಾಶ್ರಯಿಸಿಕೊಂಡಿದ್ದರೂ ನನ್ನನ್ನು ತಿಳಿದುಕೊಳ್ಳದೆ, ತನ್ನನ್ನು ನಾಮರೂಪಾತ್ಮಕನಾಗಿ ಭಾವಿಸಿಕೊಂಡು ಸಂಸಾರಚಕ್ರದಲ್ಲಿ ತೊಳಲುತ್ತಾ, ಕೊನೆಗೆ ಅನೇಕಜನ್ಮ ಪುಣ್ಯಪರಿಪಾಕದಿಂದಲೂ. ನನ್ನ ಅನುಗ್ರಹದಿಂದಲೂ, ಪರಿಶುದ್ಧ ಹೃದಯನಾಗಿ ಸದ್ಗುರುವನ್ನು ಆಶ್ರಯಿಸಿ, ಶರಣಾಗತನಾಗಿ ಆತ್ಮಾನಾತ್ಮಜ್ಞಾನವನ್ನು ಪಡೆದು ಅಖಂಡಾದ್ವಿತೀಯ ಸಚ್ಚಿದಾನಂದಸ್ವರೂಪ ಪರಿಪೂರ್ಣ ಪರಬ್ರಹ್ಮತತ್ವನಾದ ನಾನೇ ಆಗುವನು.

ಪಂಚೇಂದ್ರಿಯಗಳಿಂದ ವಿಷಯಪಂಚಕವನ್ನು ತಿಳಿದುಕೊಳ್ಳುವ ಜ್ಞಾನವೂ ನಾನೇ, ಪಂಚಕೋಶಗಳನ್ನೂ ಪಂಚಭೂತಗಳನ್ನೂ ನೋಡುವ ಜ್ಞಾನಿಯೂ ನಾನೇ, ಸುಡಲ್ಪಟ್ಟ ಕಬ್ಬಿಣದ ಗಟ್ಟಿಯಲ್ಲಿ ವ್ಯಾಪಿಸಿದ ಅಗ್ನಿಯಂತೆ ಮಾಯಾಗುಪ್ತವಾದ ಬ್ರಹ್ಮಾಂಡದಲ್ಲಿ ಪ್ರಕಾಶಿಸುವ ಚಿದಾತ್ಮನು ನಾನೇ ಎಂದು ತಿಳಿದುಕೋ.

ಭೂಮಿ, ನೀರು, ಬೆಂಕಿ, ಗಾಳಿ, ಆಕಾಶವು ಇವುಗಳೊಳಗೆ ವ್ಯಾಪಿಸಿರುವ ಸಕಲಕ್ಕೂ ಆಧಾರಭೂತನಾದ ಸಾಕ್ಷಿಯು ನಾನೇ, ಸೂರ್ಯಚಂದ್ರಾದಿಗ್ರಹಗಳು, ನಕ್ಷತ್ರಗಳು, ಮಿಂಚು ಇವುಗಳಲ್ಲಿ ವ್ಯಾಪಿಸಿರುವ ದಿವ್ಯತೇಜಸ್ಸು ನಾನೇ, ದೇವತೆಗಳು, ಮನುಷ್ಯರು, ತಿರ್ಯಗ್ಜಂತುಗಳು ಮೊದಲಾದ ಚೇತನಗಳಿಗೆ ಬುದ್ಧಿಯನ್ನು ಅನುಗ್ರಹಿಸುವ ಜ್ಞಾನಪ್ರದನೂ ನಾನೇ, ಬ್ರಹ್ಮಾದಿ ದೇವತೆಗಳಿಂದ ಪ್ರಾರ್ಥಿಸಲ್ಪಡತಕ್ಕ ಅನಂತಗುಣಪೂರ್ಣವಿಗ್ರಹನೂ ನಾನೇ, ಕಾರ್ಯರೂಪಗಳಾದ ಜಗತ್ತಿಗೆ ಉಪಾದಾನಕಾರಣನೂ ನಿಮಿತ್ತಕಾರಣನೂ ಆಗಿ ಶುದ್ಧ ಸತ್ತ್ವಸ್ವರೂಪನಾದ ಪರಮಾತ್ಮನು ನಾನೇ ಎಂದು ತಿಳಿ, ನಾನು ವೇದಶಾಸ್ತ್ರ

ಗಮಗಳಿಂದ ತಿಳಿಯಲ್ಪಡತಕ್ಕ ವಸ್ತುವು. ಜಪವು, ತಪಸ್ಸು, ದಾನ, ಯಜ್ಞ ಇವುಗಳಿಂದ ಪೂಜಿಸಲ್ಪಡತಕ್ಕ ದೇವತೆಯಾಗಿರುವೆನು. ನಾನು ಸಾಕಾರನೂ ಅಲ್ಲ; ನಿರಾಕಾರನೂ ಅಲ್ಲ. ಕಾರಣಶರೀರವು ನಾನೆಂಬ ಭ್ರಾಂತಿಯಿಲ್ಲದ್ದರಿಂದ ನಾನು ಸರ್ವಸಾಕ್ಷಿಯಾಗಿದ್ದೇನೆ. ಸಕಲಭೂತ ಗಳಲ್ಲಿಯೂ ನಾನೇ ಇರುವೆನು. ನನ್ನಲ್ಲಿಯೇ ಸಕಲಭೂತಗಳೂ ಇರುವುವು. ನಾನು ಅವುಗಳನ್ನು ಅಂಟದೆ ಇರುವೆನು. ಅವೂ ನನ್ನನ್ನು ಅಂಟುವುದಿಲ್ಲ. ನಾನು ನಿರ್ಗುಣನೆಂದು ತಿಳಿದುಕೊಂಡರೆ ಈ ಜಗತ್ತು ಒಂದೂ ನನ್ನಲ್ಲಿ ಇಲ್ಲವೆಂದು ಗೊತ್ತಾಗುವುದು. ಆದುದರಿಂದ ಮಹಾತ್ಮರೆಲ್ಲರೂ ನನ್ನನ್ನು ಸಚ್ಚಿದಾನಂದಮಯನಾಗಿಯೂ, ಸರ್ವಕರ್ತೃವಾಗಿಯೂ, ಕರಣಕಾರ್ಯಗಳಿಗೆ ಸಾಕ್ಷಿಯಾಗಿಯೂ ತಿಳಿದು ಸದಾಕಾಲವೂ ಧ್ಯಾನಮಾಡುತ್ತಾ ಇರಬೇಕು.

ಈ ಪ್ರಕಾರವಾಗಿ ಹೇಳಿದ ಶ್ರೀರಾಮಚಂದ್ರನ ಮಾತುಗಳನ್ನು ಕೇಳಿ ಆಂಜನೇಯನು, ಸ್ವಾಮಿಯ ಪಾದಗಳಿಗೆ ವಂದನೆಮಾಡಿ ವಿನಯ ಭಯಭಕ್ತಿಗಳಿಂದ ಕೈ ಮುಗಿದುಕೊಂಡು ಇಂತೆಂದನು. „ ಎಲೈ ಸ್ವಾಮಿಯೇ, ನಿನ್ನನ್ನು ಧ್ಯಾನಮಾಡಬೇಕಾದರೆ ಯಾವ ನಿಯಮದಿಂದ, ಯಾವಾಗ; ಯಾವ ಪ್ರಕಾರವಾಗಿ ಪೂಜಿಸಬೇಕು. ಮೌನವಾಗಿಯೇ ಅಥವಾ ಅಮೌನವಾಗಿಯೇ? ಮಂತ್ರತಂತ್ರಗಳು ಯಾವುವು! ನಿನ್ನ ರೂಪವು ಸಗುಣವೋ ನಿರ್ಗುಣವೋ, ದಯಮಾಡಿ ತಿಳಿಸು.'' ಈ ಮಾತನ್ನು ಕೇಳಿ ಶ್ರೀರಾಮನು ಮುಗುಳುನಗೆಯಿಂದ ಆ ಹನುಮಂತನನ್ನು ನೋಡಿ, „ ಎಲೈ ಭಕ್ತನೇ, ದೇಹವು, ವಾಯುಗಳು, ಇಂದ್ರಿಯಗಳು, ಚಿತ್ತವು, ಮನಸ್ಸು, ಬುದ್ಧಿ, ನಾನೆಂಬ ಅಹಂಕಾರವು. ಇವುಗಳನ್ನು ಹೊಂದಿರುವ ಮನುಷ್ಯರಿಗೆ ಮೌನವೂ, ದೇಶಕಾಲನಿಯಮಗಳೂ, ಮಂತ್ರತಂತ್ರಗಳೂ, ವಿಧಿಗಳೂ, ಉಂಟೆ? ಅವುಗಳನ್ನು ನೋಡುತ್ತಾ ಸಾಕ್ಷಿಯಾಗಿ ಇರುವವನಿಗೆ ಅದರ ವಿಕಾರಗಳು ಎಲ್ಲಿಂದ ಬರುವುವು? ಆತ್ಮ, ಅನಾತ್ಮ ಇವೆರಡೇ ಲಕ್ಷ್ಯಗಳು. ಇವುಗಳಲ್ಲಿ ಅನಾತ್ಮನಲ್ಲಿ ಆತ್ಮಭ್ರಾಂತಿಯು ಅನಾದಿಕಾಲದಿಂದ ಸಹಜವಾಗಿ ಬಂದಿರುವುದು. ಈಗ ನಾನು ಆತ್ಮಜ್ಞಪ್ತಿಯೆಂದು ಹೇಳಿದೆನು. ಮುಂದೆ ಶುದ್ಧನಾದ ಪರಬ್ರಹ್ಮನು ಹೊರತು ಅನ್ಯವು ಒಂದೂ ಇಲ್ಲವೆಂದು ತಿಳಿ. ಯಾವದೇಶದಲ್ಲಿಯಾಗಲಿ, ಯಾವ ಕಾಲದಲ್ಲಿಯಾಗಲಿ, ಹೇಗೆಯಾಗಲಿ,

ವಿಕಾರಗಳೂ ಅವಿದ್ಯೆಯೂ ಒಂದೂ ಇಲ್ಲದೆ ನಿರ್ಮಲನಾಗಿಯೂ ಅವ್ಯಯನಾಗಿಯೂ ಇರುವ ಸಚ್ಚಿದಾನಂದಮಯನಾದ ಪರಮಾತ್ಮನನ್ನು ತಾನೇ ಎಂದು ತಿಳಿದುಕೊಳ್ಳುವ ಸಜ್ಜನನಿಗೆ ಮಂತ್ರತಂತ್ರಗಳೂ, ಕರ್ಮಗಳೂ, ಜಪತಪೋವ್ರತದಾನಯಜ್ಞಗಳೂ, ನಾಮಗಳೂ, ವರ್ಣಾಶ್ರಮಾಭಿಮಾನಗಳೂ ಒಂದೂ ಬೇಕಾಗಿಲ್ಲವು. ಸಮಸ್ತ ಅಭಿಲಾಷೆಗಳಿಂದ ಕೂಡಿದ ಸೂಕ್ಷ್ಮದೇಹವು ಜಡವಾಗಿರುವುದು. ಆತ್ಮನು ಅದನ್ನು ಅಂಟದೆ ಸ್ವಯಂಪ್ರಕಾಶನಾಗಿ ಹೊಳೆಯುತ್ತಿರುವನು. ಆತ್ಮನಾದ ನಾನು ಜ್ಞಾನನಿಷ್ಠನಿಗೆ ಅನ್ಯನಲ್ಲವು. ಆತನೂ ಪರಬ್ರಹ್ಮನಾದ ನನಗೆ ಅನ್ಯನಲ್ಲವು. ನಾನು ಸತ್ವರಜಸ್ತಮಗಳೆಂಬ ಗುಣತ್ರಯಾತ್ಮಕವಾದ ಪ್ರಕೃತಿಯಿಂದ ಸೋಕಿದಾಗ ನನ್ನನ್ನು ಸಗುಣನೆಂದು ಹೇಳುವರು. ಆ ಪ್ರಕೃತಿಯನ್ನು ಬಿಟ್ಟಾಗ ನಿರ್ಗುಣನೆಂದು ಹೇಳುವರು. ನಾನು ಇವುಗಳೆರಡೂ ಇಲ್ಲದವನಾಗಿರುವುದರಿಂದ ಎರಡೂ ಅಲ್ಲ. ಎಲೈ ಮಗುವೇ ಕೇಳು, ನಾನು ಭೃಂಗಗಳಲ್ಲಿಯೂ, ಪಕ್ಷಿಗಳಲ್ಲಿಯೂ, ಮೃಗಗಳಲ್ಲಿಯೂ, ಕುದುರೆಗಳಲ್ಲಿಯೂ, ಹಾವುಗಳಲ್ಲಿಯೂ, ಮನುಷ್ಯರಲ್ಲಿಯೂ, ಅಚೇತನವಸ್ತುಗಳಲ್ಲಿಯೂ ಏಕರೀತಿಯಾಗಿ ಪ್ರಕಾಶಿಸುತ್ತಿರುವೆನೆಂದು ತಿಳಿ. ಜೀವನಿಗೆ ಈ ಶರೀರವು ತಾನೆಂಬ ದೃಷ್ಟಿಯೇ ಧನುಸ್ಸಾಗಿರುವುದು. ಯಾವಾಗಲೂ ಗುಣತ್ರಯದಿಂದ ಕೂಡಿರುವ ಮನಸ್ಸೆಂಬುದೇ ಬಾಣವು. ಆ ಬಾಣಕ್ಕೆ ಅತಿ ನಯವಾಗಿ ತೋರುವ ದುಷ್ಟಗಳಾದ ಇಂದ್ರಿಯವ್ಯಾಪಾರಗಳು ಲಕ್ಷ್ಯ (ಗುರಿ) ಗಳಾಗಿರುವುವು. ಎಲ್ಲಕ್ಕೂ ಮುಖ್ಯವಾದುದು ಮನಸ್ಸು. ಆ ಮನಸ್ಸಿಗೆ ಪ್ರಧಾನವಾದುದು ಪ್ರಕೃತಿಯು, ಆ ಪ್ರಕೃತಿಯನ್ನು ಬಿಟ್ಟು ಕೇವಲ ಆತ್ಮನಾದ ನನ್ನನ್ನು ನೋಡು, ಆಗ ಆ ಪ್ರಕೃತಿಯು ತನಗೆ ತಾನೇ ಕ್ಷೀಣತ್ವ ಹೊಂದಿ ನಾಶವಾಗುವುದು. ಪ್ರಕೃತಿಯು ವಿಕಾರರೂಪವುಳ್ಳದ್ದು. ಆ ಪ್ರಕೃತಿಯ ಸ್ವಭಾವವನ್ನು ತಿಳಿದುಕೊಂಡು, ಆಗಲೇ ನನ್ನನ್ನು ಪರಬ್ರಹ್ಮನೆಂದು ಗ್ರಹಿಸು. ಆ ಪರಬ್ರಹ್ಮನನ್ನು ತಿಳಿದುಕೊಳ್ಳುವಾಗ ಆ ಪ್ರಕೃತಿಯೇ ಸರ್ವಕಾಲದಲ್ಲಿಯೂ ಪ್ರಯತ್ನಪೂರ್ವಕವಾಗಿ ಅವತಾರ ಮಾಡುತ್ತಿರುವುದು. ಮನಸ್ಸೆಂಬುದು ಆಕಾಶಕ್ಕೆ ಸಮವಾದುದು. ಆ ಮನಸ್ಸೇ ಶಬ್ದಾದಿವಿಷಯಸುಖಸ್ವರೂಪವಾದುದು. ಮೂರು ಲೋಕಗಳಿಗೂ ಅಭಿಮುಖವಾದುದು. (ಅಂದರೆ ಬಹಿರ್ಮುಖವೇ ಹೊರತು ಅಂತರ್ಮುಖ

ವಾದುದಲ್ಲವು) ಅದು ದುಃಖಸ್ವರೂಪವಾಗಿರುವುದೇ ಹೊರತು ಆನಂದ ರೂಪವುಳ್ಳುದಾಗಿಲ್ಲ. ಬ್ರಹ್ಮಾನಂದವಾದರೋ ನಿತ್ಯವಾದುದಾಗಿ ಇದಕ್ಕೆ ವ್ಯತಿರೇಕವಾದ ಲಕ್ಷಣವುಳ್ಳುದಾಗಿರುವುದು.

ಪರಮಾತ್ಮನು ಆಕಾಶದಂತೆ ಮಹೋನ್ನತವಾಗಿಯೂ, ಸರ್ವಗತವಾಗಿಯೂ ಒಪ್ಪುತ್ತಿರುವುದು. ಅಂತಹ ಆತ್ಮಸ್ವರೂಪನಾದ ತನ್ನನ್ನು ವಿಜ್ಞಾನಶರೀರದಲ್ಲಿ ಅನುಭವದೃಷ್ಟಿಯಿಂದ ನೋಡಿ, ಜೀವಿಸುವ ಬ್ರಹ್ಮಜ್ಞನ ಬದುಕೇಬದುಕು. ಸಾರಭೂತನಾದ ಪರಮಾತ್ಮನ ಮತ್ತು ಅಸಾರವಾದ ಪ್ರಕೃತಿಯ ವಿಮರ್ಶೆಮಾಡುವುದರಲ್ಲಿ ಪ್ರಾಜ್ಞನಾದ ಪಂಡಿತನು ವಿಕಾರವಾಗಿ ಹುಟ್ಟಿದ ದೃಶ್ಯಮಾನವಾದ ಈ ಪ್ರಪಂಚಸಮೂಹಕ್ಕೆ ಶರತ್ಕಾಲದ ಮೇಘಗಳಿಗಿಂತ ದೂರವಾದ ಆಕಾಶದಂತೆ ವಿಮುಖನಾಗಿ ಪ್ರಕಾಶಿಸುವನು. ಚತುರ್ದಶೇಂದ್ರಿಯವ್ಯಾಪಾರಗಳಿಗೂ ಕಾರಣವಾದ ಪ್ರಜ್ಞೆಯೂ ಬ್ರಹ್ಮಾಕಾರವಾದರೆ ಇಂದ್ರಿಯಗಳೂ ಅದೇ ಆಕಾರವಾಗಿರುವುವು. ಅವಿವೇಕಿಯು ಈ ಪ್ರಪಂಚವನ್ನು ಪರಮಾತ್ಮಸ್ವರೂಪವೆಂದು ತಿಳಿದುಕೊಳ್ಳಲಾರನು. ಗುರುವಿನ ಅನುಗ್ರಹವನ್ನು ಸಂಪಾದಿಸಿದ ಮಹನೀಯನಿಗೆ ಜಗತ್ತು ಪರಬ್ರಹ್ಮಕ್ಕಿಂತ ಬೇರೆಯಾದುದಲ್ಲವೆಂದು ಸುಲಭವಾಗಿ ತಿಳಿಯುವುದು.

ಎಲೈ ವಾಯುಪುತ್ರನೇ ಕೇಳು, ಕಾರಣೋಪಾಧಿಯಾದ ಮಾಯೆಯನ್ನು ಅಸತ್ಯವೆಂತಲೂ, ಆ ಮಾಯೆಯ ಕಾರ್ಯಗಳೆಲ್ಲವೂ ಮಿಥ್ಯೆಯೆಂತಲೂ ತಿಳಿಯತಕ್ಕದ್ದು. ಶರೀರವೇ ನಾನೆಂದು ಹೇಳಬೇಡ. ನಾನು ಸರ್ವಸಾಕ್ಷಿಯಾಗಿರುವೆನೆಂದು ಭಾವಿಸು. ಭಾವನೆಗಳು ಭಾವನಸಂಶಯ, ಅಸಂಭಾವನ, ವಿಪರೀತಭಾವನ ಎಂದು ಮೂರುವಿಧವಾಗಿರುವುವು ಇವುಗಳಲ್ಲಿ ಸಂಶಯವೆಂದರೆ ಎರಡು ವಸ್ತುಗಳನ್ನು ಒಂದರಲ್ಲಿಯೇ ಆರೋಪಿಸುವುದು. ಹೇಗಂದರೆ ಕತ್ತಲೆಯಲ್ಲಿ ಮೋಟು ಮರವನ್ನು ನೋಡಿ, ಇದು ಸ್ಥಾಣುವೋ, ಪುರುಷನೋ ಎಂದು ಚಿಂತಿಸುವ ಬುದ್ಧಿವೃತ್ತಿ. ಇಲ್ಲಿ ಮೋಟುಮರವಿರಲಿಕ್ಕೆ ಕಾರಣವೇನು ? ಇದು ಸ್ಥಾಣುವಲ್ಲ ಪುರುಷನೇ ಎಂದು ಭಾವಿಸುವ ಚಿತ್ತವೃತ್ತಿಯು ಅಸಂಭಾವನಾ, ಒಂದು ವಸ್ತುವಿನಲ್ಲಿ ಇರುವ ಸಹಜವನ್ನು ಬೇರೊಂದು ವಿಧವಾಗಿ ಚಿಂತಿಸುವುದು ವಿಪರೀತಭಾವನೆ. / ಇವು ಮೂರು ಪ್ರಮಾಣ ಪ್ರಮೇಯ ಭೇದಗಳಿಂದ ಪ್ರಮಾಣಗತ ಸಂಶಯವು, ಪ್ರಮೇಯಗತ ಸಂಶಯವು, ಪ್ರಮಾಣಗತಾ

ಸಂಭಾವನಾ, ಪ್ರಮೇಯಗತಾ ಸಂಭಾವನಾ, ಪ್ರಮಾಣಗತ ವಿಪರೀತಭಾವನಾ, ಪ್ರಮೇಯಗತ ವಿಪರೀತಭಾವನಾ ಎಂದು ಆರು ಬಗೆಯಾಗಿರುವುದು. ಅದರಲ್ಲಿ ಶ್ರುತಿಯು ಕರ್ಮವನ್ನು ಪ್ರತಿಪಾದಿಸುವುದೆ ? ಅಥವಾ ವಿಶಿಷ್ಟವಾದ ಪ್ರತ್ಯಗ್ಬ್ರಹ್ಮವನ್ನು ಪ್ರತಿಪಾದಿಸುವುದೇ ಎಂದು ಉಂಟಾಗುವ ಸಂಶಯವೇ ಪ್ರಮಾಣಗತ ಸಂಶಯವು. ಜಗತ್ಕಾರಣವು ಬ್ರಹ್ಮವೇ ಅಥವಾ ಪ್ರಧಾನಾದಿಗಳೇ ಎಂಬ ಸಂಶಯವು ಪ್ರಮೇಯಗತ ಸಂಶಯವು. ಬ್ರಹ್ಮವು ಪರಿಶುದ್ಧ ವಸ್ತುವಾದುದರಿಂದ ಪ್ರಮಾಣಾಂತರದಿಂದ ಭೂಮಿ ಮೊದಲಾದುವುಗಳಂತೆ ಅರಿಯಲ್ಪಡುವುದು. ಆದಕಾರಣ ಶ್ರುತಿಗಳು ಆ ಶುದ್ಧಬ್ರಹ್ಮನನ್ನು ಜಗತ್ಕಾರಣವೆಂದು ಹೇಗೆ ಪ್ರತಿಪಾದಿಸುವುದು ? ಪ್ರತಿಪಾದಿಸಲಾರದು ಎಂಬ ನಿಶ್ಚಯವು ಪ್ರಮಾಣಗತಾ ಸಂಭಾವನಾ. 'ಜಗದ್ವಿಲಕ್ಷಣಂಬ್ರಹ್ಮಾ' ಎಂಬ ಶ್ರುತಿವಾಕ್ಯವನ್ನನುಸರಿಸಿ, ಬ್ರಹ್ಮವು ಜಗತ್ತಿಗಿಂತ ವಿಲಕ್ಷಣವಾಗಿರುವುದು. ಆದುದರಿಂದ ಜಗತ್ತಿಗೆ ಬ್ರಹ್ಮವು ಕಾರಣವೆನ್ನಲಾಗದು. ಪ್ರಧಾನಾದಿಗಳೇ ಜಗತ್ಕಾರಣವೆಂಬ ನಿಶ್ಚಯವು ಪ್ರಮೇಯಗತಾ ಸಂಭಾವನಾ. ಬ್ರಹ್ಮವು ಶುದ್ಧವಸ್ತುವು ಆದುದರಿಂದ ಶ್ರುತಿಗಳಿಗೆ ಶುದ್ಧ ಬ್ರಹ್ಮವನ್ನು ಪ್ರತಿಪಾದಿಸುವುದರಲ್ಲಿ ತಾತ್ಪರ್ಯವಿಲ್ಲವು. ಶ್ರುತಿಗಳು ಪರಬ್ರಹ್ಮನನ್ನೇ ಪ್ರತಿಪಾದಿಸುವುದಾದರೆ ಪುರುಷನಿಗೆ ಪ್ರವೃತ್ತಿಗಳಿಲ್ಲವು. ಆದ್ದರಿಂದ ವ್ಯರ್ಥವಾಗುವುದು. ಲೋಕದಲ್ಲಿ ಪ್ರವೃತ್ತಿಪೂರ್ವಕವಾಗಿಯೇ ಪುರುಷಾರ್ಥವನ್ನು ನೋಡುತ್ತೇವೆ. ಅಪರಿಶುದ್ಧ, ವಿಕಾರ ಇವುಗಳೊಂದಿಗೆ ಕೂಡಿರುವ ಜಗತ್ತಿಗೆ ಕಾರಣವಾದ ಬ್ರಹ್ಮವು ಅಪರಿಶುದ್ಧಾದಿಗಳೊಂದಿಗೆ ಕೂಡಿರಬೇಕು. ಹಾಗೆ ಕೂಡಿಲ್ಲವಾದುದರಿಂದ ಪ್ರಧಾನಾದಿಗಳೇ ಜಗತ್ತಿಗೆ ಕಾರಣವೆಂದು ಬುದ್ಧಿಯಲ್ಲಿ ತೋರುವುದೇ ಪ್ರಮೇಯಗತ ವಿಪರೀತಭಾವನೆ. ಈ ಪ್ರಕಾರವಾಗಿ ತನ್ನಲ್ಲಿಯೂ, ಜೀವನಾಗಿಯೂ ಜಗತ್ತಿನಲ್ಲಿ ಒಬ್ಬನಾಗಿಯೂ ತೋರುವ ತಾನು ಜಗದ್ವಿಲಕ್ಷಣನಾದ ಬ್ರಹ್ಮನು ಅಹುದೋ ಅಲ್ಲವೋ ಎಂಬುದು ಪ್ರತ್ಯಗಾತ್ಮ ವಿಷಯವಾದ ಸಂಶಯವು. ಹಾಗೆ ಕರ್ತೃತ್ವಾದಿ ಅನೇಕಧರ್ಮಯುಕ್ತನಾಗಿಯೂ, ಪರಿಚ್ಛಿನ್ನನಾಗಿಯೂ, ಜನನಮರಣಗಳಿಂದ ಕೂಡಿದವನಾಗಿಯೂ ಇರುವ ತನಗೆ ಸಚ್ಚಿದಾನಂದಾದಿ ಲಕ್ಷಣಗಳನ್ನುಳ್ಳ ಬ್ರಹ್ಮಸ್ವರೂಪವು ಹೇಗೆ ಸಲ್ಲುವುದು ? ಸಲ್ಲುವುದಿಲ್ಲವೆಂದು ನಿಶ್ಚಯಿಸುವುದು ಪ್ರತ್ಯಗಾತ್ಮವಿಷಯಕವಾದ ಅಸಂಭಾವನಾ. ಹೀಗೆ ತಾನೇಕರ್ತನಾಗಿದ್ದರೆ ತನ್ನನ್ನು ಕುರಿತು

" ಈ ಕೆಲಸವನ್ನು ಮಾಡು. ಇದನ್ನು ಮಾಡಬೇಡ; ಈ ಕೆಲಸವನ್ನು ಬಿಟ್ಟುಬಿಡು. ಇದನ್ನು ಬಿಡಬೇಡ; ಇದನ್ನು ಗ್ರಹಿಸು. ಇದನ್ನು ಗ್ರಹಿಸಬೇಡ. ಇದನ್ನು ತಿನ್ನು, ಇದನ್ನು ತಿನ್ನಬೇಡ. " ಇಂತಹಧರ್ಮಗಳನ್ನು ಶ್ರುತಿಗಳು ಹೇಗೆ ಬೋಧಿಸುವುವು. ಆದುದರಿಂದ ನಾನುಕರ್ತನು ಇದರಲ್ಲಿ ಸಂದೇಹವಿಲ್ಲ. ಎಂಬಕರ್ತೃತ್ವಾದಿಗಳಿಗೆ ಉಪಯೋಗ್ಯವಾದ ಅಭಿಮಾನಾದಿಗಳಿಗೆ ಸರ್ವಧರ್ಮಪ್ರತೀತಿ ಲಕ್ಷಣವಾದುದೇ ವಿಪರೀತಭಾವನಾ. ಹೀಗೆ ನ್ಯಾಯಶಾಸ್ತ್ರದಲ್ಲಿ ಈ ಮೂರುಸಂಶಯಗಳನ್ನು ವಿಚಾರಮಾಡಿ ತ್ಯಜಿಸಿ, ಊರ್ಜಿತವಾದ ವಿಜ್ಞಾನವನ್ನು ಸಂಪಾದಿಸುವವನೇ ಮುಕ್ತನು.

ಆರುರುಕ್ಷಲವಿನಲಕ್ಷಣ. (ಮೇಲಕ್ಕೆ ಹತ್ತಲಿಚ್ಛೆಯುಳ್ಳವನೂ ಉತ್ತಮನಾದ ಗುರುವನ್ನು ಆಶ್ರಯಿಸಿ, ಮನೆ, ತೋಟ, ಹೊಲ, ಗದ್ದೆ, ಧನ, ಧಾನ್ಯಾದಿಗಳನ್ನು ಸಂಪಾದಿಸಬೇಕೆಂಬ ಅಪೇಕ್ಷೆಯನ್ನು ತೊರೆದು, ಮೋಹವನ್ನು ಪರಿತ್ಯಜಿಸಿ, ಆಶೆಯನ್ನು ಅಡಗಿಸಿಕೊಂಡು, ಲೋಭ ಕ್ರೋಧ ಮದಮತ್ಸರಗಳಿಗೆ ಸ್ಥಳಕೊಡದೆ, ಜಿತೇಂದ್ರಿಯನಾಗಿ, ನಿರ್ಮಲಚಿತ್ತನಾಗಿರುವವನು ಬ್ರಹ್ಮಜ್ಞಾನವನ್ನು ತಿಳಿದುಕೊಳ್ಳಲು ಅರ್ಹನೆನಿಸುವನು. ಅಂಥ ತತ್ವೋಪದೇಶವನ್ನು ಪಡೆಯಲು ಅರ್ಹನಾದವನು ಮೊದಲು ಸಾಧುಜನರಿಂದ ಹೇಳಲ್ಪಟ್ಟ ವೇದಾಂತಶಾಸ್ತ್ರಗಳನ್ನು ಶ್ರವಣಮನನನಿಧಿಧ್ಯಾಸನಗಳೆಂಬ ಸಾಧನಗಳಿಂದತಿಳಿದುಕೊಂಡು. ಜ್ಞಾನೇಂದ್ರಿಯಗಳನ್ನು ಸರ್ವಕಾಲದಲ್ಲಿಯೂ ತನ್ನವಶದಲ್ಲಿಯೇ ಇಟ್ಟುಕೊಂಡು, ಕಾಮ, ಕ್ರೋಧ ಮೊದಲಾದ ಅರಿಷಡ್ವರ್ಗವನ್ನು ಬಿಟ್ಟುಬಿಟ್ಟು, ದುಃಖಹೇತುಗಳಾದ ಸ್ಥೂಲಸೂಕ್ಷ್ಮಕಾರಣ ಶರೀರಗಳನ್ನು ಪರಿತ್ಯಜಿಸಿ, ಸರ್ವತ್ಯಾಗಕ್ಕೂ ಅವಧಿಭೂತವಾದ ಶಬ್ದಸ್ಪರ್ಶಾದಿ ಚತುರ್ದಶೇಂದ್ರಿಯವಿಷಯಗಳಿಂದ ಕೂಡಿದ ಮತ್ತು ಆಧ್ಯಾತ್ಮಿಕ, ಆಧಿದೈವಿಕ, ಆಧಿಭೌತಿಕಗಳೆಂಬ ತಾಪತ್ರಯಗಳಿಂದ ಕೂಡಿ ನಿರ್ಬಾಧಕವಾದ ಆನಂದಸಾಗರದಲ್ಲಿ ಲೋಲನಾಗಿ ಇರುವ ಮನುಷ್ಯನೇ ಅಭ್ಯಾಸಿಯೆನಿಸುವನು.

ತಾಪತ್ರಯಗಳವಿವರಣೆ.

ಅಧ್ಯಾತ್ಮ	ಅಧಿಭೂತ	ಅಧಿದೈವಿಕ.
ಶ್ರೋತ್ರ	ಶಬ್ದ	ದಿಕ್ಕು
ತ್ವಕ್	ಸ್ಪರ್ಶ	ವಾಯುವು

ನೇತ್ರ	ರೂಪ	ಸೂರ್ಯನು
ಜಿಹ್ವ	ರಸ	ವರುಣ
ಘ್ರಾಣ	ಗಂಧ	ಅಶ್ವಿನೀದೇವತೆಗಳು,
ವಾಕ್ಕು	ವಚನ	ಅಗ್ನಿ
ಹಸ್ತ	ದಾನ	ಇಂದ್ರನು.
ಪಾದ	ಗಮನ	ಉಪೇಂದ್ರನು.
ಪಾಯು	ವಿಸರ್ಗ	ಮೃತ್ಯುವು
ಉಪಸ್ಥ	ಆನಂದ	ಪ್ರಜಾಪತಿ. (ಬ್ರಹ್ಮ)
ಮನಸ್ಸು	ಸಂಕಲ್ಪ	ಚಂದ್ರನು
ಬುದ್ಧಿ	ನಿಶ್ಚಯ	ಬ್ರಹ್ಮನು
ಚಿತ್ತ	ಸ್ಮರಣ	ಕ್ಷೇತ್ರಜ್ಞನು
ಅಹಂಕಾರ	ಅಭಿಮಾನ	ರುದ್ರನು
ತಮಸ್ಸು	ಗುಣತ್ರಯ	ಈಶ್ವರನು
ಜ್ಞಾತೃವು	ಜ್ಞಾನವು	ಜ್ಞೇಯನು

ಇವು ಜಾಗ್ರತ್ಸ್ವಪ್ನಸುಷುಪ್ತಿಗಳೆಂಬ ಅವಸ್ಥೆಗಳು. ಇವುಗಳಿಗೆ ಸಾಕ್ಷಿಯಾದ ಆತ್ಮನು ನಾನೆಂದು ತಿಳಿಯುವವನೇ ಮುಕ್ತನು.

ಗುರುವಿನಿಂದ ಉಪದೇಶಿಸಲ್ಪಟ್ಟ ಮಾರ್ಗದಿಂದ ಸಂತುಷ್ಟಚಿತ್ತನಾಗಿ ದುರ್ಗುಣಗಳನ್ನೂ ದುಸ್ಸಂಗವನ್ನೂ ಬಿಟ್ಟುಬಿಟ್ಟು, ನಿರ್ಮಲ ಪರಬ್ರಹ್ಮನಾದ ತನ್ನನ್ನು ನೋಡುತ್ತಾ ಆನಂದದಿಂದ ಇರುವವನು ಮೋಕ್ಷವನ್ನು ಪಡೆಯುವನು. ಯಾವನು ಜಿತೇಂದ್ರಿಯನಾಗಿಯೂ ಸಕಲವೇದಾಂತ ಸಾರವನ್ನು ತಿಳಿದವನಾಗಿಯೂ ಈ ಪಂಚ ಭೂತಾತ್ಮಿಕವಾದ ನೀನು ನಾನೆಂಬ ಭಿನ್ನಭಾವಗಳನ್ನು ಅಸತ್ಯವೆಂದು ತಿಳಿದು ಆನಂದ ಸಮುದ್ರದಲ್ಲಿ ಮುಳುಗಿ ಜ್ಞಾನದಿಂದ ಪರಬ್ರಹ್ಮನಾಗುವನೋ ನಿರ್ಮಲ ಜ್ಞಾನವುಳ್ಳ ಬ್ರಹ್ಮನು ತನ್ನ ಮನಸ್ಸನ್ನೂ ಇಂದ್ರಿಯಗಳನ್ನೂ ಒಂದಾಗಿ ಸೇರಿಸಿ ನಿಶ್ಚಲನವಾಗಿ ಮಾಡಿ ಅಪರೋಕ್ಷಜ್ಞಾನದಿಂದ ಉಂಟಾದ ಆನಂದ ಸಮುದ್ರದಲ್ಲಿ ಮುಳುಗುವನೋ ಅವನು ಸನಕಸನಂದಾದಿ ಭಾಗವತರಿಂದ ಕೂಡ ನಮಸ್ಕರಿಸಲ್ಪಡುವನು. ಎಲೈ ಆಂಜನೇಯನೇ ! ನಾನು ಹೇಳಿದಂತೆ ನಡೆಯುವ ಆರು ರುಕ್ಷುವು ನನ್ನಲ್ಲಿ ಐಕ್ಯವಾಗುವದು. ಆದುದರಿಂದ ಅಪರೋಕ್ಷಜ್ಞಾನವುಳ್ಳ ನೀನು ಕೂಡ ಪವಿತ್ರವಾದ ಬ್ರಹ್ಮಭಾವನೆಯಿಂದ

ಇಂದ್ರಿಯಗಳನ್ನು ನಿಗ್ರಹಿಸಿ ಮನಸ್ಸಿನ ಕಲ್ಮಷಗಳನ್ನು ತುಳದು ಸಚ್ಚಿದಾನಂದ ಸ್ವರೂಪನಾದ ನನ್ನನ್ನು ಸದಾಕಾಲವೂ ಧ್ಯಾನಮಾಡುತ್ತ ಇರು. ನಿರ್ಮಲ ಮನಸ್ಸಿನಿಂದಿದ್ದರೆ ನಿನ್ನ ಸಂಶಯಗಳೆಲ್ಲವೂ ತೊಲಗಿ ಹೋಗುವುವು. ಈ ಜಗತ್ತಿನ ಸೃಷ್ಟಿಯಾಗುವುದಕ್ಕಿಂತ ಮುಂಚಿನಿಂದಲೂ ಅನಂತ ದೇಹಗಳೂ ಬ್ರಾಹ್ಮಣಾದಿ ಅನಂತವರ್ಣಗಳೂ ವಸಿಷ್ಟ ವಿಶ್ವಾಮಿತ್ರಾದಿ ಋಷಿಗಳ ಗೋತ್ರಗಳೂ ಶಿವಗೋವಿಂದಾದಿ ನಾಮಗಳೂ ಸ್ತ್ರೀಪುನ್ನಪುಂಸಕಸ್ಥೂಲಹ್ರಸ್ವಾದಿರೂಪಗಳೂ ಸುಖದುಃಖಗಳೂ ಪುಣ್ಯಪಾಪಗಳೂ ಇವುಗಳೆಲ್ಲ ನಾಶವಾಗುತ್ತ ಬಂದರೂ ಪರಬ್ರಹ್ಮನಾದ ನಾನೊಬ್ಬನುಮಾತ್ರ ಜನನಮರಣಗಳಿಲ್ಲದುದರಿಂದ ನಾಮರೂಪಾದಿಗಳನ್ನುಳ್ಳ ವಸ್ತುಗಳನ್ನು ನೋಡುತ್ತಿರುವೆನು. ಆದುದರಿಂದ ನನ್ನನ್ನೇ ಸತ್ಸ್ವರೂಪನೆಂದು ಹೇಳುವರು. ಲೋಕದಲ್ಲಿರುವ ಪಶುಪಕ್ಷಿಮೃಗಾದಿಗಳೂ ಬೆಟ್ಟಗುಡ್ಡಗಳೂ ಪ್ರಾಣಿಗಳೂ ಇವೆಲ್ಲವೂ ಲಯವನ್ನು ಹೊಂದಿದರೂ ಸರ್ವಸಾಕ್ಷಿಯಾದ ನಾನು ಲಯವನ್ನುಹೊಂದದೆ ಆ ಸಮಸ್ತವಸ್ತುಗಳನ್ನೂ ನೋಡುತ್ತಲಿರುವೆನು ಶರೀರಗಳೂ ಇಂದ್ರಿಯಗಳೂ ಪಂಚಪ್ರಾಣಗಳೂ ಮನೋಬುದ್ಧಿ ಚಿತ್ತಾಹಂಕಾರಾದಿಗಳೂ ಇವುಗಳೆಲ್ಲ ತಮ್ಮತಮ್ಮ ಚೇಷ್ಟೆಗಳನ್ನುಬಿಟ್ಟು ಗಾಢನಿದ್ರೆಯಲ್ಲಿ ಅಜ್ಞಾನದಿಂದ ಲಯಹೊಂದಿರುವಾಗ ನಾನು ಮಾತ್ರವೇ ಉಳಿದಿರುವುದರಿಂದ ಸ್ವಭಾವವಾಗಿ ದೇಹೇಂದ್ರಿಯಾದಿಗಳೊಂದೂ ಇಲ್ಲವೆಂದು ನನ್ನ ಪ್ರಜ್ಞೆಯಿಂದ ತಿಳಿದುಕೊಂಡಿರುವೆನು. ಪುನಃ ಜಾಗ್ರದವಸ್ಥೆಯಲ್ಲಿ ಅಂತಃಕರಣಾದಿ ವೃತ್ತಿಗಳು ಎಚ್ಚತ್ತು ತಮ್ಮತಮ್ಮ ವ್ಯಾಪಾರಕ್ಕೆ ಅಭಿಮುಖಗಳಾದಾಗ ಆ ದೇಹೇಂದ್ರಿಯಾದಿಗಳು ಇಲ್ಲವೆಂಬ ಅನುಭವವನ್ನು ಕ್ರಮವಾಗಿತಿಳಿಯುತ್ತಿರುವೆನು. ಹೀಗೆ ಜಾಗರಸ್ವಪ್ನಸುಷುಪ್ತಿಗಳು ಪ್ರತಿದಿನವೂ ಬರುತ್ತಾ ಹೋಗುತ್ತಾ ಇದ್ದರೂ ಏಕರೂಪನಾದ ಪರಬ್ರಹ್ಮಸ್ವರೂಪಿಯಾದ ಅವನನ್ನುನೋಡುತ್ತಿರುವುದರಿಂದ ನಾನೆಂದಿಗೂ ಲಯರಹಿತನಾಗಿ ಸದ್ರೂಪನಾಗಿರುವೆನು. ಸತ್ವರಜಸ್ತಮೋಗುಣಗಳೇ ಜಾಗರಸ್ವಪ್ನಸುಷುಪ್ತಿಗಳೆಂಬ ಅವಸೆಗಳಾದುದರಿಂದ ಅವು ಬಂದರಲ್ಲಿಬಂದು ಹುಟ್ಟಿ ಅಡಗುತ್ತಿರುವುವು, ನಾನು ಸಾಕ್ಷಿಯಾಗಿ ಅದನ್ನುನೋಡುತ್ತಿರುವೆನು. ಈ ಮೂರು ಅವಸ್ಥೆಗಳೂ ಏಕರೂಪವಾಗಿ ಒಂದು ದಿವಸವಾದರೂ ಇದ್ದುದು ಇದ್ದಹಾಗೆ ಇರುವುದಿಲ್ಲ. ಬದಲಾಯಿಸುತ್ತಿರುವುದು. ನಾನು ಮಾತ್ರ ಏಕರೂಪವಾಗಿಯೇ ಇರು

ವೆನು. ಆದುದರಿಂದ ನಾನೇ ಸತ್ಯಸ್ವರೂಪನೆಂದು ಗ್ರಹಿಸು. ಉಪದ್ರವಕಾರಣಗಳಾದ ದೇಹೇಂದ್ರಿಯ ಮನೋಬುದ್ಧಿ ಚಿತ್ತಾಹಂಕಾರಗಳನ್ನು ನಾನಲ್ಲವೆಂದು ಭಾವಿಸುವುದರಿಂದ ದೃಶ್ಯಗಳಾದ ಪದಾರ್ಥಗಳನ್ನು ತ್ಯಜಿಸುತ್ತಾ ಬಾಧಾವರ್ಜಿತನಾಗಿ ಸ್ಥಿರವಾಗಿರುವುದರಿಂದ ನಾನೇ ಸತ್ಯಸ್ವರೂಪನೆಂದು ತಿಳಿ.

ಕಾಲಸ್ವರೂಪವನ್ನು ಹೇಳುವೆನು ಕೇಳು, ಒಂದು ಲಘುವರ್ಣವನ್ನು ಉಚ್ಚರಿಸತಕ್ಕಷ್ಟು ಕಾಲವು ನಿಮೇಷವೆನಿಸುವುದು. ಅಂಥ ನಿಮೇಷಗಳು ಹದಿನೆಂಟು ಆದರೆ ಒಂದು ಕಾಷ್ಠೆ, ಮುವ್ವತ್ತು ಕಾಷ್ಠೆಗಳಿಗೆ ಒಂದು ಕಳೆ, ಮುವ್ವತ್ತು ಕಳೆಗಳಿಗೆ ಒಂದು ಕ್ಷಣ, ಹನ್ನೆರಡು ಕ್ಷಣಗಳಿಗೆ ಒಂದು ಮುಹೂರ್ತ, ಅಂಥ ಮುಹೂರ್ತಗಳು ಮುವ್ವತ್ತಾದರೆ ಒಂದು ಅಹೋರಾತ್ರವಾಗುವುದು, ಆ ಅಹೋರಾತ್ರಗಳಲ್ಲಿ ಶರೀರೇಂದ್ರಿಯ ಪ್ರಾಣಾಂತಃಕರಣಗಳು ತಮ್ಮ ತಮ್ಮ ವೃತ್ತಿಗಳನ್ನು ನಿಲ್ಲಿಸಿ ತಮಗೆ ಕಾರಣವಾದ ಸುಷುಪ್ತಿರೂಪವೆಂಬ ಮಾಯಾಂಧಕಾರದಲ್ಲಿ ಲಯವಾಗುವುವು. ಆಗ ಜಾಗರಸ್ವಪ್ನಾತ್ಮಕವಾದ ಪ್ರಪಂಚವೆಲ್ಲ ನಾನಾರೂಪವಾಗಿ ಚಿಗುರು, ಎಲೆ, ಹೂ, ಹೀಚು, ಕಾಯಿ, ಹಣ್ಣು, ರೆಂಬೆಗಳು ಇವುಗಳಿಂದ ಕೂಡಿದ ಆಲದಮರವು ಆ ವಟಬೀಜದಲ್ಲಿದ್ದುಕೊಂಡು ಇರುವಂತೆ ನಾನಾವಿಧವರ್ಣಯುಕ್ತವಾದ ನವಿಲು ಅದರ ಮೊಟ್ಟೆಯ ಒಳಭಾಗದಲ್ಲಿ ಅಡಗಿದ್ದಂತೆ ಇರುವುದು. ಇದಕ್ಕೆ ನಿತ್ಯಪ್ರಳಯವೆಂತ ಹೆಸರು. ಅಂತಹ ಅಹೋರಾತ್ರಿಗಳು ಹದಿನೈದು ಆದರೆ ಒಂದು ಪಕ್ಷವಾಗುವುದು. ಆ ಎರಡು ಪಕ್ಷಗಳೂ ಸೇರಿದರೆ ಒಂದು ಮಾಸ, ಅದು ಪಿತೃದೇವತೆಗಳಿಗೆ ಒಂದು ದಿನವು, ಎರಡು ತಿಂಗಳಿಗೆ ಒಂದು ಋತುವು, ಮೂರು ಋತುಗಳಿಗೆ ಒಂದು ಅಯನ, ದಕ್ಷಿಣೋತ್ತರಗಳೆಂಬ ಅಯನಗಳೆರಡೂ ಸೇರಿದರೆ ಒಂದು ಸಂವತ್ಸರ, ಈ ನಮ್ಮ ವರ್ಷವು ದೇವತೆಗಳಿಗೆ ಒಂದು ಯುಗವಾಗುವುದು. ಆ ಪ್ರಮಾಣದ ದಿವಸ ವಾರ ಪಕ್ಷ ಮಾಸಕ್ರಮದಿಂದ ಹನ್ನೆರಡು ಸಾವಿರ ವರುಷಗಳಾದರೆ ಕೃತ ತ್ರೇತಾ-ದ್ವಾಪರ ಕಲಿಗಳೆಂಬ ನಾಲ್ಕು ಯುಗಗಳಾಗುವುವು. ಈ ನಾಲ್ಕಕ್ಕೂ ಸೇರಿ ಒಂದು ಮಹಾಯುಗವೆಂದು ಹೆಸರು. ಈ ಮಹಾಯುಗಗಳು ಎಪ್ಪತ್ತೊಂದಾದರೆ ಒಂದು ಮನ್ವಂತರ. ಅಂತಹ ಮನ್ವಂತರಗಳು ಹದಿನಾಲ್ಕು ಆದರೆ ಸೃಷ್ಟಿಕರ್ತನಾದ ಬ್ರಹ್ಮನಿಗೆ ಒಂದು

ಹಗಲಾಗುವುದು. ಅದು ಚತುರ್ಯುಗಸಹಸ್ರಪರಿಮಾಣವುಳ್ಳದು. ಆ ಹಗಲಿನಲ್ಲಿ ಹದಿನಾಲ್ಕು ಮನುಗಳ ಪ್ರಳಯಗಳೂ ಅನೇಕ ಯುಗಾಂತರ ಪ್ರಳಯಗಳೂ ಉಂಟಾಗಿರುವುವು. ಅವುಗಳಲ್ಲಿ ನಿತ್ಯಪ್ರಳಯವೆಂತಲೂ ನೈಮಿತ್ತಿಕಪ್ರಳಯವೆಂತಲೂ ಎರಡುವಿಧ. ಆ ಪ್ರಳಯದಲ್ಲಿ ಅನಂತ ಭೂತಗಳ ಸಮೂಹವೆಲ್ಲ ನಶಿಸುವುದು. ಆ ಹಗಲು ಮುಗಿದಮೇಲೆ ಬ್ರಹ್ಮದೇವನು ನಿದ್ರಿಸುವನು. ಆ ನಿದ್ರೆಗೆ ಅವ್ಯಕ್ತವೆಂದು ಹೆಸರು, ಆಗ ಬ್ರಹ್ಮಾಂಡದಲ್ಲಿರುವ ಸಮಸ್ತಪ್ರಾಣಿಗಳ ವ್ಯವಹಾರಗಳೂ ನಿಂತುಹೋಗುವುವು. ಅಂತಹಸಂದರ್ಭದಲ್ಲಿ ಪಂಚಮಹಾಭೂತಗಳು ಮಾತ್ರ ಉಳಿದಿರುವುವು. ಅದಕ್ಕೆ ದೈನಂದಿನ ಪ್ರಳಯವೆಂದು ಹೆಸರು, ಆ ಬ್ರಹ್ಮದೇವನ ಅಹಃಪರಿಮಾಣದಷ್ಟೇಕಾಲವು ರಾತ್ರಿಗೂ ಇರುವುದು. ಅಂತಹದಿನಸಂಖ್ಯಾಕ್ರಮದಿಂದ ನೂರುವರುಷಗಳು ಕಳೆದರೆ ಬ್ರಹ್ಮನ ಆಯುಸ್ಸು ಪರಿಣಾಮವನ್ನು ಹೊಂದುವುದು. ಆಗ ಮೃತ್ಯುವು ಸಮಸ್ತಜೀವಿಗಳನ್ನೂ ಒಂದೇಸಾರಿ ನಾಶಮಾಡಿಬಿಡುವುದು. ರುದ್ರನು ಫಾಲನೇತ್ರವನ್ನು ತೆರೆದು ಕ್ರೂರವಾಗಿ ನೋಡುವನು. ಸೂರ್ಯನು ಹನ್ನೆರಡುಮೂರ್ತಿಗಳನ್ನೂ ಧರಿಸಿಕೊಂಡು ಪ್ರಕಾಶಿಸುತ್ತಿರುವನು. ಆ ವೇಳೆಯಲ್ಲಿ ಮಹಾಘೋರವಾಗಿ ಉರಿಯುತ್ತಿರುವ ಅಗ್ನಿಯು ಹುಟ್ಟಿ ಈ ಪೃಥ್ವಿಯನ್ನೆಲ್ಲ ಭಸ್ಮವಾಗಿಮಾಡಿ ಬಿಡುವನು. ಸಪ್ತಮಾರುತಗಳೂ ಒಂದೇಸಾರಿ ಬಲವಾಗಿ ಬೀಸುತ್ತಿರುವುದು. ಪ್ರವಹ, ಆವಹ, ಉದ್ವಹ, ಸಂವಹ, ನಿವಹ, ಪ್ರತಿವಹ, ಪರಾವಹ, ಇವು ಏಳೂ ಸಪ್ತಮರುತ್ತುಗಳು; ವಿವಸ್ವಾನ್, ಅರ್ಯಮ, ಪೂಷಾ, ತ್ವಷ್ಟ, ಸವಿತೃ, ಭಗ, ಧಾತಾ, ವಿಧಾತಾ, ವರುಣ, ಮಿತ್ರ, ಶಕ್ರ, ಉರುಕ್ರಮ, ಇವರು ದ್ವಾದಶಾದಿತ್ಯರು. ಮತ್ತು ಆಗ ಆವರ್ತ, ಸಂವರ್ತ, ಪುಷ್ಕರ, ದ್ರೋಣ, ಕಾಲ, ನೀಲ, ಅನಿಲ, ತಮಸ್ಸು, ವಾರುಣ, ಎಂಬ ನವಮೇಘಗಳು ಹುಟ್ಟಿ ಅಮೋಘಗಳಾಗಿ ನೂರುದಿವ್ಯವರುಷಗಳ ಕಾಲ ಮಹಾವರ್ಷವನ್ನು ಸುರಿಯುವುದು. ಆ ಪ್ರವಾಹದಿಂದ ಲವಣಾದಿ ಸಪ್ತಸಮುದ್ರಗಳು ಒಂದಾಗಿ ಕಲೆತು ಏಕಾರ್ಣವವಾಗಿ ಈ ಭೂಮಂಡಲವನ್ನೆಲ್ಲ ಆಕ್ರಮಿಸುವುದು. ಬಳಿಕ ಈ ಭೂಚಕ್ರವು ಆ ಮಹಾಜಲಮಧ್ಯದಲ್ಲಿ ಒಂದು ಸಣ್ಣ ಮಣ್ಣಿನಉಂಡೆಯಂತೆ ಕಾಣಬರುವುದು. ಚೆನ್ನಾಗಿ ಕಾಯಿಸಿದ ಕಬ್ಬಿಣದಗುಂಡು ಒಂದು ನೀರಿನ ಬಿಂಬವನ್ನು ಹೀರಿಬಿಡುವ ಹಾಗೆ ಬಡಬಾಗ್ನಿಯು ಹುಟ್ಟಿ ವಿಜೃಂಭಿಸಿ ಆ ಮಹಾಸಮುದ್ರದ ನೀರನ್ನೆ

ಲ್ಲಿಕುಡಿದು ಬಿಡುವುದು. ದೀಪವನ್ನು ಗಾಳಿಯು ಆರಿಸಿಬಿಡುವಹಾಗೆ ಆ ಮಹಾತೇಜೋಮಂಡಲವನ್ನು ಮಹಾವಾಯುವು ನಾಶಮಾಡುವುದು. ಆ ಮಹಾವಾಯುವು ನಿರಾಧೇಯವಾಗಿರುವುದರಿಂದ ಆಕಾಶವನ್ನೆಲ್ಲ ಸುತ್ತಾಡಿ ನಿದ್ರಾಕಾಲದಲ್ಲಿ ಪ್ರಾಣಿಗಳಹಾಗೆ ಅಡಗಿ ಹೋಗುವುದು. ಶಬ್ದರೂಪವಾದ ಆಕಾಶವನ್ನು ಶ್ರೋತ್ರರೂಪವಾದ ಸಂಕಲ್ಪವು ನುಂಗಿದಹಾಗೆ ಆ ಆಕಾಶವನ್ನು ಮಹಾಮನಸ್ಸು ನುಂಗುವುದು. ಪಂಚತನ್ಮಾತ್ರಸಹಿತವಾದ ಆ ಮಹಾಮನಸ್ಸನ್ನು ನಿದ್ರಾಸಮಯವು ಕಬಳಿಸುವಂತೆ ಅಹಂಕಾರವು ಕಬಳಿಸುವುದು. ಆ ಅಹಂಕಾರವನ್ನು ಬುದ್ಧಿಯು ಕಬಳಿಸುವುದು. ಆ ಮಹಾಬುದ್ಧಿಯೇ ಮಹತ್ತತ್ವವೆಂದು ಹೇಳಲ್ಪಡುವುದು. ಆ ಮಹತ್ತತ್ವವನ್ನು ಅವ್ಯಕ್ತವು ತನ್ನಲ್ಲಿ ಅಡಗಿಸಿಕೊಳ್ಳುವುದು. ಅದೇ ಮಾಯೆ, ಅವಿದ್ಯೆ, ಅವ್ಯಕ್ತ, ತಮಸ್ಸು, ಸುಷುಪ್ತಿ, ಪ್ರಕೃತಿ, ಆನಂದ ಮೊದಲಾದ ಹೆಸರುಗಳಿಂದ ಹೇಳಲ್ಪಡುವ ಮೂಲಪ್ರಕೃತಿ, ಅದೇ ಬ್ರಹ್ಮಪ್ರಳಯವು. ಅನಾದಿಯಾಗಿಯೂ ಅನಿರ್ವಚನೀಯವಾಗಿಯೂ ಇರುವ ಆ ಅಜ್ಞಾನವು ಸದ್ಗುರೂಕ್ತವಾದ ಜೀವೇಶ್ವರೈಕ್ಯಜ್ಞಾನಾನುಭವ ಸಮಯದಲ್ಲಿ ಇಲ್ಲದೆ ಹೋಗುವುದು. ಅದೇ ಮಹಾಪ್ರಳಯವು. ಇಂಥ ನಿತ್ಯನೈಮಿತ್ತಿಕದೈನಂದಿನಕಲ್ಪಾಂತಮಹಾಪ್ರಳಯಗಳಲ್ಲಿ ಒಂದರಿಂದಲಾದರೂ ಬಾಧಿಸಲ್ಪಡದೆ ಸಾಕ್ಷಿಯಾಗಿ ಅವುಗಳನ್ನು ನೋಡುತ್ತ ಭೂತಭವಿಷ್ಯದ್ವರ್ತಮಾನಕಾಲಗಳಲ್ಲಿ ಏಕರೂಪನಾಗಿರುವುದರಿಂದ ನಾನು ಸದ್ರೂಪನಾಗಿರುವೆನು. ಇದು ಕಲಶವು, ಇದು ವಸ್ತ್ರವು, ಇದು ಮನೆಯು, ಇದು ಗೋಡೆಯು, ಇದು ಅಚೇತನವು, ಇದು ಚೇತನವು, ಇವನು ಸೂರ್ಯನು, ಇವನು ಚಂದ್ರನು, ಇವನು ಪುರುಷನು, ಇವನೇ ನಾನು. ಎಂದು ವಿಚಾರಿಸುತ್ತಾ ಬಂದರೆ ನನಗಿಂತ ಭಿನ್ನಗಳಾಗಿ ಅಚೇತನಗಳಾದ ದೃಶ್ಯಪದಾರ್ಥಗಳನ್ನೆಲ್ಲಾ ಸಾಧನವಿಲ್ಲದೆಯೇ ತಿಳಿದುಕೊಳ್ಳುವ ದ್ರಷ್ಟೃವು ನಾನೇ ಆಗಿರುವುದರಿಂದ ನನ್ನನ್ನು ಜ್ಞಾನಸ್ವರೂಪನೆಂದು ತಿಳಿ. ಮತ್ತು ಇದು ಶರೀರವು, ಇವು ಇಂದ್ರಿಯಗಳು, ಇವು ವಿಷಯಗಳು, ಇವು ಪ್ರಾಣಗಳು, ಇದು ಮನಸ್ಸು, ಇದು ಚಿತ್ತವು, ಇದು ಬುದ್ಧಿಯು, ಇದು ಅಹಂಕಾರವು, ಇದು ವಿದ್ಯೆ, ಇದು ಅವಿದ್ಯೆ, ಇವು ಕಾಮಾದಿ ಷಡ್ವರ್ಗಗಳು. ಮುಂತಾಗಿ ನನ್ನೆದುರಿಗೆ ಕಾಣುವ ಮತ್ತು ಕಾಣದೆ ಇರುವ ಆಂತರ ಪದಾರ್ಥಗಳನ್ನೆಲ್ಲಾ

ಯಾವಾಗಲೂ ಯಾವ ಸಾಧನವೂ ಇಲ್ಲದೆ ನಾನು ತಿಳಿಯಬಲ್ಲೆನಾದುದರಿಂದ ನಾನೇ ಚಿದ್ರೂಪಕನೆಂದು ತಿಳಿ. ಮತ್ತು ಕ್ರಮವಾಗಿ ಪ್ರಾಪ್ತವಾಗುತ್ತಿರುವ ಸುಖದುಃಖಗಳನ್ನು ನೋಡುತ್ತ, ಚಿಂತಿಸದೆ ಸದಾಕಾಲವೂ ಆನಂದಮಯಾತ್ಮನಾಗಿರುವುದರಿಂದ ಬ್ರಹ್ಮಾನಂದಸ್ವರೂಪನು ನಾನೇ ಎಂದು ತಿಳಿದುಕೋ. ವಿವಿಧದುಃಖಮಯಗಳಾಗಿರುವ ವಿಷಯಗಳೆಲ್ಲವೂ ಅತ್ಯಂತಸುಖಪ್ರದವಾಗಿ ಕಾಣುತ್ತಿರುವುವು. ಇವೆಲ್ಲಾ ಆನಂದಮಯವಾದ ನನ್ನ ಪ್ರತಿಬಿಂಬಮಾತ್ರದಿಂದಲೇ ಅಲ್ಲವೇ! ನನಗೆ ದುಃಖವು ಕಲ್ಪಿತವಾಗಿ ತೋರುವುದು, ಸುಖವಾದರೋ ಸ್ವಾಭಾವಿಕವಾಗಿರುವುದು, ಆದುದರಿಂದ ನಿರತಿಶಯನಿರುಪಮಾನಂದಮಯಸ್ವರೂಪನು ನಾನೇ ಎಂದು ತಿಳಿ, ಎಂದು ಮತ್ತಿಂತೆಂದನು.

— ಅಖಂಡ ಲಕ್ಷಣ —

ಎಲೈ ಮಾರುತಿಯೇ! ಈ ಪ್ರಕಾರವಾಗಿ ಭೂತಭವಿಷ್ಯದ್ವರ್ತಮಾನಕಾಲಗಳಿಂದ ಬಾಧಿಸಲ್ಪಡದೆ ಇರುವುದರಿಂದಲೂ, ತನ್ನಲ್ಲಿ ಆರೋಪಿತಗಳಾದ ಸಮಸ್ತ ಪದಾರ್ಥಗಳನ್ನೂ ಪ್ರಕಾಶಗೊಳಿಸತಕ್ಕವನಾಗಿರುವುದರಿಂದಲೂ, ಪರಮಪ್ರೇಮಾಸ್ಪದನಾಗಿರುವುದರಿಂದಲೂ, ಸಚ್ಚಿದಾನಂದಸ್ವರೂಪನಾಗಿರುವ ನಾನು ಚಿನ್ನ, ಬೆಳ್ಳಿ, ತಾಮ್ರ ಮುಂತಾದ ಲೋಹ ಅಥವಾ ಮೃಣ್ಮಯಗಳಾದ ಪಾತ್ರೆಗಳಲ್ಲಿ ಒಳಗೂ ಹೊರಗೂ ಅಂಟದೆ ಆಕಾಶವು ವ್ಯಾಪಿಸಿಕೊಂಡಿರುವಹಾಗೆ ಪಂಚಭೂತಗಳಲ್ಲಿಯೂ ದೇವಮಾನವತಿರ್ಯಕ್ ಸ್ಥಾವರಾದಿ ಚರಾಚರಗಳಲ್ಲಿಯೂ ಒಳಗೂ ಹೊರಗೂ ಅಸಂಗನಾಗಿ ತುಂಬಿಕೊಂಡಿರುವುದರಿಂದ ನನಗೆ ದೇಶಕಾಲಾದಿ ಪರಿಚ್ಛೇದಗಳೊಂದೂ ಇಲ್ಲವು. ನಾನು ಏಕರೂಪನಾಗಿಯೂ ಸಾಕ್ಷಿಯಾಗಿಯೂ ಇದ್ದುಕೊಂಡು, ಅವುಗಳನ್ನು ಯಾವಾಗಲೂ ದೃಶ್ಯವಾಗಿ ತಿಳಿಯುತ್ತಿರುವೆನು. ಒಂದು ಗಿಡಕ್ಕೆ ಇನ್ನೊಂದು ಗಿಡವು ಸಜಾತೀಯವಾಗಿ ಕಲ್ಲು ಮೊದಲಾದುವು ವಿಜಾತೀಯಗಳಾಗಿ, ಪತ್ರಪುಷ್ಪಫಲಾದಿಗಳು ತನ್ನಲ್ಲಿ ಉಳ್ಳವುಗಳಾಗಿ ಪ್ರಕಾಶಿಸುವಂತೆ ಈ ಅನಾತ್ಮಪ್ರಪಂಚವು ನಶಿಸತಕ್ಕದ್ದಾಗಿರುವುದರಿಂದ ಕರಚರಣಾದಿ ಅವಯವಶೂನ್ಯವಾಗಿಯೂ, ಸರ್ವತ್ರ ತುಂಬಿರುವುದಾಗಿಯೂ, ಯಾವುದರೊಂದಿಗೂ ಸೇರದೆ ಇರುವುದಾಗಿಯೂ ಇರುವ ಆಕಾಶಕ್ಕೆ ಶೂನ್ಯರೂಪವೇ ಸ್ವಭಾವವಾಗಿರುವುದರಿಂದಲೂ ಮೊಲದ ಕೊಂಬು ಇಲ್ಲದ್ದೂ ಇರುವುದೂ ತಿಳಿಯದಂತೆ

ಸಜಾತೀಯ ವಿಜಾತೀಯ ಸ್ವಗತಗಳು ಆಗಲಾರವು. ಹಾಗಿರುವುದರಿಂದ ಅಪರಿಚ್ಛೇದ್ಯನಾಗಿಯೂ ಪರಿಪೂರ್ಣನಾಗಿಯೂ ಇರುವ ಪರಬ್ರಹ್ಮ ಚೈತನ್ಯವು ನಾನೇ ಎಂದು ತಿಳಿದುಕೋ, ಆಂಜನೇಯನೇ ಕೇಳು, ನಾನೇ ಅಖಂಡಸಚ್ಚಿದಾನಂದಸ್ವರೂಪನು. ಸ್ವಯಂಪ್ರಕಾಶನಾದ ನನ್ನ ಸ್ಥಿತಿಯನ್ನು ನೋಡಿ, ತನ್ನನ್ನು ನಾನೇ ಎಂದು ತಿಳಿದುಕೊಳ್ಳುವ ಪ್ರಾಜ್ಞರು ನನ್ನ ಸ್ವರೂಪವನ್ನು ಪಡೆದು ಜೀವನ್ಮುಕ್ತರಾಗುವರು.

ಈ ರೀತಿಯಾಗಿ ಬೋಧಿಸಲು ಆ ಭಕ್ತಾಗ್ರಣಿಯಾದ ಆಂಜನೇಯನು ಆನಂದಮಯನಾದ ಶ್ರೀರಾಮನ ಪಾದಾರವಿಂದಗಳಲ್ಲಿ ಸಾಷ್ಟಾಂಗ ಪ್ರಣಾಮ ಮಾಡಿದನು ಆ ಪರಮಪುರುಷನು ಆ ಮಾರುತಿಯನ್ನು ತನ್ನ ಕೈಗಳಿಂದ ಎತ್ತಿ ಹಿಡಿದು ತನ್ನ ಹತ್ತಿರದಲ್ಲಿ ಕುಳ್ಳರಿಸಿಕೊಂಡು, ಅವನ ತಲೆಯಮೇಲೆ ತನ್ನ ಹಸ್ತವನ್ನಿಟ್ಟು ಆ ಪ್ರಜ್ಞಾನವೇ ನೀನೆಂದು ಉಪದೇಶಮಾಡಿ ತನ್ನ ನಿಜಸ್ವರೂಪವನ್ನು ತೋರಿಸಿದನು. ಆ ಆಂಜನೇಯನು ದಿವ್ಯಜ್ಞಾನವನ್ನು ಪಡೆದು ಸಚ್ಚಿದಾನಂದಸ್ವರೂಪನಾಗಿ ತನ್ನಲ್ಲಿ ಸ್ವಯಂಪ್ರಕಾಶವನ್ನು ಕಂಡನು. ಅಂತಹ ತನ್ನನ್ನು ನೋಡಿ, ಆನಂದಮೂರ್ತಿಯಾಗಿ ಚಿತ್ರಪ್ರತಿಮೆಯಂತೆ ಸ್ವಲ್ಪಹೊತ್ತಿನತನಕ ನಿಶ್ಚೇಷ್ಟಿತನಾಗಿದ್ದನು. ಇಂತಹ ವಿಜ್ಞಾನಯೋಗಸಮಾಧಿಯನ್ನು ಪಡೆದಮೇಲೆ ಆ ಆಂಜನೇಯನು ಆನಂದಮೂರ್ತಿಯಾಗಿ ತನ್ನ ಎದುರಿಗೆ ನಿಂತಿರುವ ಪರಬ್ರಹ್ಮಸ್ವರೂಪನಾದ ಶ್ರೀರಾಮನನ್ನು ನೋಡಿ ಭಕ್ತಿಯಿಂದ ವಂದಿಸಲು ಆ ಆತ್ಮಾರಾಮನು ತನ್ನ ಭಕ್ತನನ್ನು ಗಾಢಾಲಿಂಗನ ಮಾಡಿಕೊಂಡನು.

ಎರಡನೆಯಸಂಧಿ ಮುಗಿದುದು.



ಮೂರನೆಯ ಸಂಧಿ.

ಬಳಿಕ ಆಂಜನೇಯನು ಶ್ರೀರಾಮಚಂದ್ರನನ್ನು ನೋಡಿ ಸಾಷ್ಟಾಂಗ ಪ್ರಣಾಮವಮಾಡಿ ಇಂತೆಂದನು—“ ಎಲೈ ಮೋಕ್ಷಲಕ್ಷ್ಮೀಕಾಂತನೆ! ಪರಾತ್ಪರಾ! ಪರಂಧಾಮ! ನೀನು ನಿಷ್ಕಾಮನಾಗಿಯೂ ಸಂಪೂರ್ಣಕಾಮನಾಗಿಯೂ ಇದ್ದೀಯೆ. ನಿನ್ನ ಸ್ವರೂಪವು ಅನಂತವಾಗಿಯೂ ಅಚಿಂತ್ಯವಾಗಿಯೂ ಅಪ್ರಮೇಯವಾಗಿಯೂ ಇರುವುದು. ನೀನು ನಿರ್ದ್ವಂದ್ವನಾಗಿ ಶೋಕಮೋಹಾದಿಗಳಿಲ್ಲದೆ ಸ್ಥೂಲಸೂಕ್ಷ್ಮಾದಿಗಳನ್ನೂ ಪಂಚಭೂತಗಳನ್ನೂ ನೋಡುತ್ತಾ ನಿರ್ವಿಕಾರನಾಗಿಯೂ ನಿರ್ವಿಕಲ್ಪನಾಗಿಯೂ ಇರುತ್ತೀಯೆ. ನೀನು ಮಾಯೆಯಲ್ಲಿ ಪ್ರತಿಫಲಿಸಿದ ಈಶ್ವರಸ್ವರೂಪನಾಗಿದ್ದೀಯೆ, ಮಾಯಾರಹಿತನಾಗಿದ್ದೀಯೆ, ವೇದವೇದಾಂತಗಳಿಗೆ ಅಗೋಚರನಾದ ನಿನ್ನ ಮಹಿಮೆಯನ್ನು ವರ್ಣಿಸಲು ನಾನೆಷ್ಟರವನು! ಎಲೈ ಸ್ವಾಮಿಯೆ! ನೀನೇ ಯಜ್ಞನಿಯಾಮಕನು, ಯಜ್ಞನಿಧಾನಕನು, ಯಜ್ಞಕರ್ತೃವು, ಯಜ್ಞಭೋಕ್ತೃವು, ಆಗಿದ್ದೀಯೆ, ಎಲೈ ಲಕ್ಷ್ಮೀಕಾಂತನೆ! ನೀನು ಪರಾಪರಪ್ರಕೃತಿಗೆ ಮೂಲನಾಗಿದ್ದೀಯೆ.

ಮಾಯೆಯನ್ನು ಜಯಿಸಿದ್ದರೂ ಸತ್ವಸ್ವರೂಪವಾದ ಮಾಯೆಯುಳ್ಳವನಾಗಿದ್ದೀಯೆ, ಸರ್ವಜ್ಞನಾಗಿಯೂ ಸರ್ವಶಕ್ತನಾಗಿಯೂ ಸರ್ವಕರ್ತನಾಗಿಯೂ ಸೃಷ್ಟಿಸ್ಥಿತಿಲಯಗಳಿಗೆ ಕಾರಣನಾಗಿಯೂ ಇದ್ದೀಯೆ. 'ನಾನು ಈ ಪ್ರಪಂಚದಲ್ಲಿ ಪ್ರಕಾಶಿಸುತ್ತಿರುವೆನು. ಪ್ರಪಂಚವು ನನ್ನಲ್ಲಿ ಪ್ರಕಾಶಿಸುವುದು.' ಎಂದು ಯೋಚಿಸಿ ತನ್ನನ್ನು ಪ್ರಪಂಚದಲ್ಲಿಯೂ ಪ್ರಪಂಚವನ್ನು ತನ್ನಲ್ಲಿಯೂ ಇಲ್ಲದಂತೆ ನೋಡುವ ಯುಕ್ತಿಯೇ ನಿನ್ನ ಯೋಗಮಾಯೆಯಾಗಿದೆ. ಈ ಅಭೇದಬುದ್ಧಿಯಿಂದ ಪರಬ್ರಹ್ಮನಾದ ನಿನ್ನನ್ನು ನೀನೇ ನೋಡಿಕೊಳ್ಳುತ್ತಾ ಸಚ್ಚಿದಾನಂದಸ್ವರೂಪನಾಗಿ ಪ್ರಕಾಶಿಸುತ್ತಿರುವೆಯೆಂದು ತಿಳಿದುಕೊಂಡೆನು. ನಾರಾಯಣಿ, ವೈಷ್ಣವಿ, ದೇವಿ, ಎಂಬ ತ್ರಿಗುಣಾತ್ಮಕವಾದ ಪ್ರಕೃತಿಗಳುಳ್ಳ ನಿನ್ನ ಶಕ್ತಿಯು ಅಪರಾಪ್ರಕೃತಿ, ಪರಾಪ್ರಕೃತಿಯೆಂದು ಎರಡುಬಗೆಯಾಗಿರುವುದು. ಇವೆರಡರಲ್ಲಿಯೂ ಸೇರಿ ಪಂಚಮಹಾಭೂತಗಳೂ ಮನೋಬುದ್ಧಿಚಿತ್ತಾಹಂಕಾರಗಳೂ, ಐದು ಜ್ಞಾನೇಂದ್ರಿಯಗಳೂ, ಐದು ಕರ್ಮೇಂದ್ರಿಯಗಳೂ, ಪಂಚತನ್ಮಾತ್ರಗಳೂ ಇವೆಲ್ಲ ಸೇರಿ ಇಪ್ಪತ್ತುನಾಲ್ಕು ತತ್ವಗಳಾಗಿರುವುವು. ಆ ಅಪರಾಪ್ರಕೃತಿಯು ದೈವಿ, ಆಸುರಿ, ಎಂದು ಎರಡು ಬಗೆಯಾಗಿರುವದು. ಆ ದೈವಿಯು ಶುದ್ಧಸತ್ವಪ್ರಧಾನವುಳ್ಳುದು. ಅದಕ್ಕೆ ವಿದ್ಯೆ, ಮಾಯೆ, ಎಂಬ ಹೆಸರುಗಳುಂಟು. ಅವೆರಡನ್ನೂ ಪಡೆದಿರುವ ನೀನೇ ಈಶ್ವರನೆಂಬ ಜೀವಾತ್ಮನಾಗಿದ್ದೀಯೆ. ಜಾಗ್ರತ ಮೊದಲಾದ ಮೂರು ಅವಸ್ಥೆಗಳೂ ಈಶ್ವರಜೀವಸಂಜ್ಞೆಗಳೂ ಸರ್ವಜ್ಞತ್ವಾದಿಗುಣಗಳೂ, ಉಳ್ಳವನಾಗಿ ಈ ಜೀವೇಶ್ವರನಿಗೆ ಸಾಕ್ಷೀಭೂತನಾಗಿಯೂ ಅವಿಕಾರನಾಗಿಯೂ ಇರುವೆ. ಅಪರಾಪ್ರಕೃತಿ, ಅವಿದ್ಯೆ, ಕ್ಷರ, ಕ್ಷೇತ್ರ, ಪದ ಮೊದಲಾದ ಅನೇಕ ಶಬ್ದಗಳಿಂದ ವಾಚ್ಯವಾದ ಪ್ರಕೃತಿಸಾನ್ನಿಧ್ಯದಲ್ಲಿ ಇರುವುದರಿಂದ ಹುಟ್ಟಿದ ಬ್ರಹ್ಮಪ್ರಕೃತಿಗಳ ಪ್ರತಿಬಿಂಬಸಂಯೋಗದಿಂದಲೂ, ಮಿಥ್ಯಾತಾದಾತ್ಮ್ಯದಿಂದಲೂ ಅಪರಾಪ್ರಕೃತಿ ಎಂಬದಾಗಿಯೂ ವಿದ್ಯೆಯೆಂಬುದಾಗಿಯೂ ಅಕ್ಷರವೆಂಬುದಾಗಿಯೂ ಕ್ಷೇತ್ರಜ್ಞನೆಂಬುದಾಗಿಯೂ ಸತ್ ಎಂಬುದಾಗಿಯೂ ಪುರುಷನೆಂಬುದಾಗಿಯೂ ಬೇರೆ ಬೇರೆ ಹೆಸರುಗಳಿಂದ ನೀನು ಒಪ್ಪುತ್ತಿರುವೆ. ಅಜ್ಞಾನದಿಂದ ನಾನು ಜೀವನಾಗಿ ಶರೀರೇಂದ್ರಿಯಾದಿಗಳು ನಾನೇ ಎಂದು ತಿಳಿದು ಇದ್ದೆನು. ನಿನ್ನ ಉಪದೇಶದಿಂದ ಉಂಟಾದ ಜ್ಞಾನದ ದೆಸೆಯಿಂದ 'ಶರೀರೇಂದ್ರಿಯಾದಿಗಳು ನಾನಲ್ಲ, ಇವು

ಗಳಿಗೆ ಸಾಕ್ಷಿಯು ನಾನು' ಎಂದು ತಿಳಿದು ಅಪರೋಕ್ಷಜ್ಞಾನದಿಂದ ಅವಿದ್ಯೋಪಾಧಿಯಿಂದ ಹುಟ್ಟಿದ ಸಾಕ್ಷಿತ್ವ, ಸರ್ವಜ್ಞತ್ವವೊದಲಾದ ಧರ್ಮಗಳನ್ನು ತಿರಸ್ಕರಿಸಿ, ಸಚ್ಚಿದಾನಂದ ಸ್ವರೂಪವಾಗಿಯೂ ನಿತ್ಯವಾಗಿಯೂ ನಿರ್ಮಲವಾಗಿಯೂ ಇರುವ ನಿನ್ನ ಆಕಾರವನ್ನು ಭಜಿಸುವೆನು. ತ್ರಿಗುಣಾತ್ಮಕವಾದ ಪ್ರಕೃತಿಯಿಂದ ಕೂಡಿ ನಿರ್ಗುಣವಾದ ಸ್ವರೂಪವುಳ್ಳ ಪರಮಾತ್ಮನಾದ ನೀನು ನಿನ್ನ ಪ್ರತ್ಯಗಾತ್ಮಸ್ವರೂಪದಿಂದ ನನಗೆ ಸಾಕ್ಷಾತ್ತಾಗಿ ದರ್ಶನ ಕೊಡು. ಮೇಘದಲ್ಲಿಯು ಘಟಾಕಾಶವು ಆಕಾಶದ ಅಂಶವಾಗಿ ಅದಕ್ಕಿಂತ ಅನ್ಯವಲ್ಲದೆ ಇರುವ ಹಾಗೆ ಜೀವೇಶ್ವರಶರೀರಗಳಿಂದ ಕೂಡಿ ಕೂಟಸ್ಥನಾಗಿ ಪ್ರಕಾಶಿಸುವ ನಾನು ನಿನ್ನ ಅಂಶವೇ ಆಗಿದ್ದರೂ ಅನಾದಿಯಾದ ಅವಿದ್ಯಾಶಕ್ತಿಯಿಂದ ನಾನು ಮೂರ್ಖನು ಎಂದು ತಿಳಿದು ನನ್ನಲ್ಲಿ ಗುಣಗಳನ್ನು ಆರೋಪಿಸಿ ಕ್ಷೇತ್ರಜ್ಞನೆಂದು ಇದುವರೆಗೂ ಸಂಸಾರವಾಸನೆಯನ್ನು ಹೊಂದಿದ್ದೆನು. ಈಗ ಇವುಗಳೆಲ್ಲ ಕಲ್ಪಿತವೆಂದು ಗೊತ್ತಾಯಿತು. ಜೀವಪರಮಾತ್ಮಗಳಿಗೆ ಸ್ವಲ್ಪವೂ ಭೇದವಿಲ್ಲ. ಇಂತಹ ದ್ವೈತಭ್ರಾಂತಿಯಿಲ್ಲದ ಬ್ರಹ್ಮಜ್ಞಾನವನ್ನೂ ನನಗೆ ಸದಾಕಾಲವೂ ಅನುಗ್ರಹಿಸು.' ಎಂದು ಪ್ರಾಜ್ಞತೆಯಿಂದ ಹಲವು ವಿಧವಾಗಿ ಸ್ತೋತ್ರಮಾಡುತ್ತಿರುವ ಹನುಮಂತನನ್ನು ಕರುಣಾಕಟಾಕ್ಷವಿಚಕ್ಷಣದಿಂದ ನೋಡಿ ಪರಂಧಾಮನಾದ ಶ್ರೀರಾಮನಿಂತೆಂದನು—'ಎಲೈ ಆಂಜನೇಯನೇ ! ನೀನು ಸಂತುಷ್ಟಾಂತರಂಗನಾಗಿ ಮನಶ್ಶಾಂತಿಗೋಸ್ಕರ ಬ್ರಹ್ಮನಿಷ್ಠೆಯನ್ನು ಅಪೇಕ್ಷಿಸಿರುವೆ. ಆದುದರಿಂದ ನಿನಗೆ ಅಮನಸ್ಕವೆಂಬ ರಾಜಯೋಗವನ್ನು ಉಪದೇಶಿಸುವೆನು. ಸಂಶಯವನ್ನು ಬಿಟ್ಟು ಕೇಳು. ಸಮುದ್ರಗಳನ್ನೂ ಆಯಾಸವಿಲ್ಲದೆ ಈಜಬಹುದು. ಆಕಾಶವನ್ನು ನುಂಗಬಹುದು. ಈ ಅಮನಸ್ಕಯೋಗವನ್ನು ತಿಳಿಯುವುದು ಕಷ್ಟ. ಆದುದರಿಂದ ಕೇವಲ ತತ್ವವಿಚಾರವಾದ ಶಾಶ್ವತಸುಖಪ್ರದವಾದ ಇದನ್ನು ನಿನಗೆ ಸುಲಭವಾಗಿ ಹೇಳುವೆನು, ಕೇಳು. ಅಮೃತವನ್ನು ಸುಖವಾಗಿ ಕುಡಿಯುವಂತೆ ಅಮನಸ್ಕವೆಂಬ ರಾಜಯೋಗವನ್ನು ಧರಿಸಿ ಸದಾಕಾಲವೂ ಅಭೇದವಾಗಿ ಕೇವಲಾತ್ಮನಾದ ತನ್ನನ್ನು ಕಂಡುಕೊಳ್ಳುವ ಬ್ರಹ್ಮಜ್ಞನನ್ನು ಮುಕ್ತಿಕಾಂತೆಯು ಪರಿಗ್ರಹಿಸುವಳು. ತಾರಕಸಾಂಖ್ಯಯೋಗಗಳು ಅಷ್ಟು ಶ್ರೇಷ್ಠಗಳಲ್ಲ, ಅಮನಸ್ಕಯೋಗವೇ ಪರಿಗ್ರಾಹ್ಯವು. ಇದು ಪ್ರಾಚೀನವಾಗಿಯೂ ಮನೋಹರವಾಗಿಯೂ ಅತಿ ರಹಸ್ಯವಾಗಿಯೂ,

ಇತರ ಯೋಗಗಳಿಗಿಂತ ಉತ್ತಮವಾದುದಾಗಿಯೂ ಸಿಕ್ಛಲವಾದ ಸಮಾಧಿಯಾಗಿಯೂ ಇರುವುದು, ಪೃಥಿವಿ ಮೊದಲಾದ ಸ್ಥೂಲದ್ರವ್ಯಗಳೂ ಪರಮಾಣು ಮೊದಲಾದ ಸೂಕ್ಷ್ಮದ್ರವ್ಯಗಳೂ ಇವುಗಳನ್ನು ಪ್ರಮಾಣಗಳಿಂದ ವಸ್ತುನಿರ್ಣಯಮಾಡತಕ್ಕವನೂ ಪ್ರಮಾಣವೂ ಪ್ರಮೇಯವೂ ಮನಸ್ಸೇ. ಕಾಮ, ರಾಗ, ದ್ವೇಷ, ಮತ್ಸರ, ಮೊದಲಾದವೃತ್ತಿಗಳೂಮನಸ್ಸೇ. ಸರ್ವಧರ್ಮಗಳೂ ಮನಸ್ಸೇ. ಬಂಧಮೋಕ್ಷಗಳೂಮನಸ್ಸೇ. ನಾಮರೂಪಾತ್ಮಕವಾದ ಈ ಪ್ರಪಂಚವೆಲ್ಲ ಪರಿಶೀಲನಮಾಡಿದರೆ ಸರ್ವವೂ ಮನಸ್ಸಿನಿಂದಲೇ ಕಲ್ಪಿತವೆಂದು ಭಾವಿಸು. ಸರ್ವಸಂಸಾರಗಳೂ ಮನಸ್ಸಿನಲ್ಲಿಯೇ ಹುಟ್ಟುವುದು; ಮನಸ್ಸಿನಲ್ಲಿಯೇ ಇರುವುದು; ಮನಸ್ಸಿನಲ್ಲಿಯೇ ಅಡಗುವುದು. ಆದುದರಿಂದ ಪುತ್ರಕಳತ್ರಾದಿ ಸಂಸಾರಗಳಿಗೆಲ್ಲ ಮನಸ್ಸೇ ಕಾರಣವು. ಅದು ಹೇಗೆಂದರೆ, ಮನಸ್ಸು ಗಾಢನಿದ್ರೆಯಲ್ಲಿ ಲಯವಾದರೆ ಯಾವ ವಿಷಯವೂ ತೋರದಿರುವುದು. ಆ ಮನಸ್ಸು ಎಚ್ಚತ್ತರೆ ಸಮಸ್ತ ಜಗತ್ತೂ ಹುಟ್ಟಿ ಕಾಣಬರುತ್ತಿರುವುದು. ಇಂತಹ ದೃಢವಾದ ಬಂಧಮೋಕ್ಷಗಳಿಗೆ ಕಾರಣಕಾರ್ಯವೆಲ್ಲವೂ ತಾನೇಆಗಿ ಯಾವಾಗಲೂ ಒಳಗೂ ಹೊರಗೂ ಸಂಚರಿಸುತ್ತಿರುವುದು. ಮತ್ತು ಈ ಮನಸ್ಸು ಪ್ರಪಂಚರೂಪವಾಗಿ ಸಂಕಲ್ಪವೆಂತಲೂ, ಸಂಸಾರವೆಂತಲೂ, ವಾಸನಗಳೆಂತಲೂ, ಬಂಧ ಮೋಕ್ಷಸ್ವರೂಪವೆಂತಲೂ ಎನ್ನಿಸಿಕೊಳ್ಳುವುದು, ಇದೇ ಮನಸ್ಸು ಸುಷುಪ್ತಿರೂಪವಾಗಿ ಅವಿದ್ಯೆ, ಪ್ರಕೃತಿ, ಅಜ್ಞಾನ. ಮಾಯೆ, ಎಂಬ ಹೆಸರುಗಳಿಂದೊಪ್ಪುವುದು. ಅಂತಹ ಕಾರ್ಯಕಾರಣರೂಪವಾದ ಆ ಮನಸ್ಸು ಇಲ್ಲದೇಹೋಗುವುದೇ ಅಮನಸ್ಕವೆಂಬ ರಾಜಯೋಗವು. ಹಾವನ್ನು ನೋಡಿ ಸರ್ಪವೆಂದು ಭಾವಿಸಿದರೆ ನಿಜವಾದೀತೆ? ಹಾಗೆಯೇ ಬಂದು ದಾರವನ್ನು ನೋಡಿ ಮನುಷ್ಯನೆಂದು ಭಾವಿಸಿದರೆ ಕಾಣಬರುವುದೇ? ಕಲ್ಪಿತವಾದ ಬಿಸಿಲ್ಗುರೆಯು ನಿಜವಾದ ನೀರಾದೀತೆ? ಹೀಗೆಯೇ ಅಖಂಡಪರಿಪೂರ್ಣವಾದ ಸಚ್ಚಿದಾನಂದ ಪರಬ್ರಹ್ಮನ ದರ್ಶನವುಂಟಾದ ಕೂಡಲೆ ಕಂಪಿತವಾದ ಮನಸ್ಸು ಲಯವಾಗಿ ಎಲ್ಲಲ್ಲಿಯೂ ಕಾಣಬರುವುದು. ನಿತ್ಯಾನಿತ್ಯವಸ್ತುವಿವೇಕ, ಇಹಪರಫಲಗಳನ್ನು ಅನುಭವಿಸುವುದರಲ್ಲಿ ವಿರಕ್ತಿ, ಶಮದಮಾದಿಸದ್ಗುಣಸಂಪತ್ತಿ, ಮೋಕ್ಷಾಪೇಕ್ಷೆ, ಇವು ನಾಲ್ಕಕ್ಕೂ ಸಾಧನಚತುಷ್ಟಯವೆಂದು ಹೆಸರು. ಇವು ನಾಲ್ಕನ್ನೂ ಹೊಂದಿ ಸಮಸ್ತ ಲಕ್ಷಣಗಳಿಂದ ಜ್ಞಾನೋಪದೇಶಕ್ಕೆ ಅರ್ಹನಾಗಿ ಇರುವಾಗ ಸ್ವಾಧಿಷ್ಠಾನಚಿದಾಭಾಸನಾ

ದ ನಿನಗೆ ಮುಚ್ಚಿಕೊಂಡಿರುವ ಇಪ್ಪತ್ತುನಾಲ್ಕು ತತ್ವಗಳೇ ಸ್ವರೂಪಗಳಾಗಿ ಉಳ್ಳ ಪಂಚಕೋಶಗಳನ್ನು ಬೇರೆಬೇರೆ ಭಾಗಿಸು! 'ನೇತಿನೇತಿ' ಎಂದರೆ ಈ ಪಂಚಕೋಶಾದಿಕವು ನೀನಲ್ಲ! ನೀನಲ್ಲ! ಎಂದು ಮಹಾವಾಕ್ಯವು ಹೇಳಿರುವಂತೆ ನಾನಲ್ಲವೆಂದು ತಿರಸ್ಕರಿಸಿ ಮುಖ್ಯವಾದ ಪ್ರತ್ಯಗಾತ್ಮನ ಚೇತನ ಸ್ವರೂಪವೇ ನಾನಾಗಿರುವೆನೆಂದು ತಿಳಿದಮೇಲೆ ದೇವತೆಗಳೂ ತಿರ್ಯಗ್ಜಂತುಗಳೂ ಮನುಷ್ಯರೂ ಮೊದಲಾದ ಸಕಲಜೀವಿಗಳೂ ಅನ್ನಮಯಾದಿಪಂಚಕೋಶಗಳೂ ಪೃಥಿವ್ಯಾದಿ ಪಂಚಭೂತಗಳೂ, ಇವುಗಳನ್ನೆಲ್ಲ ಒಂದೇ ಸಾರಿ ತಳ್ಳಿಬಿಟ್ಟು ಅವುಗಳಲ್ಲಿರುವ ಪರಬ್ರಹ್ಮಚೈತನ್ಯವನ್ನು ಸತ್ಯವಾಗಿ ಭಾವಿಸಿ ಆಮೇಲೆ ತ್ವಂ (ನೀನು), ಅಹಂ (ನಾನು) ಆತ್ಮ (ತಾನು). ಪ್ರಜ್ಞಾನ, ಇವುಗಳಿಗೆ ಲಕ್ಷ್ಯಾರ್ಥಭೂತನಾದ ಪ್ರತ್ಯಗಾತ್ಮನು ನಾನೇ, ಸಚ್ಚಿದಾನಂದ ಲಕ್ಷಣವುಳ್ಳ ಪ್ರತ್ಯಗಾತ್ಮನೂ ನಾನೇ ಎಂದು ಅನ್ಯೋನ್ಯವಾಗಿಯೂ ಅಖಂಡವಾಗಿಯೂ ಅಭೇದವಾಗಿಯೂ ಐಕ್ಯಸುಖವನ್ನನುಭವಿಸಿ ಆವರಣರಹಿತವಾಗಿಯೂ ಸರ್ವಾಧಾರವಾಗಿಯೂ ಪರಿಪೂರ್ಣವಾಗಿಯೂ ಶುದ್ಧವಾಗಿಯೂ ಅದ್ವಿತೀಯವಾಗಿಯೂ ಪ್ರಜ್ಞಾನುರೂಪವಾಗಿಯೂ ಪ್ರಕಾಶಿಸುವ ನಿನಗೆ ಸೂರ್ಯನಿಗೆ ಕತ್ತಲೆ ಇಲ್ಲದಂತೆ ಜ್ಞಾನೇಂದ್ರಿಯ ಕರ್ಮೇಂದ್ರಿಯಗಳೂ ಆಯಾ ಇಂದ್ರಿಯ ವ್ಯಾಪಾರಗಳೂ ಇವೇ ಸ್ವರೂಪವಾಗಿ ಉಳ್ಳ ಮನಸ್ಸು ಇರುವುದಿಲ್ಲ. ರಜ್ಜುವಿನಲ್ಲಿ ತೋರಿದ ಹಾವನ್ನು ನೋಡಿ ಇದು ಸರ್ಪವಲ್ಲವೆಂದು ತಿರಸ್ಕಾರವಮಾಡಿ ಆ ಬಳಿಕ ಇದು ಹಾವೇ ಎಂದು ನಿಶ್ಚಯಿಸಿ ಮುಖ್ಯವಾದ ಆ ಹಗ್ಗವನ್ನು ತಿಳಿದುಕೊಂಡಮೇಲೆ ಕಲ್ಪಿತವಾದ ಸರ್ಪವು ಕಾಣಬಾರದೆ ಹಗ್ಗಮಾತ್ರ ಉಳಿಯುವಹಾಗೆ ಸ್ಥೂಲಸೂಕ್ಷ್ಮಕಾರಣಶರೀರಗಳು ಬ್ರಹ್ಮವಲ್ಲವೆಂದು ತಿರಸ್ಕರಿಸಿ ಬ್ರಹ್ಮಸ್ವರೂಪಿಯಾದ ನಿನಗೆ ಸಂಶಯಾತ್ಮಕವಾದ ಮನಸ್ಸೇ ಇಲ್ಲದೆ ಹೋಗುವುದು.

ಎಲೈ ಆಂಜನೇಯನೇ. ಕಣ್ಣು ಮುಚ್ಚಿಕೊಂಡಿರುವ ಸುಷುಪ್ತಿಯವಸ್ಥೆಯಲ್ಲಿಯೂ ಕಣ್ಣು ತೆರೆದ ಜಾಗ್ರದವಸ್ಥೆಯಲ್ಲಿಯೂ, ಸಚ್ಚಿದಾನಂದ ಸ್ವರೂಪನಾದ ಪರಬ್ರಹ್ಮನನ್ನು ನೋಡದೆ ಇದ್ದರೂ, ಕಣ್ಣು ಮುಚ್ಚಿದರೂ ಕಣ್ಣು ತೆರೆದರೂ, ಒಳಗೂ ಹೊರಗೂ ಮನೋ ವಿಕಲ್ಪವೇ ಕಾಣಬರುತ್ತಿರುವುದು. ತಾರಕ ಸಾಂಖ್ಯಯೋಗಗಳಿಂದ ಏತಕ್ಕೆ ಕಷ್ಟಪಡಬೇಕು? ಮನಸನ್ನೇತಕ್ಕೆ ನಿಗ್ರಹಿಸಬೇಕು? ಇಂದ್ರಿಯಗಳನ್ನು

ಏತಕ್ಕೆ ಪೀಡಿಸಬೇಕು ? ಚೆನ್ನಾಗಿ ಮುಂದುಗಡೆಯಲ್ಲಿ ಕಾಣಬರುತ್ತಿರುವ ಘಟವನ್ನು ಕಂಡಂತೆ ಪರಬ್ರಹ್ಮನನ್ನು ತನ್ನಲ್ಲಿತಾನೇ ನೋಡಿಕೊಂಡರೆ ಸಮಸ್ತವೂ ತಾನೇತಾನಾಗಿ ಪ್ರಕಾಶಿಸುವುದು. ಕೂಟಸ್ಥನಾದ ತನ್ನನ್ನು ತಾನೇ ಕಾಣದ ಮನುಷ್ಯನ ಮನಸ್ಸು ತನಗೆ ಸ್ವಾಧೀನವಾಗದೆ ಚಂಚಲವಾಗಿ ತಿರುಗುತ್ತಿರುವುದು. ತನ್ನನ್ನುತಾನೇ ನೋಡಿಕೊಳ್ಳುವ ಸತ್ಪುರುಷನ ಮನಸ್ಸು ಬ್ರಹ್ಮಾನಂದ ಸಮುದ್ರದಲ್ಲಿ ಮುಳುಗಿರುವುದು. ಹೆಂಗಸರು, ಮಕ್ಕಳು, ಪರಿಮಳದ್ರವ್ಯಗಳು ಮೊದಲಾದ ವಿಷಯಗಳನ್ನು ನೋಡಿದಕೂಡಲೇ ಪರವಶವಾಗುತ್ತಿರುವ ಮನಸ್ಸು ಬ್ರಹ್ಮಾನಂದವೆಂಬ ಸಮುದ್ರದವಾಸನೆಯು ಸ್ವಲ್ಪ ತಗಲಿದರೂ ಕೂಡಾ ಗಿಡಗಳ ಹೂವುಗಳಲ್ಲಿ ತಿರುಗಾಡುವ ತುಂಬಿಗಳು ಸಂಪಿಗೇಹೂವಿನ ಸ್ಪರ್ಶಮಾತ್ರದಿಂದಲೇ ಮಡಿದು ಹೋಗುವಹಾಗೆ ನಾಶವಾಗಿ ಬ್ರಹ್ಮಾನಂದದಲ್ಲಿ ಲಯವಾಗುವುದು. ಸಕ್ಕರೆಯೂ ಉಪ್ಪೂ ನೀರಿನಲ್ಲಿ ಕರಗಿಹೋಗುವಂತೆ ಬ್ರಹ್ಮಸ್ವರೂಪನಾದ ತನ್ನನ್ನು ನೋಡುವ ಮನಸ್ಸು ಬ್ರಹ್ಮಾನಂದಸಾಗರದಲ್ಲಿ ಮುಳುಗಿ ಲಯವಾಗುವುದು. ಶುದ್ಧಸತ್ವಸ್ವರೂಪನಾದ ತಾನು ಸತ್ವರಜಸ್ತಮೋ ಗುಣಗಳ ವಿಕಾರದಿಂದ ಉಂಟಾದ ಸಂಕಲ್ಪಗಳಿಲ್ಲದ್ದಾಗಿ ನಿರ್ಮಲ ವೃತ್ತಿಯಿಂದ ಸದಾಕಾಲವೂ ಪರಬ್ರಹ್ಮವೇ ತಾನೆಂದು ತಿಳಿಯುವ ಮನಸ್ಸು ತನಗೆ ತಾನೇ ಕಟ್ಟಿಗೆಯಲ್ಲಿರುವ ಬೆಂಕಿಯು ಹಾಗೆ ತನ್ನಲ್ಲಿಯೇ ಲಯವಾಗುವುದು. ಸೂರ್ಯನು ಮುಳುಗುವಾಗ ಅವನ ಕಿರಣಗಳು ಆ ಸೂರ್ಯನ ಸಂಗಡಲೇ ಹೊರಟುಹೋಗುವಂತೆ ಮನಸ್ಸು ಲಯವಾದ ಕೂಡಲೇ ಅದರಲ್ಲಿರುವ ಸತ್ವರಜಸ್ತಮೋಗುಣಗಳ ವಿಕಾರಗಳೆಲ್ಲವೂ ನಾಶವಾಗಿ ಹೋಗುವುವು.

ಎಲೈ ಭಾಗವತಾಗ್ರಣಿಯೇ ಕೇಳು. ನೀನು ದೇಹವ್ಯತಿರಿಕ್ತನಾಗಿರುವುದರಿಂದ ಜನ್ಮದ ಅಸ್ತಿತ್ವ ವೃದ್ಧಿ ಪರಿಣಾಮ ವಿನಾಶಗಳೂ ಬಾಲ್ಯಕೌಮಾರ ಜರಾವಸ್ಥೆಗಳೂ, ವರ್ಣಾಶ್ರಮಕುಲಗೋತ್ರನಾಮ ರೂಪದೇಶಕಾಲಾದಿಗಳೂ, ಸ್ಥೂಲಕೃಶತ್ವಾದಿಗಳೂ, ನೀನು ನಿರಿಂದ್ರಿಯನಾದುದರಿಂದ ವಚನಾನಂದಾದಿ ಕರ್ಮಗಳೂ, ಶಬ್ದ ಸ್ಪರ್ಶರೂಪರಸ ಗಂಧಗಳೆಂಬ ವಿಷಯಸಂಗಗಳೂ, ಅಪ್ರಾಣನಾದುದರಿಂದ ಚಲಿಸುವುದು, ಓಡುವುದು ಮುಂತಾದುವುಗಳೂ,ಹಸಿವು ಬಾಯಾರಿಕೆಗಳೂ,-ಅಮನಸ್ಕನಾದುದರಿಂದ ಸಂಕಲ್ಪ ವಿಕಲ್ಪಗಳೂ, ರಾಗ, ದ್ವೇಷ, ಕಾಮ, ಲೋಭ, ಕ್ರೋಧ,

ಮೋಹ, ಮದ, ಮಾತ್ಸರ್ಯಾದಿಗಳೂ- ವೈರಾಗ್ಯ ಶಮದಮ ಜ್ಞಾನಾದಿಗಳೂ-ನಿರಹಂಕಾರನಾದುದರಿಂದ ವಕ್ತೃತ್ವ ದಾತೃತ್ವ ಮುಂತಾದುವುಗಳೂ ನಿನಗೆ ಬಂದಾದರೂ ಇಲ್ಲವು. ನೀನು ಕೇವಲ ಚಿದ್ರೂಪ ಬ್ರಹ್ಮ ಚೈತನ್ಯ ಪ್ರಕಾಶನಾದುದರಿಂದ ನಾನು ಶರೀರ, ಇಂದ್ರಿಯ, ಪ್ರಾಣ, ಮನಸ್ಸು, ಬುದ್ಧಿ, ಚಿತ್ತ, ಅಹಂಕಾರಗಳಲ್ಲ, ಸ್ವಯಂಪ್ರಕಾಶನಾದ ಸಚ್ಚಿದಾನಂದ ಸ್ವರೂಪನೇ ಎಂದು ನಿನ್ನನ್ನು ನೀನೇ ನೋಡುತ್ತಾ, ಸಮಾಧಿಸಮಯದಲ್ಲಿ ನಿರ್ವಿಕಾರನಾಗಿ ಮನೋರಹಿತನಾಗುತ್ತೀಯೆ. ಭೂತಭವಿಷ್ಯದ್ವರ್ತಮಾನ ಕಾಲಗಳಲ್ಲಿ ಈ ಪ್ರಕಾರವಾಗಿಯೇ ಪ್ರಕಾಶಿಸುತ್ತಿರುವುದರಿಂದ ನಿರ್ವಿಕಲ್ಪನಾಗಿಯೂ, ಏಕರೂಪನಾಗಿಯೂ ಇರುವುದೇ ಅಮನಸ್ಕವೆಂಬ ರಾಜಯೋಗಸಮಾಧಿಯೆಂದು ತಿಳಿದುಕೋ.

ಈ ಮಾತನ್ನು ಕೇಳಿ ಆಂಜನೇಯನು ಶ್ರೀರಾಮನನ್ನು ಕುರಿತು ಇಂತೆಂದನು. ಎಲೈ ಪರಬ್ರಹ್ಮಸ್ವರೂಪನೇ, ಈಗ ಕಾಣಬರುತ್ತಿರುವ ಈ ಪ್ರಪಂಚವು ಜಡವು. ಇದುನಾನಲ್ಲ. ಪರಮಾತ್ಮನೇ ನಾನು, ಎಂದು ತಿಳಿದುಕೊಂಡಾಗ ಮನಸ್ಸು ಇರುವುದೇ, ಇಲ್ಲವೇ ಇದನ್ನು ನನಗೆ ವಿಶದವಾಗಿ ಹೇಳು. ಸಮಾಧಿಯಲ್ಲಿ ಮನಸ್ಸು ಇದೆಎಂದು ಹೇಳುವೆಯೊ ? ಆ ಮನಸ್ಸೆಂಬುದು ಇದ್ದರೆ ಮನಸ್ಸೂ, ಬುದ್ಧಿಯೂ ದಶೇಂದ್ರಿಯಗಳೂ, ಪ್ರಾಣಾದಿಗಳು ಇವೆಲ್ಲ ಇರುವುವೆಂದು ತಿಳಿಯುವುದು. ಅವು ಈ ಸ್ಥೂಲದೇಹವನ್ನು ಬಿಟ್ಟಿರಲಾರವು. ಆದುದರಿಂದ ಅವು ಇರಲೇಬೇಕಾಯಿತು. ಈ ಭೂಮಿಯಲ್ಲಿ ಕಾರಣವಿಲ್ಲದೆ ಕಾರ್ಯವು ಇಲ್ಲವಾದುದರಿಂದ ಅವೂ ಇರಬೇಕು. ಶರೀರತ್ರಯಗಳನ್ನೂ ಹತ್ತಿಕೊಂಡು ಆದ್ಯಂತವಿಲ್ಲದ ಸಂಸಾರವೆಲ್ಲವೂ ಆಗ ಸ್ಪಷ್ಟವಾಗಿ ಇರಲೇಬೇಕು. ಆಗ ಅಹಂಕಾರವೆಂಬುದೂ ಇಲ್ಲದೆ ಇಲ್ಲ. ಆ ಅಹಂಕಾರವಿದ್ದರೆ ಸಹಜವಾದ ಅಮನಸ್ಕಯೋಗವು ಲಭಿಸುವುದುಹೇಗೆ ? ಅದು ಇರಲಿ.

ಮನಸ್ಸೇಇಲ್ಲವೆಂದು ಹೇಳುತ್ತಿಯೋ ? ಹಾಗಾದರೆ ಮನಸ್ಸೆಲ್ಲವೂ ಲಯಿಸಿದಮೇಲೆ ಪರಬ್ರಹ್ಮಸ್ವರೂಪನಾಗಿದ್ದರೂ ಆ ಬ್ರಹ್ಮನಿಷ್ಠನಿಗೆ ಸಮಾಧಿಯಿಂದ ಮರಳಿ ಏಳುವುದು ಸಂಭವಿಸುವುದಿಲ್ಲ. ಅದು ಅಸಂಭವಾದರೆ ಈ ಜಗತ್ತಿನಲ್ಲಿ ಬ್ರಹ್ಮನಿಷ್ಠೆಯನ್ನು ಯಾವನುತಾನೇ ಹೊಂದಬಲ್ಲನು ! ಅಂತಹ ಬ್ರಹ್ಮನಿಷ್ಠೆಯನ್ನು ಹೊಂದಿ ಅಮನಸ್ಕಯೋಗಸಮಾಧಿಯನ್ನು ವಿಮರ್ಶೆಮಾಡುವ ಸತ್ಪುರುಷರೂ, ಶಿಷ್ಯರಿಗೆ ಅದನ್ನು ಉಪದೇಶಿಸುವ

ಗುರುಗಳೂ ಇರಲಾರರೆಂದು ತಿಳಿಯುತ್ತೇನೆ. ಅಂತಹ ಸದ್ಗುರುಗಳಿಲ್ಲವೆಂದು ಸಾಧಿಸಿದರೆ ರಾಜಯೋಗಿಗಳಿಗೂ, ಅವರು ಬೋಧಿಸಿದ ಉಪದೇಶಕ್ಕೂ, ಆ ಬೋಧಿಸಲ್ಪಟ್ಟವರ ಬ್ರಹ್ಮನಿಷ್ಠೆಗೂ ಸಮಾಧಿಯಲ್ಲಿ ಮನಸ್ಸು ಸ್ವಲ್ಪವೂ ಇಲ್ಲದೆಇರುವುದರಿಂದ ಬಾಧೆಬರುವುದಲ್ಲವೆ? ಈ ಪರಮರಹಸ್ಯಾರ್ಥವನ್ನು ಉಪದೇಶಿಸಿ, ನನ್ನ ಸಂಶಯವನ್ನು ತೊಲಗಿಸಬೇಕೆಂದು ಪ್ರಾರ್ಥಿಸಿದನು.

ಅದಕ್ಕೆ ಶ್ರೀರಾಮನು ಇಂತೆಂದನು. ಎಲೈ ಪ್ರಜ್ಞಾನಿಧಿಯೇ ಕೇಳು, ಅದೃಶ್ಯವಾದ ಈ ಜಗತ್ತು ಆತ್ಮನಲ್ಲ. ಈ ಪ್ರಕೃತಿಯು ನಾನಲ್ಲ. ಇದು ಪರಬ್ರಹ್ಮವು, ಇದೇನಾನು ಎಂದು ನಿಶ್ಚಲವಾದ ಮನಸ್ಸು ತಿಳಿಯಬಲ್ಲುದೆ? ಹೀಗೆ ಜಡವಾದ ಆ ಮನಸ್ಸನ್ನುಹೊಂದಿ ಬ್ರಹ್ಮವನ್ನು ತಿಳಿಯುವ ಪುರುಷನೇ ಸ್ವಯಂಪ್ರಕಾಶವಾದ ಪರಮಾತ್ಮನಾಗುವನು. ಈ ಮನಸ್ಸು ಜಡವಾದದ್ದು, ವಿಷಯರೂಪವಾಗಿ ಕಾಣುತ್ತಿರುವುದು, ಅಣುಮಾತ್ರವಾದುದು, ಅನಿತ್ಯವಾದ ದೇಹೇಂದ್ರಿಯಾದಿಗಳನ್ನು ನಿತ್ಯವೆಂದು ಪ್ರತಿಪಾದಿಸುವುದೂ, ಉತ್ಪತ್ತಿಲಯಗಳುಳ್ಳದ್ದೂ, ಸಂಶಯರೂಪವಾದುದೂ, ಆಗಿದೆ, ಇಂತಹ ಮನಸ್ಸು ಇರುವುದರಿಂದ ಸುಖಚಿತ್ಪ್ರಕಾಶವುಳ್ಳವನಾದ ನಿನಗೆ ಸಂದೇಹವೇಕೆ? ಸೂರ್ಯನಿಗೆ ಎಂದಿಗಾದರೂ ಚಂದ್ರಕಿರಣಗಳ ದೋಷವು ಹತ್ತುವುದೇ? ಸ್ವಯಂಪ್ರಕಾಶನಾದ ನಿನ್ನನ್ನು ಮನೋವಿಕಾರಗಳು ಎಂದಿಗೂ ಹೊಂದಲಾರವು. ಸ್ಫಟಿಕಪರ್ವತವನ್ನು ಸ್ವಪ್ನದಲ್ಲಿ ನೋಡಿದರೆ ಸಂಧ್ಯಾರಾಗಗಳು ಎಂದಿಗಾದರೂ ಸೋಕುವುವೇ? ಇಂದ್ರಿಯಗಳೂ ಮನಸ್ಸೂ ಚಲಿಸಿದಮಾತ್ರದಿಂದಲೇ ನಾನು ಚಲಿಸಿದೆನೆಂದು ಎಂದಿಗೂ ನೀನು ತಿಳಿಯಬೇಡ, ನಿನ್ನನ್ನು ನೀನೇನೋಡಿಕೊಂಡು ನಿಶ್ಚಲನೆಂದು ತಿಳಿದುಕೊಂಡರೆ ಆ ಮೇಲೆ ಅವುಗಳೆಲ್ಲಾ ನಿನಗೆ ಚಲಿಸಿದುವುಗಳಾಗಿಯೇ ಕಾಣಬರುವುವು. ಆತ್ಮತೇಜಸ್ಸನ್ನು ನೋಡುವವನ ಮನಸ್ಸೂ ಇಂದ್ರಿಯಗಳೂ ಚೇಷ್ಟೆಗಳನ್ನೆಲ್ಲಾ ಬಿಟ್ಟುಬಿಟ್ಟು, ಸಿಂಹವನ್ನು ಕಂಡ ಆನೆಗಳಂತೆ ಕದಲಮೆದಲದೆ ಸುಮ್ಮನೆ ಇರುವುವು. ಅವು ನಿಶ್ಚಲಗಳಾದರೆ ನಾನು ಅಚಲನಾದೆನೆಂದು ತಿಳಿಯಬೇಡ. ಅವುಗಳ ಚಲನಾಚಲನಗಳು ನಿನಗೆ ಸೋಂಕುವುದಿಲ್ಲ. ನೀನುಮಾತ್ರ ಅವುಗಳನ್ನು ತಿಳಿದುಕೊಳ್ಳುತ್ತಿರುವೆ. ನೀನು ಕೇವಲ ನಿರ್ಗುಣಮೂರ್ತಿಯಾಗಿ ಹೃದಯೇಂದ್ರಿಯಾದಿವಿಷಯಗಳಿಗೆ ಸಾಕ್ಷಿಯಾಗಿರುತ್ತೀಯೆ.

ಪೂರ್ವದಲ್ಲಿ ನಾನು ದಂಡಕಾರಣ್ಯನಲ್ಲಿ ಮುನಿವೇಷದಿಂದ ವಾಸ ಮಾಡಿಕೊಂಡಿದ್ದೆನು. ಆಲ್ಲಿ ಬ್ರಹ್ಮರ್ಷಿಗಳು ನನ್ನ ಸುತ್ತಲೂ ಕುಳಿತಿದ್ದರು. ನನ್ನನ್ನು ನೋಡಬೇಕೆಂಬ ಅಪೇಕ್ಷೆಯಿಂದ ಮುನಿಕನ್ಯಕೆಯರು ಸೀತೆಯನ್ನು ಮುಂದಿಟ್ಟುಕೊಂಡು ಅಲ್ಲಿಗೆ ಬಂದು, „ ಸೀತೆ! ನಿನ್ನಪತಿಯು ಇವನೋ? ಎಂದು ಅಲ್ಲಿದ್ದ ಮುನಿಗಳನ್ನು ಪ್ರತ್ಯೇಕಿಸಿ ಕೇಳತೊಡಗಿದರು. ಆಗಲಾಸೀತೆಯು ನಾಚಿಕೆಯಿಂದ ಅವರೆಲ್ಲರನ್ನೂ ಅಲ್ಲ, ಅಲ್ಲವೆಂದು ತಲೆಯಲ್ಲಾಡಿಸುತ್ತಿದ್ದ ನನ್ನನ್ನು ತೋರಿಸಿದಾಗ ಅಹುದೆನ್ನದೆಯೂ, ಅಲ್ಲವೆನ್ನದೆಯೂ ಮೌನದಿಂದ ಇದ್ದಳು. ಆಗ ಮುನಿಕನ್ಯೆಯರೆಲ್ಲರೂ ಅದನ್ನುನೋಡಿ ಸಂತೋಷಪಟ್ಟರು. ಹೀಗೆ ಪ್ರತ್ಯಗಾತ್ಮನಾದ ತನ್ನ ತೇಜಸ್ಸನ್ನು ಪರಬ್ರಹ್ಮಜ್ಞಾನವೆಂಬ ತೇಜಸ್ಸಿನಲ್ಲಿ ಐಕ್ಯಮಾಡಿದರೆ ಬಿಸಲಿನಲ್ಲಿ ದೀಪದಕಾಂತಿಯು ಅಡಗಿಹೋಗುವಂತೆ ಮನಸ್ಸು ಲಯವಾಗಿರುವುದು. ಈ ಪ್ರಕಾರವಾಗಿ ಶರೀರೇಂದ್ರಿಯ ಪ್ರಾಣಮನೋಬುದ್ಧಿಸಮನ್ವಿತವಾದ ಅಹಂಕಾರದೊಂದಿಗೆ ಸಹಜತಾದಾತ್ಮ್ಯವುಳ್ಳ ಸ್ವಾಧಿಷ್ಠಾನಚಿದಾಭಾಸನು ನಿದ್ರೆಯಲ್ಲಿ ಸಕಲವ್ಯಾಪಾರಗಳನ್ನು ಬಿಟ್ಟುಬಿಟ್ಟು ಹಾಸಿಗೆಯಮೇಲೆ ಸ್ಥೂಲದೇಹವನ್ನಿಳಿಸಿ, ಇಂದ್ರಿಯಗಳನ್ನು ತೊಲಗಿಸಿ, ಪ್ರಾಣಗಳನ್ನು ಇಳಿಯಬಿಟ್ಟು. ಮನಶ್ಚಿತ್ತಗಳನ್ನು ಅಹಂಕಾರದಲ್ಲಿ ಅಡಗಿಸಿ, ಆ ಅಹಂಕಾರವನ್ನು ಬುದ್ಧಿಯಲ್ಲಿ ಸೇರಿಸಿ, ಅಂತರ್ಮುಖನಾಗಿ, ಅವಿದ್ಯಾಧಿಷ್ಠಾನ ಚೈತನ್ಯದಬಳಿಗೆ ಸುಖವಾಗಿ ಸೇರಿ ಆನಂದಮಯಕೋಶದಲ್ಲಿ ತನಗೆ ಉಪಾಧಿಭೂತನಾಗಿ ನಾನಾವಿಧವಾಸನಾವಾಸಿತವಾದ ಬುದ್ಧಿವೃತ್ತಿಯನ್ನು ಬಿಟ್ಟು ಅಜ್ಞಾನತಮೋಭಿಭೂತನಾಗಿ ಬಳಿಕ ನಿತ್ಯನಿರುಪಾಧಿಕನಿರತಿಶಯ ಬ್ರಹ್ಮಾನುಭವಸಾಗರದಲ್ಲಿ ಮುಳುಗಿದವನಹಾಗೆ ಪೂರ್ಣಾಧಿಕಾರಿಯಾಗಿ ನಾನು ದೃಶ್ಯನಲ್ಲ, ನೋಡತಕ್ಕವನು. ಎಂದು ಆನಂದಿಸುತ್ತಿರುವನು. ಇದೇ ಅಮನಸ್ಕರಾಜಯೋಗಸಮಾಧಿಯು. ಇದೇ ಜೀವನ್ಮುಕ್ತಿಯೆಂದು ಉಪದೇಶಿಸಿದನು. ಎಂದುಹೇಳಿ ಸೀತಾದೇವಿಯಮುಖವನ್ನು ನೋಡಿ ಸಂತೋಷದಿಂದ ನಗುತ್ತಾ ಮರಳಿ ಇಂತೆಂದನು.

ಎಲೈ ಆಂಜನೇಯನೆ, ಪ್ರೇಮದಿಂದ ಶ್ರೀರಾಮ, ರಾಮ, ರಾಮ ಎನ್ನುತ್ತಾ ಸರ್ವಕಾಲದಲ್ಲಿಯೂ ನನ್ನಸ್ವರೂಪವನ್ನು ಅನುಭವಮಾಡಿಕೊಳ್ಳತಕ್ಕವರಿಗಲ್ಲದೆ ಇತರರಿಗೆ ಈ ಸೀತೆಯು ಹಲವುಕಷ್ಟಗಳನ್ನು

ತಂದಿಡುತ್ತಿರುವಳು. ಇರುವುದನ್ನು ಇಲ್ಲವೆಂದೂ ಊಹಿಸಬಹುದು. ಇಲ್ಲದುದನ್ನು ಇರುವದೆಂದೂ ತಿಳಿಯಬಹುದು. ಅಜಡವನ್ನು ಜಡವೆಂತಲೂ ಹೇಳಬಹುದು. ಸುಖವನ್ನು ದುಃಖವಾಗಿಯೂ ದುಃಖವನ್ನು ಸುಖವಾಗಿಯೂ ತಿಳಿಯಬಹುದು. ಕಡೆಗೆ ಇರುವದುಮಾತ್ರವೇ ನಿಲ್ಲುವದು. ಇಲ್ಲದ್ದು ಇಲ್ಲದೆಯೇ ಹೋಗುವದು. ಆದುದರಿಂದ ಆತ್ಮವಿದ್ಯಾಸ್ವರೂಪಿಣಿಯಾಗಿಯೂ, ನನ್ನ ಯೋಗಮಾಯಾಶಕ್ತಿಯಾಗಿಯೂ, ನಿತ್ಯಾನಪಾಯಿನಿಯಾಗಿಯೂ ಇರುವ ಈ ಸೀತಾದೇವಿಯನ್ನು ಅಭಿಮುಖಳನ್ನಾಗಿ ಮಾಡಿಕೋ. ನಿನಗೆ ಶೀಘ್ರವಾಗಿ ನಿರ್ಮಲವಾದ ನಿಜಾನಂದವು ಲಭಿಸುವದು. ಇದಕ್ಕೆ ತಕ್ಕಉಪಾಯವನ್ನು ಹೇಳುವೆನುಕೇಳು.

ಪಾರ್ವತೀಪರಮೇಶ್ವರರೇ ಮೊದಲಾದವರು ನನ್ನಲ್ಲಿ ಸೇರಿ ಯಾವಾಗಲೂ ರಮಿಸುತ್ತಾ ಇರುವದರಿಂದ ನನಗೆ ಶ್ರೀರಾಮನೆಂದು ಹೆಸರು ಬಂದಿರುವದು. ಹೀಗೆ ರಾಮಶಬ್ದವಾಚ್ಯನಾದ ನಾನು ಬುದ್ಧಿ, ಮನಸ್ಸು ಇಂದ್ರಿಯ, ಅಂಗಗಳನ್ನು ಕಡೆಗೆತಳ್ಳಿಬಿಟ್ಟಮೇಲೆ ಚಿದಾತ್ಮನಾಗಿ ಉಳಿಯುವೆನು. ನನಗೆ ಬ್ರಹ್ಮಾಕಾರವಾದ ಬುದ್ಧಿವೃತ್ತಿಯುಂಟಾಗಿರುವದರಿಂದ ಶ್ರೀರಾಮನಾಮವು ಬಂತು. ಬ್ರಹ್ಮವಿದ್ಯೆಯೇ ಶ್ರೀಯು. ಬುದ್ಧಿವೃತ್ತಿಗೆ ನಾನು ಯಾವಾಗಲೂ ದುಷ್ಟನಾಗಿರುವದರಿಂದ ಪ್ರತ್ಯಗಾತ್ಮನಾದ ನನ್ನ ಭಾವವನ್ನು ಹುಡುಕಿ ತಿಳಿದುಕೊಳ್ಳುವದಕ್ಕೆ ರಾಮನಾಮವು ವೇದಾಂತಸಾರವಾದ ನೆಲೆಯಾಗಿರುವದು. ಹೀಗೆ ರಾಮನಾಮದಿಂದ ನನ್ನನ್ನು ಭಜಿಸುವ ಮಹಾತ್ಮರಿಗೆ ಈ ಸೀತಾದೇವಿಯು ಯೋಗಸಿದ್ಧಿಯನ್ನು ಅನುಗ್ರಹಿಸಿರುವಳು. ಆದುದರಿಂದ ಪೂರ್ಣವಾಗಿಯೂ, ವಿಕಾರರಹಿತವಾಗಿಯೂ ಇರುವ ನನ್ನ ತತ್ವವನ್ನು ತಿಳಿಯಲಾರದ ಮೂಢಮನುಷ್ಯರು ದೇಹೇಂದ್ರಿಯಪ್ರಾಣಬುದ್ಧಿಗಳನ್ನು ನಿಗ್ರಹಿಸಲಾರದೆ ಅನುರಾಗದಿಂದ ಆತ್ಮನನ್ನು ತಿಳಿಯಬೇಕೆಂದು ಆಪೇಕ್ಷಿಸುತ್ತಿರುವರು. ಅಂತವರಿಗೆ ಪರಬ್ರಹ್ಮದರ್ಶನವು ಎಂದಿಗೂ ಲಭಿಸಲಾರದು. ಇಂದ್ರಿಯಗಳಿಂದ ವಿಷಯುಗಳನ್ನು ಗ್ರಹಿಸುವಹಾಗೆ ಸಮರಸದೃಷ್ಟಿಯಿಂದ ಸರ್ವಜ್ಞನಾದ ನನ್ನನ್ನು ಸರ್ವಮಯನಾಗಿ ತಿಳಿದುಕೊಳ್ಳಬಹುದು. ಈ ಸ್ಥೂಲಶರೀರವು ಸ್ಥಿರವಾಗಿರುವುದು. ಇಂದ್ರಿಯಗಳೆಲ್ಲವೂ ಉಪಶಾಂತಿಯನ್ನು ಹೊಂದುವುವು. ಮನೋವಾಯುಗಳು ಚಲಿಸದೆ ಇರುವುವು. ಕಾಮಕ್ರೋಧಾದಿ ಶತ್ರುವರ್ಗವು ನಾಶವಾಗುವುದು. ಅಮಾನಿತ್ವ,

ಅದಂಭತ್ವ ಮೊದಲಾದ ಸದ್ಗುಣಗಳು ಉಂಟಾಗಿ ಗುಣಾತೀತಲಕ್ಷಣವು ಬರುವುದು. ಆಮೇಲೆ ವೈರಾಗ್ಯವುಂಟಾಗಿ ಬ್ರಹ್ಮಜ್ಞಾನವು ಲಭಿಸುವುದು. ತರುವಾಯ ಶಾಂತನಿಧಿಯಾದ ಆ ಪುರುಷನು ಸರ್ವವೂ ಬ್ರಹ್ಮಮಯವೆಂದು ತಿಳಿಯುವನು. ಒಬ್ಬನಿಗೆ ರಾಜತ್ವವು ಬಂದಕೂಡಲೇ ಪ್ರಜೆಗಳೆಲ್ಲರೂ ಅವನ ಸಮೀಪಕ್ಕೆ ಬಂದು ಅವನನ್ನು ಸನ್ಮಾನಿಸುವಹಾಗೆ ಸರ್ವವೂ ತಾನೇ ಎಂಬ ಜ್ಞಾನವು ಉಂಟಾದ ಕೂಡಲೇ ಉತ್ತಮಗುಣಗಳೆಲ್ಲವೂ ಅವನಿಗೆ ಸಿದ್ಧಿಸುವುವು. ಆನೆಯ ರೂಪದಿಂದ ಒಪ್ಪುವ ಒಂದು ಮರವು ಮರವಾಗಿರುವುದೇ ಹೊರತು ನಿಜವಾದ ಆನೆಯಾಗಬಲ್ಲುದೆ? ಹಾಗೆಯೇ ವಿಶ್ವರೂಪದಿಂದ ತೋರುವ ವಿಷ್ಣುಮೂರ್ತಿಯು ವಿಷ್ಣುವಾಗಬಲ್ಲನೇ ಹೊರತು ಮರಳಿ ಎಂದಿಗೂ ವಿಶ್ವವಾಗಲಾರನು. ಇದು ಆನೆಯೆಂದು ಭ್ರಾಂತನಾಗಿರುವ ಮನುಷ್ಯನಿಗೆ ಮರದಾನೆಯು ಆನೆಯಾಗಿ ತೋರುವುದೇ ಹೊರತು ಮರವೆಂಬ ಜ್ಞಾನವು ಹುಟ್ಟುವುದಿಲ್ಲ. ಹಾಗೆಯೇ ಪ್ರಜ್ಞಾವಂತನಿಗೆ ಸರ್ವವೂ ಬ್ರಹ್ಮಮಯವೆಂದು ತೋರುವುದೇ ಹೊರತು ವಿಶ್ವವೆಂಬ ಭ್ರಾಂತಿ ಹುಟ್ಟದು.

ಹೀಗೆ ಹೇಳಿದ ಮಾತುಗಳನ್ನು ಕೇಳಿ ಆಂಜನೇಯನು ಕೈಮುಗಿದುಕೊಂಡು ಸೀತಾರಾಮನಿಗೆ ಹೀಗೆ ವಿಜ್ಞಾಪಿಸಿದನು.

“ ಎಲೈ ಶ್ರೀರಾಮನೇ, ನೀನು ಅಪ್ಪಣೆ ಕೊಡಿಸಿದಂತೆ ವಿಚಾರಮಾಡಿ, ಸರ್ವವೂ ಬ್ರಹ್ಮವೇ ಎಂದು ತಿಳಿಯುವ ಮಹಾತ್ಮನು ಪ್ರಾರಬ್ಧವ್ಯವಹಾರಗಳನ್ನು ಹೇಗೆ ನಡಿಸುವನು. ಇದನ್ನು ತಿಳಿಯಲಪೇಕ್ಷಿಸುತ್ತೇನೆ ” ಎಂದು ಪ್ರಾರ್ಥಿಸಲು ಶ್ರೀರಾಮನಿಂತೆಂದನು.

ಎಲೈ ಜ್ಞಾನಿಯೇ ಕೇಳು, ಕಲಶವು, ಕಡಗವು, ಅಲೆಗಳು, ವಸ್ತ್ರಗಳು ಮುಂತಾದುವುಗಳನ್ನು ವಿವೇಕದೃಷ್ಟಿಯಿಂದ ವಿಚಾರಮಾಡಿ ನೋಡಿದರೆ ಇದು ಮಣ್ಣು, ಇದು ಚಿನ್ನವು, ಇದು ನೀರು, ಇದು ನೂಲು ಎಂದು ತಿಳಿದುಕೊಂಡಮಾತ್ರದಿಂದಲೇ ಆ ಘಟಕಟಕಾದಿಗಳ ನಾಮರೂಪಗಳೂ ಆಕಾರಗಳೂ ಕೆಡದೆ ಹೋಗುವುದರಿಂದ ಆ ನಾಮರೂಪಗಳೆಲ್ಲವೂ ಅಡಿಗೆ ಮುಂತಾದ ಕಾರ್ಯಸಮೂಹಕ್ಕೆ ಉಪಯೋಗಿಸಲ್ಪಡುತ್ತಾ ಬರುವುವು. ಆದರೂ ಆ ಹೇತುದೃಷ್ಟಿಗೆ ಯಾವ ವಿರೋಧವೂ ಉಂಟಾಗಲಾರದಷ್ಟೆ! ಹಾಗೆಯೇ ನಾಮರೂಪಾತ್ಮಕವಾದ ಈ ಪ್ರಪಂಚವೆಲ್ಲವೂ ಬ್ರಹ್ಮವೆಂದು ಜೀವೇಶ್ವರೈಕ್ಯಜ್ಞಾನದಿಂದ ನಿಶ್ಚ

ಯವಾಗಿ ನೋಡತಕ್ಕ ಬ್ರಹ್ಮಜ್ಞಾನಿಗೆ ಎಲ್ಲಿ ನೋಡಿದರೂ ಆ ಜ್ಞಾನಿಯ ಶರೀರದ ಇಂದ್ರಿಯಗಳು, ಬುದ್ಧಿಯು ಇವುಗಳ ಪ್ರಾರಬ್ಧಾನುಭವವು ಉಂಟಾಗುತ್ತಿರುವುದು. ಹಾಗೆ ತೋರಿದಮೇಲೆ ಆ ಬ್ರಹ್ಮಜ್ಞಾನಿಯು ತಾನೇ ಸಾಕ್ಷಿಯಾಗಿ ಗಂಭೀರದೃಷ್ಟಿಯಿಂದ ಸಮಸ್ತವನ್ನೂ ಪರಮಾತ್ಮನನ್ನಾಗಿ ತಿಳಿದುಕೊಳ್ಳುವನು. ಗಾನ, ನರ್ತನ, ತಾಳ, ಇವುಗಳನ್ನು ಮಾಡುತ್ತಾ ತನ್ನ ಪಾಂಡಿತ್ಯವನ್ನು ತೋರಿಸಿ, ತನ್ನ ತಲೆಯಮೇಲೆ ಇರುವ ಕಲಶಪಂಜ್ತಿಯನ್ನು ಹಿಡಿಯಲಿಕ್ಕೆ ತೊಡಗುವ ನಾಟ್ಯಶೀಲನ ಹಾಗೆ ತಂಡೋಪತಂಡವಾಗಿ ಪ್ರಕಾಶಿಸುತ್ತಿರುವ ಇಂದ್ರಿಯಾರ್ಥಗಳಲ್ಲಿ ಅನುಭವಜ್ಞನಾದ ಬ್ರಹ್ಮಜ್ಞಾನಿಯು ಸಚ್ಚಿದಾನಂದಸ್ವರೂಪನಾದ ಪರಮಾತ್ಮನನ್ನು ತನ್ನ ಮನಸ್ಸಿನಲ್ಲಿಯೇ ನೋಡುತ್ತಲಿರುವನು. ಹೀಗೆ ಜೀವೇಶ್ವರೈಕ್ಯವಾದ ಸಮಾಧಿಯಲ್ಲಿ ಪ್ರಕಾಶಿಸುವ ವಿಜ್ಞಾನಸ್ವರೂಪನಾದ ಪರಬ್ರಹ್ಮನನ್ನು ಬ್ರಹ್ಮಜ್ಞಾನಿಯು ಅನಾಯಾಸವಾಗಿ ದರ್ಶನ ಮಾಡಿ, ತಾನೇ ಪರಬ್ರಹ್ಮನಾಗಿ, ಆ ಬಳಿಕ ಮಾಯಾಮಯವಾದ ಈ ಸಂಸಾರವನ್ನು ಹೊಂದಿದರೂ ಅವನಿಗೆ ಆ ವಿಕಾರಗಳು ಒಂದೂ ಅಂಟದೆ ಇರುವುವು. ಹೇಗೆಂದರೆ, ಹಾಲು ಮೊಸರಾಗಿ ಕಡೆಯಲ್ಪಟ್ಟು ಬೆಣ್ಣೆಯಾದ ತರುವಾಯ ಆ ಬೆಣ್ಣೆಯು ಯಾವರೀತಿಯಿಂದಲಾದರೂ, ಮಜ್ಜಿಗೆಯಲ್ಲಿ ಬೆರೆಯುವುದೆ ? ಹಾಗೆಯೇ ಬ್ರಹ್ಮಜ್ಞನಿಗೆ ಪುಣ್ಯಪಾಪಗಳೊಂದೂ ಹತ್ತುವುದಿಲ್ಲ. ಸೂರ್ಯನು ವಾಪೀಕೂಪತಟಾಕಾದಿಗಳಲ್ಲಿರುವ ನೀರನ್ನೆಲ್ಲಾ ತನ್ನ ಕಿರಣಗಳಿಂದ ಹೀರುತ್ತಾ ಆ ನೀರಿನಲ್ಲಿರುವ ಕೆಸರು, ಪಾಚಿ ಮುಂತಾದ ವಿಕಾರಗಳು ಯಾವುವನ್ನೂ ಹೊಂದದೆ ಇರುವ ಹಾಗೆ ಯೋಗಿಯು ವಿಷಯಗಳನ್ನು ಹೊಂದುತ್ತಿದ್ದರೂ ಅವುಗಳ ಗುಣದೋಷಗಳನ್ನು ಸ್ವಲ್ಪವೂ ಪಡೆಯದೆ ನಿರ್ಮಲವಾಗಿಯೂ ನಿಶ್ಚಲವಾಗಿಯೂ ಇರುವ ಮನಸ್ಸುಳ್ಳವನಾಗಿ ನಿತ್ಯಸುಖವೆಂಬ ಸಾಗರದಲ್ಲಿ ಆನಂದಮಯನಾಗಿರುವನು. ಸಾಧುವಾದ ಬ್ರಹ್ಮಜ್ಞಾನಿಯು ಅಸಾರವಾದ ಮಹಾಸಂಸಾರವನ್ನು ಹೊಂದಿದರೂ ತಾವರೇ ಎಲೆಯಮೇಲೆ ನಿಂತಿರುವ ನೀರಿನ ಹನಿಯಂತೆ ಅಂಟಿಯೂ ಅಂಟದಹಾಗೆಯೇ ಇರುವನು. ಅಗ್ನಿಯು ಸರ್ವಭಕ್ಷಕನಾಗಿದ್ದರೂ ನಿರ್ದೋಷಿಯಾಗಿರುವಹಾಗೆ ಬ್ರಹ್ಮಜ್ಞಾನಿಯು ವಿಷಯಗಳಲ್ಲಿ ಅನುರಕ್ತನಾಗಿದ್ದರೂ ವೈರಾಗ್ಯಶೀಲನಾಗಿ ಒಪ್ಪುತ್ತಿರುವನು. ಮಣ್ಣನ್ನು ಅಂಟಿಯೂ ಅಂಟದೆ ತಾನು ಒಂಟಿ

ಬಸಾಗಿರುವವಣ್ಣು ಘಳುವಿನಹಾಗೆ ನಿರ್ಗುಣಾನಂದಪರನಾದ ಮನುಷ್ಯನು ಸಾತ್ವಿಕರಾಜಸತಾಮಸಗಳೆಂಬ ಗುಣಗಳನ್ನು ಹೊಂದಿದವನಾಗಿದ್ದರೂ ಹೊಂದದವನಾಗಿಯೇ ಇರುವನು. ಪರಪುರುಷನಲ್ಲಿ ಅನುರಕ್ತಳಾದ ಸ್ತ್ರೀಯು ಮನೆಯ ಕೆಲಸಗಳನ್ನೆಲ್ಲಾ ಬೇಗಬೇಗ ಮಾಡುತ್ತಾ ತನ್ನ ಪ್ರಿಯುನ ಸಂಗವನ್ನು ಸುಖವಾಗಿ ನೋಡುವಹಾಗೆ ಬ್ರಹ್ಮಜ್ಞಾನಿಯು ತನ್ನ ವರ್ಣಾಶ್ರಮಧರ್ಮಗಳನ್ನು ನಿರಂತರವೂ ತಪ್ಪದೆ ನಡಿಸುತ್ತಾ ಇದ್ದರೂ ತನ್ನ ಮನಸ್ಸಿನಲ್ಲಿ ನಿರ್ಮಲಸೌಖ್ಯವನ್ನು ಹೊಂದುವನು. ಮಹಾನುಭಾವನಾದ ಅಂತಹ ಬ್ರಹ್ಮಜ್ಞಾನಿಯು ಪ್ರಾರಬ್ಧವಶದಿಂದ ತನ್ನ ವರ್ಣಾಶ್ರಮೋಚಿತಗಳಾದ ಧರ್ಮಗಳನ್ನು ಆಚರಿಸುತ್ತಿರುವ ವೇಳೆಯಲ್ಲಿ ಸುಖದುಃಖಗಳನ್ನು ಸಮವಾಗಿ ಭಾವಿಸುವನು. ವಾದವನ್ನೂ ಭೇದವನ್ನೂ ಬಿಟ್ಟುಬಿಟ್ಟಿರುವನು. ಕರ್ಮಾಚರಣೆಯಿಂದ ಸದ್ಗತಿಯೂ ಕರ್ಮಪರಿತ್ಯಾಗದಿಂದ ದುರ್ಗತಿಯೂ ಬರುವುದೆಂದು ಹೆದರದೆ ಇರುವನು. ಇದು ಧರ್ಮವು, ಇದು ಅಧರ್ಮವು ಎಂದು ಚಿಂತಿಸಲಾರನು. ಮಾನಾವಮಾನಗಳನ್ನು ಮರೆತುಬಿಡುವನು. ದಾರಾಪುತ್ರಧನಾದಿಗಳಲ್ಲಿ ಆಶೆಯಿದ್ದರೂ ಇಲ್ಲದವನಾಗಿರುವನು. ವಿಷಯಚಿಂತೆಗಳೊಂದಾದರೂ ಅವನಿಗೆ ಇಲ್ಲವು. ನಿದ್ರೆಜಾಗರಗಳೂ ಅವನಿಗಿಲ್ಲ. ಸಂತೋಷರೋಷಗಳನ್ನು ಆವನು ಸಮವಾಗಿ ಭಾವಿಸುವನು. ಅವನಿಗೆ ಶತ್ರುಗಳೂ ಒಂದೇ, ಮಿತ್ರರೂ ಒಂದೇ. ಅವನಿಗೆ ಬಲವಾಗಲಿ ಐಶ್ವರ್ಯವಾಗಲಿ ಬೇಕಾಗಿಲ್ಲ. ಯುಕ್ತಿಯೂ ಮುಕ್ತಿಯೂ ಒಂದೇ ಎಂದು ಭಾವಿಸುವನು. ಅಂತವನಿಗೆ ಶಾಂತಿಯೂ ದಾಂತಿಯೂ ತಪ್ಪದೆ ಇರುವುವು.

ಕನಸಿನಲ್ಲಿಕಂಡ ಆನೆಯು ಎಚ್ಚರವಾದ ಮೇಲೆ ಕಾಣದೆಹೋಗುವಂತೆ ಅಂತಹ ಬ್ರಹ್ಮಜ್ಞಾನಿಗೆ ಪ್ರಪಂಚವು ಸಮಗ್ರವಾಗಿ ಕಾಣಬಂದರೂ ಜಾಗ್ರದವಸ್ಥೆಯಲ್ಲಿ ಇವುಗಳೆಲ್ಲಾ ಮಿಥ್ಯೆಯೆಂಬ ಜ್ಞಾನವೇ ಇರುವುದು. ಮತ್ತೊಂದು ವಿಶೇಷವನ್ನು ಹೇಳುವೆನು ಕೇಳಯ್ಯಾ. ಹನುಮಂತನೇ, ಬ್ರಹ್ಮವಿದನು, ಬ್ರಹ್ಮವಿದ್ವರನು. ಬ್ರಹ್ಮವಿದ್ವರೀಯನು, ಬ್ರಹ್ಮವಿದ್ವರಿಷ್ಠನು ಎಂದು ನಾಲ್ಕುಬಗೆಯುವರು ನನ್ನ ಸ್ವರೂಪತತ್ವವನ್ನು ಬಲ್ಲವರಿರುವರು. ಅವರಲ್ಲಿ ಬ್ರಹ್ಮವಿದನು ದೇಹೇಂದ್ರಿಯಾದಿ ಕರ್ತೃತ್ವವೂ, ಕರ್ಮ ಫಲಾಭಿಲಾಷೆಯೂ ಇಲ್ಲದೆ ನಿತ್ಯನೈಮಿತ್ತಿಕಗಳಾದ ಯಜ್ಞ, ದಾನ, ತಪಸ್ಸು ಮುಂತಾದ ವೈದಿಕ ಕರ್ಮಗಳನ್ನು ಯಥಾವಿಧಿಯಾಗಿ

ಆಚರಿಸುತ್ತಾ, ಕಾಮ್ಯಕರ್ಮಗಳನ್ನು ಪರಿತ್ಯಜಿಸಿ, ಶಾಸ್ತ್ರವಿರುದ್ಧವಲ್ಲದ ಲೌಕಿಕಕರ್ಮಗಳನ್ನು ತಕ್ಕಮಟ್ಟಿಗೆ ನೆರವೇರಿಸುತ್ತಾ, ಪುತ್ರರು, ಮಿತ್ರರು, ಹೆಂಡತಿ, ದ್ರವ್ಯ, ಕ್ಷೇತ್ರ ಮೊದಲಾದುವುಗಳಲ್ಲಿ ವೈರಾಗ್ಯವುಳ್ಳವನಾಗಿ ದೊರೆತಷ್ಟರಲ್ಲಿಯೇ ತೃಪ್ತಿಹೊಂದುತ್ತಾ, ಕಾಮ, ರಾಗ, ದ್ವೇಷ, ಭಯ, ಲೋಭ, ಮೋಹ, ಮದ, ಮತ್ಸರ ಮೊದಲಾದ ಚಿತ್ತವಿಕಾರ ರಹಿತನಾಗಿ ಶರೀರ, ಇಂದ್ರಿಯ, ಪ್ರಾಣ, ಅಂತಃಕರಣ ಇವುಗಳನ್ನು ಸ್ವಾಧೀನಪಡಿಸಿಕೊಂಡು, ಜ್ಞಾನವಿಜ್ಞಾನ ಸಂಪನ್ನನಾಗಿ, ಅಂತಃಪ್ರಕಾಶನಾಗಿಯೂ, ಆತ್ಮರತನಾಗಿಯೂ, ಆತ್ಮತೃಪ್ತನಾಗಿಯೂ, ಆತ್ಮಸಂತುಷ್ಟನಾಗಿಯೂ, ವರ್ತಿಸುತ್ತಿರುವವನು ಬ್ರಹ್ಮವಾದನು. ಸಕಲವೈದಿಕ ಲೌಕಿಕ ಕರ್ಮಗಳನ್ನು ವಿಧಿಪೂರ್ವಕವಾಗಿ ಸನ್ಯಸಿಸಿ, ಪೂರ್ವದಲ್ಲಿ ಬ್ರಹ್ಮವಿದನಿಗೆ ಹೇಳಲ್ಪಟ್ಟ ಲಕ್ಷಣಗಳನ್ನೆಲ್ಲಾ ಪಡೆದು, ತನಗೆ ಸಂಭವಿಸಿದ ದುಃಖಗಳಿಗಾಗಿ ವ್ಯಸನ ಪಡದೆ, ನಿವೃತ್ತ ಸುಖಗಳನ್ನು ಬಯಸದೆ, ಪ್ರಕಾಶ, ವೃತ್ತಿ, ಮೋಹಗಳನ್ನು ಉದಾಸೀನನಂತೆ ನೋಡುತ್ತಾ ಸುಖ, ದುಃಖ, ಮೋಹ ಮೊದಲಾದ ಕಾರ್ಯಾಕಾರ್ಯ ಗುಣಗಳಲ್ಲಿ ಚಿತ್ತ, ಇಂದ್ರಿಯ, ಮೊದಲಾದ ವಿಕಾರ ಕಾರಣಗುಣಗಳು ಪ್ರವರ್ತಿಸುತ್ತಿರಲು ಅವುಗಳಿಂದ ಸ್ವಲ್ಪವಾದರೂ ಚಲಿಸಲ್ಪಡದೆ, ನಿಶ್ಚಲನಾಗಿಯೂ, ಸಮದುಃಖಸುಖನಾಗಿಯೂ, ಸ್ವಸ್ಥನಾಗಿ ಮಣ್ಣು, ಕಲ್ಲು, ಚಿನ್ನ, ಇವುಗಳಲ್ಲಿ ಒಂದೇ ಸಮವಾದ ಬುದ್ಧಿಯುಳ್ಳವನಾಗಿಯೂ, ಪ್ರಿಯಾಪ್ರಿಯಗಳಲ್ಲಿ ಸಮಾನವಾದ ಭಾಗವುಳ್ಳವನಾಗಿಯೂ, ನಿಂದಾಸ್ತುತಿಗಳಲ್ಲಿಯೂ, ಮಾನಾವಮಾನಗಳಲ್ಲಿಯೂ, ಶತ್ರುಮಿತ್ರರಲ್ಲಿಯೂ ಸಮಬುದ್ಧಿಯುಳ್ಳವನಾಗಿಯೂ, ಗುಣಾತೀತನಾಗಿಯೂ, ಸರ್ವಾರಂಭಗಳನ್ನು ಬಿಟ್ಟವನಾಗಿಯೂ ಇರುವವನು ಬ್ರಹ್ಮವಿದ್ವರನು.

ಮೇಲೆ ಹೇಳಲ್ಪಟ್ಟ ಈ ಗುಣಗಳನ್ನೆಲ್ಲಾ ಪಡೆದು, ಸದಾಕಾಲದಲ್ಲಿಯೂ ಸಹಜಾಮನಸ್ಕರಾಜಯೋಗನಿಷ್ಠೆಯುಳ್ಳವನಾಗಿ, ಆಗಾಗ ಇತರರಿಂದ ಎಚ್ಚರಗೊಳಿಸಲ್ಪಟ್ಟು, ಸ್ವಲ್ಪಸ್ವಲ್ಪವಾಗಿ ಆಹಾರವನ್ನು ತೆಗೆದುಕೊಳ್ಳುತ್ತಾ ನಿದ್ರಿಸಿದವನಹಾಗೆ ಈ ಜಗತ್ತನ್ನು ಮರೆತಿರುವವನು ಬ್ರಹ್ಮವಿದ್ವರೀಯನು.

ತನ್ನಿಂದಲಾಗಲಿ, ಪರರಿಂದಲಾಗಲೀ ಪುನರುತ್ಥಾನವಿಲ್ಲದೆ ಬಾಹ್ಯಾಭ್ಯಂತರಗಳನ್ನು ಮರೆತು, ನಿರಂತರನಿರ್ವಿಕಲ್ಪಸಮಾಧಿನಿಷ್ಟನಾಗಿ ಪರಿ

ಪೂರ್ಣವಾಗಿ ಪ್ರತ್ಯಗಭಿನ್ನವಾದ ಪರಬ್ರಹ್ಮವಿದ್ಯಾವರಿಷ್ಠನು. ಎಂದೆನಿಸಿಕೊಳ್ಳುವರು.

ಇವರಲ್ಲಿ ಮೊದಲನೆಯ ಇಬ್ಬರಿಗೂ ಪ್ರಾರಬ್ಧವು ತೋರಿದರೂ ಮಿಥ್ಯಾಭೂತವಾಗಿರುವುದು. ವರೀಯನಲ್ಲಿ ಸೇರಿದ್ದರೂ ಇಲ್ಲದೆ ಇರುವುದು. ಬ್ರಹ್ಮವಿದ್ವರಿಷ್ಠನಿಗೆ ಸ್ವಲ್ಪವಾದರೂ ಇರುವುದೇ ಇಲ್ಲ. ಈ ಮಹಾನುಭಾವರ ಅನುಭವಗಳನ್ನು ನಿನಗೋಸ್ಕರ ವಿಶದವಾಗಿ ಹೇಳಿದೆನು ಇನ್ನು ವೈರಾಗ್ಯಬೋಧೋಪರತಿಗಳ ತಾರತಮ್ಯವನ್ನು ಹೇಳುವೆನು ಕೇಳು. ನಾನು ಮೊದಲು ಹೇಳಿದಂತೆ ಬ್ರಹ್ಮವಿದ, ಬ್ರಹ್ಮವಿದ್ವರ, ಬ್ರಹ್ಮವಿದ್ವರೀಯ, ಬ್ರಹ್ಮ ವಿದ್ವರಿಷ್ಠ ಎಂಬ ನಾಲ್ಕು ಬಗೆಯ ಅಧಿಕಾರಿಗಳಿಗೆ ವೈರಾಗ್ಯ, ಬೋಧ, ಉಪರತಿ ಎಂಬ ಮೂರುಗುಣಗಳಿರುವುವು. ಇವುಗಳಲ್ಲಿ ವೈರಾಗ್ಯವೆಂದರೆ ಇಹಪರಲೋಕಗಳ ಭೋಗಗಳನ್ನು ಅಪೇಕ್ಷಿಸದೆ ಇರುವುದು, ಬೋಧವೆಂದರೆ ಬ್ರಹ್ಮಜ್ಞಾನವು, ಉಪರತಿಯೆಂದರೆ ತನ್ಮಯತ್ವಸ್ಥಿತಿ, ಇವುಗಳಲ್ಲಿ ತಾರತಮ್ಯವಿರುವುದು. ಅಂದರೆ ಬ್ರಹ್ಮವಿದನು ನಿತ್ಯಕರ್ಮಾಚರಣೆಗಳನ್ನು ಮಾಡುತ್ತಾ ತಾನು ಬ್ರಹ್ಮನೆಂಬ ಜ್ಞಾನವುಳ್ಳವನಾಗಿರುವನು, ಬ್ರಹ್ಮವಿದ್ವರನು ಬ್ರಹ್ಮಜ್ಞಾನವನ್ನೂ ಪಾಶವೈರಾಗ್ಯವನ್ನೂ ಪಡೆದಿರುವನು. ಬ್ರಹ್ಮವಿದ್ವರೀಯನು ಪಾಶವೈರಾಗ್ಯವನ್ನೂ ಮನೋಲಯವನ್ನೂ ಹೊಂದಿರುವನು. ಬ್ರಹ್ಮವಿದ್ವರಿಷ್ಠನು ಈ ಮೂರುಗುಣಗಳೂ ಇಲ್ಲದೆ ಆನಂದದಿಂದ ಇರುವನು. ಈ ಮೂರರಲ್ಲಿ ಬೋಧವೆಂಬ ಅಪರೋಕ್ಷಜ್ಞಾನವೇ ಶ್ರೇಷ್ಠವಾದುದು. ಆ ಜ್ಞಾನಕ್ಕೆ ಇತರ ವೈರಾಗ್ಯ, ಉಪರತಿ ಎಂಬಿವು ಎರಡೂ ಸಹಕಾರಿಗಳು, ಈ ಮೂರರೂ ಉಳ್ಳ ಮಹಾತ್ಮರಿಗೆ ಮುಕ್ತಿಯು ಕರತಲಾಮಲಕದಂತೆ ಬಹು ಸುಲಭವಾಗಿರುವುದು. ನಿರ್ಮಲಚಿತ್ತರಾದವರಿಗೆ ಪರಬ್ರಹ್ಮವೂ ತತ್ವಜ್ಞಾನವೂ, ಸಾಕ್ಷಾತ್ತಾಗಿ ಮುಕ್ತಿಯೂ ಲಭಿಸುವುದು. ಅಂತವರಿಗೆ ಪ್ರಕೃತಿದ್ವಯದಿಂದ ಉಂಟಾದ ವಿಷಯಸುಖಗಳನ್ನು ಮರಳಿ ಬಯಸದೆ ಇರುವುದೇ ಉತ್ತಮ ಫಲವಾಗಿರುವುದು. ಅಪರೋಕ್ಷಜ್ಞಾನಕ್ಕೆ ಶ್ರವಣ ಮನನ, ನಿಧಿಧ್ಯಾಸನ ಇವುಮೂರರೂ ಹೇತುಗಳು, ಪ್ರಕೃತಿ ಮತ್ತು ಪರಬ್ರಹ್ಮನು ಇವುಗಳ ವಿಮರ್ಶೆ, ಸ್ವರೂಪ ಇವುಗಳನ್ನು ತಿಳಿದು ಪ್ರಕೃತಿಗೂ ಪರಮಾತ್ಮನಿಗೂ ಐಕ್ಯವಿಲ್ಲದೆ ಬಿಡುವುದೇ ಪ್ರಯೋಜನವು. ಇದರಿಂದ ಮನೋನಿಗ್ರಹವೂ, ವಿದ್ಯಾವಿದ್ಯೆಗಳ ವ್ಯಾಪಾರಲಯವೂ, ಉಂಟಾ

ಗುವುವು. ವೈರಾಗ್ಯವನ್ನು ದೃಢಪಡಿಸಿ, ಪರತತ್ವಜ್ಞಾನವನ್ನು ಸಂಪಾದಿಸಿ ಸರ್ವಾರಂಭಗಳ ಉಪಕ್ರಮ, ಉಪಸಂಹಾರಗಳನ್ನವಲಂಬಿಸಿ, ಅವಸ್ಥಾತ್ರಯಕ್ಕೆ ಮೀರಿದ ತುರೀಯವೆಂಬ ಸಾಕ್ಷಿಭಾವವನ್ನು ಹೊಂದಿ, ಜೀವೇಶ್ವರೈಕ್ಯವನ್ನು ಪಡೆದ ಪುರುಷನು ಆಗಾಮಿಸಂಚಿತಪ್ರಾರಬ್ಧ ಕರ್ಮಗಳಿಗೆ ಎಂದಿಗೂ ಸಿಕ್ಕಲಾರನು.

ಎಲೈ ಆಂಜನೇಯನೇ, ವೈರಾಗ್ಯದ ಲಕ್ಷಣವನ್ನು ಹೇಳುವೆನು ಕೇಳು, ಮೂಲಪ್ರಕೃತಿಯೇ ಬುಡದ ಪಾತಿ, ಸುಖದುಃಖಗಳೇ ಫಲಗಳು. ಸಾತ್ವಿಕರಾಜಸ ತಾಮಸಗುಣಗಳೇ ಬೇರುಗಳು, ಕಣ್ಣು ಮೊದಲಾದ ಪಂಚೇಂದ್ರಿಯಗಳೇ ಬಿಳಲುಗಳು. ಅಶನ, ಬಾಯಾರಿಕೆ, ಶೋಕ, ಮೋಹ, ಜರೆ, ಮರಣಗಳೆಂಬ ಆರು ಊರ್ಮಿಗಳೇ ಸ್ವಭಾವಗಳು, ಚರ್ಮ, ಮಾಂಸ, ರಕ್ತ, ಮೇದಸ್ಸು, ಮಜ್ಜೆ, ಅಸ್ಥಿ, ನರಗಳೆಂಬ ಸಪ್ತಧಾತುಗಳೇ ಪಟ್ಟೆಗಳು, ಭೂಮಿ, ನೀರು, ಅಗ್ನಿ, ವಾಯು, ಆಕಾಶ, ಮನಸ್ಸು, ಅಹಂಕಾರ, ಬುದ್ಧಿಗಳೆಂಬ ಅಷ್ಟಪ್ರಕೃತಿಗಳೇ ಕೊಂಬೆಗಳು, ಕಿವಿ ಮೊದಲಾದ ಒಂಭತ್ತು ದ್ವಾರಗಳೇ ಪೊಟ್ಟರೆಗಳು, ಪ್ರಾಣಾದಿ ಹತ್ತು ವಾಯುಗಳೇ ಎಲೆಗಳು, ಶಬ್ದಸ್ಪರ್ಶಾದಿ ಹದಿನಾಲ್ಕು ಇಂದ್ರಿಯ ವಿಷಯಗಳು ಚಿಗುರುಗಳು, ರಾಗ ದ್ವೇಷ ಮೊದಲಾದ ಹದಿನಾಲ್ಕು ಇಂದ್ರಿಯವೃತ್ತಿಗಳೇ, ಸಣ್ಣ ಕೊಂಬೆಗಳು. ಬಹು ಪ್ರಕಾರಗಳಾದ ಕರ್ಮಗಳೇ ಹೂವುಗಳು, ಜೀವನು ಮತ್ತು ಈಶ್ವರನು ಎಂಬ ಎರಡು ಪಕ್ಷಿಗಳನ್ನು ಉಳ್ಳದ್ದಾಗಿ, ಮನೆ, ತೋಟ, ಭೂಮಿ, ಮಕ್ಕಳು, ಸ್ನೇಹಿತರು ಪತ್ನಿಯರು, ಬಂಧುಗಳು, ಮಧ್ಯಸ್ಥರು, ಶತ್ರುಗಳು ಎಂಬ ತೀಕ್ಷ್ಣಗಳಾದ ವಿಷದ ಮುಳ್ಳುಗಳುಳ್ಳ ವೃಕ್ಷಗಳಿಂದಲೂ, ಪೊದೆಗಳಿಂದಲೂ, ಬಳ್ಳಿಗಳಿಂದಲೂ ಹೆಣೆದುಕೊಂಡಿರುವ ಕಾಮ ಕ್ರೋಧಾದಿ ಅರಿಷಡ್ವರ್ಗವೆಂಬ ಕಳ್ಳರ ದುಸ್ಸಂಚಾರವುಳ್ಳದ್ದಾಗಿಯೂ, ಆಧಿವ್ಯಾಧಿಗಳೆಂಬ ಹುಲಿಗಳಿಂದ ಭಯಂಕರವಾದುದಾಗಿಯೂ, ದುಃಖಗಳೆಂಬ ಕಾಡು ಕಿಚ್ಚಿನಿಂದ ಆವರಿಸಲ್ಪಟ್ಟುದಾಗಿಯೂ, ಮೃತ್ಯುವೆಂಬ ಸಿಂಹದ ಭಯದಿಂದ ಕೂಡಿದುದಾಗಿಯೂ, ಜರೆಯೆಂಬ ಪಿಶಾಚದಿಂದ ಹೆದರಿಸಲ್ಪಟ್ಟುದಾಗಿಯೂ ಬಡತನವೆಂಬ ಬೆಟ್ಟದಿಂದ ಇರುಕಿಸಲ್ಪಟ್ಟುದಾಗಿಯೂ, ಪಾಪಗಳೆಂಬ ರಾಕ್ಷಸರಿಂದ ಭಯಂಕರವಾದದ್ದಾಗಿಯೂ, ಆಶೆಯೆಂಬ ಕೃಷ್ಣಸರ್ಪದಿಂದ ಸಮಾಕುಲವಾಗಿಯೂ, ಸಂತೋಷ ಕೋಪಗಳೆಂಬ

ಝುಂಝಾಮಾರುತದಿಂದ ದೂಷಿತವಾಗಿಯೂ, ಸ್ವರ್ಗ ನರಕಗಳೆಂಬ ತಪ್ಪುದಾರಿಗಳಿಂದ ಮರೆಸಲ್ಪಟ್ಟಿರುವ ಮೋಕ್ಷವೆಂಬ ಸನ್ಮಾರ್ಗವುಳ್ಳು ದಾಗಿಯೂ ಇರುವ, ಆಧ್ಯಾತ್ಮಿಕ, ಆಧಿಭೌತಿಕ, ಆಧಿದೈವಿಕಗಳೆಂಬ ಚಿಂತೆಗಳನ್ನುಳ್ಳ ಘೋರಾರಣ್ಯದಲ್ಲಿ ದಾರಿತಪ್ಪಿ, ಪುಣ್ಯ ಪಾಪಗಳಿಗೆ ಅಧೀನನಾದ ಜೀವನು ನಾಲ್ಕುದಿಕ್ಕುಗಳಲ್ಲಿಯೂ ತಿರುಗಿ ತಿರುಗಿ, ಎಲ್ಲಿಯೂ ವಿಶ್ರಾಂತಿಯನ್ನು ಪಡೆಯದೆ, ಬೇಸತ್ತು, ಎದುರಿಗೆ ನೋಡಿ ಇದು ಅನಂತವಾದುದೆಂತಲೂ, ಹಿಂದಿರುಗಿ ನೋಡಿ ಇದು ಅನಾದಿಯೆಂತಲೂ, ತಿಳಿದುಕೊಂಡು, ಅಗಾಧವಾನ ದುಃಖ, ಭಯ, ಶೋಕ, ಇವುಗಳಿಂದ ವ್ಯಾಕುಲವಾದ ಮನಸ್ಸುಳ್ಳವನಾಗಿ, ತಾಪ ತ್ರಯಗಳೆಂಬ ಸೂರ್ಯ-ಕಿರಣಗಳಿಂದ ಸುಡಲ್ಪಟ್ಟವನಾಗಿ, ಆ ಬಳಿಕ ಕಾಮಿಕಾದಿ ಆಗಮಗಳೆಂಬ ಮರದ ನೆರಳನ್ನು ಆಶ್ರಯಿಸಿ, ಹೂವು, ಗಂಧ, ಸ್ತ್ರೀಯರು, ಧಾನ್ಯಗಳು, ಪಶುಗಳು. ಮಕ್ಕಳು, ಹಾಸಿಗೆ, ಮನೆಗಳು, ತೋಟಗಳು ಮೊದಲಾದ ವಿಷಯಗಳನ್ನು ಸಂಪಾದಿಸುವುದಕ್ಕೆ ಸಾಧನಗಳಾದ ಕೃಷಿ, ವಾಣಿಜ್ಯ, ಸೇವೆ, ತಿರುಪ, ಮೊದಲಾದ ಲೌಕಿಕಕರ್ಮಗಳನ್ನು ಪರಿತ್ಯಜಿಸಿ, ಸ್ವರ್ಗಾದಿ ಪರಲೋಕ ಸುಖಗಳಿಗೆ ಸಾಧಕಗಳಾದ ನಿತ್ಯನೈಮಿತ್ತಿಕಾದಿ ಕರ್ಮಗಳನ್ನು ಫಲಾಪೇಕ್ಷೆಯಿಂದ ಮಾಡದೆ, ಎಲ್ಲವೂ ಬ್ರಹ್ಮಾರ್ಪಣವೆಂದು ತಿಳಿದು ಆಚರಿಸುತ್ತಾ ಆ ಪರಬ್ರಹ್ಮನ ಅನುಗ್ರಹದಿಂದ ನಿರ್ಮಲಚಿತ್ತನಾಗಿ, ಅಮಾನಿತ್ವ (ತನ್ನನ್ನು ತಾನೆ ಹೊಗಳಿಕೊಳ್ಳದೆ ಇರುವುದು) ದಂಭವಿಲ್ಲದೆ ಇರುವುದು, ಅಹಿಂಸೆ, ಋಜುಮಾರ್ಗ, ಸೈರಣೆ, ಗುರುಶುಶ್ರೂಷೆ, ಪರಿಶುದ್ಧತ್ವ, ಸ್ಥೈರ್ಯ, ಆತ್ಮನಿಗ್ರಹ, ಇಂದ್ರಿಯ ವಿಷಯಗಳಲ್ಲಿ ವೈರಾಗ್ಯ, ಜನ್ಮ ಮೃತ್ಯು ಜರಾ ವ್ಯಾಧಿ ದುಃಖಗಳಲ್ಲಿ ದೋಷಾನುದರ್ಶನ ಮಾಡುತ್ತಾ ಪುತ್ರರು, ಪತ್ನಿಯರು ಮನೆಗಳು ಮೊದಲಾದುವುಗಳಲ್ಲಿ ಆಶೆಯನ್ನು ತೊರೆದು, ನಿತ್ಯವೂ ಇಷ್ಟಾನಿಷ್ಟಫಲಗಳು ಲಭಿಸಿದರೆ ಅವುಗಳಲ್ಲಿ ಸಮಬುದ್ಧಿಯುಳ್ಳವನಾಗಿ ನನಗಿಂತಲೂ ಇತರ ವಸ್ತುವೇ ಇಲ್ಲವೆಂದು ತಿಳಿದು ನಿಶ್ಚಲಭಕ್ತನಾಗಿ, ವಿಜನಪ್ರದೇಶವನ್ನು ಸೇರಿ, ಸಂಗವನ್ನು ವರ್ಜಿಸಿ, ಅಧ್ಯಾತ್ಮ ಜ್ಞಾನನಿಷ್ಠನಾಗಿ, ಆತ್ಮಬ್ರಹ್ಮೈಕ್ಯ ಸಾಕ್ಷಾತ್ಕಾರವನ್ನು ವಿಚಾರಿಸುವುದಕ್ಕೆ ಅಧಿಕಾರಿಯಾಗುವನು.

ಅಂಥ ಗುಣಶಾಲಿಯಾದ ಪುರುಷನು ಬಹು ಪರಿತಾಪದಿಂದ ಶಾಂತ

ಚಿತ್ತನೂ, ದಯಾಸಾಗರನೂ, ಜ್ಞಾನವಿಜ್ಞಾನ ಸಂಪನ್ನನೂ, ಆದ ಸದ್ಗುರುವನ್ನು ಆಶ್ರಯಿಸಿ, ವಿನಯ ಭಯಭಕ್ತಿಗಳಿಂದ ಆತನನ್ನು ಸೇವಿಸುವನು. ಗುರುವೇ ಬ್ರಹ್ಮನು, ಗುರುವೇ ವಿಷ್ಣುವು, ಗುರುವೇ ಮಹೇಶ್ವರನು. ಗುರುವೇ ಸಾಕ್ಷಾತ್ಪರಬ್ರಹ್ಮನೆಂದು ಭಕ್ತಿಯಿಂದ ಆತನನ್ನು ಪೂಜಿಸುತ್ತಿರುವನು. ವಿದ್ಯಾರ್ಥಿಯಾದ ಯೋಗಿಯು ವಿನಯ ಭಯಭಕ್ತಿಗಳಿಂದ ಆ ಸದ್ಗುರುವಿನ ಶುಶ್ರೂಷೆಮಾಡಿ ಸೇವಿಸುತ್ತಿದ್ದರೆ ಆ ಮಹಾತ್ಮನ ಉಪದೇಶದಿಂದ ತಾರಕ, ಸಾಂಖ್ಯ, ಅಮನಸ್ಕವೆಂಬ ಯೋಗಗಳೇ ಸ್ವರೂಪವಾಗಿ ಉಳ್ಳ ಶ್ರೀ ರಾಜಯೋಗವನ್ನು ನಿಸ್ಸಂಶಯವಾಗಿ ತಿಳಿದುಕೊಳ್ಳಬಲ್ಲನು. ಕ್ರಮವಾಗಿ ಅಕಾರಾದಿ ಹಕಾರಾಂತವಾದ ಅಹಂ ಎಂಬ ಪದಕ್ಕೆ ಈ ಶರೀರವು, ಇಂದ್ರಿಯಗಳೂ ಪ್ರಾಣವು, ಚಿತ್ತವು, ಮನಸ್ಸು, ಅಹಂಕಾರವು, ಬುದ್ಧಿಯು, ಇವೇ ರೂಪವಾಗಿ ಉಳ್ಳ ಅಜ್ಞಾನವೃತ್ತಿಗಳ ಸಮೂಹವೆಲ್ಲವೂ. ವಾಚ್ಯಾರ್ಥವಾಗಿರುವುದು. ಪ್ರಧಾನವಾಗಿಯೂ, ಸಚ್ಚಿದಾನಂದ ಸ್ವರೂಪವಾಗಿಯೂ, ಒಪ್ಪುವ ಶುದ್ಧವಾದ, ವಿಲಕ್ಷಣವಾದ ಆತ್ಮವಿಚಾರವು ಲಕ್ಷ್ಯಾರ್ಥವಾಗಿರುವುದು. ಬ್ರಹ್ಮಶಬ್ದಕ್ಕೆ ಪಿಂಡಾಂಡ ಬ್ರಹ್ಮ ವಿಷ್ಣು ರುದ್ರ ಈಶ್ವರ ಸದಾಶಿವ ಮಾಯಾಂಡ ಪರ್ಯಂತವಾದ ಸರ್ವವೂ ವಾಚ್ಯಾರ್ಥವಾಗಿರುವುದು. ಆ ಸಮಸ್ತಗಳಿಗೂ ಆಧಾರವಾದ ಶುದ್ಧಚೈತನ್ಯವೇ ಲಕ್ಷ್ಯಾರ್ಥವಾಗಿರುವುದು.

ಅಹಂ, ಬ್ರಹ್ಮ ಎಂಬ ಎರಡುಪದಗಳ ವಾಚ್ಯಾರ್ಥಗಳಿಂದ ಒಪ್ಪುತ್ತಿರುವ ಉಭಯಲಕ್ಷ್ಯಾರ್ಥಗಳಿಗೆ ಎಂದಿಗೂ ಐಕ್ಯವುಂಟಾಗಲಾರದು. ಆದುದರಿಂದ ವಾಚ್ಯಾರ್ಥಗಳೆರಡನ್ನೂ ಬಿಟ್ಟುಬಿಟ್ಟು ಲಕ್ಷ್ಯಾರ್ಥವೊಂದನ್ನೇ ಗ್ರಹಿಸಬೇಕು. ಅದ್ವಿತೀಯನಾದ ಪ್ರತ್ಯಗಾತ್ಮನೇ ನಾನು. ನಾನೇ ಪರಿಪೂರ್ಣನಾದ ನಿರ್ಗುಣಬ್ರಹ್ಮನು ಆಗುವೆನು. ಪರಿಪೂರ್ಣ ನಿರ್ಗುಣಬ್ರಹ್ಮನೇ ಅದ್ವಿತೀಯಪ್ರತ್ಯಗಾತ್ಮನಾದ ನಾನು. ಎಂದು, ಅಹಂ, ಬ್ರಹ್ಮಪದಗಳ ಲಕ್ಷ್ಯಾರ್ಥವನ್ನು ಗ್ರಹಿಸಿ, ಲಕ್ಷಣಗಳಿಂದ ಅವುಗಳಿಗೆ ಅನ್ಯೋನ್ಯಸಾಮರಸ್ಯದಿಂದ ಐಕ್ಯಭಾವವನ್ನು ಗ್ರಹಿಸುವುದೇ ಅಸ್ಮಿ ಎಂಬ ಪದಕ್ಕೆ ಅರ್ಥವಾಗುವುದು. ''ಅಹಂಬ್ರಹ್ಮಾಸ್ಮಿ'' ಎಂಬ ಮಹಾವಾಕ್ಯದ ತಾತ್ಪರ್ಯವು ಇದೇ ಎಂದು ತಿಳಿದುಕೊ.

ಎಲೈ ಆಂಜನೇಯನೇ, ವೈರಾಗ್ಯ, ಬೋಧ ಈ ಎರಡು ಶಬ್ದಾರ್ಥಗಳನ್ನು ನಿನಗೆ ವಿವರಿಸಿಹೇಳಿದೆನು. ಇನ್ನು ಉಪರತಿಯ ಶಬ್ದಾರ್ಥ

ವನ್ನು ಹೇಳುವೆನು. ಕೇಳು, ಬ್ರಹ್ಮಜ್ಞಾನಸಂಪಾದನೆಗೆ ಮನಶ್ಶಾಂತಿಯು ಮುಖ್ಯಪ್ರಯೋಜನವಾಗಿರುವುದು. ಜೀವಕಾರುಣ್ಯವೆಂಬ ಉಪಕಾರ, ದಾನ, ಭೋಗ ಇವುಗಳಿಗೆ ಉಪಯೋಗಿಸದೆ ಇರುವ ಮನುಷ್ಯನ ಸಂಪತ್ತೂ, ಸದಾಚಾರವಿಲ್ಲದ ಬ್ರಾಹ್ಮಣನ ವೇದಾಧ್ಯಯನವೂ. ಮನಸ್ಸಿನಲ್ಲಿ ಶಾಂತಿ ಇಲ್ಲದ ಋಷಿಯ ತಪಸ್ಸೂ, ಇಂದ್ರಿಯಗಳನ್ನು ಜಯಿಸಿ ಆನಂದ ಹೊಂದದೆ ಇರುವ ಯೋಗಿಯ ವಿವೇಕವೂ ವ್ಯರ್ಥವೆಂದು ತಿಳಿ. ವಿದ್ವಾಂಸರಿಂದ ವೇದಶಾಸ್ತ್ರಾದಿಗಳನ್ನು ಓದಿಸಬಹುದು. ತಾವು ಓದಲೂ ಬಹುದು. ಅಧಿಕಾರಿ ಜನರಿಂದ ಯಜ್ಞದಾನತಪಸ್ಸುಗಳನ್ನು ಮಾಡಿಸಬಹುದು. ತಾನೂ ಮಾಡಬಹುದು. ಈ ಭೂಲೋಕದಲ್ಲಿರುವ ಪುಣ್ಯತೀರ್ಥಕ್ಷೇತ್ರಗಳಿಗೆ ಹೋಗಿ ಸೇವಿಸಿಕೊಂಡು ಬರಬೇಕೆಂದು ಪರರಿಗೆ ಬೋಧಿಸಬಹುದು. ತಾನೂ ಹೋಗಿ ಸೇವಿಸಿಕೊಂಡು ಬರಬಹುದು. ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧ್ಯಾನ, ಧಾರಣ, ಸಮಾಧಿಯೆಂಬ ಅಷ್ಟಾಂಗಯೋಗವಿದ್ಯೆಗಳನ್ನು ಮಹಾಜನರಿಗೆ ಉಪದೇಶಿಸಬಹುದು, ಅವುಗಳನ್ನು ತಾನು ಸಾಧಿಸಲೂಬಹುದು. ಆದರೂ ವಿಜ್ಞಾನದಿಂದ ಜೀವೇಶ್ವರೈಕ್ಯಮಾರ್ಗದಲ್ಲಿ ದೇಹಗಳೂ ಇಂದ್ರಿಯಗಳೂ ಇವುಗಳನ್ನು ಜಯಿಸಿ, ಸಂಶಯಾತ್ಮಕವಾದ ಮನಸ್ಸನ್ನು ಅಂತರ್ಮುಖವಾಗಿ ಮಾಡಿ, ಅದನ್ನು ನಿಶ್ಚಲಸಮಾಧಿಯಿಂದ ಸ್ವಾಧೀನಪಡಿಸಿಕೊಳ್ಳುವುದು ಕಷ್ಟಕರವಾದುದು. ಮನಸ್ಸನ್ನೂ ಇಂದ್ರಿಯಗಳನ್ನೂ ಜಯಿಸುವುದು ಬಹು ಕಷ್ಟವು. ಇದು ಎಲ್ಲರಿಂದಲೂ ಸಾಧ್ಯವಲ್ಲವು. ಕೆಲವರು ನಾವು ಬ್ರಹ್ಮಸ್ವರೂಪವನ್ನು ಬಲ್ಲೆವೆಂದು ಅಹಂಕಾರವುಳ್ಳವರಾಗಿ ಮನೋನಿಗ್ರಹವಿಲ್ಲದ್ದರಿಂದ ಉಪರತಿ ಸುಖವನ್ನು ಪಡೆಯಲಾರದೆ ವಿಷಯಾಭಿಲಾಷೆಯಲ್ಲಿ ಸಿಕ್ಕಿ ವ್ಯರ್ಥವಾಗಿ ಕೆಡುತ್ತಿರುವರು. ಇಂತವರನ್ನು ಇಂದ್ರಿಯಗಳು ತಮ್ಮ ಸ್ವಾಧೀನಪಡಿಸಿಕೊಂಡು, ವಿಷಯಸುಖಗಳ ರುಚಿ ತೋರಿಸಿ, ನಾನಾವಿಧವಾದ ವ್ಯಥೆಗಳಿಗೆ ಗುರಿಮಾಡುವುವು. ಆದುದರಿಂದ ಬುದ್ಧಿಶಾಲಿಯಾದವನು ಮನಸ್ಸನ್ನೂ ಇಂದ್ರಿಯಗಳನ್ನೂ ಬಿಗಿಹಿಡಿದು, ಅಂತರ್ಮುಖವಾಗಿ ಮಾಡಿ, ಕಾಮ ಕ್ರೋಧಾದಿ ಶತ್ರುವರ್ಗಗಳನ್ನು ಅಡಗಿಸಿ, ನಿರ್ಮಲ ಬ್ರಹ್ಮಾಕಾರವಾದ ವೃತ್ತಿಯಿಂದ ಅಖಂಡ ಬ್ರಹ್ಮಸ್ವರೂಪವನ್ನು ದರ್ಶನಮಾಡಿ, ಆನಂದಮೂರ್ತಿಯಾಗಿ, ಸರ್ವಪ್ರಪಂಚವನ್ನೂ ತನ್ನಲ್ಲಿ ಲಯಮಾಡಿ, ಮನಶ್ಶಾಂತಿಯನ್ನುಹೊಂದಿ

ಜ್ಞಾನಾಜ್ಞಾನಗಳು ಹತ್ತದ ಪೂರ್ಣ ಪ್ರಜ್ಞನಾದ ಪರಮಪುರುಷನು ತಾನೇ ಆಗಿಯೂ, ಗುಣತ್ರಯಾತೀತನಾಗಿಯೂ, ಅಮನಸ್ಕ ರಾಜಯೋಗ ವಿದ್ಯಾಸಮೇತನಾಗಿಯೂ ಆಗುವನು-ಯಾವನು ಧರ್ಮವಿಧಿಯಿಂದ ತನ್ನ ಮನಸ್ಸಿಗೆ ಹತ್ತಿರುವ ಸರ್ವ ಕಾಮಗಳನ್ನೂ ಕ್ರಮಕ್ರಮವಾಗಿ ಬಿಟ್ಟು ಬಿಟ್ಟು ಆತ್ಮಸಂತೋಷವುಳ್ಳವನಾಗುವನೋ ಅವನೇ ಸ್ಥಿತ ಪ್ರಜ್ಞನೆನಿಸುವನು. ಸಂಪ್ರಾಪ್ತವಾದ ದುಃಖಗಳಿಗೆ ಭಯಪಡದೆ ಸಹಿಸಿಕೊಂಡು. ಅಪ್ರಾಪ್ತವಾದ ಸುಖಗಳನ್ನು ಬಯಸದೆ, ರಾಗ ಭಯ ಕ್ರೋಧಗಳನ್ನು ಬಿಟ್ಟು ಬಿಟ್ಟು ನಡೆಯುವವನೇ ಸ್ಥಿತಪ್ರಜ್ಞನೆಂದು ತಿಳಿಯತಕ್ಕದ್ದು,

ವಿಷಯ ಸುಖಗಳಲ್ಲಿ ಇಷ್ಟ ಇಲ್ಲದೆ, ಶುಭವುಂಟಾದರೆ ಗರ್ವಿಸದೆಯೂ ಅಶುಭವುಂಟಾದರೆ ವ್ಯಸನಪಡದೆಯೂ ಸಮಬುದ್ಧಿಯಿಂದ ಇರುವನೋಅವನೆ ಸ್ಥಿತಪ್ರಜ್ಞನು.ಕೂರ್ಮವು ತನ್ನ ಅಂಗಗಳನ್ನೆಲ್ಲಾ ಮುಚ್ಚಿಕೊಂಡಿರುವಂತೆ ಆತ್ಮಜ್ಞಾನಿಯು ನೇತ್ರಾದಿ ಇಂದ್ರಿಯಗಳನ್ನೂ ಮನಸ್ಸನ್ನೂ ಶಬ್ದಾದಿ ವಿಷಯಗಳಿಂದ ಬಿಗಿ ಹಿಡಿದು, ತಿರುಗಿಸುತ್ತಿರುವನೋ ಅವನೇ ಸ್ಥಿತಪ್ರಜ್ಞನು. ಒಟ್ಟುಗೂಡಿಸಿ ಹೇಳಬೇಕಾದರೆ ಹೀಗೆನ್ನಬಹುದು. ಯಾವ ಪ್ರಜ್ಞಾಶಾಲಿಯಾದವನಿಗೆ ಇಂದ್ರಿಯಗಳೂ ಮನಸ್ಸೂ ಆಜ್ಞೆಯಲ್ಲಿದ್ದುಕೊಂಡು ಹೇಳಿದ ಕೆಲಸಗಳನ್ನು ಮಾಡುವುವೋ ಆ ಮಹಾನುಭಾವನೇ ಆತ್ಮಸ್ಥಿತಪ್ರಜ್ಞನೆನಿಸುವನು. ಸಮಸ್ತ ಭೂತಗಳಿಗೂ ಯಾವುದು ರಾತ್ರಿಯಾಗಿರುವುದೊ ಆ ರಾತ್ರಿಯಲ್ಲಿ ಮಹಾತ್ಮನು ಜಾಗರೂಕನಾಗಿರುವನು. ಸಕಲ ಜನರು ಯಾವ ಹಗಲಿನಲ್ಲಿ ಎಚ್ಚರಗೊಂಡಿರುವರೋ ಆ ಹಗಲಿನಲ್ಲಿ ಅವನು ರಾತ್ರಿಕಾಲದಂತೆ ಅವಿದ್ಯಾಸ್ವರೂಪವಾದ ಶಬ್ದಾದಿ ವಿಷಯಗಳನ್ನಿಲ್ಲವಂತೆ ತಿಳಿಯುತ್ತಾನೆ.

ಆದುದರಿಂದ ಇಂದ್ರಿಯಗಳನ್ನೂ ಮನಸ್ಸನ್ನೂ ಸ್ವಾಧೀನಪಡಿಸಿಕೊಂಡು ಬ್ರಹ್ಮಜ್ಞಾನಿಯಾಗಿರುವ ಪುರುಷನು ಸರ್ವಭೂತಗಳಲ್ಲಿಯೂ ದ್ವೇಷಬುದ್ಧಿಯನ್ನು ಬಿಟ್ಟು, ಸಕಲಲೋಕಮಿತ್ರನಾಗಿಯೂ, ಪರಮಕಾರುಣಿಕನಾಗಿಯೂ ಮಮತೆ ಇಲ್ಲದವನಾಗಿಯೂ, ದುಃಖಸುಖಗಳಲ್ಲಿ ಸಮಭಾವವುಳ್ಳವನಾಗಿಯೂ, ಅಹಂಕಾರವಿಲ್ಲದವನಾಗಿಯೂ ಕ್ಷಮಾಶಾಲಿಯಾಗಿಯೂ, ನಿತ್ಯಸಂತುಷ್ಟನಾಗಿಯೂ, ಯೋಗಾರೂಢನಾಗಿಯೂ, ನಿಯತಾತ್ಮನಾಗಿಯೂ ಸಕಲರಿಗೂ ಅಭಯಪ್ರದನಾಗಿಯೂ, ಭಯ ರಹಿ

ತನಾಗಿಯೂ, ಸಂತೋಷ, ರೋಷ, ಭಯ, ಇವುಗಳನ್ನು ತ್ಯಜಿಸಿದವನಾಗಿಯೂ, ನಿಷ್ಕಾಮನಾಗಿಯೂ, ಶುಚಿಯಾಗಿಯೂ, ದಕ್ಷನಾಗಿಯೂ, ಉದಾಸೀನನಾಗಿಯೂ, ವ್ಯಥೆ ಇಲ್ಲದವನಾಗಿಯೂ ಸರ್ವಾರಂಭಪರಿತ್ಯಾಗ ಮಾಡಿದವನಾಗಿಯೂ ಇಷ್ಟಪ್ರಾಪ್ತಿಯಾದರೆ ಸಂತೋಷವೂ ಇಷ್ಟವಿಯೋಗವಾದರೆ ದುಃಖವೂ ಇಲ್ಲದವನಾಗಿಯೂ ಇರುವನು. ಮತ್ತು ಆತನು ಲಭಿಸದೆ ಇರತಕ್ಕದ್ದನ್ನು ಬಯಸದೆ, ಎಷ್ಟು ಸಿಕ್ಕಿದರೆ ಅಷ್ಟರಲ್ಲಿಯೇ ಸಂತುಷ್ಟನಾಗಿ, ಶುಭಾಶುಭ ಕರ್ಮಗಳನ್ನು ಪರಿತ್ಯಾಗಮಾಡಿ ಶತ್ರುಮಿತ್ರರಲ್ಲಿ ಸಮಬುದ್ಧಿಯನ್ನಿಟ್ಟುಕೊಂಡಿರುವನು. ಮಣ್ಣಿನ ಹೆಂಟೆ ಇದು, ಕಲ್ಲು ಇದು, ಬಂಗಾರವಿದು ಎಂದು ಭೇದಬುದ್ಧಿ ಇಡದೆ ಎಲ್ಲವೂ ಒಂದೇ ಸಮವೆಂದು ತಿಳಿಯುವನು. ಶೀತೋಷ್ಣಗಳೂ ಸುಖದುಃಖಗಳೂ ಆವನಿಗೆ ಸಮಾನಗಳಾಗಿಯೇ ಇರುವುವು. ಪ್ರಿಯಾಪ್ರಿಯಗಳು-ನಿಂದಾಸ್ತೋತ್ರಗಳೂ-ಮಾನಾವಮಾನಗಳು ಇವುಗಳೆಲ್ಲವೂ ಆತನಿಗೆ ಒಂದೇ ಸಮವು. ಅವನು ಮೌನಿಯಾಗಿಯೂ ಸುಸ್ಥಿತ ಪ್ರಜ್ಞನಾಗಿಯೂ ,ತ್ರಿಗುಣಾತೀತನಾಗಿಯೂ, ನನ್ನ ಭಕ್ತನಾಗಿಯೂ ನನ್ನಲ್ಲಿ ಅರ್ಪಿಸಿದ ಮನೋಬುದ್ಧಿಯುಳ್ಳವನಾಗಿಯೂ, ಪ್ರಕಾಶಿಸುತ್ತಿರುವನು. ಆ ಯೋಗಿಯು ಸಹಜಾಮನಸ್ಕ ಯೋಗಸಮಾಧಿಯಲ್ಲಿ ಸೂರ್ಯನು ರಸಗಳನ್ನೆಲ್ಲಾ ಹೀರಿಬಿಡುವ ಹಾಗೆಯೂ, ಬಡಬಾಗ್ನಿಯು ಮಹಾಸಮುದ್ರವನ್ನು ಕುಡಿದು ಬಿಡುವಂತೆಯೂ, ಕಾಡುಬೆಂಕಿಯು ಅರಣ್ಯದಲ್ಲಿರುವ ತೃಣ ಗುಲ್ಮಾದಿಗಳನ್ನು ದಹಿಸಿಬಿಡುವಂತೆಯೂ, ಅವಿದ್ಯಾಸಂಬಂಧವಾದ ಗುಣಗಳನ್ನೆಲ್ಲಾ ಒಂದೂ ಇಲ್ಲದಂತೆ ನುಂಗಿ, ಕೇವಲ ಪರಿಪೂರ್ಣ ಶುದ್ಧ ಚಿನ್ಮಾತ್ರ ಸ್ವರೂಪಕನಾಗಿರುವನು. ಅಂತಹದಶೆಯೇ ಉಪರತಿಯೆನಿಸಿಕೊಳ್ಳುವುದು, ಅಂತಹ ಉಪರತಿಯನ್ನು ಪಡೆಯಲಿಕ್ಕೆ, ಯಮ, ನಿಯಮ, ತ್ಯಾಗ, ಮೌನ, ದೇಶ, ಕಾಲ, ಆಸನ, ಮೂಲಬಂಧ, ದೇಹಸಾಮ್ಯ, ದೃಕ್ಸ್ಥಿತಿ, ಪ್ರಾಣಾಯಾಮ, ಪ್ರತ್ಯಾಹಾರ, ಧ್ಯಾನ, ಧಾರಣಾ, ಸಮಾಧಿ ಎಂಬ ಹದಿನೈದು ಯೋಗಂಗಳು ಸಾಧನಗಳಾಗಿರುವುವು. ಅವುಗಳನ್ನು ಬೇರೆ ಬೇರೆ ವಿವರಿಸಿ ಹೇಳುವೆನು. ಕೇಳು. (೧) ಭೂಮಿ, ನೀರು, ಬೆಂಕಿ, ಗಾಳಿ, ಆಕಾಶ, ದೇಹ, ಜ್ಞಾನೇಂದ್ರಿಯಗಳು, ಪ್ರಾಣ, ಚಿತ್ತ, ಮನಸ್ಸು, ಅಹಂಕಾರ, ಬುದ್ಧಿ ಇವುಗಳ ರೂಪವಾದ ಹೊರಗೂ ಒಳಗೂ ಕಾಣುತ್ತಿರುವ ವಿಷಯಗಳನ್ನು ದೃಕ್ಸ್ವರೂಪವಾಗಿ ನೋಡು

ತ್ತಾ, ಆ ಸರ್ವಸಾಕ್ಷಿಸ್ವರೂಪನಾದ ಪರಮಾತ್ಮನು ತಾನೇ ಎಂದು ಯಾವಾಗಲೂ ಭಾವಿಸುವುದೇ ಯಮವೆಂಬ ಯೋಗವೆನಿಸುವುದು.

೨ ನಿಯಮಯೋಗ.—ಕೇಳುವುದು, ನೋಡುವುದು, ಮೂಸಿ ನೋಡುವುದು, ರುಚಿನೋಡುವುದು, ಮಾತನಾಡುವುದು ಮುಂತಾದ ಇಂದ್ರಿಯವ್ಯಾಪಾರಗಳನ್ನು ನಿರಂತರದಲ್ಲಿಯೂ ಮಾಡುತ್ತಲೂ, ಮನಸ್ಸಿನಲ್ಲಿ ಊಹಿಸುತ್ತಲೂ, ವರ್ತಿಸುತ್ತಿರುವ ವೇಳೆಗಳಲ್ಲಿ ಈ ಇಂದ್ರಿಯಗಳು ಶಬ್ದಾದಿ ಇಂದ್ರಿಯವಿಷಯಗಳಲ್ಲಿ ಸೇರಿ ನಡೆಯುತ್ತಾ "ನಾನು ಇವುಗಳಿಗೆಲ್ಲಾ ಸಾಕ್ಷಿಯಾಗಿದ್ದೇನೆ. ಮತ್ತು ಕೇವಲ ಸಚ್ಚಿದಾನಂದಸ್ವರೂಪನಾಗಿ ಇದ್ದೇನೆ. ಸಾತ್ವಿಕಾದಿ ಗುಣಗಳೂ, ಬ್ರಾಹ್ಮಣಾದಿ ಜಾತಿಗಳೂ, ದೀರ್ಘಹ್ರಸ್ವಾದಿ ರೂಪಗಳೂ, ದೇವದತ್ತಾದಿ ನಾಮಗಳೂ ಒಂದೂ ನನಗೆ ಇಲ್ಲ" ಎಂದು ತಿಳಿದುಕೊಂಡು ನಿರಂತರವೂ ತನ್ನನ್ನು ಪ್ರತ್ಯಗಾತ್ಮನಾದ ತಾನು ಐಕ್ಯಭಾವದಿಂದ ನೋಡಿಕೊಳ್ಳುತ್ತಾ, ಸತ್ಯವಾಗಿ ಈ ಅಖಂಡನಿಯಮವನ್ನು ಬಿಡದೆ ಇರುವುದೇ ನಿಯಮವು.

೩. ತ್ಯಾಗವು:—ಪ್ರತ್ಯಗಾತ್ಮಸ್ವರೂಪನಾಗಿ ಪ್ರಕಾಶಿಸುವ ತನಗಿಂತ ಅನ್ಯವಾದ ದೇಹೇದ್ರಿಯಾದಿ ದೃಶ್ಯವಿಷಯ ಸಮೂಹವೆಲ್ಲವನ್ನೂ ಅಪೇಕ್ಷಿಸದೆ ಅಂದರೆ ತನ್ನದೆಂಬ (ಮಮಕಾರ) ಅಭಿಮಾನ ವಿಡದೆ ಪರಿತ್ಯಾಗಮಾಡುವುದು ತ್ಯಾಗಯೋಗವು.

೪. ಮೌನವು:—ವಾಕ್ಕುಗಳಿಗೂ ಮನಸ್ಸಿಗೂ ಅಗೋಚರವಾದ ಬ್ರಹ್ಮವು ತಾನೇ ಆಗಿ, ಮಿತಭಾಷಿಯಾಗಿ, ಸಂಕಲ್ಪರಹಿತನಾಗಿ ನಿರಂತರವೂ ಬ್ರಹ್ಮಾನಂದವನ್ನು ಅನುಭವಿಸುತ್ತಿರುವುದು ಮೌನವು.

೫. ದೇಶವು:—ಯಾವದೇಶವು ಪರಿಶುದ್ಧವಾದುದೋ, ಯಾವ ದೇಶವು ಉತ್ತಮವಾದುದೆಂದು ಗುರುವಿನಿಂದ ತಿಳಿಸಲ್ಪಟ್ಟಿರುವುದೋ ಮನಸ್ಸು, ಪ್ರಾಣ, ಇಂದ್ರಿಯ ಮುಂತಾದುವುಗಳ ಸಂಚಾರಕ್ಕೆ ಶೂನ್ಯವಾಗಿ ಯಾವದೇಶವು ಒಪ್ಪುತ್ತಿರುವುದೋ, ಯಾವ ದೇಶದಲ್ಲಿ ಭಯ, ಇಚ್ಛೆ, ಮದ, ಕ್ರೋಧ, ದುಃಖ ಇವುಗಳ ವಾಸನೆಯು ಸ್ವಲ್ಪವೂ ತೋರದೆ ಇರುವುದೋ, ನಿರುಪದ್ರವವಾಗಿಯೂ, ನಿಷ್ಕಂಟಕವಾಗಿಯೂ, ನಿತ್ಯವಾಗಿಯೂ. ನಿರತಿಶಯವಾಗಿಯೂ, ನಿರ್ಮಲವಾಗಿಯೂ, ಆನಂದಕರವಾಗಿಯೂ ಯಾವ ದೇಶವು ಪ್ರಕಾಶಿಸುವುದೋ ಅಂತಹ ಏಕಾಂತಸ್ಥಳವೇ ದೇಶವೆನ್ನಿಸುವುದು.

೬. ಕಾಲವು:—ಯಾವ ಪರಬ್ರಹ್ಮನಿಂದ ಕಲಾಮುಹೂರ್ತಾದಿ ಕಾಲವು ಕಲ್ಪಿಸಲ್ಪಟ್ಟಿರುವುದೋ ? ಯಾವ ಪರಬ್ರಹ್ಮನು ಬ್ರಹ್ಮಕಲ್ಪಾದ್ಯಂತಗಳಲ್ಲಿ ಏಕರೀತಿಯಲ್ಲಿ ಪ್ರಕಾಶಿಸುತ್ತಿರುವುದೋ, ಯಾವ ಬ್ರಹ್ಮನಲ್ಲಿ ಪ್ರಾತಃಕಾಲ, ಮಧ್ಯಾಹ್ನ, ಸಾಯಂಕಾಲ ಎಂಬ ನಿಯಮಗಳು ಕಾಣಬರುವುದಿಲ್ಲವೋ ಆ ಪರಮಾತ್ಮನೇ ಕಾಲವು. ಅಂದರೆ ಅಮೂರ್ತವಾಗಿ ಉತ್ಪತ್ತಿ ಸ್ಥಿತಿಲಯಗಳಲ್ಲದೆ ಏಕರೀತಿಯುಳ್ಳುದಾಗಿಯೂ. ಕಾಲ ಪರಿಚ್ಛೇದವಿಲ್ಲದುದಾಗಿಯೂ ಇರುವ ಬ್ರಹ್ಮನೇ ಕಾಲವು. ಇದು ಅದ್ಯಂತ ರಹಿತವು.

೭, ಆಸನವು;— ಸೂಕ್ಷ್ಮ ಶರೀರವನ್ನಾಶ್ರಯಿಸಿರುವ ಪ್ರಾಣವಾಯುವಿನ ಧರ್ಮವಾದ ಚಲನವೂ, ಸ್ಥೂಲಶರೀರ ಧರ್ಮವಾದ ಶರೀರಕ್ಲೇಶವೂ, ಕಾರಣಶರೀರಧರ್ಮವಾದ ಆಯಾಸವೂ. ಜಾಡ್ಯಸ್ವಭಾವವಾದ ನಿದ್ರೆಯೂ ಶ್ರಮವೂ ಇವು ಯಾವಪರಬ್ರಹ್ಮಸ್ವರೂಪನಾಗಿರುವುದರಿಂದ ಹುಟ್ಟದೆ ಇರುವುವೋ ಅದೇ ಸುಖವಾದ ಆಸನವು.

೮. ಮೂಲಬಂಧವು;—ಅಷ್ಟಪಾಶಬಂಧಗಳಿಗೆ ಮೂಲವಾದ ಬಂಧನವು ಪ್ರಕೃತಿ. ಇದು ಆಣವ, ಕಾರ್ಮಿಕ ಮಾಯಾಮಲಸಹಿತವಾದುದು. ಆ ಪ್ರಕೃತಿ ಬಂಧನವು ಯಾವ ಆತ್ಮಚೈತನ್ಯವು ತಾನೇಎಂದು ತಿಳಿದುಕೊಂಡ ಮಾತ್ರದಿಂದ ಬಿಟ್ಟುಹೋಗುವುದೋ ಯಾವ ಪರಬ್ರಹ್ಮವು ಮೂವತ್ತಾರು ತತ್ವಗಳಿಗೂ ಪ್ರಧಾನ ಕಾರಣವಾಗಿರುವುದೋ ಆ ಪರಮಾತ್ಮವೇ ಮೂಲಬಂಧವು.

೯. ದೇಹಸಾಮ್ಯವು:—ಸಮುದ್ರದಲ್ಲಿ ಸೇರಿದನದಿಗಳಂತೆ ಬ್ರಹ್ಮಾನಂದದಲ್ಲಿ ಚತುರ್ದಶೇಂದ್ರಿಯಗಳ ರಾಗ ದ್ವೇಷಾದಿವೃತ್ತಿಗಳು ಒಂದಾಗಿ ಸೇರಿ ಸಮಭಾವವನ್ನು ಹೊಂದುವುದು ದೇಹಸಾಮ್ಯ.

೧೦. ದೃಕ್ಸ್ಥಿತಿ:—ಯಾವ ದೃಷ್ಟಿಯು ದಶೇಂದ್ರಿಯಗಳ ವಿಷಯಗಳನ್ನು ನೋಡುವುದೋ ಅದು ಬಾಹ್ಯದೃಷ್ಟಿಯೆನಿಸುವುದು, ಯಾವ ನೋಟವು ಮನೋಬುದ್ಧಿ ಚಿತ್ತಾಹಂಕಾರಗಳೆಂಬ ಅಂತರಿಂದ್ರಿಯಗಳ ಸಂಶಯ ನಿಶ್ಚಯ ಚಲನ ಕರ್ತವ್ಯಗಳೆಂಬ ವೃತ್ತಿಗಳನ್ನು ನೋಡುವುದೋ ಅದು ಅಂತರ್ದೃಷ್ಟಿಯೆನಿಸುವುದು. ಯಾವ ದೃಷ್ಟಿಯು ಹೊರಗಿನ ಮತ್ತು ಒಳಗಿನ ಇಂದ್ರಿಯ ವಿಷಯಗಳನ್ನು ನೋಡುವುದೋ ಅದು ಮಧ್ಯದೃಷ್ಟಿಯೆನಿಸುವುದು. ಯಾವ ದೃಷ್ಟಿಯು ಮನಸ್ಸು

ಕಿವಿ ಚರ್ಮ ಕಣ್ಣು ನಾಲಿಗೆ ಮೂಗು ಇವುಗಳನ್ನು ಕಂಡುಕೊಳ್ಳು ವುದೋ ಆ ದೃಷ್ಟಿಯು ಷಣ್ಮುಖೀ ಮುದ್ರೆಯೆನಿಸುವುದು. ಯಾವ ದೃಷ್ಟಿಯು ಈ ಅಂತರ ಬಾಹ್ಯ ಮಧ್ಯ ಷಣ್ಮುಖಗಳೆಂಬ ನಾಲ್ಕು ಲಕ್ಷ್ಯಗಳನ್ನು ಯಾವಾಗಲೂ ನೋಡುತ್ತಿರುವುದೋ ಅದು ಶಾಂಭವೀ ಮುದ್ರೆಯೆನಿಸಲ್ಪಡುವುದು. ಈ ಶಾಂಭವೀದೃಷ್ಟಿಯೇ ಲಕ್ಷ್ಯಗಳೊ ಳಗೆಲ್ಲಾ ಉತ್ತಮವಾದುದು, ಅಮನಸ್ಕರಾಜಯೋಗಿಗಳಿಗೆ ನೋಡು ವವನು, ನೋಟ, ದೃಶ್ಯರೂಪ ಇವುಗಳ ಲಯವು ಯಾವ ಪರಬ್ರಹ್ಮನಲ್ಲಿ ಆಗುವುದೋ ಆ ಪರಬ್ರಹ್ಮನಲ್ಲಿಯೇ ದೃಷ್ಟಿಯನ್ನು ನಿಲ್ಲಿಸತಕ್ಕುದೇ ಹೊರತು ಭ್ರಾಂತಿಯಿಂದ ಭ್ರೂಮಧ್ಯದಲ್ಲಿ ದೃಷ್ಟಿಯನ್ನು ನಿಲ್ಲಿಸ ಕೂಡದು.

೧೧. ಪ್ರಾಣಾಯಾಮವು:— ಒಡವೆಗಳ ಗುಂಪನ್ನು ಸುವ ರ್ಣಮಯವಾಗಿ ತಿಳಿದುಕೊಳ್ಳುವಹಾಗೆ ಪಂಚಪ್ರಾಣಗಳ ಮತ್ತು ಅಂತ ರಿಂದ್ರಿಯಬಹಿರಿಂದ್ರಿಯಗಳ ಸಕಲ ವೃತ್ತಿಗಳನ್ನೂ ಪರಮಾತ್ಮನಾಗಿಯೂ ತಾನಾಗಿಯೂ ಭಾವಿಸಿದರೆ ಆ ಪ್ರಾಣಾದಿಗಳಲ್ಲಿರುವ ವೃತ್ತಿಗಳೆ ಲ್ಲವೂ ಕ್ಷೀಣಿಸುವುವು. ಹೀಗೆಂದು ಭಾವಿಸುವುದೇ ಪ್ರಾಣಾಯಾಮ ಯೋಗವು.

೧೨. ಪ್ರತ್ಯಾಹಾರ :—ಸತ್ಯವಾದ ಪರಬ್ರಹ್ಮನು ಮತ್ತು ಅಸತ್ಯ ವಾದ ಪ್ರಕೃತಿಯ ವಿಷಯಗಳನ್ನು ಅಂದರೆ ಸಚ್ಚಿದಾನಂದನಿತ್ಯನಿ ರ್ಮಲಶಾಂತಿಶಮದಮಾದಿ ಅನಂತಕಲ್ಯಾಣಗುಣಗಳನ್ನು, ಕಾಮಕ್ರೋ ಧಲೋಭಮೋಹಾದಿದುರ್ಗುಣಗಳನ್ನೂ, ತನ್ನ ಜ್ಞಾನಸ್ವರೂಪನಾದ ಪರ ಮಾತ್ಮನನ್ನಾಗಿ ಸದಾಕಾಲವೂನೊಡುತ್ತಿರುವುದು ಪ್ರತ್ಯಾಹಾರಯೋಗವು.

೧೩. ಧ್ಯಾನ :—ಸ್ಥೂಲಸೂಕ್ಷ್ಮಕಾರಣದೇಹಗಳೆಂಬ ಮೂರು ಶರೀರಗಳು, ಜ್ಞಾನೇಂದ್ರಿಯಕರ್ಮೇಂದ್ರಿಯಗಳು, ದಶವಿಧಪ್ರಾಣಗಳು ಮನಸ್ಸು ಮೊದಲಾದ ದೃಶ್ಯಪದಾರ್ಥಗಳು ಇವು ಒಂದೂ ನಾನಲ್ಲವು. ಕೇವಲ ಆತ್ಮಸ್ವರೂಪನಾದ ನಾನು ಈ ದೃಶ್ಯಗಳನ್ನು ತಿಳಿಯುತ್ತಿರುವ ಸಾಕ್ಷಿಯಾಗಿರುವೆನು ಎಂದು ಚಿಂತಿಸುತ್ತಿರುವುದು ಧ್ಯಾನಯೋಗವು.

೧೪. ಧಾರಣವು :— ಮನಸ್ಸು ಯಾವುದನ್ನು ಸಂಕಲ್ಪಿಸು ವುದೋ, ಅದೇ ಅಂದರೆ ಸಂಕಲ್ಪಿಸಿದುದೂ ನೋಡಿದುದೂ ಪರ

ಮಾತ್ಮನು. ಎಂಬ ಲಕ್ಷ್ಯವನ್ನು ಹೃದಯದಲ್ಲಿ ನಿಲ್ಲಿಸುವುದು ಧಾರಣಾಯೋಗವು.

೧೫. ಸಮಾಧಿ:—ಜಾಗ್ರತೆ, ಸ್ವಪ್ನ, ಸುಷುಪ್ತಿಗಳೆಂಬ ಅವಸ್ಥಾತ್ರಯದಲ್ಲಿಯೂ ಆಯಾ ಅವಸ್ಥೆಗಳಲ್ಲಿ ತೋರಿದ ಸಮಸ್ತಭೋಗ್ಯಭೋಗಸಾಧನ, ಶೂನ್ಯ, ಸಾಕ್ಷಾತ್ಕಾರಗಳೆಂಬ ಸರ್ವವೂ ಪರಮಾತ್ಮನೇ ಎಂದು ಯಾವಾಗಲೂ ನೋಡುತ್ತಿದ್ದರೆ ಅದೇ ವಿಕಾರರಹಿತವಾಗಿ ಸಹಜವಾದ ನಿರ್ವಾಣಸಮಾಧಿಯೆನಿಸುವುದು.

ಈಗ ಹೇಳಿದ ಹದಿನೈದುಬಗೆಯ ನಿರ್ಗುಣೋಪಾಸನಾಂಗಗಳನ್ನು ವಿಜ್ಞಾನಸೂಕ್ಷ್ಮದೃಷ್ಟಿಯಿಂದ ಪರಿಗ್ರಹಿಸಿ ಅಭ್ಯಾಸಮಾಡುವ ಬ್ರಹ್ಮವಿದ್ವರಿಷ್ಠನಿಗೆ ನಿರುಪಮವಾದ ಚಿತ್ತವಿಶ್ರಾಂತಿಯುಂಟಾಗುವುದು. ಮನಶ್ಶಾಂತಿಯುಳ್ಳ ಪುರುಷನು ಜಿತೇಂದ್ರಿಯನಾಗಿ, ಬಾಲಕನಂತೆಯೂ, ಹುಚ್ಚನಂತೆಯೂ ಪಿಶಾಚನಂತೆಯೂ ಯಾವಾಗ ನೋಡಿದರೂ ಮಲಗಿದ್ದವನ ಹಾಗೆ ಈ ಜಗತ್ತನ್ನೇ ಮರೆತಿರುವನು. ಅಂತಹಪುರುಷೋತ್ತಮನು ಗಾಳಿಯಿಂದ ಹಾರಿಸಲ್ಪಟ್ಟರೂ, ಮಳೆಯಲ್ಲಿ ನೆನೆದರೂ, ಬಲವಾದ ಬೆಂಕಿಯಿಂದ ಸುಡಲ್ಪಟ್ಟರೂ, ಹಾವು ತಾನು ಬಿಟ್ಟ ಪೊರೆಯ ಮೇಲೆ ವ್ಯಾಮೋಹವನ್ನು ಪರಿತ್ಯಜಿಸಿಬಿಡುವಂತೆ, ಅಹಂಕಾರಮಮಕಾರಗಳಿಲ್ಲದೆ ಸಿತ್ಯಾನಂದವನ್ನು ಹೊಂದುವನು. ಮದ್ಯಪಾನಮಾಡಿ ಮದಹತ್ತಿದ ಮನುಷ್ಯನಿಗೆ ತನ್ನ ಮೈಮೇಲೆ ಹೊದೆದಿದ್ದ ವಸ್ತ್ರವು ಜಾರಿಬಿದ್ದರೂ ಮೈಮೇಲೆಯೇ ಇದ್ದರೂ, ಸಡಿಲವಾಗಿದ್ದರೂ ನೋಡದೆ ಕುರುಡನಂತೆ ಕಣ್ಣು ಮುಚ್ಚಿಕೊಂಡು ಹೋಗುವನು. ಹಾಗೆಯೇ ಜೀವನ್ಮುಕ್ತನಾದವನು ಸಮಾಧಿದಶೆಯಲ್ಲಿ ಪ್ರಾಪ್ತವಾದ ಸುಖಾನುಭವದಿಂದ ಸಂತೃಪ್ತನಾಗಿ ಹುಚ್ಚನಂತೆ ಮೈಮರೆತು ಇರುವನು. ಅವನು ಕುಳಿತಿದ್ದರೂ, ಎದ್ದರೂ ನಡೆದರೂ, ಈ ಶರೀರವು ನನ್ನದೆಂಬ ಅಭಿಮಾನವೇ ಅವನಿಗಿರುವುದಿಲ್ಲ. ಹೆಂಡತಿ, ಮಕ್ಕಳು, ಬಂಧುಗಳು, ಸಜ್ಜನರು, ಶತ್ರುಗಳು, ಮಿತ್ರರು, ಮುಂತಾದವರೆಲ್ಲಾ ತನ್ನನ್ನು ನಿಂದಿಸಿದರೂ, ಹೊಗಳಿದರೂ, ಸನ್ಮಾನಿಸಿದರೂ. ಅವಮಾನಪಡಿಸಿದರೂ, ತತ್ವಾನುಭವವುಳ್ಳವನು ಅವುಗಳಿಗಾಗಿ ವಿಕಾರವನ್ನು ಹೊಂದದೆ ನಿಶ್ಚೇಷ್ಟನಾಗಿರುವನು, ಅವನಿಗೆ ಏನಾದರೂ ಮಹದ್ವಿಪತ್ತುಗಳು ಬಂದರೂ ಸ್ವಲ್ಪವೂ ಹೆದರುವುದಿಲ್ಲ. ಚಳಿ, ಗಾಳಿ, ಬೆಂಕಿ, ಮಳೆ, ಬಿಸಿಲು ಮುಂತಾದುವುಗಳಿಂದ ಸ್ವಲ್ಪವಾದರೂ ಚಲಿಸದೆ

ಬೆಟ್ಟದಂತೆ ಸ್ಥಿರವಾಗಿರುವನು. ಇಂತಹ ವೈರಾಗ್ಯಬೋಧೋಪರತಿಗಳುಳ್ಳ ಮನುಷ್ಯನು ಬ್ರಹ್ಮತತ್ವ ಸಾಕ್ಷಾತ್ಕಾರದಿಂದ ಅಜ್ಞಾನಾಂಧಕಾರವನ್ನು ಪರಿಹರಿಸಿಕೊಂಡು, ವರ್ಣಾಶ್ರಮಾಚಾರಗಳ ಕೋಲಾಹಲವನ್ನು ಬಿಟ್ಟು, ಸದಾ ಕಾಲವೂ ಶಾಂತಚಿತ್ತನಾಗಿ ವಿಷಯಾಸಕ್ತಿಗಳಿಗೆ ಮನಸ್ಸುಕೊಡದೆ, ಪ್ರಬಲ ಪ್ರಾರಬ್ಧಗಳಿಗೆ ಅಧೀನವಾದ ಶರೀರಚೇಷ್ಟೆಗಳುಳ್ಳವನಾಗಿ, ಅಂತಸ್ಸುಖನಾಗಿಯೂ, ಅಂತರಾರಾಮನಾಗಿಯೂ, ಅಂತಃಪ್ರಕಾಶನಾಗಿಯೂ, ಆತ್ಮರತನಾಗಿಯೂ, ಆತ್ಮತೃಪ್ತನಾಗಿಯೂ, ಆತ್ಮಸಂತುಷ್ಟನಾಗಿಯೂ ಇರುವನು.

ಮತ್ತು ಆತನಿಗೆ ಪಾಪಗಳೊಂದೂ ಹತ್ತವು. ಮನಸ್ಸು ಶಾಂತವಾಗಿರುವುದು, ಇಂದ್ರಿಯಗಳು ವಶದಲ್ಲಿರುವುದು, ಕೃತಕೃತ್ಯನಾದ ಅವನಿಗೆ ಲಾಭ ಬಂದರೆ ಸಂತೋಷವಾಗಲಿ ನಷ್ಟಬಂದರೆ ದುಃಖವಾಗಲಿ ಇಲ್ಲವು. ಅವನಿಗೆ ಯಾವ ವ್ಯವಹಾರವೂ ಬೇಕಾಗಿಲ್ಲ. ಅವನು ಅಶರೀರನಾದರೂ ಸರ್ವ ಶರೀರದಲ್ಲಿಯೂ ಇರುವನು. ಇಂದ್ರಿಯರಹಿತನಾಗಿದ್ದರೂ ಸರ್ವೇಂದ್ರಿಯಗಳನ್ನು ನೋಡುತ್ತಿರುವನು. ಅವನು ಪ್ರಾಣವಿಲ್ಲದವನಾಗಿದ್ದರೂ, ಸರ್ವ ಪ್ರಾಣಗಳಿಗೂ ಪ್ರೇರಕನಾಗಿರುವನು, ಚತುರ್ದಶೇಂದ್ರಿಯಗಳ ಬಹಿಸ್ಸಂಚಾರವನ್ನು ಬಿಟ್ಟುಬಿಟ್ಟು, ತನ್ನಲ್ಲಿಯೇ ರಮಿಸುತ್ತಿರುವುದರಿಂದ ಸುಖರಸಿಕನಾಗಿರುವನು. ಜ್ಞಾನದಿಂದ ಕೂಡಿದ ಶುದ್ಧಾಂತಃಕರಣನಾಗಿರುವುದರಿಂದ ಸಂಗನೆನಿಸಿದ್ದರೂ ರಜಸ್ತಮೋ ವಿಕಾರವಾಗಿ ಯಾವಾಗಲೂ ಚಲಿಸುತ್ತಿರುವ ಅವಿವೇಕಸಂಗಕ್ಕೆ ಸೇರದೆ ನಿತ್ಯಾಸಂಗನಾಗಿರುವನು. ಪ್ರಜ್ಞೆ ಯೆಂಬ ಪ್ರೌಢನಾಯಿಕೆಯು ಸಹಾಯವುಳ್ಳವನಾಗಿದ್ದರೂ ಅನ್ಯ ಸಹಾಯವನ್ನು ಅಪೇಕ್ಷಿಸತಕ್ಕವನಲ್ಲ. ನಿಸ್ಸಂಶಯವಾದ ಅಪರೋಕ್ಷಾತ್ಮನಿಶ್ಚಯ ಸಂಪನ್ನನಾಗಿದ್ದರೂ, ಬ್ರಾಹ್ಮಣ, ಕ್ಷತ್ರಿಯ ವೈಶ್ಯ ಶೂದ್ರರೆಂಬ ವರ್ಣಗಳ ಮತ್ತು ಬ್ರಹ್ಮಚರ್ಯ, ಗೃಹಸ್ಥ, ವಾನಪ್ರಸ್ಥ, ಯತಿಗಳೆಂಬ ನಾಲ್ಕು ಆಶ್ರಮಗಳ ಸದಾಚಾರಗಳೂ, ದುರಾಚಾರಗಳೂ, ಕಾಮ, ಕ್ರೋಧ, ಲೋಭ, ಮೋಹ, ದಂಭ, ದರ್ಪ, ಕುಹಕ, ಕ್ರೂರತ್ವ, ಶೌರ್ಯ, ಜಾಡ್ಯ, ಮಾತ್ಸರ್ಯ, ದ್ವೇಷ, ಕಾರ್ಪಣ್ಯ, ನಿಂದೆ, ಸ್ತೋತ್ರ, ಮಾನ, ಅವಮಾನ, ಈರ್ಷ್ಯೆ, ಅಸೂಯೆ, ನಿಷ್ಕಾರಣ, ನಿಷ್ಠುರ, ಕಠಿನವಾಕ್ಯ ಮೊದಲಾದ ಚಿತ್ತವಿಕಾರಗಳೊಂದೂ ಇಲ್ಲದವನಾಗಿರುವನು. ಮತ್ತು ಅವನಿಗೆ ಸ್ತ್ರೀವಾಸನೆ, ಅರ್ಥವಾಸನೆ, ಪ್ರತಿಷ್ಠೆ ಇವು ಬೇ

ಕೆಂಬ ವಾಸನೆ, ಶಾಸ್ತ್ರದವಾಸನೆ, ದೇಹದವಾಸನೆ, ಲೋಕವಾಸನೆ, ಕರ್ತೃತ್ವ ಭೋಕ್ತೃತ್ವ ವೊದಲಾದ ವಾಸನೆಗಳೊಂದೂ ಇಲ್ಲವು. ಅವನಿಗೆ ನಾನೇ ಬ್ರಹ್ಮನೆಂಬ ಅಭಿಮಾನವೂ ಇಲ್ಲವು. ಅವನು ನಿತ್ಯನಿರ್ಮಲನು, ನಿತ್ಯ ಶಾಂತನು, ಉದಾಸೀನನು, ನಿಷ್ಪ್ರಪಂಚನು, ಅವ್ಯಕ್ತ ಮಹದಹಂಕಾರ ಪಂಚತನ್ಮಾತ್ರ, ಆಕಾಶ, ವೊದಲಾದ ಸರ್ವಪ್ರಪಂಚವೂ ಮಾಯೆ, ಅಸತ್ಯ ಯೆಂದು ತಿಳಿದಿರುವನು. ಅವನು ನಿರಾಶ್ರಯನು, ಕೇವಲ ಚಿದಾಕಾಶ ಭಾಸನು. ಸುಖಸ್ವರೂಪನು, ಸಂಸಾರಭಾರವನ್ನು ವಹಿಸಿದವನು. ದೇಹೇಂದ್ರಿಯಗುಣಗಳಿಗೆ ಅತಿರಿಕ್ತನು. ಬ್ರಹ್ಮಾದಿ ದೇವತೆಗಳಿಂದ ಬಯಸಲ್ಪಡತಕ್ಕ ಸದಾಚಾರಸಂಪನ್ನನು. ನಾನಾವಿಧವಾದ ಆಶಾಪಾಶಗಳಿಂದ ಬಿಡಲ್ಪಟ್ಟವನು. ರಾಜಸತಾಮಸವಸ್ತುಗಳ ಅನುಭವಕ್ಕೆ ದೂರನು. ನಾಸ್ತಿಕ ವಸ್ತುಪ್ರಿಯನು. ನಿದ್ರೆಯನ್ನು ಜಯಿಸಿದವನು, ಕ್ರಿಯಾ ಶೂನ್ಯವಾದ ಪರಬ್ರಹ್ಮನ ಪೂಜೆಯಲ್ಲಿ ಆಸಕ್ತನು. ಮೌನವಾಗಿ ಜಪಮಾಡುತ್ತಿರುವವನು, ಧ್ಯಾನನಿಷ್ಠನು. ಬಯಸದೆ ಬಂದ ಸುಖವನ್ನನುಭವಿಸುವವನು, ಲೋಕದಿಂದ ವಂದಿಸಲ್ಪಡತಕ್ಕವನು, ಯಥೇಷ್ಟವಾದ ಸಂಸಾರವೆಂದರೆ ಸಾರಭೂತನಾದ ಬ್ರಹ್ಮನಲ್ಲಿ ನಿಲ್ಲಿಸಿದ ಮನಸ್ಸುಳ್ಳವನು, ಧೀರನು, ದಾಂತನು ಅಂದರೆ ಇಂದ್ರಿಯನಿಗ್ರಹಮಾಡಿರುವವನು. ಯಾವಾಗಲೂ ಜಾಗ್ರತೆಯುಳ್ಳ ಅಂದರೆ ಪ್ರಬುದ್ಧವಾದ ಮನಸ್ಸುಳ್ಳವನು, ಆತ್ಮಸಮಾಧಿನಿಷ್ಠನು, ಜಗತ್ತೆಂಬ ಇಂದ್ರಜಾಲವನ್ನು ನೋಡತಕ್ಕವನು, ಧರ್ಮಾರ್ಥಕಾಮಮೋಕ್ಷಗಳೆಂಬ ಚತುರ್ವಿಧ ಪುರುಷಾರ್ಥಗಳನ್ನು ಪಡೆದವನು, ಸಮಸ್ತ ದುಃಖಗಳನ್ನು ತ್ಯಜಿಸಿದವನು ಯಾವಾಗಲೂ ಸ್ವಸ್ಥನಾಗಿರುವವನು, ಮನೋನಿಗ್ರಹಮಾಡಿದವನು, ಮಿತಭಾಷಿಯು, ಪರಮಕಾರುಣಿಕನು, ಸರ್ವಭೂತಗಳಿಗೂ ಸ್ನೇಹಿತನು, ಮೃದುವಾದ ಆಚಾರಗಳಿಂದ ಕೂಡಿದವನು, ತನ್ನ ಕೈ ಯೆಂಬ ಪಾತ್ರೆಯಲ್ಲಿ ಬಿದ್ದ ಅನ್ನವನ್ನು ಮಾತ್ರ ಭುಜಿಸುವವನು ಅಂದರೆ ಮಿತವಾದ ಆಹಾರವುಳ್ಳವನು, ಜೀವಪರಮಾತ್ಮೈಕ್ಯದಲ್ಲಿ ಪ್ರವೀಣನು, ಶೀತೋಷ್ಣಾದಿ ದ್ವಂದ್ವಗಳಲ್ಲಿ ಸಹನವುಳ್ಳವನು, ವಿಜನವಾದ ಪ್ರದೇಶದಲ್ಲಿ ವಾಸಮಾಡುವವನು, ಕಪಟವಿಲ್ಲದವನು, ಆಶೆಯನ್ನು ತೊರೆದವನು, ಪ್ರಾರಬ್ಧ ವಶದಿಂದ ಪ್ರಾಪ್ತವಾದ ಸ್ಥೂಲ ಸೂಕ್ಷ್ಮ ಕಾರಣಗಳೆಂಬ ಮೂರು ಬಗೆಯ ಶರೀರಗಳು, ಇಂದ್ರಿಯಗಳು ವೊದಲಾದವುಗಳ

ವ್ಯಾಪಾರದಲ್ಲಿ ನಾನು ಕರ್ತನು, ನಾನು ಭೋಕ್ತನು ಎಂಬ ಅಭಿಮಾನ ವಿಲ್ಲದವನು, ಸದಾಕಾಲದಲ್ಲಿಯೂ ಪ್ರಸನ್ನನಾದ ಮನಸ್ಸುಳ್ಳವನು, ಯಾವಾಗಲೂ ನಗುತ್ತಿರುವ ಮುಖವುಳ್ಳವನು, ದುಷ್ಟಜನರಿಗೂ ಶಿಷ್ಟ ಜನರಿಗೂ ದೂರದಲ್ಲಿರುವವನು, ಸಾಧುಗಳಾದ ವಿದ್ಯಾವಂತರ ಗೋಷ್ಠಿ ಯಲ್ಲಿರುವವನು, ಸರ್ವವಸ್ತುಗಳಲ್ಲಿಯೂ ಉಪೇಕ್ಷೆಯಬುದ್ಧಿಯುಳ್ಳ ವನು, ಮೇಲು ಕೀಳುಗಳೆಂಬ ಕೆಲಸಗಳಿಗೆ ಸ್ಥಳಕೊಡಸಿದವನು, ವೇದ ಶಾಸ್ತ್ರಾಗಮಪುರಾಣಗಳನ್ನೂ ವೇದಾಂತ ಶಾಸ್ತ್ರವನ್ನೂ ತಿಳಿದಿರುವ ವನು, ಅವ್ಯಕ್ತಲಿಂಗನು, ಅವ್ಯಕ್ತವಾದ ಆಚಾರವುಳ್ಳವನು, ಏಕವಾದ ಪರಬ್ರಹ್ಮನಲ್ಲೇ ಸಂಚರಿಸುವವನು, ಮನೇಬಾಗಿಲುಗಳಿಲ್ಲದವನು, ಬೆಟ್ಟಗಳಲ್ಲಿಯೂ ಗುಹೆಗಳಲ್ಲಿಯೂ ಸಂಚರಿಸತಕ್ಕವನು, ಮರಣಭಯ ವಿಲ್ಲದವನು, ಸ್ವರ್ಗ ವೈಕುಂಠ ಕೈಲಾಸಗಳೆಂಬ ಪರಲೋಕಗಳ ಭಯ ವಿಲ್ಲದವನು, ಶುದ್ಧಸಾತ್ವಿಕಬುದ್ಧಿಯುಳ್ಳವನು, ಬಂಧ ಮೋಕ್ಷಗಳಲ್ಲಿ ಆಶೆಯಿಲ್ಲದವನು, ಪ್ರಪಂಚ ವಿಲಕ್ಷಣವಾಗಿ ಸರ್ವಪರಿಪೂರ್ಣವಾದ ಪರ ಮಾತ್ಮನ ಪ್ರಕಾಶಸ್ವರೂಪವುಳ್ಳವನು, ಇಂತಹ ಅಖಂಡಸಚ್ಚಿದಾನಂದ ಸ್ವರೂಪನಾಗುವನು.

ಎಲೈ ಆಂಜನೇಯನೇ ಕೇಳು, ಮನಶ್ಶಾಂತಿಯೇ ಉತ್ತಮವಾದ ಕಾಮಧೇನುವು. ಸಂತೋಷವೆಂಬುದೇ ಕಲ್ಪವೃಕ್ಷವು. ವಿಷಯ ವೈರಾಗ್ಯವೇ ಚಿಂತಾಮಣಿಯು. ಎಂದು ಮನಸ್ಸಿನಲ್ಲಿ ಚಿಂತಿಸುತ್ತಾ ಇರುವ ಮನುಷ್ಯನು ಸುಖವನ್ನು ಹೊಂದುವನು. ಅತ್ಯಾಶೆಯೆಂಬು ವುದನ್ನು ಭಯಂಕರವಾದ ವೈತರಣೀನದಿಯನ್ನಾಗಿಯೂ, ಕಾಮವೆಂಬು ದನ್ನು ಘೋರವಾದ ನರಕವನ್ನಾಗಿಯೂ, ಕ್ರೋಧವನ್ನು ದಂಡಧರನಾದ ಯಮಧರ್ಮರಾಜನನ್ನಾಗಿಯೂ ತಿಳಿದಿರುವ ಪುರುಷನು ಮೋಕ್ಷಾನಂದ ವನ್ನು ಪಡೆಯುವನು. ಇನ್ನು ರಾಜಯೋಗಿಯ ಪದವಿಯನ್ನು ಹೇಳು ವೆನು. ಕೇಳು, ಆಕಾಶವೆಂಬ ಮೇಲುಕಟ್ಟುಗಳಿಂದ ಅಲಂಕರಿಸಲ್ಪಟ್ಟ ದ್ದಾಗಿಯೂ, ಸೂರ್ಯಚಂದ್ರಾಗ್ನಿಗಳೆಂಬ ದೀಪಗಳಿಂದ ಬೆಳಗುತ್ತಿರು ವುದಾಗಿಯೂ, ಭೂಮಂಡಲವೆಂಬ ಸಿಂಹಾಸನದಿಂದ ಶೃಂಗರಿಸಲ್ಪಟ್ಟದಾ ಗಿಯೂ, ವಾಯುವೆಂಬ ಬೀಸಣಿಗೆಯಿಂದ ಬೀಸಲ್ಪಡುವುದಾಗಿಯೂ, ಧನವಂತರೆಂಬ ಸೇವಕಜನರಿಂದ ಓಲೈಸಲ್ಪಟ್ಟದಾಗಿಯೂ, ಒಪ್ಪುತ್ತಿ ರುವ ಜಗತ್ತೆಂಬ ಪಟ್ಟಣದಲ್ಲಿ ಜೀವಬ್ರಹ್ಮೈಕ್ಯವೆಂಬ ಜ್ಞಾನವುಳ್ಳ

ಆತ್ಮಜ್ಞನು ವಿವೇಕದಿಂದ ಹೊಳೆಯುತ್ತಿರುವ ದಶೇಂದ್ರಿಯಗಳೆಂಬ ಕುದುರೆಗಳಿಂದಲೂ, ಮನಸ್ಸೆಂಬ ಹಗ್ಗದಿಂದಲೂ, ಬುದ್ಧಿಯೆಂಬ ಸಾರಥಿಯಿಂದಲೂ, ಕೂಡಿದ ಸ್ಥೂಲಶರೀರವೆಂಬ ದಿವ್ಯರಥದಮೇಲೆ ಹತ್ತಿಕುಳಿತು, ಅಪರೋಕ್ಷಜ್ಞಾನವೆಂಬ ಸ್ತ್ರೀಸಮೇತನಾಗಿ ಪರಬ್ರಹ್ಮವೆಂಬ ನಿತ್ಯೈಶ್ವರ್ಯದಿಂದ ಕೂಡಿ, ಸಕಲಜನರೂ ತನ್ನನ್ನು ಸೇವಿಸುತ್ತಿರಲು ಉನ್ನತಪದವಿಯಲ್ಲಿ ಆನಂದಿಸುತ್ತಿರುವನು. ಅಂತಹ ಜೀವನ್ಮುಕ್ತನು ನಿತ್ಯಾನಂದವುಳ್ಳವನಾಗಿ ಇಹಪರಸುಖಗಳಲ್ಲಿ ಅಪೇಕ್ಷೆಯಿಲ್ಲದವನಾಗಿಯೂ, ಅಸಮಾನನಾಗಿಯೂ ಇದ್ದು ಧನಿಕರ ಮತ್ತು ದೀನಜನರ ಮಾತುಗಳನ್ನು ಕಿವಿಗಳಿಂದ ಕೇಳದೆ, ಕರ್ಮದಲ್ಲಿ ಅಭಿಲಾಷೆಯುಳ್ಳವರ ದೇಹಚೇಷ್ಟೆಗಳನ್ನು ಕಣ್ಣಿನಿಂದ ನಿರೀಕ್ಷಿಸದೆ, ನಿತ್ಯವೂ ತನ್ನನ್ನು ತಾನೇ ನೋಡಿಕೊಳ್ಳುತ್ತಾ ಪಾವನಸ್ವಭಾವವುಳ್ಳ ಇಡಾ, ಪಿಂಗಳಾ, ಸುಷುಮ್ನಾ ಮೊದಲಾದ ನಾಡೀಮುಖವಾದ ಪುಣ್ಯನದಿಗಳಿಂದ ಗಂಗಾನರ್ಮದಾದಿ ಪುಣ್ಯತೀರ್ಥಗಳನ್ನು ಪವಿತ್ರತಮವನ್ನಾಗಿ ಮಾಡುತ್ತಲಿರುವನು. ಅಂತಹ ದಿವ್ಯಜ್ಞಾನಿಯು ಒಂದೊಂದುವೇಳೆಯಲ್ಲಿ ಸಕಲಪ್ರಪಂಚವೂ ಕಲ್ಪಿತವಾದುದೆಂದು ತನ್ನಲ್ಲಿತಾನೇ ನಗುತ್ತಲಿರುವನು. ಒಂದೊಂದುವೇಳೆ ಪಾಂಚಭೌತಿಕವಾದ ಸ್ಥೂಲಸೂಕ್ಷ್ಮಕಾರಣಶರೀರಗಳಲ್ಲಿ ತುಂಬಿರುವ ತನ್ನನ್ನು ನೋಡಿ ಸಂತೋಷಪಡುತ್ತಿರುವನು. ಒಂದೊಂದುಸಾರಿ ಶರೀರೇಂದ್ರಿಯಗಳು ತಮ್ಮತಮ್ಮ ವ್ಯಾಪಾರಗಳಲ್ಲಿ ಪ್ರವರ್ತಿಸುತ್ತಿರಲು ತಾನು ಸರ್ವಸಾಕ್ಷಿಯಾಗಿರುವೆನೆಂದು ಆನಂದಪಡುತ್ತಿರುವನು. ಒಂದುವೇಳೆ ಈ ಲೋಕವಲ್ಲಿ ಮತ್ತೊಂದುವಸ್ತುವೇ ಇಲ್ಲವು. ನಾನೊಬ್ಬನೇ ಇರುವೆನೆಂದು ನಿರ್ವಿಕಲ್ಪಸಮಾಧಿಯನ್ನು ಹೊಂದುವನು. ಅಂತಹ ವೈರಾಗ್ಯ, ಬೋಧೆ, ಚಿತ್ತವಿಶ್ರಾಂತಿ ಇವುಗಳನ್ನು ಪಡೆದ ಬ್ರಹ್ಮಜ್ಞಾನಿಗಳ ಮಹಿಮೆಯನ್ನು ಹೊಗಳುವುದಕ್ಕೆ ಹರಿಹರಬ್ರಹ್ಮಾದಿಗಳಿಗೆ ಸುದಾ ಸಾಧ್ಯವಿಲ್ಲವು. ರಾಜಯೋಗವುಳ್ಳವನು ತನ್ನ ಪಾದಧೂಳಿ ಸೋಕಿದ ಚರಾಚರ ವಸ್ತುಗಳನ್ನೆಲ್ಲಾ ಪಾವನವಾಗಿ ಮಾಡುವನು. ತನ್ನ ಶರೀರವನ್ನು ಸಂದರ್ಶಿಸುವ ಜನಗಳ ಪಾಪಗಳನ್ನೆಲ್ಲಾ ಪರಿಹಾರ ಮಾಡುವನು. ತನ್ನನ್ನು ಉಪಾಸನೆಮಾಡುತ್ತಿರುವ ಮಹಾತ್ಮರಿಗೆ ಬೇಕಾದ ಇಷ್ಟಾರ್ಥಗಳನ್ನು ಅನುಗ್ರಹಿಸುತ್ತಿರುವನು. ತನ್ನ ಅನುಗ್ರಹ ಪಡೆದ ಭಕ್ತರಿಗೆ ಮುಕ್ತಿಸೌಖ್ಯವನ್ನು ಕರತಲಾಮಲಕವಾಗಿ ತೋರಿಸುತ್ತಿರುವನು.

ತನ್ನ ಇಪ್ಪತ್ತೊಂದು ತಲೆಯವರು ಅಂದರೆ ಪೂರ್ವದಲ್ಲಿ ಹುಟ್ಟಿದ ಹತ್ತು ಮಂದಿ, ತನ್ನ ತರುವಾಯ ಹುಟ್ಟಿದ ಹತ್ತು ತಲೆಗಳವರು, ತಾನೊಬ್ಬನು, ಇವರು ಸೇರಿ ಇಪ್ಪತ್ತೊಂದು ತರದವರೂ ಸ್ವರ್ಗಸುಖವನ್ನು ಹೊಂದುವಂತೆ ಮಾಡಿ ತ್ರಿಲೋಕಾಚಾರ್ಯನೆನಿಸಿ ವಿಹಾರಮಾಡುತ್ತಲಿರುವನು.

ಇಂತಹ ಜೀವನ್ಮುಕ್ತನು ಪ್ರಾರಬ್ಧ ಭೋಗಗಳೆಲ್ಲವೂ ಲಯವಾಗುವ ವೇಳೆಯಲ್ಲಿ ನೀರಿನಲ್ಲಿ ಜಲವೂ, ಹಾಲಿನಲ್ಲಿ ಹಾಲೂ ತುಪ್ಪದಲ್ಲಿ ತುಪ್ಪವೂ ಬೆರೆತು ಹೋಗುವ ಹಾಗೆ ಭೂತಕಾರ್ಯಗಳಾದ ಇಪ್ಪತ್ತು ನಾಲ್ಕು ತತ್ವಗಳು ಆಯಾ ಕಾರಣಗಳಲ್ಲಿ ಕಲೆತು ಹೋಗುತ್ತಿರಲು, ತಾನು ಆ ಕಾರ್ಯಕಾರಣಗಳೊಂದಿಗೆ ಐಕ್ಯವಿಲ್ಲದ್ದರಿಂದ ಪ್ರಕೃತಿಯು ಜ್ಞಾನವಾಗದೆ ಇರುವಂತೆ ಪರಿಪೂರ್ಣವಾಗಿಯೂ, ನಿಶ್ಚಲವಾಗಿಯೂ, ಗಂಭೀರವಾಗಿಯೂ, ಹೆಸರಿಲ್ಲದುದಾಗಿಯೂ, ನೇತ್ರ ಶ್ರೋತ್ರಾದಿಗಳಿಗೆ ಅಗೋಚರವಾಗಿಯೂ, ಹೇಳಲಳವಲ್ಲದುದಾಗಿಯೂ. ಊಹಿಸಕೂಡದುದಾಗಿಯೂ, ನಿರ್ಗುಣವಾಗಿಯೂ, ಸಂಕಲ್ಪವಿಕಲ್ಪಶೂನ್ಯವಾಗಿಯೂ, ಜಗದ್ವಿಲಕ್ಷಣನಾದ ಬ್ರಹ್ಮನ ಆನಂದರೂಪವಾಗಿಯೂ, ಸರ್ವಶೂನ್ಯವಾಗಿಯೂ, ಶಾಶ್ವತವಾಗಿಯೂ, ಅಪ್ರಮೇಯವಾಗಿಯೂ, ಆದಿಮಧ್ಯಾಂತವಿರಹಿತವಾಗಿಯೂ, ಅವಧಿಯಿಲ್ಲದುದಾಗಿಯೂ, ಅನುಮಾನಪ್ರಮಾಣಗಳಿಂದ ತಿಳಿಯಕೂಡದುದಾಗಿಯೂ, ಸರ್ವಪ್ರಪಂಚಕ್ಕೂ ಆಧಾರಭೂತವಾಗಿಯೂ, ಚಿತ್ಪ್ರತಿಬಿಂಬಪ್ರಕಾಶಭೂತವಾಗಿಯೂ, ಬಿಂಬಪ್ರತಿಬಿಂಬಗಳೆಂಬ ಭಾವಗಳಿಂದ ಕಲ್ಪಿಸಕೂಡದುದಾಗಿಯೂ, ಪರಿಪೂರ್ಣವಾಗಿಯೂ ಇರುವ ಪರಮ ಮೋಕ್ಷಸ್ವರೂಪದಲ್ಲಿ ಸೇರುವನು. ಇದರಲ್ಲಿ ಸಂದೇಹವಿಲ್ಲವು. ನೀನು ಈಗ ಅಂತಹ ಮುಕ್ತಿಸ್ವರೂಪನೇ ಆಗಿರುವೆಯಲ್ಲವೇ? ಜೀವನ್ಮುಕ್ತನು ಈ ಭೂಮಿಯಲ್ಲಿ ಯಾವ ವೇಳೆಯಲ್ಲಿ ಯಾವ ಸ್ಥಳದಲ್ಲಿ ಯಾವಯಾವ ಬಾಧೆಗಳನ್ನು ಹೊಂದುತ್ತಾ, ಪಾಂಚಭೌತಿಕವಾದ ಈ ದೇಹವನ್ನು ಪರಿತ್ಯಜಿಸಿದರೂ ನಿತ್ಯವಾಗಿಯೂ, ಜನನಮರಣವಿರಹಿತವಾಗಿಯೂ, ಮನಸ್ಸಿಗೂ ವಾಕ್ಕಿಗೂ ಸಿಕ್ಕದುದಾಗಿಯೂ, ನಿರ್ವಿಕಲ್ಪವಾಗಿಯೂ, ಪರಬ್ರಹ್ಮಾತ್ಮಕವಾಗಿಯೂ ಇರುವ ಆ ಕೈವಲ್ಯ ಸುಖವನ್ನು ಪಡೆಯುವನು. ಎಲೈ ಮಾರುತಿಯೇ, ಈಗ ನಿನಗೆ ಉಪದೇಶಿಸಿದ ಅಭಿಪ್ರಾಯವೇ ವೇದಶಾಸ್ತ್ರಗಳ ಸಾರವು. ಇದೇ ಅನಂತ

ವಾದ ಸೌಖ್ಯಗಳನ್ನು ಕೊಡತಕ್ಕದ್ದು. ಇದೇ ರಾಜಯೋಗಶಾಸ್ತ್ರವು. ಇದೇ ಬ್ರಹ್ಮವಿದ್ಯೆಯು. ಇದೇ ನನ್ನ ಹೃದಯವು. ಇದನ್ನು ಪರಮ ಭಕ್ತನಾದ ನಿನಗೆ ಉಪದೇಶಿಸಿದೆನು. ಇದನ್ನು ತಿಳಿದುಕೊಳ್ಳುವ ಮನುಷ್ಯನು ಯುಕ್ತಿಯನ್ನೂ, ನನ್ನಲ್ಲಿ ಭಕ್ತಿಯನ್ನೂ, ಜೀವನ್ಮುಕ್ತಿಯನ್ನೂ ವಿದೇಹಕೈವಲ್ಯವನ್ನೂ ಪಡೆಯುವನು.

ಆದುದರಿಂದ ಪರಮೇಶ್ವರನಾದ ನನ್ನ ಅಂತರಂಗದಲ್ಲಿ ಪರಮನಿಕ್ಷೇಪದಂತೆ ಪ್ರಕಾಶಿಸುವ ಸರ್ವೋಪನಿಷತ್ಸಾರಭೂತವಾದ ಈ ಅಪರೋಕ್ಷಜ್ಞಾನವನ್ನು ನನ್ನ ಭಕ್ತನಾಗಿಯೂ, ನನ್ನ ಪೂಜಾಸಕ್ತಿಯುಳ್ಳವನಾಗಿಯೂ, ನನ್ನಲ್ಲಿ ಅರ್ಪಿಸಿದ ಮನೋಬುದ್ಧಿಯುಳ್ಳವನಾಗಿಯೂ ಇರುವ ನಿನಗೋಸ್ಕರವಾಗಿ ಉಪದೇಶಿಸಿದೆನು. ಇದಕ್ಕಿಂತಲೂ ಅತಿ ರಹಸ್ಯವಾದ ಅರ್ಥವು ನನ್ನ ಮನಸ್ಸಿನಲ್ಲಿ ಮತ್ತಾವುದೂ ಇಲ್ಲವು. ನೀನು ಈ ತತ್ವಾರ್ಥದ ಭಾವವನ್ನು ಗ್ರಹಿಸಿ, ತಮೋಗುಣವೆಂಬ ಆನೆಯಿಂದಲೂ, ರಜೋಗುಣವೆಂಬ ಮತ್ಸ್ಯದಿಂದಲೂ, ಕ್ರೋಧವೆಂಬ ಮೊಸಳೆಯಿಂದಲೂ, ಕಾಮವೆಂಬ ಪಾಚಿಯಿಂದಲೂ, ಜನನಮರಣಗಳೆಂಬ ಅಲೆಗಳಿಂದಲೂ, ರೋಗಗಳೆಂಬ ಬುದ್ಬುದಗಳಿಂದಲೂ, ಲೋಭವೆಂಬ ನೊರೆಯಿಂದಲೂ, ಮೋಹವೆಂಬ ವೇಲೆಯಿಂದಲೂ, ದುಃಖವೆಂಬ ಅಗಾಧ ಜಲಪ್ರವಾಹದಿಂದಲೂ, ಭಯಂಕರವಾಗಿರುವ ಸಂಸಾರವೆಂಬ ಸಮುದ್ರವನ್ನು ದಾಟಿ, ಮೋಕ್ಷವೆಂಬ ದಡವನ್ನು ಸೇರಿ ಕೃತಕೃತ್ಯನಾಗಿ ನನ್ನ ಸ್ವರೂಪವೆಂಬ ಸಮಾಧಿನಿಷ್ಠನಾಗಿ ಆನಂದಿಸು. ಎಂದು ಹೇಳಿದನು. ಆಗ ಆಂಜನೇಯನು ಸೀತಾದೇವಿಯೇ ಮಹಾಲಕ್ಷ್ಮಿಯೆಂತಲೂ, ಲಕ್ಷ್ಮಣನೇ ಆದಿಶೇಷನೆಂತಲೂ, ಭರತಶತ್ರುಘ್ನರು ಪಾಂಚಜನ್ಯಸುದರ್ಶನಗಳೆಂತಲೂ, ಸಿಂಹಾಸನವೇ ಗರುಡನೆಂತಲೂ, ಶ್ರೀರಾಮಚಂದ್ರನೇ ಆದಿನಾರಾಯಣನೆಂತಲೂ, ಈಗ ಉಪದೇಶಿಸಿದ ಪರಬ್ರಹ್ಮತತ್ವಜ್ಞಾನವೇ ನಿಖಿಲವೇದಶಾಸ್ತ್ರಪುರಾಣಾಗಮೇತಿಹಾಸ ಸ್ಮೃತಿಸಾರವೆಂತಲೂ ತಿಳಿದುಕೊಂಡು, ಪರಮಾನಂದಕಂದಳಿತಹೃದಯಾರವಿಂದನಾಗಿ ಆ ಶ್ರೀ ಸೀತಾರಾಮಾಚಾರ್ಯರ ಪಾದಕಮಲಗಳಿಗೆ ಅನೇಕ ವಂದನೆಗಳನ್ನು ಮಾಡಿ ಕೈ ಮುಗಿದುಕೊಂಡು ಇಂತೆಂದನು.

ಎಲೈ ಶ್ರೀರಾಮಮೂರ್ತಿಯೇ, ನಾರಾಯಣನ ಸಹಸ್ರನಾಮಗಳಿಗೆ ಸಮವಾದ ನಿನ್ನ ನಾಮೋಚ್ಚಾರಣೆ ಮಾಡಿದವನು ಧನ್ಯನಾಗುವನು. ಎಲೈ ದೇವದೇವನೇ.

ಶ್ಲೋ॥ ದೇಹಬುದ್ಧ್ಯಾಸ್ಮಿದಾಸೋಹಂ । ಜೀವಬುದ್ಧ್ಯಾತ್ವದಂಶಿಕಃ ॥
ಆತ್ಮಬುದ್ಧ್ಯಾತ್ವಮೇವಾಹಂ । ಇತಿಮೇನಿಶ್ಚಿತಾಮತಿಃ ॥

ನಾನು ಈ ಶರೀರವೆಂಬ ಬುದ್ಧಿಯಿಂದ ನಿನಗೆ ದಾಸನಾಗಿದ್ದೇನೆ. ಜರಾಮರಣಸಹಿತನಾದ ಜೀವನೆಂಬ ಬುದ್ಧಿಯಿಂದ ನಿನ್ನ ಅಂಶವನ್ನು ತಿಳಿದಿದ್ದೇನೆ. ಪರಬ್ರಹ್ಮವೆಂಬ ಬುದ್ಧಿಯಿಂದ ನೀನೇ ನಾನಾಗಿದ್ದೇನೆ. ಇದು ನನ್ನ ನಿಶ್ಚಯವಾದ ಸಿದ್ಧಾಂತವು.

ಎಂದು ಹೇಳಿ ಆ ಪರಮಾತ್ಮನಿಗೆ ಪುನಃಪುನಃ ನಮಸ್ಕಾರಮಾಡಿ, ಆ ಪರಮಾತ್ಮನ ಅಪ್ಪಣೆ ಪಡೆದು ತನ್ನ ಆಶ್ರಮಕ್ಕೆ ಹೋಗಿ ಏಕಾಂತ ಸ್ಥಳದಲ್ಲಿ ಸುಖಾಸೀನನಾಗಿ ಕುಳಿತು, ಶ್ರೀರಾಮನ ಪಾದಕಮಲಗಳನ್ನು ಧ್ಯಾನಿಸುತ್ತಾ, ನಿರ್ವಿಕಲ್ಪಸಮಾಧಿನಿಷ್ಠನಾಗಿ, ಜೀವನ್ಮುಕ್ತಿಸುಖವನ್ನು ಅನುಭವಿಸುತ್ತಿರುವನು.

ಎಂದು ಪರಮೇಶ್ವರನು ಪಾರ್ವತೀದೇವಿಗೆ ಶ್ರೀರಾಮತತ್ತ್ವಾಮೃತವನ್ನು ತಿಳಿಸಲು, ಆ ದೇವಿಯು ಪರಮಸಂತುಷ್ಟಾಂತರಂಗಳಾಗಿ, ಕೈಮುಗಿದುಕೊಂಡು, “ಎಲೈ ಪ್ರಾಣವಲ್ಲಭನೇ, ಅಧ್ಯಾತ್ಮರಾಮಾಯಣವನ್ನು ಕೇಳಬೇಕೆಂಬ ಕುತೂಹಲವಿರುವುದು. ಸಂಕ್ಷೇಪವಾಗಿ ಹೇಳಿ ಮನಸ್ಸಂತೋಷಪಡಿಸಬೇಕು” ಎಂದು ಪ್ರಾರ್ಥಿಸಿದಳು.

ಮೂರನೆಯ ಸಂಧಿ ಮುಗಿದುದು.



ನಾಲ್ಕನೆಯ ಸಂಧಿ.

ಆಗಲಾಪರಮೇಶ್ವರನು ಪಾರ್ವತಿಯನ್ನು ನೋಡಿ "ಪ್ರಿಯಳೆ! ನೀನು ಕೇಳಿದ ಪ್ರಶ್ನೆಯು ಪರಮರಹಸ್ಯವಾದುದು. ನಿನ್ನ ಭಕ್ತಿ ವಿಶ್ವಾಸಗಳಿಗೆ ಪ್ರೀತನಾಗಿ ಅಧ್ಯಾತ್ಮರಾಮಾಯಣವನ್ನು ಸಂಗ್ರಹವಾಗಿ ಹೇಳುವೆನು ಕೇಳು. ಪ್ರಕೃತಿಗಿಂತಲೂಪರನಾಗಿ, ಅನಾದಿಯಾಗಿ ಆನಂದಮಯನಾಗಿ, ಪುರುಷೋತ್ತಮನಾದ ಶ್ರೀಮನ್ನಾರಾಯಣನು ತನ್ನ ಮಾಯೆಯಿಂದ ಈ ಜಗತ್ತನ್ನೆಲ್ಲಾ ಸೃಷ್ಟಿಸಿ, ಅವುಗಳ ಹೊರಗೂ ಒಳಗೂ ತಾನೇವ್ಯಾಪಿಸಿಕೊಂಡಿದ್ದರೂ ಅವುಗಳ ಸಂಪರ್ಕವಿಲ್ಲದೆ ಸಾಕ್ಷಿಯಾಗಿ ನೋಡಿಕೊಂಡಿರುವನು. ಅಯಸ್ಕಾಂತಶಿಲೆಯು ಲೋಹವನ್ನು ಆಕರ್ಷಿಸುವಂತೆ ಆತನಮಾಯೆಯು ಜಗತ್ತುಗಳನ್ನೆಲ್ಲಾ ತನ್ನ ಕಡೆಗೆ ಸೆಳೆಯು

ತ್ತಿರುವುದು. ಜನರು ಇದನ್ನು ತಿಳಿಯದೆ ಮೂಢಾತ್ಮರಾಗಿ ಅವಿದ್ಯೆಯಿಂದ ಆವರಿಸಲ್ಪಟ್ಟ ಮನಸ್ಸುಳ್ಳವರಾದುದರಿಂದ ಶುದ್ಧನಾಗಿಯೂ ನಿರಸ್ತಮಾಯನಾಗಿಯೂ ಇರುವ ಆ ಪರಬ್ರಹ್ಮನಲ್ಲಿ ತಮ್ಮ ಅಜ್ಞಾನವನ್ನಾರೋಪಿಸುತ್ತಿರುವರು. ಪಿತ್ತವು ನೆತ್ತಿಗೆಹತ್ತಿ ತಲೆತಿರುಗುವವನಿಗೆ ಕಣ್ಣು ಕಾಣದೆ ಮನೆಮುಂತಾದುವುಗಳೆಲ್ಲಾ ಸುತ್ತುವಹಾಗೆ ತೋರುತ್ತಿರುವುದು. ಶುದ್ಧನಾಗಿಯೂ, ಸಚ್ಚಿದಾನಂದಮಯನಾಗಿಯೂ ಇರುವ ಶ್ರೀರಾಮನಲ್ಲಿ ತಮಸ್ಸುಹೇಗೆ ಬಂದೀತು? ಪೂರ್ವದಲ್ಲಿ ಸೀತಾರಾಮಾಂಜನೇಯರು ಈ ವೇದಾಂತವಿಚಾರವಾಗಿ ಚರ್ಚಿಸಿದ ಸಂವಾದವನ್ನು ಹೇಳುವೆನು. ಶ್ರೀರಾಮನು ಲೋಕಕಂಟಕನಾದ ರಾವಣನನ್ನು ಪುತ್ರಮಿತ್ರಾಮಾತ್ಯಸಹಿತವಾಗಿ ಸಂಹರಿಸಿ, ಸೀತಾಲಕ್ಷ್ಮಣಸುಗ್ರೀವಾಂಜನೇಯಾದಿಗಳ ಸಂಗಡಗೂಡಿ ಅಯೋಧ್ಯಾಪಟ್ಟಣಕ್ಕೆ ಬಂದ ಮೇಲೆ ವಸಿಷ್ಠಾದಿಮಹರ್ಷಿಗಳಿಂದ ಪಟ್ಟಾಭಿಷಿಕ್ತನಾಗಿ ದಿವ್ಯಸಿಂಹಾಸನಾರೂಢನಾದನು. ಆ ಮಹಾತ್ಮನು ಧರ್ಮದಿಂದ ರಾಜ್ಯವಾಳುತ್ತಿರುವಕಾಲದಲ್ಲಿ ಬಂದಾನೊಂದುದಿನ ತನ್ನೆದುರಿಗೆ ಬದ್ಧಾಂಜಲಿಪುಟನಾಗಿ ನಿಂತಿದ್ದ ನಿಷ್ಕಾಮನಾಗಿ ಜ್ಞಾನಾಪೇಕ್ಷಿಯಾದ ಹನುಮಂತನನ್ನು ನೋಡಿ ಶ್ರೀರಾಮನು ಸೀತಾದೇವಿಯನ್ನು ಕುರಿತು ಇಂತೆಂದನು. "ಎಲೌ ದೇವಿ! ನಮ್ಮ ಭಕ್ತನಾಗಿಯೂ, ನಿಷ್ಕಲ್ಮಷನಾಗಿಯೂ, ಜ್ಞಾನಿಯಾಗಿಯೂ ಇರುವ ಈ ಆಂಜನೇಯನಿಗೆ ಆತ್ಮತತ್ವವನ್ನು ನಿರೂಪಿಸು" ಎಂದು ಹೇಳಿದನು. ಆಗ ಸೀತೆಯು ಭಕ್ತನಾದ ಹನುಮಂತನನ್ನು ನೋಡಿ "ಅಯ್ಯಾ ಪ್ರಾಜ್ಞನೆ! ನಿನ್ನ ಮನೋಭಿಷ್ಟವನ್ನರಿತು ಪ್ರಾಣವಲ್ಲಭನಾದ ಶ್ರೀರಾಮನು ಆಜ್ಞಾಪಿಸಿದುದರಿಂದ ರಾಮತತ್ವವನ್ನು ನಿನಗೆ ಉಪದೇಶಿಸುವೆನು. ಈ ರಾಮನೇ ಸಚ್ಚಿದಾನಂದಸ್ವರೂಪನಾಗಿಯೂ, ಅದ್ವಯನಾಗಿಯೂ ಉಪಾಧಿವಿರಹಿತನಾಗಿಯೂ, ಸತ್ತಾಮಾತ್ರನಾಗಿಯೂ, ಅಗೋಚರನಾಗಿಯೂ, ಆನಂದನಾಗಿಯೂ, ನಿರ್ಮಲನಾಗಿಯೂ, ಶಾಂತನಾಗಿಯೂ, ವಿಕಾರಶೂನ್ಯನಾಗಿಯೂ, ನಿರಂಜನನಾಗಿಯೂ, ಸರ್ವವ್ಯಾಪಿಯಾಗಿಯೂ, ಸ್ವಪ್ರಕಾಶನಾಗಿಯೂ, ಇದ್ದಾನೆಂದು ತಿಳಿ. ನನ್ನನ್ನು ಮೂಲಪ್ರಕೃತಿಯೆಂತಲೂ, ಜಗತ್ತಿನ ಸೃಷ್ಟಿಸ್ಥಿತಿಲಯಗಳಿಗೆ ಕಾರಣಳೆಂತಲೂ ತಿಳಿದುಕೋ. ಈ ಮಹಾತ್ಮನ ಸನ್ನಿಧಿಮಾತ್ರದಿಂದಲೇ ನಾನು ಜಾಗ್ರತಳಾಗಿ ಜಗತ್ತನ್ನು ಸೃಷ್ಟಿಸುವೆನು. ನನ್ನಿಂದ

ಸೃಷ್ಟಿಸಲ್ಪಟ್ಟದ್ದರೂ ಈತನ ಸಾನ್ನಿಧ್ಯದಲ್ಲಿ ಇರುವುದರಿಂದ ಇವನಲ್ಲಿ ಆರೋಪಿಸಲ್ಪಡುವುದು. ಅಯೋಧ್ಯಾಪಟ್ಟಣದಲ್ಲಿ ನಿರ್ಮಲವಾದ ರಘುವಂಶದಲ್ಲಿ ಜನಿಸಿದುದೂ, ವಿಶ್ವಾಮಿತ್ರನ ಯಜ್ಞಸಂರಕ್ಷಣಾರ್ಥವಾಗಿ ಹೋದುದೂ ಬಳಿಕ ಅಹಲ್ಯಾಶಾಪವಿಮೋಚನಮಾಡಿದುದೂ, ಮಹೇಶ್ವರನ ಧನುರ್ಭಂಗಮಾಡಿದುದೂ, ನನ್ನ ಪಾಣಿಗ್ರಹಣಮಾಡಿಕೊಂಡುದೂ ಅಯೋಧ್ಯೆಗೆ ಹಿಂದಿರುಗಿಬರುವಾಗ ಪರಶುರಾಮನ ಸೊಕ್ಕನ್ನಡಗಿಸಿದುದೂ, ಅಯೋಧ್ಯೆಯಲ್ಲಿ ನನ್ನಸಂಗಡ ಹನ್ನೆರಡುವರ್ಷಗಳು ವಾಸಮಾಡಿದುದೂ ತರುವಾಯ ದಂಡಕಾರಣ್ಯಕ್ಕೆ ಹೋದುದೂ, ಅಲ್ಲಿ ವಿರಾಧನನ್ನು ಸಂಹರಿಸಿದುದೂ, ಮಾಯಾಮಾರೀಚನನ್ನು ಕೊಂದುಹಾಕಿದುದೂ ಮಾಯಾಸೀತೆಯನ್ನು ರಾವಣನು ಅಪಹರಿಸಿದುದೂ, ಜಟಾಯುಕಬಂಧರಿಗೆ ಮೋಕ್ಷವನ್ನು ಅನುಗ್ರಹಿಸಿದುದೂ ಶಬರಿಯ ಪೂಜೆಯನ್ನು ಸ್ವೀಕರಿಸಿ ಸುಗ್ರೀವನೊಂದಿಗೆ ಸ್ನೇಹಮಾಡಿಕೊಂಡುದೂ, ವಾಲಿವಧೆಯೂ, ಸೀತಾನ್ವೇಷಣವೂ, ಸಮುದ್ರಕ್ಕೆ ಸೇತುವೆಯನ್ನು ಕಟ್ಟಿದುದೂ, ರಾವಣನನ್ನು ಪುತ್ರಮಿತ್ರಾಮಾತ್ಯಸಹಿತವಾಗಿ ವಧಿಸಿದುದೂ, ವಿಭೀಷಣನಿಗೆ ರಾಜ್ಯದಾನಮಾಡಿದುದೂ, ನನ್ನೊಂದಿಗೆ ಪುಷ್ಪಕಾರೋಹಣಮಾಡಿ ಈ ಅಯೋಧ್ಯೆಗೆ ಬಂದುದೂ, ಪಟ್ಟಾಭಿಷಿಕ್ತನಾದುದೂ ಮುಂತಾದ ಕ್ರಿಯೆಗಳೆಲ್ಲವೂ ನನ್ನಿಂದಲೇ ಆಚರಿಸಲ್ಪಟ್ಟವುಗಳಾದರೂ ನಿರ್ವಿಕಾರನಾದ ಈ ಶ್ರೀರಾಮನಲ್ಲಿಯೇ ಅಜ್ಞರು ಆರೋಪಿಸಿರುವರು. 'ರಾಮನು ನಡೆಯುವುದಿಲ್ಲ. ಕುಳ್ಳಿರುವುದಿಲ್ಲ, ದುಃಖಿಸುವುದಿಲ್ಲ. ಯಾವುದನ್ನೂ ಅಪೇಕ್ಷಿಸುವುದಿಲ್ಲ, ಇವನು ಯಾವುದನ್ನೂ ಮಾಡುವುದೇ ಇಲ್ಲ, ಇವನು ಆನಂದ ಮೂರ್ತಿಯು, ಅಚಲನು, ಪರಿಣಾಮಶೂನ್ಯನು ಮಾಯಾಗುಣವನ್ನು ಅನುಕರಿಸಿ ಹೀಗೆ ಮಾಡಿದಂತೆ ಕಾಣುತ್ತಿರುವನು.' " ಎಂದು ಹೇಳಿದಳು.

ಆಗ ಶ್ರೀರಾಮನು ಹನುಮಂತನನ್ನು ನೋಡಿ ಇಂತೆಂದನು. " ಎಲೈ ಪರಮಭಕ್ತನೇ, ತತ್ತ್ವವನ್ನು ಹೇಳುವೆನು ಕೇಳು. ಆಕಾಶದಲ್ಲಿ ಜಲಾಕಾಶವೂ ಮಹಾಕಾಶವೂ, ಪ್ರತಿಬಿಂಬವೂ ಸೇರಿ ಮೂರು ಬಗೆಯ ಆಕಾಶಗಳು ಕಾಣುತ್ತಿರುವಂತೆ ಅವಿಚ್ಛಿನ್ನನಾಗಿಯೂ, ಅವಿಕಾರನಾಗಿಯೂ, ಸರ್ವಸಾಕ್ಷಿಯಾಗಿಯೂ ಇರುವ ನನ್ನಲ್ಲಿ ಜನರು ಮೂಢಭ್ರಾಂತಿಯಿಂದ ಜೀವತ್ವವನ್ನಾರೋಪಿಸುತ್ತಿರುವರು. ಇದು ಅವಿದ್ಯಾ

ಕಾರ್ಯವಾದ ಮೃಷಾಬುದ್ಧಿಯು ತತ್ತ್ವಮಸಿ ಮೊದಲಾದ ವಾಕ್ಯಗಳಿಂದ ನಾನು ಸಂಭಾಸಿಸಾಗಿದ್ದೇನೆ. ಆತ್ಮನು ಬೇರೆ, ಶರೀರವು ಬೇರೆ ಇವುಗಳಿಗೆ ಪರಸ್ಪರಸಂಬಂಧವಿಲ್ಲವೆಂದು ತಿಳಿಯಬೇಕಾದರೆ ಅಜ್ಞಾನವು ಲಯವಾಗಬೇಕು. ನನ್ನ ಭಕ್ತನು ಇದನ್ನುತಿಳಿದು ನನ್ನ ಭಾವವನ್ನು ಹೊಂದುತ್ತಾನೆ, ನನ್ನಲ್ಲಿ ಭಕ್ತಿಯಿಲ್ಲದವರು ಮೋಹದಿಂದ ಭ್ರಾಂತಿಗೊಳ್ಳುವರು. ಮಾಯಾಸ್ವರೂಪಿಣಿಯಾದ ಈ ಸೀತೆಯು ಹೇಳಿದಂತೆ ಇವೆಲ್ಲ ಪ್ರಕೃತಿ ವಿಕಾರಗಳೆಂದು ತಿಳಿ " ಎಂದು ಹೇಳಿದನು.

ಇದನ್ನು ಕೇಳಿ ಪಾರ್ವತಿಯು ಪರಮೇಶ್ವರನಿಗೆ ಕೈಮುಗಿದು "ಸ್ವಾಮಿ, ತಮ್ಮ ಅನುಗ್ರಹದಿಂದ ಕೃತಾರ್ಥಳಾದೆನು. ನಿಮ್ಮ ಮುಖೋದ್ಗತವಾದ ರಾಮತತ್ತ್ವಾಮೃತವನ್ನು ಕೇಳಿ ಪರಮಸಂತೋಷವಾಯಿತು. ಅಧ್ಯಾತ್ಮ ರಾಮಚರಿತವನ್ನು ಎಷ್ಟು ಕೇಳಿದರೂ ನನ್ನ ಮನಸ್ಸು ದಣಿಯದೆ ಇದೆ. ಈ ರಾಮಾಯಣದ ಕಥೆಯನ್ನು ಮತ್ತಷ್ಟು ವಿಸ್ತರಿಸಿ ಹೇಳಬೇಕೆಂದು ಪ್ರಾರ್ಥಿಸುತ್ತೇನೆ " ಎನ್ನಲಾ ಪರಮೇಶ್ವರನಿಂತೆಂದನು.

ದೇವೀ ಕೇಳು, ಪೂರ್ವದಲ್ಲಿ ತ್ರೇತಾಯುಗದಲ್ಲಿ ರಾವಣಾದಿದುಷ್ಟರಾಕ್ಷಸರ ಬಾಧೆಯಿಂದ ಭೂಭಾರವು ಹೆಚ್ಚಿತು. ಆಗ ಭೂದೇವಿಯು ಆ ಭಾರವನ್ನು ತಡೆಯಲಾರದೆ ಅತಿದುಃಖದಿಂದ ಬ್ರಹ್ಮದೇವನ ಬಳಿಗೆ ಹೋಗಿ ತನ್ನ ಸಂಕಟವನ್ನು ಹೇಳಿಕೊಂಡಳು, ಆತನು ಸ್ವಲ್ಪಹೊತ್ತಿನ ತನಕ ಚಿಂತಿಸಿ, ದೇವತಾಗಣದೊಂದಿಗೆ ಆ ಭೂದೇವಿಯನ್ನು ಕರೆದುಕೊಂಡು, ಕ್ಷೀರಸಾಗರಕ್ಕೆ ಹೋಗಿ ವೈಕುಂಠವಾಸನಾದ ಪರಾತ್ಪರನನ್ನು ಕಂಡು, ಭಕ್ತಿಯಿಂದ ನಮಸ್ಕರಿಸಿ ಹೀಗೆ ಸ್ತುತಿಸಿದನು "ಎಲೈ ಪರಮಾತ್ಮನೇ, ಪ್ರಾಣ ಬುದ್ಧೀಂದ್ರಿಯಾತ್ಮಗಳಿಂದ ಚಿಂತಿಸಲ್ಪಡುವ ನಿನ್ನ ಪದವನ್ನು ನಾನರಿಯೆನು. ಗುಣಮಯಿಯಾದ ನಿನ್ನ ಮಾಯೆಯಿಂದ ನೀನು ಈ ಸಮಸ್ತ ಲೋಕಗಳನ್ನೂ ಸೃಷ್ಟಿಸುತ್ತೀಯೆ, ಲಯಮಾಡುತ್ತೀಯೆ, ಆನಂದಾತ್ಮನಾದ ನೀನು ಇವುಗಳಿಗೆ ಸಂಬಂಧವಿಲ್ಲದವನಾಗಿರುತ್ತೀಯೆ, ನೀನೇ ದುಷ್ಟಶಿಕ್ಷಕನಾಗಿಯೂ ಶಿಷ್ಟಸಂರಕ್ಷಕನಾಗಿಯೂ ಇರುವೆ. ದಾನಾಧ್ಯಯನಾದಿ ಕರ್ಮಗಳಿಂದ ಸಜ್ಜನರು ನಿನ್ನ ಸ್ವರೂಪವನ್ನು ಗ್ರಹಿಸಬಲ್ಲರು. ನಿನ್ನ ಪಾದಕಮಲಗಳಲ್ಲಿ ಸದಾಭಕ್ತಿಯಿರುವಂತೆ ನನ್ನನ್ನು ಅನುಗ್ರಹಿಸು " ಎಂದು ಪ್ರಾರ್ಥಿಸಲಾ ಪರಮಾತ್ಮನು

ಬ್ರಹ್ಮನನ್ನು ನೋಡಿ " ಎಲೈ ವಿಧಾತ್ರನೇ, ನೀವು ಬಂದಿರುವ ಉದ್ದೇಶವು ನನಗೆ ತಿಳಿದಿದೆ. ರಾವಣ ಕುಂಭಕರ್ಣಾದಿಗಳ ದೌರಾತ್ಮ್ಯವು ನನಗೆ ಗೊತ್ತಾಗಿದೆ, ನಾನು ಅಯೋಧ್ಯಾಧಿಪತಿಯಾದ ದಶರಥನ ಪುತ್ರನಾಗಿ ಭೂಲೋಕದಲ್ಲಿ ಅವತರಿಸುವೆನು. ಯೋಗಮಾಯೆಯು ಸೀತಾನಾಮದಿಂದ ಮಿಥಿಲೇಶನಾದ ಜನಕರಾಯನ ಮನೆಯಲ್ಲಿ ಬೆಳೆಯುವಳು. ನೀವುಗಳೆಲ್ಲಾ ನಿಮ್ಮ ನಿಮ್ಮ ಅಂಶಗಳಿಂದ ಕಪಿಭಲ್ಲೂಕಾದಿರೂಪಿಸಿಂದ ಜನಿಸಿರಿ, ನಿಮ್ಮ ಸಹಾಯದಿಂದ ಆ ರಾಕ್ಷಸರನ್ನು ಸಂಹರಿಸಿ ಭೂಭಾರವನ್ನು ನಿವಾರಣೆಮಾಡುವೆನು " ಎಂದು ಹೇಳಿ ಅಂತರ್ಧಾನನಾದನು.

ಕೆಲದಿನಗಳ ಮೇಲೆ ಅಯೋಧ್ಯೆಯಲ್ಲಿ ದಶರಥನೆಂಬ ರಾಜನು ಹುಟ್ಟಿ ಧರ್ಮದಿಂದ ಪ್ರಜಾಪಾಲನೆಮಾಡುತ್ತಿದ್ದನು. ಅವನಿಗೆ ಬಹುಕಾಲದತನಕ ಮಕ್ಕಳಾಗಲಿಲ್ಲ. ಅವನು ಈ ಚಿಂತೆಯಿಂದ ಖಿನ್ನನಾಗಿ ಒಂದುದಿನ ಗುರುವಾದ ವಸಿಷ್ಠನನ್ನು ನೋಡಿ " ಮಹರ್ಷಿಗಳೇ, ಪುತ್ರಹೀನನಾದ ನನಗೆ ಈ ಜಗತ್ತಿನಲ್ಲಿ ಸರ್ವವೂ ದುಃಖಮಯವಾಗಿ ಕಾಣುತ್ತಲಿದೆ. ನನ್ನ ಕ್ಲೇಶಪರಿಹಾರವಾಗುವ ಮಾರ್ಗವನ್ನು ತೋರಿರಿ " ಎಂದು ಬೇಡಿದನು. ಆ ಗುರುವು ದಶರಥನನ್ನು ನೋಡಿ " ರಾಯನೇ ಚಿಂತಿಸಬೇಡ, ಮಹರ್ಷಿಯಾದ ಋಶ್ಯಶೃಂಗನನ್ನು ಕರೆಯಿಸಿಕೊಂಡು ಪುತ್ರಕಾಮೇಷ್ಟಿ ಯೆಂಬ ಯಾಗಮಾಡು. ನಿನ್ನ ಇಷ್ಟಾರ್ಥ ಸಿದ್ಧಿಯಾಗುವುದು " ಎಂದನು. ಬಳಿಕ ರಾಜನು ಶಾಂತಾಪತಿಯಾದ ಋಶ್ಯಶೃಂಗನನ್ನು ಕರೆಯಿಸಿಕೊಂಡು ಯಜ್ಞಮಾಡಿದನು. ಅಗ್ನಿಯು ಪ್ರತ್ಯಕ್ಷನಾಗಿ ಸ್ವರ್ಣಪಾತ್ರೆಯಲ್ಲಿ ಪಾಯಸವನ್ನು ತುಂಬಿಕೊಂಡು ಬಂದು ರಾಜನ ಕೈಗೆ ಕೊಟ್ಟು, " ಇದನ್ನು ನಿನ್ನ ಪತ್ನಿಯರಿಗೆ ಕೊಡು, ನಿನಗೆ ಸಂತಾನ ಉಂಟಾಗುವುದು " ಎಂದು ಅನುಗ್ರಹಿಸಿ ತಿರೋಹಿತನಾದನು. ಬಳಿಕ ರಾಜನು ಆ ಪಾಯಸದಲ್ಲಿ ಅರ್ಧವನ್ನು ಕೌಸಲ್ಯೆಗೂ, ಉಳಿದುದನ್ನು ಕೈಕೆಯಿಗೂ ಕೊಟ್ಟನು, ಅವರು ತಮ್ಮ ಭಾಗದ ಅರ್ಧಾಂಶಗಳನ್ನು ಮೂರನೆ ಹೆಂಡತಿಯಾದ ಸುಮಿತ್ರೆಗೆ ಕೊಟ್ಟು ಉಳಿದುದನ್ನು ತಾವು ಭಕ್ಷಿಸಿದರು. ಕೂಡಲೆ ಆ ಮೂವರು ಬಾಲೆಯರೂ ಗರ್ಭವತಿಯರಾದರು. ಕೌಸಲ್ಯೆಯು ಶ್ರೀ ರಾಮನನ್ನೂ, ಕೈಕೆಯೆಯು ಭರತನನ್ನೂ ಸುಮಿತ್ರೆಯು ಲಕ್ಷ್ಮಣ ಶತ್ರುಘ್ನರೆಂಬ ಅವಳಿ ಮಕ್ಕಳನ್ನೂ ಪಡೆದರು.

ಚತುರ್ಭುಜನಾಗಿಯೂ ಕೋಟಿಸೂರ್ಯ ಪ್ರಕಾಶವುಳ್ಳವನಾಗಿಯೂ ನೀಲಮೇಘಶ್ಯಾಮನಾಗಿಯೂ ಇದ್ದ ಶ್ರೀರಾಮನನ್ನು ನೋಡಿ ಕೌಸಲ್ಯೆಯು ಇವನೇ ಪರಮಾತ್ಮನೆಂದು ಗ್ರಹಿಸಿ ಈಪ್ರಕಾರಸ್ತುತಿಸಿದಳು.

"ಎಲೈ ಪರಮಪುರುಷನೇ, ಶಂಖಚಕ್ರಗದಾಪದ್ಮ ವನಮಾಲಾವಿರಾಜಿತನಾದ ನಿನಗೆ ನಮಸ್ಕರಿಸುವೆನು. ಎಲೈ ಪರಮಾತ್ಮನೇ, ಅನಂತನೇ, ನೀನು ವಾಚಾಮಗೋಚರನಾಗಿಯೂ, ಅತೀಂದ್ರಿಯನಾಗಿಯೂ ವೇದವೇದ್ಯನಾಗಿಯೂ ಇದ್ದೀಯೆ. ನಿನ್ನ ಮಾಯೆಯಿಂದ ಈ ಲೋಕವನ್ನು ಸೃಷ್ಟಿಸಿ ಸಂರಕ್ಷಿಸುತ್ತಾ ಕೊನೆಗೆ ಲಯಮಾಡುವೆ, ನೀನು ಸತ್ವಾದಿ ತ್ರಿಗುಣಸಂಯುಕ್ತನಾಗಿದ್ದರೂ ತುರೀಯನಾಗಿ ನಿರ್ಮಲನಾಗಿರುವೆ. ನೀನು ಮಾಡುವವನಂತೆ ಇದ್ದರೂ ಅಕರ್ತನು, ನಡೆಯುವವನಂತೆ ತೋರಿದರೂ ನಡೆಯುವವನಲ್ಲ. ಕೇಳುವವನಂತೆ ಇದ್ದರೂ ಕೇಳತಕ್ಕವನಲ್ಲ. ನೀನು ಪ್ರಾಣವಿಲ್ಲದವನೆಂತಲೂ ಮನಸ್ಸಿಲ್ಲದವನೆಂತಲೂ ಶುದ್ಧನೆಂತಲೂ ಶ್ರುತಿಗಳು ಹೇಳುತ್ತವೆ. ಸರ್ವಭೂತಗಳಲ್ಲಿಯೂ ನೀನು ಸಮವಾಗಿದ್ದರೂ ಯಾರಿಗೂ ಗೋಚರನಾಗತಕ್ಕವನಲ್ಲ. ಜ್ಞಾನಿಗಳಿಗೆ ಮಾತ್ರ ನೀನು ಗೋಚರನಾಗುವೆ. ನಿನ್ನ ಹೊಟ್ಟೆಯಲ್ಲಿ ಪರಮಾಣುರೂಪದಿಂದ ಅನೇಕ ಕೋಟಿ ಬ್ರಹ್ಮಾಂಡಗಳು ತುಂಬಿಕೊಂಡಿವೆ. ನೀನು ನನ್ನ ಈ ಸಣ್ಣ ಹೊಟ್ಟೆಯಲ್ಲಿ ಅಡಗಿದ್ದುದು ಲೋಕವಿಡಂಬನಾರ್ಥವೇ ಅಲ್ಲದೆ ಬೇರೆ ಇಲ್ಲ. ಇದರಿಂದಲೇ ನೀನು ಭಕ್ತಪರಾಧೀನನೆಂದು ಗ್ರಹಿಸಿದೆನು. ನಾನು ಈ ಸಂಸಾರಸಾಗರದಲ್ಲಿ ಮುಳುಗಿ, ಪತಿ, ಪುತ್ರ, ಧನಾದಿಗಳಲ್ಲಿ ನಿನ್ನ ಮಾಯೆಯಿಂದ ಮೋಹಗೊಂಡು ಈಗ ನಿನ್ನ ಪಾದಮೂಲವನ್ನು ಆಶ್ರಯಿಸಿದ್ದೇನೆ. ಎಲೈ ದೇವದೇವನೇ, ನಿನ್ನ ಈ ರೂಪವು ನನ್ನ ಮನಸ್ಸಿನಲ್ಲಿ ಸದಾಕಾಲವೂ ಸ್ಥಿರವಾಗಿ ನೆಲಸಿರಲಿ, ವಿಶ್ವಮೋಹಿನಿಯಾದ ನಿನ್ನ ಮಾಯೆಯು ನನ್ನನ್ನು ಆವರಿಸಬೇಡ. ಅಲೌಕಿಕವಾದ ನಿನ್ನ ಈ ರೂಪವನ್ನು ಉಪಸಂಹರಿಸಿಕೋ. ಆನಂದಕರವಾದ ಕೋಮಲವಾದ ಬಾಲಭಾವವನ್ನು ಅವಲಂಬಿಸಿ, ನನ್ನ ಶಿಶುವಾಗಿ ತೊಡೆಯಮೇಲೆ ಕುಳಿತುಕೊ. ಆಲಿಂಗನಾಲಾಪಗಳಿಂದ ನಿನ್ನನ್ನು ಮೆಚ್ಚಿಸಿ ಕೃತಾರ್ಥಳಾಗುವೆನು."

ಈ ಮಾತುಗಳನ್ನು ಕೇಳಿ ಪರಮಾತ್ಮನಾದ ಶ್ರೀ ರಾಮನು" ಅಮ್ಮಾ! ನಿನ್ನ ಸ್ವಾಭಾವಿಕವಾದಭಕ್ತಿಗೆ ಪ್ರಸನ್ನನಾಗಿ ನಿನಗೆ ಈ ರೂಪ

ದಿಂದ ಸಾಕ್ಷಾತ್ಕರಿಸಿದೆನು. ಬ್ರಹ್ಮಾದಿಗಳ ಪ್ರಾರ್ಥನೆಯಿಂದಲೂ, ನಿಮ್ಮಗಳ ಪೂರ್ವಜನ್ಮದ ತಪೋಬಲದಿಂದಲೂ ನಿಮ್ಮ ಮಗನಾಗಿ ಅವತರಿಸಿರುವೆನು. ನಿನ್ನ ಇಷ್ಟದಂತೆ ಬಾಲರೂಪವನ್ನು ತಾಳುವೆನು." ಎಂದು ಹೇಳಿ ಎಳೆಯಕೂಸಾಗಿ ಅಳತೊಡಗಿದನು.

ದಶರಥನು ಪುತ್ರೋತ್ಸವವಾದ ಸಂತೋಷದಿಂದ ದಾನ ಧರ್ಮಾದಿಗಳನ್ನು ಬಹಳವಾಗಿಮಾಡಿ, ಜಾತಕರ್ಮ ನಾಮಕರಣಗಳನ್ನು ಮಾಡಿಸಿದನು, ಈ ಮಕ್ಕಳು ನಾಲ್ವರೂ ಬಹುಪ್ರೀತಿಯಿಂದ ಬೆಳೆಸಲ್ಪಟ್ಟರು. ಬಗೆಬಗೆಯ ವಸ್ತ್ರಾಭರಣಗಳಿಂದಲೂ, ಮೃಷ್ಟಾನ್ನಪಾನಗಳಿಂದಲೂ, ತಿಂಗಳು ತಿಂಗಳಿಗೂ ಬಾಗಿನಾದಿಗಳನ್ನು ತೊಟ್ಟು ಜನರನ್ನು ತೃಪ್ತಿಪಡಿಸುವುದರಿಂದಲೂ, ಮಕ್ಕಳ ಬಾಲಲೀಲೆಗಳು ಸರ್ವಜನಾಹ್ಲಾದಕರಗಳಾಗಿದ್ದವು, ಒಂದುದಿನ ಶ್ರೀರಾಮನು ಹಸಿವಿನಿಂದ ತಾಯಿಯಬಳಿಗೆ ಹೋಗಿ ಅನ್ನವನ್ನು ನೀಡೆಂದು ಬೇಡಿದನು. ಕಾರ್ಯಾಂತರದಲ್ಲಿದ್ದ ಆಕೆಗೆ ಮಗನ ಮಾತು ಕೇಳಬರಲಿಲ್ಲ. ಆಗ ರಾಮನು ಸಿಟ್ಟಿನಿಂದ ಹತ್ತಿರ ಇದ್ದ ದೊಣ್ಣೆ ತೆಗೆದುಕೊಂಡು ಅಲ್ಲಿದ್ದ ಪಾತ್ರೆಗಳನ್ನೆಲ್ಲಾ ಹೊಡೆದು, ಒಡೆದುಬಿಟ್ಟನು. ಹಾಲುಮಡಿಕೆಯನ್ನೊಡೆದು ಚೆಲ್ಲಿದನು. ಅದರಲ್ಲಿದ್ದ ಬೆಣ್ಣೆಯನ್ನು ಭರತಲಕ್ಷ್ಮಣಶತ್ರುಘ್ನರಿಗೆ ಕೊಟ್ಟುಬಿಟ್ಟನು. ಅಡಿಗೆಯವನು ಹೆದರಿ ಓಡಿಹೋಗಿ ಕೌಸಲ್ಯೆಗೆ ಈ ವರ್ತಮಾನವನ್ನು ತಿಳಿಸಿದನು. ಅವಳು ಬಹುಕೋಪದಿಂದ ಓಡಿಬರುತ್ತಿರುವುದನ್ನು ನೋಡಿ ಅಲ್ಲಿದ್ದವರೆಲ್ಲರೂ ಪಲಾಯನ ಮಾಡುತ್ತಿದ್ದರು. ಆಕೆ ಓಡಿಬರುತ್ತಿರುವಾಗ ಅಲ್ಲಲ್ಲಿ ಜಾರಿಬಿದ್ದು, ಎದ್ದು, ರಾಮನ ಬಳಿಗೆ ಬಂದಳು. ಅವನ ದಿವ್ಯಸುಂದರಮುಖವನ್ನು ನೋಡಿದ ಕೂಡಲೇ ಆಕೆಯ ಸಿಟ್ಟೆಲ್ಲಾ ಓಡಿಹೋಯಿತು. ಮಗುವನ್ನೆತ್ತಿಕೊಂಡು ಮುದ್ದಾಡಿ, ಗಾಢಾಲಿಂಗನಮಾಡಿಕೊಂಡು ನಕ್ಕುಬಿಟ್ಟಳು. ಹೀಗೆ ಜಗದಾನಂದಕಂದನಾದ ಆ ರಾಮಚಂದ್ರನು ಮಾಯಾಬಾಲಮೂರ್ತಿಯಾಗಿ ತಾಯಿತಂದೆಗಳನ್ನೂ ಸುತ್ತಲಿದ್ದ ಜನರನ್ನೂ ಆನಂದಪಡಿಸುತ್ತಿದ್ದನು. ದಶರಥನು ತನ್ನ ಕುಮಾರರಿಗೆ ಚೌಲೋಪನಯನಾದಿ ಕರ್ಮಗಳನ್ನು ಆಯಾ ಕಾಲಗಳಲ್ಲಿ ಮಾಡಿಸಿ, ಅವರಿಗೆ ಅಕ್ಷರಾಭ್ಯಾಸವನ್ನೂ, ಧನುರ್ವೇದದ ಅಭ್ಯಾಸವನ್ನೂ, ಆನೆಕುದುರೆಗಳ ಸವಾರಿ ಮುಂತಾದ ರಾಜಕುಲೋಚಿತ ವಿದ್ಯೆ

ಗಳನ್ನೂ ಕಲಿಸುತ್ತಾ ಬರಲು ಅವರು ಸ್ವಲ್ಪಕಾಲದಲ್ಲಿಯೇ ಸಕಲವಿದ್ಯಾಪಾರಂಗತರಾದರು.

ಒಂದುದಿನ ವಿಶ್ವಾಮಿತ್ರಋಷಿಯು ಮಾಯಾಮನುಷ್ಯರೂಪವನ್ನು ತಾಳಿರುವ ಪರಮಾತ್ಮನಾದ ಶ್ರೀರಾಮನನ್ನು ನೋಡಬೇಕೆಂದು ಅಯೋಧ್ಯೆಗೆ ಬಂದನು. ರಾಜನಾದ ದಶರಥನು ಆ ಮಹರ್ಷಿಯನ್ನು ಕಂಡು ಪ್ರತ್ಯುತ್ಥಾನಾಭಿವಂದನೆಗಳನ್ನು ಮಾಡಿ, ಯಥಾವಿಧಿಯಾಗಿ ಸತ್ಕರಿಸಿ "ಮಹಾತ್ಮನೇ, ತಾವು ದಯಮಾಡಿರುವ ಕಾರ್ಯಾರ್ಥವನ್ನು ತಿಳಿಸಿದರೆ ಅದನ್ನು ನೆರವೇರಿಸುವೆನು." ಎಂದು ಪ್ರಾರ್ಥಿಸಲಾ ಕೌಶಿಕನು "ಎಲೈ ರಾಜನೇ, ನಾನು ಪರ್ವಕಾಲಗಳಲ್ಲಿ ಯಾಗಮಾಡುತ್ತಿರುವಾಗ ಸುಬಾಹು ಮಾರೀಚರೆಂಬ ರಾಕ್ಷಸರೂ ಅವರ ಅನುಚರರೂ ಬಂದು ನನ್ನ ಯಜ್ಞಕ್ಕೆ ವಿಘ್ನವನ್ನಾಚರಿಸುತ್ತಿರುವರು. ಅವರನ್ನು ಕೊಂದು ನಮ್ಮಾಶ್ರಮವನ್ನು ನಿಷ್ಕಂಟಕವಾಗಿ ಮಾಡಲು ನಿನ್ನ ಮಕ್ಕಳಾದ ರಾಮಲಕ್ಷ್ಮಣರನ್ನು ಕಳುಹಿಸಿಕೊಡು," ಎಂದು ಕೇಳಿದನು. ಆಗ ದಶರಥನು ಗುರುವಾದ ವಸಿಷ್ಠನ ಸಂಗಡ ಯೋಚಿಸಿ, ಬಹುದೀರ್ಘಕಾಲದಮೇಲೆ ಜನಿಸಿದ ಮೋಹದ ಮಕ್ಕಳನ್ನು ಕಳುಹಿಸುವುದಕ್ಕೆ ಅನುಮಾನಪಡುತ್ತಿರಲು ಆ ಗುರುವು ರಾಜನನ್ನು ನೋಡಿ "ದಶರಥನೇ, ಶ್ರೀರಾಮನು ಯಾರೆಂದು ತಿಳಿದಿದ್ದೀಯೆ? ಸನಾತನನಾದ ಪರಮಾತ್ಮನು ಭೂಭಾರಹರಣಾರ್ಥವಾಗಿ ಅವತರಿಸಿರುವನು. ನೀನು ಕಶ್ಯಪನು. ಕೌಸಲ್ಯೆಯೇ ಅದಿತಿಯು, ನೀವು ಬಹುಕಾಲದತನಕ ಘೋರತಪಸ್ಸುಮಾಡಿ, ನಿಮಗೆ ಪುತ್ರನಾಗಿ ಹುಟ್ಟಬೇಕೆಂದು ಪ್ರಾರ್ಥಿಸಿಕೊಂಡಂತೆ ನಿಮ್ಮ ಮಗನಾಗಿ ಜನಿಸಿರುವನು. ಈ ರಾಮನಿಂದ ಲೋಕದಲ್ಲಿ ಬಹುಕಾರ್ಯಗಳು ನಡೆಯಬೇಕಾಗಿರುವುದರಿಂದ ನೀನು ಸಂಶಯಗೊಳ್ಳದೆ ರಾಮಲಕ್ಷ್ಮಣರನ್ನು ಮುನಿಯ ಸಂಗಡ ಕಳುಹಿಸು," ಎಂದು ಹೇಳಲು ದಶರಥನು ಒಪ್ಪಿ, ಮಕ್ಕಳನ್ನು ವಿಶ್ವಾಮಿತ್ರನ ವಶಕ್ಕೆ ಕೊಟ್ಟನು.

ವಿಶ್ವಾಮಿತ್ರನು ರಾಮಲಕ್ಷ್ಮಣರನ್ನು ತನ್ನ ಸಂಗಡ ಕರೆದುಕೊಂಡು ತನ್ನ ಆಶ್ರಮಕ್ಕೆ ಹೋಗುತ್ತಿರುವಾಗ ಮಾರ್ಗದಲ್ಲಿ ಅವರಿಗೆ ಹಸಿವು ಬಾಯಾರಿಕೆಗಳೂ ಶ್ರಮವೂ ತೋರದಂತೆ ಬಲಾ, ಅತಿಬಲಾ ಎಂಬ ಎರಡು ವಿದ್ಯೆಗಳನ್ನು ಬೋಧಿಸಿ ಆಶ್ರಮಕ್ಕೆ ಕರದೊಯ್ದನು. ಅಲ್ಲಿ ತಾಟಕಿಯೆಂಬ ಘೋರ ರಾಕ್ಷಸಿಯೊಬ್ಬಳು ಹೋಮಕುಂಡದಲ್ಲಿ

ಮಲಮೂತ್ರಾದಿ ಅಶುದ್ಧ ಪದಾರ್ಥಗಳನ್ನು ಹಾಕುತ್ತಾ ಘೋರ ರೂಪಿನಿಂದ ಮುನಿಕುಮಾರರನ್ನೆಲ್ಲಾ ಹೆದರಿಸುತ್ತಿದ್ದಳು. ವಿಶ್ವಾಮಿತ್ರನ ಆಜ್ಞೆಯಿಂದ ಶ್ರೀರಾಮನು ಆ ರಾಕ್ಷಸಿಯನ್ನು ಕೊಂದುಹಾಕಲು ಆ ಮಹರ್ಷಿಯು ಮೆಚ್ಚಿ ರಹಸ್ಯವಾದ ಅಸ್ತ್ರಮಂತ್ರಗಳನ್ನು ಆತನಿಗೆ ಉಪದೇಶಮಾಡಿದನು. ಬಳಿಕ ಯಜ್ಞಕ್ಕೆ ಆರಂಭಿಸಬಹುದೆಂದು ಶ್ರೀರಾಮನು ಹೇಳಲು ವಿಶ್ವಾಮಿತ್ರನು ಪ್ರಾರಂಭಮಾಡಿದನು. ತಾಟಕಿಯ ಮಕ್ಕಳಾದ ಸುಬಾಹು ಮಾರೀಚರೆಂಬವರಿಬ್ಬರೂ ತಮ್ಮ ತಾಯಿಯನ್ನು ಕೊಂದ ಹುಡುಗನ ಸೊಕ್ಕನ್ನು ಮುರಿಯಬೇಕೆಂದು ಮೇಲೆ ಬೀಳಲಿಕ್ಕೆ ಬಂದರು. ಆಗ ಶ್ರೀರಾಮನು ಒಂದು ಬಾಣದಿಂದ ಸುಬಾಹುವನ್ನು ಕೊಂದು ಮತ್ತೊಂದು ಬಾಣದಿಂದ ಮಾರೀಚನನ್ನು ಸಮುದ್ರದ ಆಚೆಗೆ ಹೋಗಿ ಬೀಳುವಂತೆ ಮಾಡಿದನು. ಅವರ ಸಂಗಡ ಇದ್ದ ರಾಕ್ಷಸರೆಲ್ಲರೂ ಓಡಿಹೋದರು. ವಿಶ್ವಾಮಿತ್ರನ ಯಜ್ಞವು ನಿರ್ವಿಘ್ನವಾಗಿ ನೆರವೇರಿತು. ಆ ಮಹರ್ಷಿಯು ರಾಮ ಲಕ್ಷ್ಮಣರ ಪರಾಕ್ರಮವನ್ನು ಬಹಳವಾಗಿ ಹೊಗಳಿ, ಯಾಗಕ್ಕೆ ಬಂದಿದ್ದ ಋಷಿಗಳನ್ನೆಲ್ಲಾ ಸತ್ಕರಿಸಿ; ಕಳುಹಿ, ಆ ಬಾಲಕರಿಬ್ಬರನ್ನೂ ಕರೆದುಕೊಂಡು, ಜನಕರಾಯನು ಮಾಡುತ್ತಿರುವ ಮಹಾ ಯಜ್ಞವನ್ನು ನೋಡಬೇಕೆಂದು ಹೊರಟನು. ಮಾರ್ಗಮಧ್ಯದಲ್ಲಿ ಗೌತಮನ ಆಶ್ರಮವು ಸಿಕ್ಕಿತು. ಅಲ್ಲಿ ಒಂದು ಅರೆಬಂಡೆಯ ಮೇಲೆ ಶ್ರೀರಾಮನು ಕಾಲಿಟ್ಟಕೂಡಲೇ ಸುಂದರಾಂಗಿಯಾದ ಒಬ್ಬ ಸ್ತ್ರೀಯು ಆ ಬಂಡೆಯಿಂದ ಎದ್ದುಬಂದು ಶ್ರೀರಾಮನ ಪಾದಂಗಳಿಗೆ ನಮಸ್ಕರಿಸಿ ಇಂತೆಂದು ಸ್ತುತಿಸಿದಳು.

ಎಲೈ ದೇವದೇವನೇ. ನಿನ್ನ ಪಾದಧೂಳಿಯು ಸೋಕಿದ್ದರಿಂದ ನಾನು ಧನ್ಯಳಾಗಿ ಪರಿಶುದ್ಧಳಾದೆನು. ಬ್ರಹ್ಮರುದ್ರಾದಿ ದೇವತೆಗಳು ಸುದಾ ಯಾವ ಪರಮಾತ್ಮನ ಪಾದ ದರ್ಶನವು ಲಭಿಸಬೇಕೆಂದು ಸದಾಕಾಲವು ಪ್ರಾರ್ಥಿಸುತ್ತಿರುವರೋ ಅಂತಹ ಪಾದವನ್ನು ಕಂಡೆನು. ಎಲೈ ರಾಮನೇ, ನೀನು ಲೋಕದ ಜನರನ್ನು ಮೋಹಗೊಳಿಸುವುದಕ್ಕೋಸ್ಕರ ಮನುಷ್ಯರೂಪವನ್ನು ಧರಿಸಿರುವೆ. ಆನಂದಮಯನಾಗಿಯೂ ಮಾಯಾಸ್ವರೂಪನಾಗಿಯೂ ಇರುವ ನಿನ್ನ ಚೇಷ್ಟಿತವು ವಿಚಿತ್ರವಾದುದು. ನೀನು ಕಾಲಿಲ್ಲದಿದ್ದರೂ ನಡೆಯುತ್ತೀಯೆ, ಕಣ್ಣಿಲ್ಲದಿದ್ದರೂ ನೋಡುತ್ತಿರುವೆ? ಕಿವಿಗಳಿಲ್ಲದಿದ್ದರೂ ಕೇಳುತ್ತಲಿರುವೆ. ಯಾವಲೋಕದಲ್ಲಿಯೂ ನೀನಿ

ಲ್ಲದ ಸ್ಥಳವು ಸ್ವಲ್ಪವಾದರೂ ಇಲ್ಲ. ನಿನ್ನಪಾದ ಪದ್ಮೋದ್ಭವೆಯಾದ ಗಂಗೆಯು ಬ್ರಹ್ಮಾದಿದೇವತೆಗಳನ್ನುಸುದಾ ಪಾವನಗೊಳಸುತ್ತಿರುವಳು ಸಾಕ್ಷಾತ್ಪರಮಾತ್ಮನಾದ ನೀನು ನನಗೆ ಪ್ರತ್ಯಕ್ಷನಾದುದರಿಂದ ನನ್ನಂತಹ ಭಾಗ್ಯಶಾಲಿನಿಯರು ಒಬ್ಬರೂ ಇಲ್ಲವೆಂದು ತಿಳಿಯುತ್ತೇನೆ. ಯಾವನ ನಾಭಿಯ ಕಮಲದಲ್ಲಿ ಸೃಷ್ಟಿಕರ್ತನಾದ ಬ್ರಹ್ಮದೇವನು ಉದಿಸಿದನೋ, ಯಾವಾತನ ದಿವ್ಯನಾಮಾಮೃತದಸಾರವನ್ನು ಪರಮೇಶ್ವರನು ಸದಾಕಾಲವೂ ನಾಲಿಗೆಯಿಂದ ಸವಿಯುತ್ತಿರುವನೋ, ಯಾವನದಿವ್ಯಾವತಾರ ಚರಿತೆಗಳನ್ನು ನಾರದಾದಿ ಮಹರ್ಷಿಗಳು ಸತ್ಯಲೋಕದಲ್ಲಿ ಗಾನಮಾಡುತ್ತಿರುವರೋ, ಯಾವ ಲೋಕೇಶ್ವರನ ಮಹಿಮೆಯನ್ನು ಹೊಗಳ ಹೊಗಳ ವಾಗೀಶ್ವರಿಯಾದ ಸರಸ್ವತಿಯು ಆನಂದಪರವಶಳಾಗುತ್ತಿರುವಳೋ ಅಂತಹ ಪರಾತ್ಪರನಾದ ಸ್ವಾಮಿಯೇ, ನಿನಗೆ ಶರಣಾಗತಳಾಗಿದ್ದೇನೆ. ಪುರಾಣಪುರುಷನಾಗಿಯೂ, ಸ್ವಯಂಪ್ರಕಾಶನಾಗಿಯೂ, ಆದ್ಯಂತರಹಿತನಾಗಿಯೂ, ಲೋಕಾನುಗ್ರಹಾರ್ಥವಾಗಿ ಮಾಯಾಶರೀರವನ್ನು ಧರಿಸಿದವನಾಗಿಯೂ ಇರುವ ನಿನಗೆ ನಮಸ್ಕರಿಸುವೆನು. ಓಂಕಾರ ವಾಚ್ಯನಾದ ನೀನು ವಾಚಾಮಗೋಚರನಾಗಿದ್ದರೂ ವಾಚ್ಯವಾಚಕಭೇದದಿಂದ ನೀನೇ ಜಗನ್ಮಯನಾಗಿದ್ದೀಯೆ. ಕಾರ್ಯವೂ ನೀನೇ, ಕಾರಣವೂ ನೀನೇ ಕರ್ತೃವೂನೀನೇ, ಭೋಕ್ತೃವೂನೀನೇ, ನೀನು ಒಬ್ಬನೇಆಗಿದ್ದರೂ ಮಾಯೆಯಿಂದ ಬಹುರೂಪನಾಗಿ ಪ್ರಕಾಶಿಸುತ್ತಲಿರುವೆ. ಲೋಕದ ಜನರು ನಿನ್ನ ಮಾಯೆಯಿಂದ ಮೋಹಿತರಾಗಿ ಮಾಯಿಯಾಗಿ ಪರಮೇಶ್ವರನಾದನಿನ್ನನ್ನು ಮನುಷ್ಯನೆಂದು ಭಾವಿಸುತ್ತಾರೆ. ನೀನು ಆಕಾಶದಂತೆ ಬಹಿರಂತರ್ವ್ಯಾಪ್ತನಾಗಿ ನಿರ್ಮಲನಾಗಿಯೂ, ಅನಂಗನಾಗಿಯೂ, ಅಚಲನಾಗಿಯೂ. ನಿತ್ಯನಾಗಿಯೂ, ಶುದ್ಧನಾಗಿಯೂ, ಬುದ್ಧನಾಗಿಯೂ, ನಾಶವಿಲ್ಲದವನಾಗಿಯೂ ಇರುವೆ. ಮೂಢಳಾದ ನಾನು ನಿನ್ನ ತತ್ವವನ್ನು ಗ್ರಹಿಸಬಲ್ಲೆನೆ? ಅನನ್ಯ ಮನಸ್ಕಳಾಗಿ, ನಿನ್ನನ್ನೇ ಶರಣುಹೊಕ್ಕು ನಿನಗೆ ನೂರು ನಮಸ್ಕಾರಗಳನ್ನು ಮಾತ್ರ ಮಾಡಬಲ್ಲೆನು. ನಾನು ಎಲ್ಲಿದ್ದರೂ ಯಾವಾಗಲೂ ನಿನ್ನ ಪಾದಕಮಲಗಳಲ್ಲಿ ಭಕ್ತಿಯುಕ್ತಳಾಗಿರುವಂತೆ ಅನುಗ್ರಹಿಸು, ಎಲೈ ಭಕ್ತವತ್ಸಲನೇ, ಪತಿಶಾಪದಿಂದ ಕಲ್ಲಾಗಿಬಿದ್ದಿದ್ದ ನನ್ನನ್ನು ಉದ್ಧರಿಸಿ ರಕ್ಷಿಸಿದೆ.

“ನಮಸ್ತೇ ಪುರುಷಾಧ್ಯಕ್ಷ! ನಮಸ್ತೇ ಭಕ್ತವತ್ಸಲ!

ನಮಸ್ತೇಸ್ತು ಹೃಷೀಕೇಶ । ನಾರಾಯಣ ನಮೋಸ್ತು ತೇ ॥”

ಎಂದು ಸ್ತೋತ್ರಮಾಡಿ, ಆತನ ಆಜ್ಞೆ ಪಡೆದು, ತನ್ನ ಆಶ್ರಮಕ್ಕೆ ಹೋಗಿ ಪತಿಸೇವೆ ಮಾಡಿಕೊಂಡಿದ್ದಳು.

ಬಳಿಕ ವಿಶ್ವಾಮಿತ್ರನು ರಾಮಲಕ್ಷ್ಮಣರನ್ನು ಕರೆದುಕೊಂಡು, ಜನಕರಾಯನ ಮಿಥಿಲಾನಗರದ ಮಾರ್ಗವಾಗಿ ಹೋಗುತ್ತಿದ್ದನು. ದಾರಿಯಲ್ಲಿ ಸಿಕ್ಕಿದ ಗಂಗಾನದಿಯನ್ನು ನೋಡಿ, ಆ ಋಷಿಯು ಗಂಗೆಯು ದೇವಲೋಕದಿಂದ ಸಗರವಂಶಸ್ಥನಾದ ಭಗೀರಥನ ಪ್ರಾರ್ಥನೆಯಂತೆ ಭೂಲೋಕಕ್ಕೆ ಬಂದ ಇತಿಹಾಸವನ್ನು ತಿಳಿಸಿ, ಆ ನದಿಯನ್ನು ದಾಟಿ, ಮಿಥಿಲಾಪುರಕ್ಕೆ ಅವರನ್ನು ಕರೆದುಕೊಂಡುಹೋದನು. ಅಲ್ಲಿ ಜನಕರಾಯನು ರಾಮಲಕ್ಷ್ಮಣಸಹಿತನಾದ ವಿಶ್ವಾಮಿತ್ರನನ್ನು ಯಥೋಚಿತವಾಗಿ ಸತ್ಕರಿಸಿ, ಆ ಬಾಲಕರ ಸಾಹಸಕಾರ್ಯಗಳನ್ನು ಕೇಳಿ ಆಶ್ಚರ್ಯಪಟ್ಟು, ತನ್ನ ಮಗಳಾದ ಸೀತಾದೇವಿಯ ಸ್ವಯಂವರಕ್ಕಾಗಿ ನಿರ್ಣಯಿಸಿದ್ದ ಮಹೇಶ್ವರನ ಬಿಲ್ಲನ್ನು ತೋರಿಸಿ, ಇದನ್ನು ಮುರಿದುಹಾಕಿದವರಿಗೆ ಸೀತಾದೇವಿಯನ್ನು ಕೊಟ್ಟು ಮದುವೆಮಾಡುವೆನೆಂಬ ತನ್ನ ಸಂಕಲ್ಪವನ್ನು ತಿಳಿಸಿದನು. ಆಗಲೂ ಶ್ರೀರಾಮನು ಮಹರ್ಷಿಯ ಆಜ್ಞೆಯಿಂದ ಆ ಮಹಾಧನುಸ್ಸನ್ನು ಲೀಲಾಮಾತ್ರದಿಂದ ಮುರಿದುಹಾಕಿದನು. ಸೀತೆಯು ವರಣಮಾಲೆಯನ್ನು ತಂದು ಶ್ರೀರಾಮನ ಕಂಠದಲ್ಲಿಹಾಕಿದಳು. ಬಳಿಕ ವಿವಾಹ ಮಹೋತ್ಸವಕ್ಕಾಗಿ ಅಯೋಧ್ಯೆಯಿಂದ ದಶರಥಾದಿಗಳನ್ನು ಕರೆದುಕೊಂಡು ಬರಲು ಜನಕರಾಜನು ದೂತರನ್ನು ಕಳುಹಿದನು. ಅವರು ತ್ವರೆಯಲ್ಲಿ ಹೋಗಿ ಲಗ್ನಪತ್ರಿಕೆಯನ್ನು ಕೊಟ್ಟು, ದಶರಥನನ್ನು ಪತ್ನೀಪುತ್ರ ಪರಿವಾರಸಮೇತವಾಗಿ ಕರೆದುತಂದರು. ತರುವಾಯ ರಾಮಲಕ್ಷ್ಮಣ ಭರತಶತ್ರುಘ್ನರಿಗೆ ಸೀತೆಮೊದಲಾದ ನಾಲ್ವರು ಕನ್ಯೆಯರನ್ನು ಕೊಟ್ಟು ಸಂಭ್ರಮದಿಂದ ವಿವಾಹಮಹೋತ್ಸವವನ್ನು ಬೆಳೆಸಿದರು.

ಮದುವೆಯಾದಬಳಿಕ ದಶರಥನು ಮಕ್ಕಳನ್ನು ಸೊಸೆಯರನ್ನು ಕರೆದುಕೊಂಡೂ ತನ್ನ ರಾಜಧಾನಿಗೆ ಹಿಂದಿರುಗಿ ಹೊರಟನು. ಮಾರ್ಗದಲ್ಲಿ ಪರಶುರಾಮನು ಶ್ರೀರಾಮನನ್ನು ಅಡ್ಡಗಿಸಿ, ಶಿವಧನುರ್ಭಂಗಮಾಡಿದ ನಿನ್ನ ಸೊಕ್ಕನ್ನು ಈಗಮುರಿಯುವೆನೆಂದು ಹೆದರಿಸಿದನು. ದಶರಥನು ಬಹುಭಯದಿಂದ ದಿಕ್ಕುತೋರದೆ ನೋಡುತ್ತಿದ್ದನು. ಆಗ ಶ್ರೀರಾಮನು ಪರಶುರಾಮನೊಡನೆ ಸಾಹಸದಿಂದ ಕಾದಿ ಅವನಲ್ಲಿದ್ದ ವೈಷ್ಣವ

ಧನುಸ್ಸನ್ನು ಮುರಿದುಹಾಕಿದನು. ಆಗ ಆತನು ಶ್ರೀರಾಮನಿಗೆ ನಮಸ್ಕ ರಿಸಿ ಅವನ ಅಪ್ಪಣೆಪಡೆದು ತಪಸ್ಸುಮಾಡಲಿಕ್ಕೆ ಹೋದನು. ತರುವಾಯ ರಾಮಾದಿಗಳು ಅಲ್ಲಿಂದ ಹೊರಟು ಅಯೋಧ್ಯೆಗೆ ಸುರಕ್ಷಿತವಾಗಿ ಬಂದು ಸೇರಿದರು.

ಶ್ರೀರಾಮನು ಸೀತಾಸಮೇತನಾಗಿ ಅಯೋಧ್ಯಾನಗರದಲ್ಲಿ ಸುಖವಾಗಿದ್ದನು. ಒಂದುದಿನ ದೇವಮುನಿಯಾದ ನಾರದನು ಅಲ್ಲಿಗೆಬಂದು ಏಕಾಂತವಾಗಿ ಶ್ರೀರಾಮನನ್ನು ಕಂಡು, ಆತನ ಸತ್ಕಾರವನ್ನು ಸ್ವೀಕರಿಸಿ ಇಂತೆಂದನು. "ಎಲೈ ಪರಮಾತ್ಮನೇ! ನೀನು ಲೋಕವಿಡಂಬನಾರ್ಥವಾಗಿ ಮನುಷರೂಪವನ್ನು ಧರಿಸಿ ಅವತರಿಸಿರುವೆ. ಜಗತ್ತಿಗೆ ಆದಿಭೂತಳಾದ ಮಾಯೆಯೇ ನಿನ್ನ ಗೃಹಿಣಿಯಾಗಿರುವಳು. ನಿನ್ನ ಸನ್ನಿಕರ್ಷದಿಂದ ಅವಳಲ್ಲಿ ಬ್ರಹ್ಮಾದಿ ಪ್ರಜೆಗಳೆಲ್ಲರೂ ಜನಿಸಿದರು. ನಿನ್ನ ಆಶ್ರಯದಿಂದ ಆ ಮಾಯೆಯು ತ್ರಿಗುಣಾತ್ಮಕಳಾಗಿ ಸಮಸ್ತ ಪ್ರಜೆಗಳನ್ನು ಸೃಷ್ಟಿಸುತ್ತಿರುವಳು. ಲೋಕತ್ರಯವೆಂಬ ದೊಡ್ಡಮನೆಯಲ್ಲಿ ನೀನು ಗೃಹಸ್ಥನಂತೆ ಸರ್ವ ವ್ಯಾಪಾರಗಳನ್ನೂ ನಡಿಸುತ್ತಿರುವೆ. ನೀನೇ ವಿಷ್ಣುವು. ಸೀತೆಯೇ ಲಕ್ಷ್ಮಿಯು, ನೀನೇ ಶಿವನು, ಜಾನಕಿಯೇ ಪಾರ್ವತಿಯು, ನೀನೇಬ್ರಹ್ಮನು, ಸೀತೆಯೇ ಸರಸ್ವತಿಯು, ನೀನೇಸೂರ್ಯನು, ಸೀತೆಯೇ ಪ್ರಭೆಯು, ನೀನು ಇಂದ್ರನು, ಜಾನಕಿಯು ಶಚೀದೇವಿಯು. ಹೀಗೆಯೇ ಲೋಕದಲ್ಲಿ ಸ್ತ್ರೀವಾಚಕಗಳಾದ ಶಬ್ದಗಳೆಲ್ಲವೂ ಜಾನಕಿಯ ಅಂಶಗಳು, ಪುರುಷವಾಚಕಗಳಾದುವೆಲ್ಲಾ ನಿನ್ನ ಅಂಶಗಳು ಸಮಸ್ತಲೋಕಗಳಲ್ಲಿಯೂ ನಿಮ್ಮನ್ನುಳಿದು ಮತ್ತೆ ಯಾವುವೂ ಇಲ್ಲ. ಅಹಂಕಾರವೂ, ಬುದ್ಧಿಯೂ, ಪಂಚಪ್ರಾಣಗಳೂ, ದಶೇಂದ್ರಿಯಗಳೂ ಲಿಂಗವೆಂದು ಹೇಳಲ್ಪಡುತ್ತವೆ. ಅದೇ ಜೀವವೆಂಬ ಸಂಜ್ಞೆಯಿಂದ ಲೋಕದಲ್ಲಿ ಪ್ರಕಾಶಿಸುತ್ತಿರುವುದು. ಅನಾದಿಯಾದ ಅವಿದ್ಯೆಯೇ ಕಾರಣೋಪಾಧಿ ಎಂದು ಹೇಳಲ್ಪಡುವುದು. ಸ್ಥೂಲ. ಸೂಕ್ಷ್ಮ, ಕಾರಣವೆಂಬ ಮೂರುಬಗೆಯ ಶರೀರಗಳೂ ಉಪಾಧಿಗಳಾಗಿರುವುವು. ಜೀವನು ಇವುಗಳಲ್ಲಿಕೂಡಿ ವ್ಯಾಪಾರಗಳನ್ನು ನಡಿಸುತ್ತಿರುವನು. ಇವನಿಗೆ ಜಾಗ್ರತೆ, ಸ್ವಪ್ನ, ಸುಷುಪ್ತಿಯೆಂಬ ಮೂರುಬಗೆಯ ಅವಸ್ಥೆಗಳಿರುವುವು. ನೀನು ಇವುಗಳಿಗೆ ವಿಲಕ್ಷಣನಾಗಿಯೂ ಸಾಕ್ಷಿಯಾಗಿಯೂ ಇರುವೆ. ನಿನ್ನಿಂದಲೇ ಈ ಜಗತ್ತುಗಳೆಲ್ಲಾ ಹುಟ್ಟುವುವು. ನಿನ್ನಲ್ಲಿಯೇ ಲಯವಾಗುವುವು. ನಿನ್ನ

ಹೊರತು ಮತ್ತಾವಕಾರಣವೂ ಇಲ್ಲ. ಹಗ್ಗವನ್ನು ಹಾವೆಂದು ಭ್ರಾಂತಿಯಿಂದ ಜೀವನನ್ನುನೋಡಿ ಭಯವಾಗುವುದು. ನಾನೇ ಪರಮಾತ್ಮನೆಂಬ ಜ್ಞಾನವುಂಟಾದರೆ ಭಯದುಃಖಗಳು ನಿವಾರಣೆಯಾಗುವುವು. ನಿನ್ನಪಾದಗಳಲ್ಲಿ ಭಕ್ತಿಯುಳ್ಳವರಿಗೆ ಅಜ್ಞಾನವು ನಾಶವಾಗಿ ಸುಖವುಂಟಾಗುವುದು. ನಾನು ನಿನ್ನ ಭಕ್ತರ ಕಿಂಕರರ ಕಿಂಕರನಾಗಿದ್ದೇನೆ. ಮಾಯೆಯಿಂದ ಮೋಹಗೊಳಿಸದೆ ನನ್ನನ್ನು ಸಂರಕ್ಷಿಸು. ನಿನ್ನ ಆಜ್ಞೆಯಿಂದ ಲೋಕಸೃಷ್ಟಿಮಾಡುತ್ತಿರುವ ಬ್ರಹ್ಮನು ನನ್ನಮೂಲಕ ಒಂದು ಸಂದೇಶವನ್ನು ಕಳುಹಿರುವನು. ಕೇಳು ಎಲೈ ಪರಮಾತ್ಮನೇ ನೀನು ರಾವಣನನ್ನು ವಧಿಸುವದಕ್ಕೋಸ್ಕರ ಅವತರಿಸಿದ್ದೀಯೆ, ಈಗ ನಿನಗೆ ರಾಜ್ಯದ ಅಭಿಷೇಕಮಾಡಬೇಕೆಂದು ದಶರಥನು ಯತ್ನಿಸುವನು. ನೀನು ಪಟ್ಟಾಭಿಷಿಕ್ತನಾಗಿ ರಾಜ್ಯದಲ್ಲಿಕುಳಿತಿರೆ ನಿನ್ನ ಸಂಕಲ್ಪಕ್ಕೆ ಭಂಗಬರುವುದು. ಭೂಭಾರ ಹರಣವೇ ನಿನ್ನ ಮುಖ್ಯಕಾರ್ಯವಾಗಿರುವದರಿಂದ ಅದನ್ನು ನೆರವೇರಿಸಿ ಸತ್ಯಪ್ರತಿಜ್ಞನಾಗು.

ಈಪ್ರಕಾರ ಹೇಳಿದ ನಾರದನ ಮಾತುಗಳನ್ನುಕೇಳಿ ಶ್ರೀರಾಮನು “ಎಲೈ ದೇವಮುನಿಯೇ, ನೀನು ಹೇಳಿದ ವಿಷಯಗಳೆಲ್ಲಾ ನನಗೆ ತಿಳಿದೇಇವೆ. ನನ್ನ ಪ್ರತಿಜ್ಞೆಯಂತೆ ಕಾರ್ಯವನ್ನು ನೆರವೇರಿಸುವೆನು. ಆದರೆ ಯಾವುದಕ್ಕೂ ಕಾಲವನ್ನೇ ಕಾರಣವಾಗಿ ಮಾಡಿರುವದರಿಂದ ಅದನ್ನೇ ನಿರೀಕ್ಷಿಸಿಕೊಂಡಿರುವೆನು. ಅಸುರರ ಪ್ರಾರಬ್ಧ ಕರ್ಮದಂತೆ ತಕ್ಕಕಾಲವಲ್ಲಿ ಅವರನ್ನು ಸಂಹರಿಸುವೆನು. ರಾವಣನ ವಿನಾಶಕ್ಕೋಸ್ಕರ ನಾಳೆಯೇ ದಂಡಕಾರಣ್ಯಕ್ಕೆ ಹೊರಡುವೆನು. ಮುನಿವೇಷಧರನಾಗಿ ಹದಿನಾಲ್ಕು ವರುಷ ವನವಾಸಮಾಡಿ ಸೀತಾದೇವಿಯ ನೆವದಿಂದ ಸಮಸ್ತ ದುಷ್ಟರಾಕ್ಷಸರನ್ನೂ ನಾಶಮಾಡಿಬರುವೆನು. ಸಂಶಯಪಡಬೇಡ” ಎಂದು ಹೇಳಿ ಆ ಮುನಿಯನ್ನು ಕಳುಹಿದನು.

ಆದಿನವೇ ದಶರಥನು ವಸಿಷ್ಠನನ್ನುನೋಡಿ “ಗುರುಗಳೇ ನಾನು ಮುದುಕನಾದೆನು. ನನ್ನ ಮೋಹದಕಂದನಾದ ಶ್ರೀರಾಮನಿಗೆ ರಾಜ್ಯಾಭಿಷೇಕಮಾಡಿ ನಾನು ವಿಶ್ರಾಂತಿಪಡೆಯಬೇಕೆಂದಿರುವೆನು. ನಾಳೆಯೇ ಅವನಿಗೆ ಪಟ್ಟಾಭಿಷೇಕವನ್ನುಮಾಡಲು ತಕ್ಕಪ್ರಯತ್ನನಡಿಸಿರಿ” ಎಂದು ಹೇಳಲು, ಆ ಮಹರ್ಷಿಯು ರಾಜನ ಇಷ್ಟದಂತೆ ಸಕಲಸನ್ನಾಹಗಳನ್ನೂ ಮಾಡಿಸಿದನು. ತಕ್ಕ ಏರ್ಪಾಡುಗಳೆಲ್ಲ ಆದುವು. ಎಲ್ಲೆಲ್ಲಿನೋಡಿದರೂ

ಸಂಭ್ರಮದಿಂದ ಪಟ್ಟಣದ ಅಲಂಕಾರ ನಡೆಯುತ್ತಿದ್ದಿತು. ವಸಿಷ್ಠನು ಶ್ರೀರಾಮನ ಅರಮನೆಗೆಬಂದು, ಅವನಿಂದ ಸತ್ಕೃತನಾಗಿ ರಾಜನ ಅಭಿಪ್ರಾಯವನ್ನು ತಿಳಿಸಿ ಇಂತೆಂದನು. "ಎಲೈ ರಾಮಚಂದ್ರನೇ, ನಿನ್ನ ಕಪಟನಾಟಕಗಳನ್ನು ನನ್ನಲ್ಲಿ ತೋರಿಸಬೇಡ. ನನ್ನ ತಂದೆಯಾದ ಬ್ರಹ್ಮನು ನಿನ್ನ ಪಾದತೀರ್ಥದ ಮಹಿಮೆಯಿಂದ ಜಗತ್ಸೃಷ್ಟಿಕಾರ್ಯವನ್ನು ಮಾಡುತ್ತಿರುವನು. ನಿನ್ನ ಪಾದ ಸಲಿಲವನ್ನು ಶಿರಸ್ಸಿನಲ್ಲಿ ಧರಿಸಿ ಪರಮೇಶ್ವರನು ಧನ್ಯನಾದನು. ಪರಾತ್ಪರನಾದ ನೀನು ದೇವಕಾರ್ಯಾರ್ಥವಾಗಿ ಮಾಯಾರೂಪಿಣಿಯಾದ ಲಕ್ಷ್ಮಿಯೊಂದಿಗೆ ಈಲೋಕದಲ್ಲಿ ಅವತರಿಸಿರುವೆ. ದುಷ್ಟರಾದ ರಾವಣಾದಿ ರಾಕ್ಷಸರನ್ನು ವಧಿಸಿ ಭಕ್ತರನ್ನುದ್ಧರಿಸುವುದೇ ನಿನ್ನ ಸಂಕಲ್ಪವಾಗಿದೆ. ಆದರೂ ಈ ರಹಸ್ಯವನ್ನು ನಾನು ಹೊರಪಡಿಸಲೊಲ್ಲೆನು. ನೀನು ಮಾಯೆಯಿಂದ ಸರ್ವ ಕಾರ್ಯಗಳನ್ನೂ ಹೇಗೆ ನಿರ್ವಹಿಸುವೆಯೋ ಹಾಗೆ ನಿನ್ನ ಸಹಾಯಕನಾಗಿ ನಾನು ನೆರವೇರಿಸುವೆನು. ಇಲ್ಲಿ ನಿನಗೆ ನಾನು ಗುರುವಾಗಿದ್ದರೂ ನನಗೆ ನೀನೇ ಗುರುವೆಂತಲೂ ನಾನು ಶಿಷ್ಯನೆಂತಲೂ ತಿಳಿದಿದ್ದೇನೆ. ಸರ್ವಲೋಕಮೋಹಿನಿಯಾದ ಮಾಯೆಯು ನಿನ್ನ ಸ್ವಾಧೀನದಲ್ಲಿರುವಳು. ರಾಜನಿಂದ ಪ್ರೇಷಿತನಾಗಿ ನಾನಿಲ್ಲಿಗೆ ಬಂದಿರುವೆನು. ನಾಳೆ ನಿನಗೆ ರಾಜ್ಯಾಭಿಷೇಕ ಮಾಡಬೇಕೆಂದು ಆತನು ಯತ್ನಿಸಿರುವುದರಿಂದ ಸಕಲ ಸನ್ನಾಹಗಳೂ ನಡೆದಿವೆ. ನೀನು ಲೋಕದೃಷ್ಟಿಯಿಂದ ಇತರರಿಗೆ ನಿನ್ನ ಗುಟ್ಟು ರಟ್ಟಾಗದಂತೆ ಸೀತೆಯೊಂದಿಗೆ ಈದಿನ ಉಪವಾಸಮಾಡು. ಶುಚಿಯಾಗಿ ಭೂಮಿಯಮೇಲೆ ಮಲಗಿ ಜಿತೇಂದ್ರಿಯನಾಗಿ ನಿಯಮದಿಂದ ಇರು. ರಾಜನಬಳಿಗೆ ಹೋಗಿ ಇದನ್ನು ತಿಳಿಸಿ, ನಾಳೆ ಬರುವೆನು." ಎಂದು ಹೇಳಿ ವಸಿಷ್ಠನು ಹೊರಟುಹೋದನು.

ಬಳಿಕ ರಾಮನು ಲಕ್ಷ್ಮಣನನ್ನು ನೋಡಿ ನಗುತ್ತಾ "ತಮ್ಮಾ! ನಾಳೆಯದಿನ ತಂದೆಯು ನನಗೆ ರಾಜ್ಯಾಭಿಷೇಕ ಮಾಡುವನಂತೆ! ನಾನು ನಿಮಿತ್ತ ಮಾತ್ರವೇ ಹೊರತು ಕರ್ತೃವೂ ಭೋಕ್ತೃವೂ ನೀನೇ ಆಗಿದ್ದೀಯೆ. ನೀನು ನನ್ನ ಬಹಿಃಪ್ರಾಣವಾಗಿರುವುದರಿಂದ ನನ್ನ ಸಂಕಲ್ಪಾನುಸಾರವಾಗಿ ನಡೆಯುತ್ತಿರು" ಎಂದನು. ಅಷ್ಟರಲ್ಲಿ ದೇವತೆಗಳು ಸರಸ್ವತಿಯನ್ನು ನೋಡಿ "ದೇವೀ, ಕಾರ್ಯವು ಮಿಂಚಿಹೋಗುವುದು. ಶ್ರೀರಾಮನು ಪಟ್ಟಾಭಿಷಿಕ್ತನಾದರೆ ರಾವಣವಧೆಗೆ ಅವಕಾಶ ತಪ್ಪು

ವುದು. ನೀನು ಈಗಲೇ ಹೋಗಿ ಮಂದರೆಯ ವಾಣಿಯಲ್ಲಿ ನಲಸಿ, ಅಭಿಷೇಕಕ್ಕೆ ವಿಘ್ನಮಾಡೆಂದು ಕೈಕಯೆಗೆ ಬೋಧಿಸು. ಅವಳು ದಶರಥನನ್ನು ಪ್ರಾರ್ಥಿಸಿ, ರಾಮನನ್ನು ಕಾಡಿಗೆ ಕಳುಹುವಂತೆ ಮಾಡಿದ ಮೇಲೆ ಹಿಂದಿರುಗಿ ನೀನು ಇಲ್ಲಿಗೆ ಬರತಕ್ಕದು. " ಎಂದು ಹೇಳಲು ಆ ಶಾರದೆಯು ದೇವತಾವಾಕ್ಯವನ್ನು ಮನ್ನಿಸಿ. ಅವರಂತೆ ಎಲ್ಲವನ್ನು ನೆರವೇರಿಸಿದಳು.

ವಿಕಾರರೂಪವುಳ್ಳ ಮಂಥರೆಯು ತನ್ನೊಡತಿಯಾದ ಕೈಕಯಿಯ ಬಳಿಗೆ ಹೋಗಿ. " ರಾಮನು ದೊರೆಯಾದರೆ ಭರತನಿಗೆ ರಾಜ್ಯವು ತಪ್ಪಿ ಹೋಗುವುದು. ಈ ವೇಳೆಯಲ್ಲಿ ದಶರಥನು ಕೊಟ್ಟಿದ್ದ ವರಗಳನ್ನು ಬೇಡಿ, ರಾಮನನ್ನು ವನಕ್ಕೆ ಕಳುಹಿಸಿ, ನಿನ್ನ ಮಗನಿಗೆ ಪಟ್ಟ ಕಟ್ಟುವಂತೆ ಕೇಳಿಕೋ " ಎಂದು ಬೋಧಿಸಿದಳು. ಕೈಕಯೆಯು ರಾಮನಲ್ಲಿ ಪ್ರೀತಿಯುಳ್ಳವಳಾಗಿದ್ದರೂ, ದೇವಮಾಯೆಯಿಂದ ಮೋಹಿತಳಾಗಿ, ಶೋಕ ಗೃಹಕ್ಕೆ ಹೋಗಿ ಮಲಗಿಬಿಟ್ಟಳು. ದಶರಥನು ಅಲ್ಲಿಗೆ ಬಂದು ಎಷ್ಟು ವಿಧವಾಗಿ ಪ್ರಾರ್ಥಿಸಿದರೂ ಅವಳು ಪ್ರಸನ್ನಳಾಗಲಿಲ್ಲ. ಕೊನೆಗೆ ಪೂರ್ವದಲ್ಲಿ ತನಗೆ ಕೊಡುವುದಾಗಿ ವಾಗ್ದಾನಮಾಡಿದ್ದ ಎರಡು ವರಗಳನ್ನು ಕೊಡದಿದ್ದರೆ ಈಗಲೇ ಪ್ರಾಣಗಳನ್ನು ತೊರೆದುಕೊಳ್ಳುವೆನೆಂದು ಚಂಡಿಹಿಡಿಯಲು, ದಶರಥನು ತಪ್ಪದೆ ಅವುಗಳನ್ನು ಸಲ್ಲಿಸುವೆನೆಂದು ಶ್ರೀರಾಮನ ಮೇಲೆ ಆಣೆ ಇಟ್ಟು, ವರಗಳನ್ನು ಬೇಡೆಂದನು. ರಾಮನನ್ನು ಹದಿನಾಲ್ಕು ವರುಷಗಳು ಕಾಡಿಗೆ ಕಳುಹಿಸಿಬಿಡುವುದೊಂದು, ನನ್ನ ಮಗ ಭರತನಿಗೆ ರಾಜ್ಯದ ಪಟ್ಟಕಟ್ಟುವುದೊಂದು. ಇವೇ ನನ್ನ ವರಗಳೆಂದು ಹೇಳಿಬಿಟ್ಟಳು. ಇದನ್ನು ಕೇಳಿದಕೂಡಲೇ ದಶರಥನಿಗೆ ಬಹು ಕ್ಲೇಶವುಂಟಾಯಿತು. ಮೋಹದ ಮಗನನ್ನಗಲಿ ಬದುಕುವುದು ಹೇಗೆ ? ನಿರಪರಾಧಿಯಾದ ರಾಮನನ್ನು ಯಾವ ನೆವದಿಂದ ಕಾಡಿಗೆ ಅಟ್ಟಬೇಕು ? ಜ್ಯೇಷ್ಠ ಪುತ್ರನನ್ನು ಬಿಟ್ಟು ಕನಿಷ್ಠನಿಗೆ ರಾಜ್ಯ ಕೊಡುವುದು ಹೇಗೆ ? ಸತ್ಯಭ್ರಷ್ಟನಾದರೆ ಲೋಕಾಪವಾದವನ್ನು ಸಹಿಸಬಹುದೆ ? " ಎಂಬ ಯೋಚನೆಗಳು ಹುಟ್ಟಿ ಮನಸ್ಸನ್ನು ತುಂಬ ಕಳವಳಗೊಳಿಸಿದುವು. ಕೈಕಯೆಗೆ ಎಷ್ಟೆಷ್ಟೋ ಸಮಾಧಾನ ಹೇಳಿದನು, ಅವಳು ತನ್ನ ಸಂಕಲ್ಪವನ್ನು ಬಿಡಲೊಲ್ಲದೆ ಹೋದಳು. ಅಷ್ಟರಲ್ಲಿ ರಾತ್ರಿಕಳೆದು ಬೆಳಗಾಯಿತು. ಸುಮಂತ್ರನು ರಾಜದರ್ಶ

ಸಕ್ಕೆ ಬಂದನು. ಕೈಕಯೆಯು ಶ್ರೀರಾಮನನ್ನು ಕರೆದುಕೊಂಡು ಬಾರೆಂದು ನಿಯಮಿಸಿದಳು. ಅವನು ಕೂಡಲೇ ಹೋಗಿ, ರಾಜಕುಮಾರ ನನ್ನು ಕರೆದುತಂದನು. ರಾಮನು ತಂದೆಯ ಅವಸ್ಥೆಯನ್ನು ಕಂಡು ಗಾಬರಿಯಾದನು. ನಡೆದವಿಷಯವೆಲ್ಲಾ ಬಲತಾಯಿಯಿಂದ ತಿಳಿಯಿತು. ಆಗ ಶ್ರೀರಾಮನು ಸ್ಥಿರಚಿತ್ತನಾಗಿ "ತಾಯಿ! ಇದಕ್ಕೆ ಚಿಂತಿಸುವದೇ ತಕ್ಕ? ತಂದೆಯ ಆಜ್ಞೆಯನ್ನು ಪಾಲಿಸಲಿಕ್ಕೆ ಸಿದ್ಧನಾಗಿದ್ದೇನೆ" ಎಂದು ಹೇಳಿ ತಂದೆಗೆ ನಮಸ್ಕರಿಸಿ, "ಜೀಯಾ! ನೀನು ಸತ್ಯಚ್ಯುತನಾಗಬೇಡ. ತಾಯಿಯ ಇಷ್ಟದಂತೆ ನಾನು ಈದಿನವೇ ಅರಣ್ಯವಾಸಕ್ಕೆ ಹೊರಡುವೆನು. ತಮ್ಮನಾದ ಭರತನಿಗೆ ಪಟ್ಟವನ್ನು ಕಟ್ಟು." ಎಂದು ಹೇಳಿ ಆತನ ಅನುಮತಿಪಡೆದು ತನ್ನ ತಾಯಿಯ ಅರಮನೆಗೆ ಬಂದನು. ಆವೇಳೆಯಲ್ಲಿ ಕೌಸಲ್ಯೆಯು ದೇವರನ್ನು ಆರಾಧಿಸಿ, ರಾಮನ ಮಂಗಳಕ್ಕೋಸ್ಕರ ಬ್ರಾಹ್ಮಣರಿಗೆ ಬಹಳವಾಗಿ ಧನವನ್ನು ದಾನಮಾಡಿ, ಪರಾತ್ಪರನಾದ ವಿಷ್ಣುವನ್ನು ಧ್ಯಾನಮಾಡುತ್ತಿದ್ದುದರಿಂದ ಅವಳು ಶ್ರೀರಾಮನು ತನ್ನಮನೆಗೆ ಬಂದುದನ್ನು ನೋಡಲೇಇಲ್ಲ. ಆಗ ಸುಮಿತ್ರೆಯು ಕೌಸಲ್ಯೆಯನ್ನು ನೋಡಿ, "ಅಕ್ಕಾ! ಶ್ರೀರಾಮನು ಬಂದಿರುವನು ನೋಡು" ಎಂದು ಬೋಧಿಸಿದಳು. ಕೂಡಲೇ ಆ ದೇವಿಯು ಬಹಿರ್ಮುಖಳಾಗಿ ವಿಶಾಲಾಕ್ಷನಾದ ಶ್ರೀರಾಮಚಂದ್ರನನ್ನು ನೋಡಿ, ಆಲಿಂಗಿಸಿಕೊಂಡು ತನ್ನ ತೊಡೆಯ ಮೇಲೆ ಕುಳ್ಳಿರಿಸಿಕೊಂಡು ಆನಂದಭಾಷ್ಪಗಳನ್ನು ಸುರಿಸುತ್ತಾ, ತಲೆಯನ್ನು ಆಘ್ರಾಣಿಸಿ, "ಮಗುವೇ! ಹಸಿದುಬಂದಿರುವೆ! ಊಟಮಾಡಲಿಕ್ಕೆ ಏಳು" ಎಂದಳು. ಅದಕ್ಕೆ ಶ್ರೀರಾಮನು "ಅಮ್ಮಾ! ನನಗೆ ಈಗ ಹಸಿವಿಗೆ ಹೊತ್ತಿಲ್ಲ. ತಂದೆಯ ಆಜ್ಞೆಯಿಂದ ಈಗಲೇ ನಾನು ದಂಡಕಾರಣ್ಯಕ್ಕೆ ಹೊರಡಬೇಕಾಗಿದೆ. ಅಲ್ಲಿ ಮುನಿವೇಷಧರನಾಗಿ ಹದಿನಾಲ್ಕು ವರುಷಗಳು ವಾಸಮಾಡಿಕೊಂಡಿದ್ದು ಮರಳಿ ಇಲ್ಲಿಗೆ ಬಂದು ಸೇರುವೆನು. ಚಿಂತಿಸಬೇಡ" ಎಂದನು.

ಕೌಸಲ್ಯೆಯು ರಾಮನ ಮಾತುಗಳನ್ನುಕೇಳಿ ಬಹಳವಾಗಿ ದುಃಖಿಸಿ, ಮೂರ್ಛಿತಳಾಗಿ, ಪುನಃ ಎಚ್ಚತ್ತು, ಮಗನನ್ನು ನೋಡಿ, ಶ್ರೀರಾಮಾ? ನನ್ನನ್ನುಬಿಟ್ಟು ಹೊರಡುವೆಯಾ! ದಶರಥನಿಗಾಗಲಿ, ಕೈಕಯೆಗಾಗಲಿ ನೀನು ಯಾವ ದ್ರೋಹಮಾಡಿದೆ? ನಿಮ್ಮ ತಂದೆಗೆ ಭರತನಲ್ಲಿ ಪ್ರೀತಿ ಇದ್ದರೆ ಅವನಿಗೆ ರಾಜ್ಯವನ್ನು ಕೊಟ್ಟುಕೊಳ್ಳಲಿ, ನಿನ್ನನ್ನೇಕೆ ಕಾಡಿಗೆ

ಕಳುಹಬೇಕು? ನನ್ನನ್ನು ಬಿಟ್ಟುಹೋದರೆ ನಾನಿಲ್ಲಿಯೇ ಪ್ರಾಣಗಳನ್ನು ಬಿಡುವೆನು'' ಎಂದಳು. ಆಗ ಲಕ್ಷ್ಮಣನು ಕೌಸಲ್ಯೆಯ ಮಾತನ್ನು ಕೇಳಿ ಅತ್ಯಾಗ್ರಹದಿಂದ ರಾಮನನ್ನುನೋಡಿ ‹‹ ಅಣ್ಣಾ; ನೀನು ಏಕೆ ಚಿಂತಿಸುವೆ? ಮೊದಲು ಏರ್ಪಾಡಾಗಿದ್ದಂತೆ ಈಗಲೇ ಪಟ್ಟಾಭಿಷೇಕಮಾಡಿಕೋ. ಇದಕ್ಕೆ ಅಡ್ಡಿಮಾಡುವವರನ್ನೆಲ್ಲಾ ನಾನು ತೀರಿಸಿಬಿಡುವೆನು.'' ಎಂದು ಹೇಳಿದನು. ಆಗ ಶ್ರೀರಾಮನು ತಮ್ಮನನ್ನು ಬಾಚಿತಬ್ಬಿಕೊಂಡು ಇಂತೆಂದನು.

ಎಲೈ ರಘುಶ್ರೇಷ್ಠನೇ! ನೀನು ಶೂರನೂ ಪಂಡಿತನೂ ಗುಣಜ್ಞನೂಆಗಿದ್ದೀಯೆ. ಸತ್ಯವನ್ನುಹೇಳುವೆನುಕೇಳು. ರಾಜ್ಯವೂ, ದೇಹವೂ, ದ್ರವ್ಯವು ಮುಂತಾದ ದೃಶ್ಯ ಪದಾರ್ಥಗಳೆಲ್ಲವೂ ಸತ್ಯವೇಆಗಿದ್ದರೆ ನಿನ್ನ ಆಯಾಸವು ಸಫಲವಾಗುವುದು. ಭೋಗಗಳು ಮೇಘಮಾಲೆಯಲ್ಲಿ ಥಳಾರನೆಹೊಳೆದು ಅಡಗುವ ಮಿಂಚಿನಂತೆ ಚಂಚಲವಾದುವು. ಆಯುಷ್ಯವಾದರೋ ಬೆಂಕಿಯಲ್ಲಿ ಕಾದು ಕೆಂಪಗಾದ ಲೋಹದಮೇಲೆಬಿದ್ದ ನೀರಿನ ಬಿಂದುವಿನಂತೆ ಅಸ್ಥಿರವು. ಹಾವಿನಕತ್ತಿಗೆ ಸಿಕ್ಕಿದ ಕಪ್ಪೆಯು ನೊಣಗಳನ್ನು ತನ್ನ ಆ ಹಾರಕ್ಕಾಗಿ ಬಯಸುವಂತೆ ಕಾಲಸರ್ಪನಿಂದ ಗ್ರಸ್ತವಾದ ಈಲೋಕವು ಅಶಾಶ್ವತಗಳಾದ ಭೋಗಗಳನ್ನು ಬಯಸುತ್ತಿರುವುದು. ಮನುಷ್ಯನು ಶರೀರಸುಖಕ್ಕಾಗಿ ಹಗಲೂ ರಾತ್ರಿಯೂ ಕರ್ಮಗಳನ್ನು ಮಾಡುತ್ತಲೇ ಇರುವನು. ದೇಹವು ಪುರುಷನಿಗಿಂತ ಭಿನ್ನವಾಗಿದೆ. ಪ್ರಾಜ್ಞನಾದ ಯಾವನು ತಾನೇ ಅಶಾಶ್ವತವಾದ ವಿಷಯಸುಖಗಳನ್ನಪೇಕ್ಷಿಸಿ ಸತ್ಯವನ್ನು ಕಳೆದುಕೊಳ್ಳುವನು? ತಂದೆ, ತಾಯಿ, ಮಕ್ಕಳು, ಒಡಹುಟ್ಟಿದವರು, ಹೆಂಡಿರು, ಬಂಧುಗಳು, ಮೊದಲಾದವರಸಂಗಮವು ಬೇಸಿಗೆಯಲ್ಲಿ ಅರವಟ್ಟಿಗೆಗೆ ಬಂದು ಸೇರುವ ಜಂತುಗಳಂತೆಯೂ ನದೀಪ್ರವಾಹದಲ್ಲಿ ಕೊಚ್ಚಿಕೊಂಡುಹೋಗುವ ಸೌದೆಯಕಡ್ಡಿಗಳಂತೆಯೂ ಚಂಚಲವಾದುದು. ಐಶ್ವರ್ಯ ದೇವತೆಯಾದಲಕ್ಷ್ಮಿಯು ನೆರಳಿನಂತೆ ಚಪಲಳೆಂದು ಪ್ರಸಿದ್ಧವಾಗಿಯೇ ಇದೆ. ಯೌವನನಾದರೋ ನೀರಿನ ಅಲೆಗಳಂತೆ ಅಧ್ರುವವಾದುದು. ಸ್ತ್ರೀಸುಖವು ಸ್ವಪ್ನಕ್ಕೆಸಮಾನವು. ಆಯುಸ್ಸು ಅಲ್ಪವು ಆದರೂ ಪ್ರಾಣಿಗಳಿಗೆ ನಾನು ನನ್ನದು ಎಂಬ ಅಭಿಮಾನಗಳು ತೊಲಗುವುದಿಲ್ಲ. ಗಂಧರ್ವನಗರಕ್ಕೆ ಸಮಾನವಾದ ಈ ಸಂಸಾರವನ್ನು ನಂಬಿ ಮೂಢರು ಕೆಟ್ಟುಹೋಗುತ್ತಿರುವರು. ಸೂರ್ಯನ ಗತಿಯು ಮಾನದಿಂದ

ಆಯುಷ್ಯವು ಕ್ಷೀಣವಾಗಿ ಹೋಗುತ್ತಿರುವುದು. ನಿತ್ಯವೂ ಇತರರ ಜರಾಮರಣಗಳನ್ನು ನೋಡುತ್ತಿದ್ದರೂ ನಾಳೆ ತನಗೂ ಹೀಗೆಯೇ ಸಂಭವಿಸುವುದೆಂಬ ಬುದ್ಧಿಯು ಮನುಷ್ಯನಿಗೆ ಹುಟ್ಟುವುದಿಲ್ಲ. ಭೋಗಗಳಲ್ಲಿ ಬಿದ್ದು ಸಾಯುವನೇ ಹೊರತು ಕಾಲದ ವೇಗವನ್ನು ಕಾಣಲಾರನು ಘಟದನೀರಿನಂತೆ ಪ್ರತಿಕ್ಷಣದಲ್ಲಿಯೂ ಆಯುಸ್ಸು ಕ್ಷಯವಾಗುತ್ತಿರುವುದು. ರೋಗಸಮೂಹವು ಶತ್ರುಗಳಂತೆ ಶರೀರವನ್ನು ಪ್ರಹರಿಸುತ್ತಿರುವುದು. ಜರೆಯು ದುಷ್ಟವ್ಯಾಘ್ರಿಯಂತೆ ಭಯಂಕರಾಕಾರದಿಂದ ಎದುರಿಗೆ ನಿಂತಿರುವುದು. ಮೃತ್ಯುವು ಸಮಯವನ್ನು ನಿರೀಕ್ಷಿಸುತ್ತಾ ಆಯುಸ್ಸನ್ನು ಗಣನೆಮಾಡುತ್ತಿರುವುದು. ಕ್ರಿಮಿಕೀಟಗಳಿಂದ ತುಂಬಿದ ಈ ದೇಹವು ನನ್ನದು, ಇದಕ್ಕೆ ನಾನು ರಾಜನೆಂದು ಜೀವಿಯು ಅಹಂಭಾವದಿಂದ ವಿಪತ್ತನ್ನು ಹೊಂದುವನು. ಚರ್ಮ, ಮೂಳೆ, ಮಾಂಸ, ಮಲ, ಮೂತ್ರ ರೇತಸ್ಸು, ರಕ್ತ ಇವುಗಳಿಂದ ಕೂಡಿ ವಿಕಾರಿಯಾಗಿಯೂ ಪರಿಣಾಮಿಯಾಗಿಯೂ ಇರುವ ದೇಹವು ಹೇಗೆ ಆತ್ಮನಾದೀತು? ಎಲೈ ಲಕ್ಷ್ಮಣನೇ, ನೀನು ಯಾವುದನ್ನು ಹಿಡಿದು, ಲೋಕಗಳನ್ನೆಲ್ಲಾ ಭಸ್ಮಮಾಡುವೆನೆಂದು ಅಪೇಕ್ಷಿಸುವೆಯೋ ಅಂತಹ ಅಭಿಮಾನವೆಲ್ಲಾ ದೋಷಗಳಾಗಿ ಪರಿಣಮಿಸುವುವು. ಈ ದೇಹವೇ ನಾನು ಎಂದು ತಿಳಿಯುವ ಬುದ್ಧಿಯೇ ಅವಿದ್ಯೆಯೆನಿಸಿಕೊಳ್ಳುವುದು, ನಾನು ದೇಹವಲ್ಲ, ಚಿದಾತ್ಮನೆಂದು ತಿಳಿಯುವ ಬುದ್ಧಿಗೆ ವಿದ್ಯೆಯೆಂದು ಹೆಸರು ಅವಿದ್ಯೆಯು ಸಂಸಾರಕ್ಕೆ ಕಾರಣವು. ವಿದ್ಯೆಯು ಅದರ ನಿವೃತ್ತಿಮಾರ್ಗವು. ಆದುದರಿಂದ ಮುಮುಕ್ಷುವಾದವನು ವಿದ್ಯಾಭ್ಯಾಸಕ್ಕೆ ಯತ್ನಿಸಬೇಕು. ಕಾಮಕ್ರೋಧಾದಿ ಅರಿಷಡ್ವರ್ಗಗಳು ಜೀವನಿಗೆ ಶತ್ರುಗಳಾಗಿವೆ. ತತ್ರಾಪಿ ಕ್ರೋಧವೆಂಬುದೊಂದೇ ಮೋಕ್ಷವಿಘ್ನಕ್ಕೆ ಸಾಕಾಗಿದೆ. ಈ ಕ್ರೋಧದಿಂದ ಆವಿಷ್ಟನಾದ ಪುರುಷನು ತಂದೆಯನ್ನಾಗಲಿ ಒಡಹುಟ್ಟಿದವನನ್ನಾಗಲಿ ಸ್ನೇಹಿತನನ್ನಾಗಲಿ ಕೊಂದುಹಾಕುವನು. ಕ್ರೋಧದಿಂದ ಮನಸ್ತಾಪವು ಹುಟ್ಟುವುದು. ಕ್ರೋಧದಿಂದ ಸಂಸಾರ ಬಂಧನ ಬರುವುದು. ಕ್ರೋಧವು ಧರ್ಮವನ್ನು ಕ್ಷೀಣಮಾಡುವುದು. ಈ ಕ್ರೋಧವೆಂಬುದು ಮಹಾಶತ್ರುವು. ಆಶೆಯೆಂಬುದು ವೈತರಣೀನದಿಯು. ಸಂತೋಷವು ನಂದನವನವು. ಶಾಂತಿಯೆಂಬುದು ಕಾಮಧೇನುವು. ಆದುದರಿಂದ ಕ್ರೋಧವನ್ನು ಪರಿತ್ಯಜಿಸಿ, ಶಾಂತಿಯನ್ನು ಹೊಂದು. ಆಗ ನೀನೇ ಅಜಾತಶತ್ರುವಾಗುತ್ತೀಯೆ,

ದೇಹವು ಇಂದ್ರಿಯ, ಮನಸ್ಸು, ಪ್ರಾಣ, ಬುದ್ಧಿ, ಮೊದಲಾದುವುಗಳಿಂದ ವಿಲಕ್ಷಣನಾಗಿ ಆತ್ಮನು ಶುದ್ಧನಾಗಿಯೂ, ಸ್ವಯಂಪ್ರಕಾಶನಾಗಿಯೂ, ವಿಕಾರರಹಿತನಾಗಿಯೂ, ನಿರಾಕೃತಿಯಾಗಿಯೂ ಇರುವನು. ಆತ್ಮನು ಯಾವಾಗ ದೇಹೇಂದ್ರಿಯ ಪ್ರಾಣಗಳಿಂದ ತಾನು ಭಿನ್ನನಾಗಿರುವೆನೆಂದು ತಿಳಿಯುವನೋ ಅದುವರೆಗೂ ಸಂಸಾರ ದುಃಖಗಳಿಂದ ಪ್ರೀತಿಸಲ್ಪಟ್ಟು ಮೃತ್ಯುವಿಗೆ ಅಧೀನನಾಗಿರುವನು. ಆದುದರಿಂದ ನೀನು ಸರ್ವದಾ ದೇಹಕ್ಕಿಂತ ಆತ್ಮನು ಭಿನ್ನನಾಗಿರುವನೆಂದು ಮನಸ್ಸಿನಲ್ಲಿ ಭಾವಿಸು. ನೀನು ಬಹಿಶ್ಶುದ್ಧನಾಗಿ ಪ್ರಾರಬ್ಧ ಸುಖವನ್ನಾಗಲಿ, ದುಃಖವನ್ನಾಗಲಿ ಅನುಭವಿಸುತ್ತಾ ಸಂಸಾರಪ್ರವಾಹದಲ್ಲಿ ಬಿದ್ದು ಕಾರ್ಯಗಳನ್ನು ಮಾಡಿದರೂ ಅವುಗಳಿಂದ ಲೇಪಿಸಲ್ಪಡುವುದಿಲ್ಲ. ಅಂತಶ್ಶುದ್ಧನಾಗರು. ಈವೇಳೆಯಲ್ಲಿ ತಂದೆಯ ಮೇಲೆ ಏತಕ್ಕೆ ಕೋಪಿಸಿಕೊಳ್ಳುವೆ? ನಮ್ಮ ತಾಯಿಗೂ ಸಮಾಧಾನದ ಮಾತುಗಳನ್ನುಹೇಳಿ ನೀನು ಶಾಂತಚಿತ್ತನಾಗು. ಹದಿನಾಲ್ಕುವರುಷವೆಂಬುದು ಬಲುದೂರವೆ? ಕ್ಷಣಾರ್ಧದಲ್ಲಿ ತೀರಿಹೋಗುವುದು. ಸಮಾಧಾನವನ್ನು ತಂದುಕೋ."

ಈಪ್ರಕಾರಹೇಳಿ ಶ್ರೀರಾಮನು ತನ್ನ ತಾಯಿಗೆ ಸಾಷ್ಟಾಂಗನಮಸ್ಕಾರಮಾಡಿ, ಹೊರಡಲಿಕ್ಕೆ ಅಪ್ಪಣೆಯನ್ನು ಬೇಡಿದನು ಆ ಕೌಸಲ್ಯೆಯು ಮಗನನ್ನು ಎತ್ತಿ ತೊಡೆಯಮೇಲೆ ಕುಳ್ಳಿರಿಸಿಕೊಂಡು ಆಶೀರ್ವಾದಮಾಡಿ ಪ್ರಯಾಣಕ್ಕೆ ಅನುಮತಿಕೊಟ್ಟಳು. ಆಗ ಲಕ್ಷ್ಮಣನು ಶ್ರೀರಾಮನಿಗೆ ನಮಸ್ಕರಿಸಿ "ಅಣ್ಣಯ್ಯಾ! ನನ್ನಮನಸ್ಸಿನಲ್ಲಿದ್ದ ಸಂಶಯವು ನಿನ್ನಿಂದ ಪರಿಹರವಾಯಿತು. ನಾನು ನಿನ್ನಹಿಂದೆಯೇಬಂದು ಪಾದಸೇವೆಮಾಡಿಕೊಂಡಿರುವೆನು. ನನ್ನನ್ನು ಕರೆದೊಯ್ಯಬೇಕೆಂದು ಪ್ರಾರ್ಥಿಸಲು ಶ್ರೀರಾಮನು ಹಾಗೆಯೇ ಆಗಬಹುದೆಂದು ಒಪ್ಪಿದನು. ಬಳಿಕ ಸೀತಾದೇವಿಯು ಅಂತಃಪುರಕ್ಕೆಹೋಗಿ ಪ್ರಯಾಣದಸುದ್ದಿಯನ್ನು ತಿಳಿಸಲು ಆಕೆಯು "ಪಿತ್ರಾಜ್ಞಾಪರಿಪಾಲನೆಯು ನಿನಗೆ ಪರಮ ಧರ್ಮವಾಗಿರುವಂತೆ ಪತಿಯ ಛಾಯಾನುವರ್ತನೆಯು ನನ್ನ ಧರ್ಮವಾಗಿದೆ. ನಾನು ನಿನ್ನ ಸಂಗಡಬರುವೆನು. ನೀನಿಲ್ಲದ ಅರಮನೆಯೂ ನನಗೆ ಅಡವಿಗೆಸಮಾನವು" ಎಂದು ಹೇಳಿಕೊಂಡಳು. ಶ್ರೀರಾಮನು ಅವಳ ಪ್ರಾರ್ಥನೆಯನ್ನೊಪ್ಪಿ ಸಂಗಡ ಕರೆದುಕೊಂಡುಹೋದನು.

ಬಳಿಕಲಾರಾಮನು ತನ್ನ ಧನಧಾನ್ಯ ಮುಂತಾದ ಆಸ್ತಿಯನ್ನೆಲ್ಲಾ

ಬಡಬಗ್ಗರಿಗೆ ದಾನಮಾಡಿ ಹೆಂಡತಿಯನ್ನೂ ತಮ್ಮನನ್ನೂ ಕರೆದುಕೊಂಡು ತಂದೆಯಮನೆಗೆ ಬಂದು ಅವನ ಅಪ್ಪಣೆಪಡೆದು, ಕೈಕಯೆಯು ತಂದು ಕೊಟ್ಟ ನಾರುಸೀರೆಗಳನ್ನು ತಮ್ಮನೂ ತಾನೂ ಧರಿಸಿಕೊಂಡು, ಸುಮಂತ್ರನು ಸಿದ್ಧಮಾಡಿದ ರಥದಲ್ಲಿ ಕುಳಿತು ವನಪ್ರಯಾಣಕ್ಕೆ ಹೊರಟನು. ಗುಣಾಭಿರಾಮನಾದ ಶ್ರೀರಾಮನ ಅಗಲಿಕಗಾಗಿ ರಾಜಬಂಧುಗಳೂ ಪೌರಜನರೂ ಎಲ್ಲರೂ ಗೋಳಾಡಿದರು. ಸುಮಂತ್ರನು ರಥವನ್ನು ನಡಿಸಿಕೊಂಡುಹೋಗಿ ಗಂಗಾತೀರದಲ್ಲಿ ಬಿಟ್ಟನು. ಆಗ ರಾಮಾದಿಗಳು ಗಂಗಾಪೂಜೆಯನ್ನು ಮಾಡಿ, ತಮ್ಮನ್ನು ನದೀ ದಾಟಸುವುದಕ್ಕೋಸ್ಕರ ಗುಹನು ತಂದಿದ್ದ ದೋಣಿಯಲ್ಲಿ ಕುಳಿತು ಗಂಗೆಯನ್ನು ದಾಟಿ, ಆಲದ ಹಾಲಿನಿಂದ ಜಡೆಯನ್ನು ಚೆನ್ನಾಗಿ ನೆನೆಯಿಸಿಕೊಂಡು, ಸುಮಂತ್ರನನ್ನು ಹಿಂದಕ್ಕೆ ಕಳುಹಿಸಿಬಿಟ್ಟು, ಮುಂದೆ ಪ್ರಯಾಣಮಾಡಿದರು. ಅವರು ಭರದ್ವಾಜ ಮುನಿಯ ಆಶ್ರಮದಲ್ಲಿ ಒಂದು ದಿನವಿದ್ದು ಆತನ ಆತಿಥ್ಯವನ್ನು ಸ್ವೀಕರಿಸಿ, ಚಿತ್ರಕೂಟಪರ್ವತಕ್ಕೆ ಹೋದರು. ಅಲ್ಲಿಯೇ ಮಹರ್ಷಿಯಾದ ವಾಲ್ಮೀಕಿಯ ಆಶ್ರಮವಿತ್ತು. ಆತನು ಶ್ರೀರಾಮನನ್ನು ಸಂತೋಷದಿಂದ ಬರಮಾಡಿಕೊಳ್ಳಲು ರಾಮನು ಸೀತಾಲಕ್ಷ್ಮಣರೊಡನೆ ಆ ಋಷಿಗೆ ನಮಸ್ಕರಿಸಿ, ಆತನ ಅಪ್ಪಣೆಯಿಂದ ಕುಳಿತುಕೊಂಡನು. ಆಗಲಾ ವಾಲ್ಮೀಕಿಯು ಶ್ರೀರಾಮನನ್ನು ಸಂತೋಷದಿಂದ ಅಪ್ಪಿಕೊಂಡು ಭಕ್ತಿಪೂರ್ವಕವಾಗಿ ಷೋಡಶೋಪಚಾರಪೂಜೆಗಳನ್ನು ಮಾಡಿ, ನಗುತ್ತಾ ಇಂತೆಂದನು.

ಎಲೈ ದೇವದೇವನೇ, ನೀನೇ ಸರ್ವಲೋಕಗಳಿಗೂ ನಿವಾಸಸ್ಥಾನವಾಗಿ ಇದ್ದೀಯೆ. ಸರ್ವಭೂತಗಳೂ ನಿನಗೆ ನಿವಾಸಸ್ಥಳಗಳಾಗಿವೆ. ಭೂಭಾರಹರಣಾರ್ಥವಾಗಿ ಅವತರಿಸಿರುವ ನೀನು ಸೀತಾಲಕ್ಷ್ಮಣಸಹಿತನಾಗಿ ಇಲ್ಲಿ ಕೆಲವುಕಾಲ ಇರಲಿಕ್ಕೆ ಬಂದಿರುವುದನ್ನು ಬಲ್ಲೆನು. ಭಕ್ತಿಯಿಂದ ನಿನ್ನನ್ನು ಭಜಿಸುವ ಮನುಷ್ಯರಿಗೆ ಭುಕ್ತಿಮುಕ್ತಿಗಳನ್ನು ಕೊಡಬಲ್ಲ ನೀನು ಇಲ್ಲದಸ್ಥಳವೇ ಇಲ್ಲವಲ್ಲ! ಯಾರು ಧರ್ಮಾಧರ್ಮಗಳನ್ನು ಪರಿತ್ಯಜಿಸಿ, ನಿನಗೆ ಶರಣಾಗತವಾಗಿ ಭಜಿಸುತ್ತಿರುವರೋ ಅವರ ಹೃದಯವೇ ನಿನಗೆ ಸುಖಮಂದಿರವಾಗಿರುವುದು. ಶಾಂತರಾಗಿಯೂ, ನಿರಹಂಕಾರಿಗಳಾಗಿಯೂ, ರಾಗದ್ವೇಷಗಳಿಲ್ಲದವರಾಗಿಯೂ, ಕಲ್ಲು, ಮಣ್ಣು, ಚಿನ್ನ ಇವು ಮೂರರಲ್ಲಿಯೂ ಸಮಾನಬುದ್ಧಿಯುಳ್ಳವರಾಗ

ಯೂ ಇರತಕ್ಕವರ ಹೃದಯುವೇ ನಿನಗೆ ಸುಖಭವನವಾಗಿರುವುದು. ಯಾವನು ಅಪ್ರಿಯುವನ್ನು ಪಡೆದರೂ ವ್ಯಸನಪಡದೆಯೂ, ಪ್ರಿಯುವನ್ನು ಪಡೆದು ಸಂತೋಷಪಡುವುದಿಲ್ಲವೋ, ಸರ್ವವೂ ಮಾಯೆಯೆಂದು ತಿಳಿದು ನಿನ್ನನ್ನು ಭಜಿಸುತ್ತಿರುವನೋ ಅವನ ಹೃದಯುವೇ ನಿನ್ನ ಮನೆಯು. ಯಾವನು ಷಡ್ಭಾವಾದಿ ವಿಕಾರಗಳನ್ನು ದೇಹದಲ್ಲಿ ನೋಡುತ್ತಾ ಆತ್ಮನಿಗೆ ಇವುಗಳಿಲ್ಲವೆಂದು ತಿಳಿಯುವನೋ, ಹಸಿವು, ಬಾಯಾರಿಕೆ, ನಿದ್ರೆ, ಸುಖ, ದುಃಖ ಇವುಗಳಿಗೆ ಹೆದರದೆ ಸಂಸಾರಧರ್ಮಗಳಿಂದ ವಿಮುಕ್ತನಾಗಿರು ವನೋ ಅವನ ಮನಸ್ಸೇ ನಿನ್ನ ಮನೆಯು, ಎಲೈ ಶ್ರೀರಾಮನೇ, ನಾನು ನಿನ್ನ ಮಹಿಮೆಯನ್ನು ಏನೆಂದು ಹೇಳಲಿ ? ಯಾವನಾಮಪ್ರಭಾವದಿಂದ ನಾನು ಬ್ರಹ್ಮರ್ಷಿಯಾದೆನೋ ಆ ರಾಮನಾಮದ ಮಹಿಮೆಯನ್ನು ಹೇಳು ವೆನು. ನಾನು ಬ್ರಾಹ್ಮಣಜನ್ಮದಲ್ಲಿ ಹುಟ್ಟಿದವನಾಗಿದ್ದರೂ ಶೂದ್ರಾಚಾರ ನಿರತನಾಗಿ ಬೇಡರ ಜತೆಯಲ್ಲಿ ಸೇರಿಕೊಂಡು ಬೇಟೆಯಾಡುತ್ತಾ ಒಬ್ಬ ಬೇಡಿತಿಯನ್ನು ಇಟ್ಟುಕೊಂಡು ಕಾಡಿನಲ್ಲಿ ವಾಸಮಾಡಿಕೊಂಡಿದ್ದೆನು. ಅಜಿತೇಂದ್ರಿಯನಾದ ನನಗೆ ಅವಳಲ್ಲಿ ಹಲವರು ಮಕ್ಕಳು ಹುಟ್ಟಿದರು. ನಾನು ಕಳ್ಳರ ಗುಂಪಿನಲ್ಲಿ ಸೇರಿಕೊಂಡು ದಾರಿಗರನ್ನು ಸುಲಿದು, ಅವರ ಲ್ಲಿದ್ದ ಆಸ್ತಿಯನ್ನಪಹರಿಸಿ, ಜತೆಯವರಿಗೂ ಕೊಟ್ಟು, ಉಳಿದ ಹಣದಿಂದ ಕುಟುಂಬಸಂರಕ್ಷಣೆ ಮಾಡುತ್ತಾ ಬಂದೆನು. ನಾನು ಸದಾಕಾಲವೂ ಕೈಯಲ್ಲಿ ಧನುರ್ಬಾಣಗಳನ್ನು ಧರಿಸಿ, ನೋಡುವವರಿಗೆ ಯಮನಂತೆ ಭಯಂಕರನಾಗಿದ್ದೆನು. ಒಂದಾನೊಂದು ದಿನ ಸಪ್ತರ್ಷಿಗಳು ಆ ಮಾರ್ಗವಾಗಿ ಬಂದರು. ನಾನು ಅವರನ್ನು ನೋಡಿ, ನಿಷ್ಕರುಣೆಯಿಂದ ಇತರರನ್ನು ಹೆದರಿಸುವಂತೆಯೇ ಅವರನ್ನೂ ಬೆದರಿಸಿ, ಅವರಲ್ಲಿದ್ದುದನ್ನು ಸುಲಿದುಕೊಳ್ಳಬೇಕೆಂದು ನೋಡಿದೆನು. ಆಗ ಅವರು ನನ್ನನ್ನು ಕುರಿತು "ಅಯ್ಯಾ! ನಿನ್ನ ಇಷ್ಟದಂತೆ ನಮ್ಮಲ್ಲಿರುವ ವಸ್ತುಗಳನ್ನು ತೆಗೆದುಕೋ, ಆದರೆ ನಿನಗೆ ಒಂದು ಮಾತು ಕೇಳುವೆವು. ನೀನು ದಾರಿಗರನ್ನು ಸುಲಿದು, ಹೊಡೆದು ಎಷ್ಟೋ ಪಾಪವನ್ನು ಪಡೆಯುವೆಯಲ್ಲವೆ! ಇದರ ಫಲವನ್ನು ನಿನ್ನ ಹೆಂಡತೀಮಕ್ಕಳು ಹಂಚಿಕೊಳ್ಳುವರೆ ? ಇಲ್ಲವೆ ? ಕೇಳಿ ತಿಳಿದು ಕೊಂಡುಬಾ," ಎಂದರು. ಕೂಡಲೇ ನಾನು ಮನೆಗೆ ಹೋಗಿ ಕುಟುಂ ಬದವರನ್ನೆಲ್ಲಾ ಕೂಡಿಸಿ, ಈ ವಿಷಯುವನ್ನು ಹೇಳಲು, ಅವರು "ನಮ್ಮನ್ನು ಪೋಷಿಸುವುದು ನಿನ್ನ ಕರ್ತವ್ಯವಾಗಿದೆ. ಆದುದರಿಂದ

ನೀನು ಹೇಗಾದರೂ ಸಂಪಾದಿಸಿ ತಂದು ನಮಗೆ ಕೊಡಬೇಕು. ಇದಕ್ಕಾಗಿ ನೀನು ಮಾಡುವ ಪಾಪದ ಫಲಕ್ಕೆ ನಾವು ಬಾಧ್ಯರಲ್ಲ'' ಎಂದು ಹೇಳಿಬಿಟ್ಟರು. ಇದನ್ನು ಕೇಳಿದಕೂಡಲೇ ನನ್ನ ಮನಸ್ಸು ಕಳವಳಗೊಂಡಿತು. ಆಗಲೇ ಓಡಿಬಂದು ಮಹರ್ಷಿಗಳಿಗೆ ಈ ಸುದ್ದಿಯನ್ನು ತಿಳಿಸಿ, ಪಾಪಿಯಾದ ನನ್ನನ್ನು ರಕ್ಷಿಸಬೇಕೆಂದು ಅವರಿಗೆ ಶರಣಾಗತನಾದೆನು. ನನ್ನಲ್ಲಿದ್ದ ಬಿಲ್ಲಂಬುಗಳನ್ನು ದೂರವಾಗಿ ಬಿಸುಟು ಸಾಷ್ಟಾಂಗ ಪ್ರಣಾಮಮಾಡಿದೆನು. ಆಗ ಆ ಕರುಣಾಳುಗಳು ನನ್ನನ್ನು ಹಿಡಿದೆತ್ತಿ ಕುಳ್ಳಿರಿಸಿ, ''ಅಯ್ಯಾ, ನೀನು ಹೆದರಬೇಡ, ನಿನ್ನ ಪಾಪಪರಿಹಾರವಾಗುವ ಮಾರ್ಗವನ್ನು ತೋರಿಸುವೆವು. ಈ ಮಂತ್ರವನ್ನು ಜಪಿಸುತ್ತಿರು'' ಎಂದು ಹೇಳಿ ರಾಮನಾಮವನ್ನು ಉಪದೇಶಿಸಿ, ಸರ್ವದಾ ಇದನ್ನು ಉಚ್ಚರಿಸಿಕೊಂಡಿರು. ಪುನಃ ನಾವು ಇದೇ ಮಾರ್ಗವಾಗಿ ಬರುವೆವು.'' ಎಂದು ಹೇಳಿ ಹೊರಟುಹೋದರು. ಅವರ ಆಜ್ಞೆಯಂತೆ ನಾನು ನಿನ್ನ ನಾಮವನ್ನು ಜಪಿಸುತ್ತಾ ಕುಳಿತೆನು. ಮೈಮೇಲೆ ಹುತ್ತು ಬೆಳೆಯಿತು. ಹೀಗೆ ಸಹಸ್ರ ಯುಗಗಳು ಕಳೆದುವು. ಆ ವೇಳೆಗೆ ನನ್ನ ಗುರುಗಳಾದ ಋಷಿಗಳು ಅಲ್ಲಿಗೆ ಬಂದರು. ಮೇಲಕ್ಕೆ ಏಳೆಂದು ನನ್ನ ಮೈಮೇಲೆ ಕಮಂಡಲೋದಕವನ್ನು ಚೆಲ್ಲಿದರು. ಕೂಡಲೇ ನಾನು ಎಚ್ಚತ್ತು ಹುತ್ತಿನಿಂದ ಹೊರಕ್ಕೆ ಬಂದೆನು. ಮಂಜಿನ ಗುಂಪನ್ನು ಬಿಡಿಸಿಕೊಂಡು ಹೊರಕ್ಕೆ ಬಂದ ಸೂರ್ಯನಂತೆ ತೇಜಸ್ಸಿನಿಂದ ಒಪ್ಪುತ್ತಿರುವ ನನ್ನನ್ನು ನೋಡಿ, ಆ ಸಪ್ತರ್ಷಿಗಳು ''ಎಲೈ ಮುನಿಯೇ! ನೀನು ವಲ್ಮೀಕದಿಂದ ಹೊರಟುಬಂದುದರಿಂದ ಮುಂದೆ ವಾಲ್ಮೀಕಿಯೆಂಬ ಹೆಸರಿನಿಂದ ಪ್ರಸಿದ್ಧನಾಗುವೆ. ಇದು ನಿನ್ನ ಎರಡನೆಯ ಜನ್ಮವೆಂದು ತಿಳಿ. ನಿನ್ನ ಪಾಪಗಳೆಲ್ಲಾ ರಾಮನಾಮೋಚ್ಚಾರಣೆಯಿಂದ ದಗ್ಧವಾಗಿ ಹೋದುವು. ಮುಂದೆ ಸತ್ಕರ್ಮಾಚರಣೆಯಿಂದ ನೀನು ಮಹರ್ಷಿಯಾಗಿ ಕೀರ್ತಿಗೊಳ್ಳುವೆ'' ಎಂದು ಹೇಳಿಹೊರಟುಹೋದರು. ಎಲೈ ಶ್ರೀರಾಮನೇ! ಇವೆಲ್ಲವೂ ನಿನ್ನ ಅನುಗ್ರಹದಿಂದ ಲಭಿಸಿದುವು. ನೀನು ಈ ಪರ್ವತಪ್ರಾಂತದಲ್ಲಿಯೇ ಆಶ್ರಮವನ್ನು ಮಾಡಿಕೊಂಡು ಇರಬಹುದೆಂದು ಹೇಳಲು, ಶ್ರೀರಾಮನು ಅದಕ್ಕೆ ಒಪ್ಪಿ, ಸೀತಾಲಕ್ಷ್ಮಣರೊಡನೆ ಅಲ್ಲಿಯೇ ಪರ್ಣಶಾಲೆಯಲ್ಲಿ ವಾಸಮಾಡಿಕೊಂಡಿದ್ದನು.

ಇತ್ತ ಸುಮಂತ್ರನು ರಾಮನಿಲ್ಲದ ರಥವನ್ನು ತೆಗೆದುಕೊಂಡು ಹೋಗಿ, ದಶರಥನನ್ನು ಕಂಡು, ರಾಮಾದಿಗಳನ್ನು ಕಾಡಿನಲ್ಲಿ ಬಿಟ್ಟು

ಬಂದೆನೆಂದು ಹೇಳಿದನು. ಮಗನ ಅಗಲಿಕೆಯನ್ನು ತಡೆಯಲಾರದ ಆರಾಯನು ಪುತ್ರಶೋಕದಿಂದಲೇ ಮೃತನಾದನು. ಕೂಡಲೆ ಅರಮನೆಯಲ್ಲಿಯೂ ಪಟ್ಟಣದಲ್ಲಿಯೂ ಹಾಹಾಕಾರ ಹತ್ತಿತು. ಆವೇಳೆ ಭರತನು ಅಯೋಧ್ಯೆಯಲ್ಲಿರಲಿಲ್ಲ. ಅವನ ಸೋದರಮಾವನಾದ ಯುಧಾಜಿತ್ತನ ಬಳಿ ಕೇಕೆಯ ರಾಜ್ಯದಲ್ಲಿದ್ದನು. ಅವನನ್ನು ಬೇಗ ಕರೆದು ತರಬೇಕೆಂದು ವಸಿಷ್ಠಾದಿಗಳು ದೂತರನ್ನು ಕಳುಹಲು ಅವರು ಬೇಗ ಹೋಗಿ, ಅಲ್ಲಿಂದ ಭರತ ಶತ್ರುಘ್ನರನ್ನು ಕರೆದು ತಂದರು. ಭರತನು ತನ್ನ ತಾಯಿಯ ದೋಷದಿಂದ ಇಷ್ಟು ಅನರ್ಥಗಳು ಸಂಭವಿಸಿದುವೆಂದು ಅವಳ ಮೇಲೆ ಬಹಳವಾಗಿ ಕೋಪಿಸಿಕೊಂಡನು. ವಸಿಷ್ಠಾದಿಗಳು ಸಮಾಧಾನಮಾಡಿ, ರಾಜ್ಯದ ಪಟ್ಟಾಭಿಷೇಕಮಾಡಿಕೊಳ್ಳೆಂದು ಹೇಳಿದರು. ಭರತನು ಅದಕ್ಕೆ ಒಪ್ಪಲಿಲ್ಲ. ಶ್ರೀರಾಮನನ್ನು ಕರೆದುಕೊಂಡು ಬಂದು ಅವನಿಗೇನೇ ರಾಜ್ಯವನ್ನು ವಹಿಸುವೆನೆಂಧು ಹೇಳಿ ತಾಯಿಯನ್ನೂ ಗುರುವನ್ನೂ ಮಂತ್ರಿಗಳನ್ನೂ ಕರೆದುಕೊಂಡು, ಶ್ರೀರಾಮನಿದ್ದ ಕಡೆಗೆ ಹೋದನು. ನಡೆದ ಸಮಾಚಾರವೆಲ್ಲಾ ತಿಳಿಸಿ, ಅಯೋಧ್ಯೆಗೆ ಬರಬೇಕೆಂದು ಪ್ರಾರ್ಥಿಸಿದನು. ಎಷ್ಟು ಹೇಳಿದರೂ ಶ್ರೀರಾಮನು ತನ್ನ ಸತ್ಯವ್ರತವನ್ನು ಬಿಡಲಿಲ್ಲ. ಕೊನೆಗೆ ರಾಮಪಾದುಕೆಗಳನ್ನು ಪಡೆದು, ಅವುಗಳ ಹೆಸರಿನಿಂದ ಭರತನು ರಾಜಪ್ರತಿನಿಧಿಯಾಗಿ ಹದಿನಾಲ್ಕು ವರುಷಗಳು ರಾಜ್ಯವಾಳುತ್ತಿರುವೆನೆಂದು ಒಪ್ಪಿಕೊಂಡು, ಆ ಪಾದುಕೆಗಳನ್ನು ತೆಗೆದುಕೊಂಡುಹೋಗಿ ಅಯೋಧ್ಯೆಯ ಸಮೀಪದಲ್ಲಿರುವ ನಂದೀಗ್ರಾಮಕ್ಕೆ ಬಂದು, ಅದನ್ನೇ ತಾತ್ಕಾಲಿಕ ರಾಜಧಾನಿಯಾಗಿ ಮಾಡಿಕೊಂಡು, ಅಲ್ಲಿಯೇ ರಾಜ್ಯವಾಳುತ್ತಿದ್ದುದಲ್ಲದೆ ಶ್ರೀರಾಮಾದಿಗಳಂತೆ ತಾನೂ ಜಟಾವಲ್ಕಲಗಳನ್ನು ಧರಿಸಿಕೊಂಡನು.

ಇತ್ತ ಶ್ರೀರಾಮನು ಸೀತಾಲಕ್ಷ್ಮಣರೊಡನೆ ಚಿತ್ರಕೂಟಗಿರಿಯಲ್ಲಿ ವಾಸಮಾಡಿಕೊಂಡಿರುವಾಗ ಅಯೋಧ್ಯೆಯ ಪುರಜನರು ಅವರ ದರ್ಶನಕ್ಕಾಗಿ ಅಡಿಗಡಿಗೆ ಬರುತ್ತಿದ್ದರು. ಮುನಿವೃತ್ತಿಯಲ್ಲಿದ್ದ ಶ್ರೀರಾಮನು ಜನರ ಗದ್ದಲವಿಲ್ಲದೆ ಇರುವ ಮತ್ತೊಂದು ಪ್ರದೇಶಕ್ಕೆ ಹೋಗಿ ವಾಸಮಾಡಿಕೊಂಡಿರಬೇಕೆಂದು ಯೋಚಿಸಿ, ತಮ್ಮನನ್ನೂ ಸೀತೆಯನ್ನೂ ಕರೆದುಕೊಂಡು ಅತ್ರಿಮುನಿಯ ಆಶ್ರಮಕ್ಕೆ ಹೋಗಿ, ಅಲ್ಲಿದ್ದ ಋಷಿಗಳ ಸದ್ಗೋಷ್ಠಿಯಲ್ಲಿದ್ದುಕೊಂಡು ಕಾಲಹರಣ ಮಾಡುತ್ತಿದ್ದನು.

ಅತ್ರಿಯ ಪತ್ನಿಯಾದ ಅನಸೂಯೆಯು ಸೀತಾದೇವಿಯ ಸೌಶೀಲ್ಯಕ್ಕೆ ಮೆಚ್ಚಿ ದಿವ್ಯಾಂಬರಾದಿಗಳನ್ನು ಕೊಟ್ಟು ಹರಸಿದಳು. ಅಲ್ಲಿ ಕೆಲವು ದಿನಗಳಿದ್ದು, ಆ ಮಹರ್ಷಿಯ ಅಪ್ಪಣೆ ಪಡೆದು ಶ್ರೀರಾಮಾದಿಗಳು ದಂಡಕಾರಣ್ಯಕ್ಕೆ ಹೋಗುತ್ತಿರುವಾಗ ವಿರಾಧನೆಂಬ ರಾಕ್ಷಸನು ಇವರನ್ನು ನುಂಗಬೇಕೆಂದು ಬಂದನು. ಆಗ ಶ್ರೀರಾಮನು ಅರ್ಧಚಂದ್ರಾಕೃತಿಯ ಬಾಣವನ್ನು ಪ್ರಯೋಗಿಸಿ, ಅವನ ಶಿರಸ್ಸನ್ನು ಖಂಡಿಸಿದನು. ದುರ್ವಾಸಮಹರ್ಷಿಯ ಶಾಪದಿಂದ ರಾಕ್ಷಸನಾಗಿ ಹುಟ್ಟಿದ್ದ ಆ ಗಂಧರ್ವನು ನಿಜರೂಪವನ್ನು ಧರಿಸಿ, ಶ್ರೀರಾಮನ ಅಪ್ಪಣೆ ಪಡೆದು ಸ್ವರ್ಗಕ್ಕೆ ಹೊರಟುಹೋದನು. ಬಳಿಕ ಶ್ರೀರಾಮನು ಶರಭಂಗಾಶ್ರಮಕ್ಕೆ ಹೋಗಿ, ಆತನ ದರ್ಶನ ಮಾಡಿಕೊಂಡು, ಅಲ್ಲಿ ಆತಿಥ್ಯವನ್ನು ಸ್ವೀಕರಿಸಿದ ತರುವಾಯ ಆತನು ಶ್ರೀರಾಮನ ಆಜ್ಞೆ ಪಡೆದು ಚಿತಿಯಲ್ಲಿ ಪ್ರವೇಶಿಸಿ ಪ್ರಾಣತ್ಯಾಗ ಮಾಡಿದನು. ಬಳಿಕ ಅವರು ಅಲ್ಲಿಂದ ಹೊರಟು ಸುತೀಕ್ಷ್ಣನ ಆಶ್ರಮಕ್ಕೆ ಬಂದು ಅಲ್ಲಿ ಕೆಲವು ದಿನಗಳಿದ್ದು, ಅಲ್ಲಿಂದ ಅಗಸ್ತ್ಯಭ್ರಾತೃವಿನ ಆಶ್ರಮಕ್ಕೆ ಬಂದರು. ಅಲ್ಲಿ ಆ ಮಹರ್ಷಿಯಿಂದ ಸತ್ಕಾರಪಡೆದು, ಅಲ್ಲಿಂದ ಅಗಸ್ತ್ಯನ ಆಶ್ರಮಕ್ಕೆ ಬರಲು ಆ ಮಹರ್ಷಿಯು ರಾಮಾದಿಗಳನ್ನು ಸತ್ಕರಿಸಿ ಭೋಜನಾನಂತರದಲ್ಲಿ ಏಕಾಂತದಲ್ಲಿ ಸುಖವಾಗಿ ಕುಳಿತಿರುವ ಶ್ರೀರಾಮನ ಬಳಿಗೆ ಬಂದು ಕೈಮುಗಿದು ಇಂತೆಂದನು.

ಎಲೈ ರಾಮಚಂದ್ರನೇ, ನಿನ್ನ ಆಗಮನವನ್ನೇ ನಿರೀಕ್ಷಿಸಿಕೊಂಡಿದ್ದೆನು. ನೀನು ಕ್ಷೀರಸಮುದ್ರದಲ್ಲಿದ್ದಾಗ ಬ್ರಹ್ಮಾದಿದೇವತೆಗಳು ಭೂಭಾರವನ್ನು ಪರಿಹರಿಸಬೇಕೆಂದು ನಿನ್ನನ್ನು ಪ್ರಾರ್ಥಿಸಲು, ಅವರಿಗೆ ಅಭಯವನ್ನಿತ್ತು, ರಾವಣಾದಿ ದುಷ್ಟ ರಾಕ್ಷಸರ ವಧೆಗೋಸ್ಕರ ಭೂಲೋಕದಲ್ಲಿ ಅವತರಿಸಿ, ಮುನಿಗಳ ಸಹವಾಸದಲ್ಲಿ ಕೆಲವು ದಿನ ಕಾಲಹರಣ ಮಾಡುವೆನೆಂದು ನೀನು ಹೇಳಿದ್ದೆ. ಆ ಕಾಲವನ್ನೇ ಹಾರೈಸಿಕೊಂಡು ತಪಸ್ಸುಮಾಡುತ್ತಾ ಕುಳಿತಿರುವೆನು. ಎಲೈ ರಾಮನೇ, ನೀನು ಈ ಲೋಕಸೃಷ್ಟಿಗೆ ಪೂರ್ವದಲ್ಲಿ ಒಬ್ಬನೇ ಇದ್ದೆ. ನಿರ್ವಿಕಲ್ಪನಾಗಿಯೂ, ಉಪಾಧಿರಹಿತನಾಗಿಯೂ ಇರುವ ನಿನ್ನನ್ನು ಆಶ್ರಯಿಸಿಕೊಂಡಿರುವ ಮಾಯೆಯೇ ನಿನ್ನ ಶಕ್ತಿಯೆನ್ನಲ್ಪಡುವುದು. ಆ ಶಕ್ತಿಯು ನಿರ್ಗುಣನಾದ ನಿನ್ನನ್ನು ಕೂಡ ಒಂದೊಂದು ವೇಳೆ ಆವರಿಸುವುದು. ಆ ಶಕ್ತಿಗೆ ಮೂಲಪ್ರಕೃತಿಯೆಂತಲೂ, ಮಾಯೆ ಎಂತಲೂ, ಅವಿದ್ಯೆ ಎಂತಲೂ, ಸಂಸೃತಿ ಎಂತಲೂ

ಬಂಧವೆಂತಲೂ, ಬಗೆಬಗೆಯ ಹೆಸರುಗಳನ್ನಿಟ್ಟುಕೊಂಡಿರುವರು. ನಿನ್ನ ಸಂಕಲ್ಪದಿಂದ ಆದಿಯಲ್ಲಿ ಮಹತ್ತತ್ವವು ಹುಟ್ಟಿತು. ಆ ಮಹತ್ತತ್ವದಿಂದ ಅಹಂಕಾರ ಹುಟ್ಟಿತು. ಅಹಂಕಾರವು ಮಹತ್ತತ್ವದೊಂದಿಗೆ ಸೇರಿ ಸಾತ್ವಿಕ, ರಾಜಸ, ತಾಮಸಗಳೆಂಬ ಮೂರು ವಿಧವಾಯಿತು. ತಾಮಸದಿಂದ ಸೂಕ್ಷ್ಮತನ್ಮಾತ್ರಗಳು ಉದ್ಭವಿಸಿದುವು. ರಾಜಸದಿಂದ ಸ್ಥೂಲತನ್ಮಾತ್ರಗಳು ಆದುವು. ಸಾತ್ವಿಕದಿಂದ ಮನಸ್ಸೂ ಸೂತ್ರರೂಪವಾದ ಲಿಂಗವೂ ಉದ್ಭವಿಸಿದುವು. ಸ್ಥೂಲದಿಂದ ವಿರಾಟ್ಪುರುಷನು ಹುಟ್ಟಿದನು. ಅವನಿಂದ ಸ್ಥಾವರ ಜಂಗಮಾತ್ಮಕವಾದ ಪ್ರಪಂಚವು ಹುಟ್ಟಿತು. ಕ್ರಮೇಣ ದೇವತೆಗಳು, ತಿರ್ಯಗ್ಜಂತುಗಳು, ಮನುಷ್ಯರು ಹುಟ್ಟಿದರು. ಎಲೈ ಸ್ವಾಮಿಯೇ, ನೀನು ರಜೋಗುಣದಿಂದ ಬ್ರಹ್ಮನಾಗಿ ಸಮಸ್ತ ಜಗತ್ತಿಗೂ ಕಾರಣನಾಗಿದ್ದೀಯೆ, ಸತ್ವಗುಣದಿಂದ ವಿಷ್ಣುವಾಗಿ ಸಕಲ ಲೋಕಗಳನ್ನೂ ಪಾಲಿಸುತ್ತಿರುವೆ. ತಮೋಗುಣದಿಂದ ರುದ್ರನಾಗಿ ಎಲ್ಲವನ್ನೂ ಲಯಮಾಡುವೆ, ಜಾಗ್ರತೆ, ಸ್ವಪ್ನ, ಸುಷುಪ್ತಿ ಎಂಬ ಮೂರು ಅವಸ್ಥೆಗಳು ಬುದ್ಧಿಯಿಂದ ಜನಿಸಿದ ಗುಣಗಳು, ನೀನು ಇವುಗಳಿಗೆ ವಿಲಕ್ಷಣನಾಗಿ ಸಾಕ್ಷಿಯಾಗಿಯೂ, ಚಿನ್ಮಯನಾಗಿಯೂ, ಅವ್ಯಯನಾಗಿಯೂ ಇರುವೆ. ನೀನು ಲೋಕವನ್ನು ಸೃಷ್ಟಿ ಮಾಡಬೇಕೆಂದು ಇಚ್ಛಯಿಸಿದ ಕೂಡಲೇ ಮಾಯಾತ್ವವನ್ನು ಹೊಂದಿ ಸಗುಣನಾಗಿ ತೋರುತ್ತೀಯೆ, ನಿನ್ನ ಮಾಯೆಯು ವಿದ್ಯೆ, ಅವಿದ್ಯೆ ಎಂದು ಎರಡು ತೆರನಾಗಿರುವುದು. ನಿನ್ನ ಭಕ್ತಿ ನಿರತವಾಗಿ ಪ್ರವೃತ್ತಿಮಾರ್ಗದಲ್ಲಿ ನಡೆಯಿಸುವ ಬುದ್ಧಿಯೇ ವಿದ್ಯೆಯು, ಸಂಸಾರಪಾಶದಲ್ಲಿ ಬಿದ್ದು ನಿನ್ನನ್ನು ಮರೆಯಿಸುವ ಬುದ್ಧಿಯೇ ಅವಿದ್ಯೆಯು, ಎಲೈ ರಾಮಚಂದ್ರನೇ ಕೇಳು, ಲೋಕದಲ್ಲಿ ನಿನ್ನ ಭಕ್ತಿ ನಿರತರಾಗಿಯೂ, ನಿನ್ನ ಮಂತ್ರೋಪಾಸಕರಾಗಿಯೂ, ವಿದ್ಯಾಭ್ಯಾಸಪರವಾಗಿಯೂ ಇರುವವರು ನಿತ್ಯಮುಕ್ತರಾಗಿ ನಿನ್ನ ಪದವಿಯನ್ನು ಪಡೆಯುವರು. ನಿನ್ನಲ್ಲಿ ಭಕ್ತಿ ಇಲ್ಲದ ಮೂಢಜನರಿಗೆ ಸ್ವಪ್ನದಲ್ಲಿಯೂ ಮೋಕ್ಷಸುಖವು ಲಭಿಸುವುದು, ಎಲೈ ಪರಮಾತ್ಮನೇ ಹಲವು ಮಾತುಗಳಿಂದೇನು ಸಾಧುಸಜ್ಜನರ ಸಹವಾಸವೇ ಮೋಕ್ಷಹೇತುವೆಂದು ಪ್ರಾಜ್ಞರು ಹೇಳುವರು. ಯಾರು ಸುಖ ದುಃಖಗಳಲ್ಲಿ ಸಮಬುದ್ಧಿಯುಳ್ಳವರಾಗಿಯೂ, ನಿಸ್ಪೃಹರಾಗಿಯೂ. ಜಿತೇಂದ್ರಿಯರಾಗಿಯೂ, ಸಂಗವರ್ಜಿತರಾಗಿಯೂ, ಬ್ರಹ್ಮಜ್ಞಾನಿಗಳಾಗಿಯೂ ಇರುವರೋ ಅಂಥವರಿಗೆ ನಿನ್ನಲ್ಲಿ ಭಕ್ತಿಯು

ಸ್ವಾಭಾವಿಕವಾಗಿ ಹುಟ್ಟುವುದು. ನೀನು ಭಕ್ತಪರಾಧೀನನಾಗಿರುವುದರಿಂದ ನಿನ್ನ ಸಾನ್ನಿಧ್ಯವನ್ನು ಪಡೆಯುವುದಕ್ಕೆ ಭಕ್ತಿಯೇ ಉತ್ತಮ ಸಾಧನವಾಗಿರುವುದು. ಎಲೈ ರಾಮಚಂದ್ರನೇ, ನಿನ್ನ ಪಾದಸಂದರ್ಶನವಾದುದರಿಂದ ನಾನೇ ಧನ್ಯನು. ನನ್ನ ಜನ್ಮವೂ, ನಾನು ಮಾಡಿದ ತಪಸ್ಸೂ, ಯಜ್ಞ ಯಾಗಾದಿಗಳೂ ಸಫಲಗಳಾದುವು. ನೀನು ಸೀತಾಸಮೇತನಾಗಿ ಸದಾ ಕಾಲವೂ ನನ್ನ ಹೃದಯದಲ್ಲಿ ವಾಸಮಾಡಿಕೊಂಡಿರು. ನಾನು ಕುಳಿತಿರುವಾಗಲೂ ನಿಂತಿರುವಾಗಲೂ, ನಡೆಯುವಾಗಲೂ, ನಿನ್ನನ್ನು ಮರೆಯದೆ ಇರುವಂತೆ ಅನುಗ್ರಹಿಸು.

ಈಪ್ರಕಾರವಾಡಿ ಆ ಅಗಸ್ತ್ಯಋಷಿಯು ಪೂರ್ವದಲ್ಲಿ ದೇವೇಂದ್ರನಿಂದ ಶ್ರೀರಾಮನಿಗೋಸ್ಕರ ತನ್ನಲ್ಲಿ ಇರಿಸಲ್ಪಟ್ಟಿದ್ದ ಅಕ್ಷಯ ತೂಣೀರಗಳೆರಡನ್ನೂ, ರತ್ನಖಚಿತವಾದ ಖಡ್ಗವನ್ನೂ ಕೊಟ್ಟು, “ ಎಲೈ ರಾಮನೇ, ನೀನು ಅವತರಿಸಿರುವ ಉದ್ದೇಶವೇನೆಂದು ಚಿಂತಿಸಿ, ಜಾಗ್ರತೆಯಲ್ಲಿ ದುಷ್ಟರಾಕ್ಷಸನ್ನು ಸಂಹರಿಸಿ ಭೂಭಾರ ನಿವಾರಣೆಮಾಡು ” ಎಂದು ಹೇಳಿದನು.

ಬಳಿಕ ರಾಮನು ಅಲ್ಲಿ ಕೆಲವು ದಿನಗಳಿದ್ದು ಅಲ್ಲಿಂದ ಗೋದಾವರೀತೀರದಲ್ಲಿದ್ದ ಪಂಚವಟಿಯೆಂಬ ಸ್ಥಳಕ್ಕೆ ಹೋಗಿ, ಅಲ್ಲಿ ಪರ್ಣಶಾಲೆಗಳನ್ನು ಕಟ್ಟಿಕೊಂಡು ವಾಸಮಾಡಿಕೊಂಡಿದ್ದನು. ಆ ವೇಳೆಯಲ್ಲಿ ವೃದ್ಧನಾದ ಜಟಾಯುವೆಂಬ ಗೃಧ್ರರಾಜನಿಗೂ ಶ್ರೀರಾಮನಿಗೂ ತುಂಬ ಸ್ನೇಹವುಂಟಾಗಿ ಪರಸ್ಪರ ಪ್ರೀತಿವಿಶ್ವಾಸಗಳಿಂದ ವರ್ತಿಸುತ್ತಿದ್ದರು. ಲಕ್ಷ್ಮಣನು ಶ್ರೀರಾಮನ ಆಹಾರಾರ್ಥವಾಗಿ ಕಂದಮೂಲ ಫಲಗಳನ್ನು ತಂದುಕೊಡುತ್ತಾ, ಧನುರ್ಬಾಣಧರನಾಗಿ ರಾತ್ರಿಕಾಲಗಳಲ್ಲಿ ದುಷ್ಟಮೃಗಗಳ ಮತ್ತು ರಾಕ್ಷಸರ ಭಯವಿಲ್ಲದಂತೆ ಕಾದುಕೊಂಡಿದ್ದನು. ರಾಮನು ಸೀತಾಸಮೇತನಾಗಿ ವನವಾಸಮಾಡಬೇಕಲ್ಲಾ ಎಂದು ಸ್ವಲ್ಪವೂ ಚಿಂತಿಸದೆ ಸಂತೋಷಚಿತ್ತನಾಗಿ ಕಾಲಹರಣಮಾಡಿಕೊಂಡಿದ್ದನು.

ಬಂದಾನೊಂದು ದಿನ ಲಕ್ಷ್ಮಣನು ಶ್ರೀರಾಮನ ಪಾದಸೇವೆ ಮಾಡುತ್ತಿರುವಾಗ ರಹಸ್ಯವಾಗಿ. ಆ ಪರಮಾತ್ಮನನ್ನು ಪ್ರಾರ್ಥಿಸಿದುದೇನೆಂದರೆ:—ಎಲೈ ಕಮಲಾಕ್ಷನೇ, ಮೋಕ್ಷಮಾರ್ಗವನ್ನು ತಿಳಿಯಬೇಕೆಂದು ಅಪೇಕ್ಷಿಸುತ್ತೇನೆ. ನನ್ನಲ್ಲಿ ಕೃಪೆಯಿಟ್ಟು ಜ್ಞಾನಪ್ರದವಾದ ಆ ದಾರಿಯನ್ನು ಉಪದೇಶಿಸಬೇಕು.

ಅದನ್ನು ಕೇಳಿ ಶ್ರೀರಾಮನು, “ ತಮ್ಮಾ ! ಅತಿ ರಹಸ್ಯವಾದ ಮೋಕ್ಷಮಾರ್ಗವನ್ನು ಹೇಳುವೆನು. ಕೇಳು. ಅನಾತ್ಮವಾದ ಶರೀರಾದಿಗಳಲ್ಲಿ ಆತ್ಮನೆಂಬ ಬುದ್ಧಿಯುಂಟಾಗುವುದೇ ಮಾಯೆಯೆನಿಸುವುದು. ಈ ಮಾಯೆಯೇ ಸಂಸಾರವು. ಪರಮಾತ್ಮನ ಮಾಯೆಯಿಂದಲೇ ಈ ಜಗತ್ತು ಕಲ್ಪಿಸಲ್ಪಟ್ಟದೆ. ಹಗ್ಗವನ್ನು ಹಾವೆಂದು ತಿಳಿಯುವುದೇ ಭ್ರಾಂತಿಯು, ಕೇಳುವುದು. ನೋಡುವುದು, ಸ್ಮರಿಸುವುದು, ಇವೆಲ್ಲವೂ ಸ್ವಪ್ನ ಮನೋರಥದಂತೆ ಅಸತ್ಯವಾಗಿದೆ. ದೇಹವೆಂಬುದು ಸಂಸಾರವೆಂಬ ಮರಕ್ಕೆ ಮೂಲವು. ಇದು ಪುತ್ರದಾರಾದಿ ಬಂಧನಗಳಿಂದ ಬಿಗಿಸಲ್ಪಟ್ಟರುವುದು. ಈ ದೇಹವೆಂಬುದು ಪಂಚ ತನ್ಮಾತ್ರಗಳು, ಅಹಂಕಾರ,ಬುದ್ಧಿ, ಜ್ಞಾನೇಂದ್ರಿಯಗಳು, ಕರ್ಮೇಂದ್ರಿಯಗಳು, ಚಿದಾಭಾಸವಾದ ಮನಸ್ಸು, ಮೂಲ ಪ್ರಕೃತಿ ಇವುಗಳಿಂಗ ಕೂಡಿ ಕ್ಷೇತ್ರವೆನಿಸುವುದು. ಇವುಗಳಿಗೆ ವಿಲಕ್ಷಣವಾದ ಜೀವನೇ ನಿರಾಮಯನಾದ ಪರಮಾತ್ಮನು. ಅಹಂಕಾರವಿಲ್ಲದೆ ದಂಭ ಹಿಂಸಾದಿಗಳನ್ನು ಪರಿತ್ಯಜಿಸಿ, ಪರರ ಆಕ್ಷೇಪಗಳನ್ನು ಸಹಿಸುತ್ತಾ, ವಕ್ರಮಾರ್ಗವಿಲ್ಲದೆ, ಮನೋವಾಕ್ಕಾಯಗಳಲ್ಲಿ ಪರಿಶುದ್ಧನಾಗಿ, ಸದ್ಗುರುವಿನಲ್ಲಿ ಭಕ್ತಿಯನ್ನಿಟ್ಟು ಬಾಹ್ಯಾಭ್ಯಂತರಗಳಲ್ಲಿ ಶುದ್ಧನಾಗಿಯೂ, ನಿಷ್ಕಾಮಿಯಾಗಿಯೂ, ಪುತ್ರದಾರಾಧನಾದಿಗಳಲ್ಲಿ ನಿರಪೇಕ್ಷನಾಗಿಯೂ, ಇಷ್ಟಾನಿಷ್ಟಪ್ರಾಪ್ತಿಗಳಲ್ಲಿ ಸಮಬುದ್ಧಿಯುಳ್ಳವನಾಗಿಯೂ, ಇದ್ದುಕೊಂಡು ಸರ್ವಾತ್ಮನಾದ ನನ್ನಲ್ಲಿ ಅನನ್ಯಬುದ್ಧಿಯನ್ನಿಟ್ಟು, ಜನಸಂಚಾರ ಶೂನ್ಯವಾದ ಸ್ಥಳದಲ್ಲಿ ವೇದಾಂತಾರ್ಥಗಳನು ಚಿಂತಿಸುತ್ತಾ ಸಾಕ್ಷಾತ್ ಜ್ಞಾನ ಸುಖವನ್ನನುಭವಿಸುತ್ತಾ, ಸಚ್ಚಿದಾನಂದ ಸ್ವರೂಪನಾಗಿಯೂ, ಪೂರ್ಣನಾಗಿಯೂ, ಅದ್ವಿತೀಯನಾಗಿಯೂ, ಅವ್ಯಯನಾಗಿಯೂ ಇರುವವನನ್ನೆಸ್ನೇ ನಂಬಿದರೆ ಮೋಕ್ಷಸಾಮ್ರಾಜ್ಯವನ್ನು ಸೂರೆಗೊಳ್ಳುವನು. ನನ್ನ ಭಕ್ತಿಗೆ ಸಾಧನಗಳನು ಹೇಳುವೆನು. ಕೇಳು. ನನ್ನ ಭಕ್ತರ ಸಂಗವೂ, ನನ್ನ ಸೇವೆಯೂ, ಏಕಾದಶಿಯ ಉಪವಾಸವೂ, ನನ್ನ ಕಥಾಶ್ರವಣವೂ, ನನ್ನ ಪೂಜೆಯೂ, ನಾಮ ಸಂಕೀರ್ತನವೂ, ನನ್ನಲ್ಲಿ ದೃಢತರವಾದ ಭಕ್ತಿಯನ್ನುಂಟುಮಾಡುವುವು. ” ಎಂದು ಹೇಳಿದನು.

ಸೀತಾರಾಮಲಕ್ಷ್ಮಣರು ಪಂಚವಟಿಯಲ್ಲಿ ವಾಸಮಾಡಿಕೊಂಡಿರುವಾಗ ಒಂದುದಿನ ಕಾಮರೂಪಿಣಿಯಾದ ಶೂರ್ಪನಖಿಯೆಂಬ ರಾಕ್ಷಸಿಯು

ನರಮಾಂಸಾಸಕ್ತಳಾಗಿ ಅಲ್ಲಿಗೆ ಬಂದಳು. ಅವಳು ಶ್ರೀರಾಮಚಂದ್ರನ ದಿವ್ಯಮಂಗಳಸ್ವರೂಪವನ್ನು ಕಂಡು ಮೋಹಿಸಿ, ತಾನೂ ಸುಂದರಾಂಗಿಯಾಗಿ ಆ ಪರಮಾತ್ಮನ ಬಳಿ ನಿಂತು, "ಎಲೈ ಮನ್ಮಥಸ್ವರೂಪನೇ, ನಿನ್ನನ್ನು ಮೋಹಿಸಿರುವ ನನ್ನನ್ನು ಪರಿಗ್ರಹಿಸು, ಈ ಕುರೂಪಿಯಾದ ಸ್ತ್ರೀಯಿಂದ ನೀನು ಯಾವ ಸುಖವನ್ನು ಪಡೆದೀಯೆ ?" ಎಂದು ಹೇಳಲು ರಾಮಚಂದ್ರನು ಅವಳನ್ನು ನೋಡಿ "ಎಲೌ ಭಾಮಿನಿ ! ಗೃಹಸ್ಥನಾದ ನಾನು ಏಕಪತ್ನೀವ್ರತವುಳ್ಳವನು, ಇವಳನ್ನು ಬಿಟ್ಟು ಮತ್ತೊಬ್ಬರ ಕೈ ಹಿಡಿಯಲೊಲ್ಲೆನು. ಅಗೋ ಆ ಪರ್ಣಶಾಲೆಯಲ್ಲಿ ನನಗಿಂತಲೂ ಸುಂದರನಾದ ಪುರುಷನಿರುವನು. ಅವನ ಬಳಿಗೆ ಹೋಗು," ಎಂದನು. ಆ ರಾಕ್ಷಸಿಯು ಅಲ್ಲಿಗೆ ಹೋಗಿ, ಲಕ್ಷ್ಮಣನ ರೂಪವನ್ನು ಕಂಡು, ರಾಮನು ಹೇಳಿದಂತೆ ಅವನಿಗಿಂತಲೂ ಇವನು ಸುಂದರನೆಂದು ತಿಳಿದು, ತನ್ನನ್ನು ಪರಿಗ್ರಹಿಸೆಂದು ಪ್ರಾರ್ಥಿಸಿದಳು. ಆ ಲಕ್ಷ್ಮಣನು ಇವಳನ್ನು ಮಾಯಾವಿನಿಯೆಂದು ತಿಳಿದು ಅವಳನ್ನು ನೋಡಿ ಎಲೌ ಚಲುವೇ ! ದಾಸನಾದ ನನ್ನನ್ನು ಮದುವೆಯಾದರೆ ನೀನೂ ದಾಸಿಯಂತೆ ಇರಬೇಕಾಗುವುದು. ನಿನ್ನ ಅಂದಕ್ಕೆ ನೀನು ರಾಣಿಯಾಗಿರುವುದು ತಕ್ಕದ್ದು. ಒಡೆಯನಾದ ಶ್ರೀರಾಮನನ್ನೇ ಮದುವೆಯಾಗು ಹೋಗು" ಎಂದು ಕಳುಹಿಸಿಬಿಟ್ಟನು. ಹೀಗೆ ಮೂರುನಾಲ್ಕು ವೇಳೆ ಅಲ್ಲಿಂದಿಲ್ಲಿಗೂ ಇಲ್ಲಿಂದ ಅಲ್ಲಿಗೂ ಸುತ್ತಿ ಬೇಸರಗೊಂಡು ಆ ಶೂರ್ಪನಖಿಯು ಈ ಸೀತೆಯನ್ನು ಭಕ್ಷಿಸಿಬಿಟ್ಟರೆ ತಾನಾಗಿಯೇ ನನ್ನನ್ನು ಇವನು ಸ್ವೀಕರಿಸುವನೆಂದು ತಿಳಿದು ಆ ಲೋಕಮಾತೆಯನ್ನು ನುಂಗಲಿಕ್ಕೆ ಹೋದಳು. ಆಗ ಲಕ್ಷ್ಮಣನು ಅಣ್ಣನ ಆಜ್ಞೆಯಿಂದಲಾರಾಕ್ಷಸಿಯ ಕಿವಿಮೂಗುಗಳನ್ನು ಕೊಯ್ದುಹಾಕಿದನು. ಈ ಅವಮಾನದಿಂದಲೂ, ದುಃಖದಿಂದಲೂ ಅವಳು ಗೋಳಾಡುತ್ತಾ ಸಮೀಪದ ಜನಸ್ಥಾನವೆಂಬ ಉಕ್ಕಡದಲ್ಲಿದ್ದ ಖರನೆಂಬ ರಾಕ್ಷಸನಬಳಿಗೆ ಹೋಗಿ ತನ್ನ ಕಷ್ಟವನ್ನು ತಿಳಿಸಿದಳು. ಆ ರಾಕ್ಷಸನು ರೋಷಾವಿಷ್ಟನಾಗಿ ಹದಿನಾಲ್ಕು ಸಾವಿರ ಮಂದಿ ರಾಕ್ಷಸರನ್ನು ಕರೆದುಕೊಂಡು ಶ್ರೀರಾಮನ ಮೇಲೆ ಯುದ್ಧಕ್ಕೆ ಬಂದನು. ಶ್ರೀರಾಮನು ಆ ರಾಕ್ಷಸರನ್ನೆಲ್ಲಾ ಒಂದು ಮುಹೂರ್ತಕಾಲದಲ್ಲಿಯೇ ಸಂಹಾರಮಾಡಿಬಿಟ್ಟನು. ಅದನ್ನು ನೋಡಿ ಶೂರ್ಪನಖಿಯು ಚಿಂತಾಕ್ರಾಂತಳಾಗಿ, ಅಲ್ಲಿಂದ ಲಂಕಾದ್ವೀಪಕ್ಕೆ ಹೋಗಿ, ತನ್ನ ಅಣ್ಣನಾದ ರಾವಣಾಸುರನಲ್ಲಿ ಈ ಸಂಗತಿಯನ್ನು,

ತಿಳಿಸಿ. ಸೀತಾದೇವಿಯ ಸೌಂದರ್ಯವನ್ನು ವರ್ಣಿಸಿಹೇಳಿದಳು. ಆಗ ರಾವಣನು ಶ್ರೀರಾಮನು ಸಾಕ್ಷಾತ್ಪರಮೇಶ್ವರನೆಂದು ತಿಳಿದು, ಆತನಲ್ಲಿ ವಿರೋಧಿಸಿ, ಆತನಿಂದ ಹತನಾದರೆ ತನಗೆ ಮುಕ್ತಿಯುಂಟಾಗುವುದೆಂದು ನಿಶ್ಚಯಿಸಿ, ಕೂಡಲೇ ಅಲ್ಲಿಂದ ಹೊರಟು, ವನದಲ್ಲಿ ತಪಸ್ಸುಮಾಡು ತ್ತಿದ್ದ ತನ್ನ ಸೋದರಮಾವನಾದ ಮಾರೀಚನನ್ನು ಕಂಡು, ತಾನು ಬಂದಿ ರುವ ಕಾರ್ಯವನ್ನು ತಿಳಿಸಿ, ತನ್ನ ಸಹಾಯಾರ್ಥವಾಗಿ ಬರಬೇಕೆಂದು ಪ್ರಾರ್ಥಿಸಿದನು. ಮಾರೀಚನು ರಾವಣನನ್ನು ನೋಡಿ, „ ಎಲೈ ರಾಕ್ಷಸೇಂದ್ರನೇ, ಆ ಶ್ರೀರಾಮನು ಮನುಷ್ಯಮಾತ್ರನೆಂದು ತಿಳಿಯ ಬೇಡ. ಸಾಕ್ಷಾತ್ಪರಮಾತ್ಮನೇ ದುಷ್ಟರಾಕ್ಷಸರ ಸಂಹಾರಕ್ಕೋಸ್ಕರ ಈ ಭೂಮಿಯಲ್ಲಿ ಅವತರಿಸಿರುವನು. ಹತ್ತುಸಾವಿರ ಆನೆಗಳಬಲವುಳ್ಳ ನನ್ನ ತಾಯಿ ತಾಟಕಿಯೂ, ಅಣ್ಣನಾದ ಸುಬಾಹುವೂ ಬಾಲನಾಗಿದ್ದ ಆ ಶ್ರೀರಾಮನಿಂದಲೇ ಹತರಾದರು. ನಾನು ಆತನ ಬಾಣದಿಂದ ಸಮುದ್ರದ ಈಚೆಗೆ ಬಿಸುಡಲ್ಪಟ್ಟೆನು. ಈಗಲೂ ಎಲ್ಲೆಲ್ಲಿ ನೋಡಿದರೂ ಶ್ರೀರಾ ಮನೇ ನನ್ನ ದೃಷ್ಟಿಗೆ ಗೋಚರನಾಗುತ್ತಿರುವನು, ರಾಜ, ರತ್ನ, ರಮಣಿ ಮುಂತಾದ ರ ಕಾರಪೂರ್ವಕವಾದ ಶಬ್ದಗಳನ್ನು ಕೇಳಿದರೂ ರಾಮನೆಂಬ ಹೆದರಿಕೆಯೇ ನನಗೆ ಉಂಟಾಗುತ್ತಿದೆ. ನೀನು ಅವನನ್ನು ಎದುರಿಸಿ ಏಕೆ ಸಾವನ್ನು ತಂದುಕೊಳ್ಳುವೆ ? ಸುಖವಾಗಿ ಬದುಕಬೇ ಕೆಂಬ ಆಸೆಯಿದ್ದರೆ ಲಂಕಾಪುರದ ದಾರಿಯನ್ನು ಹಿಡಿ ; ನಾನು ನಿನ್ನ ಸಹಾಯಕ್ಕೆ ಬಂದು ಪ್ರಾಣವನ್ನು ಕಳೆದುಕೊಳ್ಳಲೊಲ್ಲೆನು. " ಎಂದು ಹೇಳಿದನು. ಆದಕ್ಕೆ ರಾವಣನು „ ಮಾವಾ ! ಈ ವಿಷಯವೆಲ್ಲಾ ನಾನು ಬಲ್ಲೆನು. ಬ್ರಹ್ಮಾದಿಗಳ ಪ್ರಾರ್ಥನೆಯಿಂದ ನನ್ನ ವಧಾರ್ಥವಾ ಗಿಯೇ ಅವನು ಮನುಷ್ಯನಾಗಿ ಹುಟ್ಟಿರುವನು. ಸತ್ಯಸಂಕಲ್ಪನಾದ ಆ ಪರಮೇಶ್ವರನ ಇಷ್ಟಕ್ಕೆ ವಿರೋಧವಾಗಿ ನಡೆಯಲು ಯಾರಿಂದಲೂ ಸಾಧ್ಯವಲ್ಲವು. ಆದುದರಿಂದ ನಾನು ರಾಮಪತ್ನಿಯಾದ ಸೀತಾದೇವಿ ಯನ್ನು ಬಲಾತ್ಕಾರದಿಂದ ತಂದು ಸೆರೆಯಲ್ಲಿಡುವೆನು. ಇದರಿಂದ ಶ್ರೀರಾ ಮನು ಕೋಪಿಸಿ, ಯುದ್ಧದಲ್ಲಿ ನನ್ನನ್ನು ಕೊಂದುಹಾಕುವನು. ಆ ರಾಮ ನಬಾಣದಿಂದ ಮಡಿದರೆ ನನಗೆ ಮುಕ್ತಿಯು ಲಭಿಸುವುದು. ನನ್ನ ಮಾತಿಗೆ ಎದುರುಹೇಳದೆ ನೀನು ನನ್ನ ಸಂಗಡ ಬಂದು ಮಾಯಾಮೃಗ ರೂಪವನ್ನು ತಾಳಿ, ರಾಮಾಶ್ರಮದಬಳಿ ಸುಳಿದಾಡುತ್ತಿರಬೇಕು. ತಪ್ಪಿ

ದರೆ ನನ್ನ ಕತ್ತಿಯು ಬಾಯಿಗೆ ತುತ್ತಾಗಿ ಸಾಯಬೇಕಾಗುವುದು ” ಎಂದನು.

ಇದನ್ನು ಕೇಳಿ ಮಾರೀಚನು ತನ್ನ ಮನಸ್ಸಿನಲ್ಲಿ “ ನಾನು ಇವನಿಂದ ಕೊಲ್ಲಿಸಿಕೊಳ್ಳುವುದಕ್ಕಿಂತ ಶ್ರೀ ರಾಮನ ಬಾಣದಿಂದ ಮಡಿದರೆ ಮೋಕ್ಷಲಕ್ಷ್ಮಿಯನ್ನು ಪಡೆಯಬಹುದು. ಈ ಮೂರ್ಖನ ಸಂಗಡ ಚರ್ಚಿಸಿ ಫಲವಿಲ್ಲ ” ಎಂದುತಿಳಿದು, ನಿನ್ನ ಇಷ್ಟದಂತೆಯೇ ಆಗಲೆಂದು ಅವನ ಸಂಗಡಲೇ ಹೊರಟನು.

ಇತ್ತ ವನದಲ್ಲಿ ಶ್ರೀರಾಮನು ರಾವಣನ ಚೇಷ್ಟಿತಗಳನ್ನೆಲ್ಲಾ ಮನಸ್ಸಿನಲ್ಲಿ ತಿಳಿದು, ಏಕಾಂತದಲ್ಲಿ ಸೀತಾದೇವಿಯನ್ನು ನೋಡಿ “ ಪ್ರಿಯಳೇ, ಲಂಕೇಶ್ವರನಾದ ರಾವಣನು ಸನ್ಯಾಸರೂಪದಿಂದ ನಿನ್ನ ಬಳಿಗೆ ಬರುವನು. ನೀನು ನಿನ್ನ ಆಕಾರವಾದ ಛಾಯೆಯನ್ನು ಇಲ್ಲಿ ಸ್ಥಾಪಿಸಿ ಪರ್ಣಶಾಲೆಯೊಳಕ್ಕೆ ಹೋಗು. ಅಲ್ಲಿ ಅಗ್ನಿಯಲ್ಲಿ ಅದೃಶ್ಯ ರೂಪದಿಂದ ನನ್ನ ಆಜ್ಞಾನುಸಾರ ಒಂದು ವರ್ಷಕಾಲ ಇರಬೇಕು. ಆ ರಾವಣನನ್ನು ವಧಿಸಿದ ತರುವಾಯ ಪುನಃ ನನ್ನಲ್ಲಿ ಬಂದು ಸೇರುವೆ ” ಎಂದು ಹೇಳಿದನು. ಮಾಯಾಸ್ವರೂಪಿಣಿಯಾದ ಸೀತೆಯು ಭಗವದ್ವಾಕ್ಯವನ್ನು ಶಿರಸಾವಹಿಸಿ, ಮಾಯಾಸೀತೆಯನ್ನು ಹೊರಗೆ ಕುಳ್ಳಿರಿಸಿ, ತಾನು ಅಗ್ನಿಯಲ್ಲಿ ಅಡಗಿದಳು. ಬಳಿಕ ಆ ಮಾಯಾಸೀತೆಯು ಮುಗುಳುನಗೆಯಿಂದ ಶ್ರೀ ರಾಮನನ್ನು ನೋಡಿ “ ಎಲೈ ಪ್ರಾಣಕಾಂತನೇ ! ಅಗೋ ಅಲ್ಲಿನೋಡು. ವಿಚಿತ್ರವಾದ ಸ್ವರ್ಣವರ್ಣದ ಜಿಂಕೆಯು ಹಾರಾಡುತ್ತಾ ಬರುತ್ತಿದೆ. ಅದರ ಚರ್ಮದ ಮೇಲೆಲ್ಲಾ ಚಿನ್ನದ ಬಿಂದುಗಳು ಥಳಥಳನೆ ಹೊಳೆಯುತ್ತಿವೆ, ಅದನ್ನು ಹಿಡಿದು ತಂದುಕೊಟ್ಟರೆ ಅದರ ಸಂಗಡ ಆಡಿಕೊಂಡು ಕಾಲಕಳೆಯುತ್ತಿರುವೆನು. ” ಎಂದು ಪ್ರಾರ್ಥಿಸಿದಳು. ಶ್ರೀರಾಮನು ಹಾಗೆಯೇ ಆಗಲಿ ಎಂದು ಒಪ್ಪಿ ಲಕ್ಷ್ಮಣನನ್ನು ಕರೆದು “ ತಮ್ಮಾ ! ಸೀತೆಯು ಈ ಕನಕಮೃಗವನ್ನು ಬಯಸುತ್ತಿರುವಳು. ನಾನು ಹೋಗಿ ಇದನ್ನು ಹಿಡಿದು ತರುವೆನು. ಮಾಯಾವಿಗಳಾದ ರಾಕ್ಷಸರು ಈ ವನದಲ್ಲಿ ಬಹುಮಂದಿ ಇರುವುದರಿಂದ ನೀನು ಈ ಜಾನಕಿಯನ್ನು ಜಾಗರೂಕತೆಯಿಂದ ರಕ್ಷಿಸಿಕೊಂಡಿರು. ” ಎಂದು ಹೇಳಿದನು. ಆಗ ಲಕ್ಷ್ಮಣನು “ ಅಣ್ಣಯ್ಯಾ ! ಇದು ನಿಜವಾದ ಮೃಗವಲ್ಲ. ಮಾರೀಚನ ಮಾಯೆಯೆಂದು ತೋರುತ್ತದೆ. ” ಎಂದನು.

ಅದಕ್ಕೆ ರಾಮನು "ಇದು ಮಾಯಾಮೃಗವಾಗಿದ್ದರೆ ಈ ರಾಕ್ಷಸನನ್ನು ಕೊಲ್ಲುವುದೂ ನಮ್ಮ ಕರ್ತವ್ಯವೇ ಅಲ್ಲವೆ ? ನಿಜವಾದ ಮೃಗವಾಗಿದ್ದರೆ ಜೀವ ಸಹಿತವಾಗಿ ಇದನ್ನು ಹಿಡಿದು ತರುವೆನು. ಮಾರೀಚ ರಾಕ್ಷಸನಾಗಿದ್ದರೆ ಕೊಂದು ಬರುವೆನು. ಚಿಂತಿಸಬೇಡ." ಎಂದು ಹೇಳಿ ಧನುರ್ಬಾಣಗಳನ್ನು ತೆಗೆದುಕೊಂಡು ಆ ಮೃಗದ ಹಿಂದೆಯೇ ಹೊರಟನು. ಅದು ಬಹುದೂರ ಓಡಿಹೋಗಿ, ಕಡೆಗೆ ಶಕ್ತಿಯಿಲ್ಲದೆ ಒಂದು ಕಡೆ ನಿಂತುಬಿಡಲು ಶ್ರೀರಾಮನು ಬಾಣದಿಂದ ಹೊಡೆದು ಕೊಂದುಹಾಕಿದನು. ಅದು ಸಾಯುವಾಗ ಮಾನುಷಧ್ವನಿಯಿಂದ "ಹಾ ಲಕ್ಷ್ಮಣಾ" ಎಂದು ಒರಲುತ್ತಾ ಪ್ರಾಣಗಳನ್ನು ಬಿಟ್ಟಿತು.

ಇತ್ತ ಪರ್ಣಶಾಲೆಯಲ್ಲಿದ್ದ ಮಾಯಾಸೀತೆಯು ಆ ಧ್ವನಿಯನ್ನು ಕೇಳಿ ಶ್ರೀರಾಮನಿಗೆ ಏನೋ ವಿಪತ್ತು ಸಂಭವಿಸಿತೆಂದು ತಿಳಿದು ಲಕ್ಷ್ಮಣನನ್ನು ನೋಡಿ "ಲಕ್ಷ್ಮಣಾ ! ನಿಮ್ಮ ಅಣ್ಣನ ಆರ್ತಧ್ವನಿಯನ್ನು ಕೇಳಿದೆಯಾ ? ಆ ಪ್ರಾಣಕಾಂತನಿಗೆ ವಿಪತ್ತು ಸಂಭವಿಸಿರಬಹುದು. ಬೇಗ ಹೋಗಿ ನೋಡಿ ಬಾ" ಎಂದಳು. ಅದಕ್ಕೆ ಲಕ್ಷ್ಮಣನು ಆಕೆಗೆ ಕೈ ಮುಗಿದು "ತಾಯೀ ! ಚಿಂತಿಸಬೇಡಿರಿ. ಶ್ರೀ ರಾಮನು ಪ್ರಾಕೃತ ಮನುಷ್ಯನಲ್ಲ. ಪರಮಾತ್ಮನಾದ ಆತನಿಗೆ ವಿಪತ್ತು ಬರುವುದೆಂದರೆ ಏನು ; ಇದು ಮಾಯಾವಿಯಾದ ರಾಕ್ಷಸನ ಶಬ್ದವು" ಎಂದು ಎಷ್ಟುಬಗೆಯಾಗಿ ಹೇಳಿದರೂ ಆಕೆಯು ಒಪ್ಪದೆ ನಿಷ್ಠುರವಾಕ್ಯಗಳಿಂದ ಅವನನ್ನು ತಿರಸ್ಕರಿಸಿ "ನೀನು ಈಗಲೇ ಹೋಗಿ ಶ್ರೀರಾಮನನ್ನು ಕರೆದು ತಾರದಿದ್ದರೆ ನಿನ್ನ ಎದುರಿಗೇನೇ ವಿಷವನ್ನು ಕುಡಿದು ಪ್ರಾಣ ತ್ಯಾಗಮಾಡುವೆನು" ಎಂದುಹಟಹಿಡಿದಳು. ಆಗ ಲಕ್ಷ್ಮಣನು ಆಕೆಯ ಆಜ್ಞೆಯಂತೆ ರಾಮನನ್ನು ಹುಡುಕಿಕೊಂಡು ಹೋದನು.

ಈ ಸಮಯವನ್ನೇ ನಿರೀಕ್ಷಿಸಿಕೊಂಡಿದ್ದ ರಾವಣನು ಕಪಟಸನ್ಯಾಸಿಯ ವೇಷವನ್ನು ಧರಿಸಿ, ಪರ್ಣಶಾಲೆಯಬಳಿಗೆ ಬಂದು "ಭವತೀ ಭಿಕ್ಷಾಂದೇಹಿ" ಎಂದು ಸೀತೆಯನ್ನು ಬೇಡಿದನು. ಆಗ ಸೀತೆಯು ಅವನನ್ನು ನೋಡಿ "ಯತಿಯೇ ! ಪತಿಯು ಹೊರಗೆ ಹೋಗಿರುವನು. ಆತನು ಬರುವ ತನಕ ಇದ್ದರೆ ಅತಿಥಿಸತ್ಕಾರವನ್ನು ಪಡೆಯಬಹುದು." ಎಂದು ಹೇಳಿದಳು. ಆ ಕಪಟ ಸನ್ಯಾಸಿಯು "ಎಲೌ ಸುಂದರಿಯೇ,

ನಾನು ಆತಿಥ್ಯಕ್ಕೆ ಅರ್ಹನಾದ ಯತಿಯಲ್ಲ. ತ್ರಿಲೋಕೇಶ್ವರನಾದ ರಾವಣನೆಂದು ತಿಳಿ. ನನ್ನ ಸಂಗಡ ಲಂಕಾಪುರಕ್ಕೆ ಬಂದರೆ ಪಟ್ಟದ ರಾಣಿಯಾಗಿಮಾಡಿ ನಿನ್ನ ಸುಖಪಡಿಸುವೆನು ” ಎಂದನು. ಇದನ್ನು ಕೇಳಿ ಆಕೆಯು ಭೀತಳಾಗಿ ರಾವಣನನ್ನು ನೋಡಿ “ ಎಲಾ ಧೂರ್ತನೇ ಇಂತಹ ಮಾತುಗಳಾಡುವ ನಿನ್ನ ನಾಲಿಗೆ ಸೀಳಿಹೋಗುವುದು. ರಾಮಪತ್ನಿಯನ್ನು ಬಯಸುವ ನೀನು ಜೀವಸಹಿತನಾಗಿ ಬಾಳಲಾರೆ” ಎಂದು ಗದರಿಸಿದಳು. ರಾವಣನು ಆ ಮಾತುಗಳನ್ನು ಲಕ್ಷ್ಯಮಾಡದೆ ಬಲಾತ್ಕಾರದಿಂದಅವಳನ್ನೆತ್ತಿ ಹಿಡಿದು ತನ್ನ ರಥದಮೇಲೆ ಕುಳ್ಳಿರಿಸಿಕೊಂಡು ಲಂಕಾಪಟ್ಟಣದ ದಾರಿಹಿಡಿದು ಹೊರಟನು. ಸೀತೆಯು ಆರ್ತಧ್ವನಿಯನ್ನು ಕೇಳಿ, ರಾಮನ ಸ್ನೇಹಿತನಾದ ಜಟಾಯುವೆಂಬ ಗೃಧ್ರರಾಜನು ಆ ರಾವಣನನ್ನು ಎದುರಿಸಿ, ಅವನೊಂದಿಗೆ ಕಾದಿದನು. ಅವರಿಬ್ಬರಿಗೂ ಘೋರ ಯುದ್ಧ ನಡೆಯಲು ರಾವಣನು ಕತ್ತಿಯಿಂದ ಆ ಜಟಾಯುವಿನ ರೆಕ್ಕೆಗಳನ್ನು ಕತ್ತರಿಸಿ ಅವನನ್ನು ಗತಪ್ರಾಣನನ್ನಾಗಿಮಾಡಿ ಹೊರಟನು. ಸೀತೆಯು ಕಂಠಗತಪ್ರಾಣನಾಗಿ ಕೊರಗುತ್ತಿದ್ದ ಜಟಾಯುವನ್ನು ನೋಡಿ ಬಹಳವಾಗಿ ದುಃಖಿಸಿ “ ಶ್ರೀರಾಮನು ಈ ಮಾರ್ಗವಾಗಿ ಬರುವನು. ಆತನಿಗೆ ನನ್ನ ಸಮಾಚಾರ ಹೇಳುವತನಕ ನೀನು ಜೀವಿಸಿಕೊಂಡಿರು ” ಎಂದು ಹೇಳಿ ಚಿಂತೆಯಿಂದ ತಲೆ ತಗ್ಗಿಸಿಕೊಂಡಿದ್ದಳು. ರಾವಣನು ಬೇಗಬೇಗ ರಥವನ್ನುಓಡಿಸಿಕೊಂಡುಹೋಗಿ, ತನ್ನ ಲಂಕಾಪಟ್ಟಣವನ್ನು ಸೇರಿ, ತನ್ನಲ್ಲಿ ಒಲಿಯದೆ ಇದ್ದ ಸೀತೆಯನ್ನು ಬಲಾತ್ಕರಿಸಲಾರದೆ ಅಶೋಕವನದಲ್ಲಿ ಅವಳನ್ನು ಸೆರೆಇಟ್ಟು ಕೆಲವು ರಾಕ್ಷಸಸ್ತ್ರೀಯರನ್ನು ಕಾವಲಾಗಿ ಇರಿಸಿದನು.

ಅತ್ತ ಶ್ರೀರಾಮನು ಮಾರೀಚನನ್ನು ಕೊಂದು ಹಿಂದಿರುಗಿ ಬರುತ್ತಿರುವಾಗ ಲಕ್ಷ್ಮಣನು ದೀನಮುಖದಿಂದ ಎದುರಿಗೆ ಬರುತ್ತಿದ್ದನು. ಅವನನ್ನು ನೋಡಿದ ಕೂಡಲೇ ತನ್ನಲ್ಲಿ “ ಇವನು ಮಾಯಾ ಸೀತೆಯನ್ನು ನಾನು ಕಲ್ಪಿಸಿ ಇಟ್ಟು ಬಂದುದನ್ನರಿಯನು. ಈಗ ನಾನು ನಿಜಸ್ಥಿತಿಯನ್ನು ತಿಳಿಸದೆ ಇವನನ್ನು ವಂಚಿಸಿ ಪ್ರಾಕೃತ ಪುರುಷನಂತೆ ನಟಿಸಬೇಕಾಗಿದೆ ” ಎಂದು ಯೋಚಿಸಿ, ಬಹು ಗಾಬರಿಗೊಂಡವನಂತೆ ಅವನನ್ನು ನೋಡಿ “ ತಮ್ಮಾ ! ಇದೇನು ! ಸೀತೆಯನ್ನು ಆಶ್ರಮದಲ್ಲಿ ಬಚ್ಚಂಟಿಗಳಾಗಿ ಬಿಟ್ಟುಬಂದೆಯಾ ? ಮಾಯಾವಿಗಳಾದ ರಾಕ್ಷಸರು ಅವಳ

ನ್ನು ತಿಂದುಬಿಟ್ಟಿರುವರೋ ಏನೋ ?" ಎಂದು ಅಳತೊಡಗಿದನು. ಲಕ್ಷ್ಮಣನು ಸೀತೆಯಾಡಿದ ಮಾತುಗಳನ್ನೆಲ್ಲಾ ಹೇಳಿ ಅತ್ತಿಗೆಯ ಅಪ್ಪಣೆಯಂತೆ ಹೊರಟುಬಂದೆನೆಂದು ತಿಳಿಸಲು ರಾಮನು ಕಣ್ಣೀರು ಸುರಿಸುತ್ತ ಅವಸರವಸರದಿಂದ ಅವನ ಜೊತೆಯಲ್ಲಿ ಪರ್ಣಶಾಲೆಗೆ ಬಂದುನೋಡಿದನು. ಅಲ್ಲಿ ಸೀತೆ ಇರಲಿಲ್ಲ. ಆಗ ಅಣ್ಣತಮ್ಮಂದಿರು ಆ ಸಾಧ್ವಿಯನ್ನು ಹುಡುಕುತ್ತಾ ಚಿಂತೆಯಿಂದ ಬರುತ್ತಿರುವಾಗ ಕುಟುಕುಜೀವದಿಂದಿದ್ದ ಜಟಾಯುವನ್ನು ಕಂಡರು. ಅವನು ಸೀತಾಪಹರಣದ ವೃತ್ತಾಂತವನ್ನು ತಿಳಿಸಿ ಪ್ರಾಣಬಿಟ್ಟನು. ಆಗ ಶ್ರೀರಾಮನು ಬಹು ದುಃಖಗೊಂಡು ಆ ಪಕ್ಷಿರಾಜನಿಗೆ ಅಗ್ನಿಸಂಸ್ಕಾರಮಾಡಿ, ತಮ್ಮನೊಂದಿಗೆ ಅಲ್ಲಿಂದಮುಂದೆ ಹೊರಟು, ಸೀತೆಯನ್ನು ಹುಡುಕುತ್ತಾ ನಡೆದನು. ದಾರಿಯಲ್ಲಿ ಅದ್ಭುತಾಕಾರನಾದ ಒಬ್ಬ ರಾಕ್ಷಸನಿದ್ದನು. ಅವನ ಎದೆಯಲ್ಲಿಯೇ ಮುಖವಿತ್ತು. ಕಣ್ಣು ಕಿವಿ, ಮೂಗು ಮೊದಲಾದ ಅವಯವಗಳೊಂದೂ ಇರಲಿಲ್ಲ. ಬಾಹುಗಳು ಮಾತ್ರ ಒಂದು ಯೋಜನದ ಉದ್ದವಿದ್ದವು. ಆ ಕಬಂಧನೆಂಬ ರಾಕ್ಷಸನು ತನ್ನ ಉದ್ದವಾದ ಬಾಹುಗಳಿಂದ ಆ ಮಾರ್ಗದಲ್ಲಿ ಸಂಚರಿಸುವ ಪ್ರಾಣಿಗಳನ್ನೆಲ್ಲಾ ಹಿಡಿದು ನುಂಗುತ್ತಲಿದ್ದನು. ಅವನು ರಾಮಲಕ್ಷ್ಮಣರಿಬ್ಬರನ್ನೂ ತನ್ನ ಬಾಹುಗಳಿಂದ ಹಿಡಿದು ಸೆಳೆದು, ಹೊಟ್ಟೆಯೊಳಕ್ಕೆ ತುರುಕಲಿಕ್ಕೆ ಯತ್ನಿಸಿದನು. ಆಗ ಶ್ರೀರಾಮನು ಖಡ್ಗದಿಂದ ಅವನ ಬಲಭುಜವನ್ನು ಕಡಿಯಲು, ಲಕ್ಷ್ಮಣನು ಎಡಭುಜವನ್ನು ಕೂಡಲೇ ಕತ್ತರಿಸಿ ಬಿಟ್ಟನು. ಆಗಲಾರಾಕ್ಷಸನು ಆಶ್ಚರ್ಯಗೊಂಡು "ಆಹಾ! ನನ್ನ ಬಾಹುಗಳನ್ನು ಕಡಿಯುವ ಶಕ್ತಿಯು ದೇವತೆಗಳಿಗೆ ಸುದಾ ಇಲ್ಲವಲ್ಲ! ಇವರಾರಿರಬಹುದು ? ಎಂದು ಯೋಚಿಸಿ ಅವರ ಸಮಾಚಾರವನ್ನು ವಿಚಾರಿಸಲು, ರಾಮಲಕ್ಷ್ಮಣರು ತಮ್ಮ ವೃತ್ತಾಂತವನ್ನು ತಿಳಿಸಿದರು. ಆಗ ರಾಕ್ಷಸನು ಭಕ್ತಿಯಿಂದ ಅವರಿಗೆ ಕೈಮುಗಿದು ಹೀಗೆ ಪ್ರಾರ್ಥಿಸಿದನು.

"ಎಲೈ ಶ್ರೀರಾಮಚಂದ್ರನೇ, ಇಂದಿಗೆ ನನ್ನ ಜನ್ಮವು ಸಫಲವಾಯಿತು. ನಾನು ಧನ್ಯನಾದೆನು. ನಾನೊಬ್ಬ ಗಂಧರ್ವರಾಜನು. ಬ್ರಹ್ಮನನ್ನುಕುರಿತು ತಪಸ್ಸುಮಾಡಿ ಅವಧ್ಯತ್ವದ ವರವನ್ನು ಪಡೆದನು. ಒಂದಾನೊಂದುದಿನ ನಾನು ಅಷ್ಟಾವಕ್ರಮುನಿಯನ್ನು ನೋಡಿ ಹಾಸ್ಯಮಾಡಿದ್ದರಿಂದ ದುಷ್ಟರಾಕ್ಷಸನಾಗೆಂದು ಆತನು ನನಗೆ ಶಾಪಕೊಟ್ಟನು.

ಆಗ ನನಗೆ ಬುದ್ಧಿಯುಂಟಾಗಿ ವಿಶಾಪವನ್ನು ಪ್ರಾರ್ಥಿಸಲು ತ್ರೇತಾಯುಗದಲ್ಲಿ ಶ್ರೀಮನ್ನಾರಾಯಣನು ರಾಮಾವತಾರವನ್ನೆತ್ತಿಬಂದು ನಿನ್ನ ತೋಳನ್ನು ಕಡಿದುಹಾಕುವನು. ಆಗ ನಿನಗೆ ಶಾಪಪರಿಹಾರವಾಗುವುದು. ಎಂದು ಅನುಗ್ರಹಿಸಿದನು. ಅದರಂತೆ ಈಗ ನೀನು ಬಾಹುಚ್ಛೇದಮಾಡಿದೆ. ನನ್ನ ಹೊಟ್ಟೆಯಲ್ಲಿರುವ ಬಾಯಿಯಲ್ಲಿ ಸೌದೆಗಳನ್ನು ಹಾಕಿ ಸುಟ್ಟುಬಿಟ್ಟರೆ ನನ್ನ ಈ ರೂಪವು ಹೋಗಿ, ಪೂರ್ವದ ಗಂಧರ್ವರೂಪ ಬರುವುದು. ಆಗ ನಿನ್ನ ಪತ್ನಿಯ ಮಾರ್ಗವನ್ನು ಹೇಳುವೆನು.'' ಎನ್ನಲು ಶ್ರೀರಾಮನ ಆಜ್ಞೆಯಿಂದ ಲಕ್ಷ್ಮಣನು ಆ ರಾಕ್ಷಸನ ದೇಹವನ್ನು ದಹಿಸಿಬಿಟ್ಟನು. ಕೂಡಲೆ ಅವನು ದಿವ್ಯಸುಂದರಾಂಗನಾದ ಗಂಧರ್ವರಾಜನಾಗಿ,ಶ್ರೀರಾಮನಿಗೆ ಪ್ರದಕ್ಷಿಣ ನಮಸ್ಕಾರಗಳನ್ನು ಮಾಡಿ, ಕೈಜೋಡಿಸಿಕೊಂಡು ಗದ್ಗದಸ್ವರದಿಂದ ಭಕ್ತಿಪೂರ್ವಕ ಇಂತೆಂದನು.

ಎಲೈ ಶ್ರೀರಾಮನೇ, ಆದಿಪುರುಷನಾದ ನಿನ್ನನ್ನು ಸ್ತೋತ್ರಮಾಡಬೇಕೆಂದು ನನ್ನ ಮನಸ್ಸು ಉತ್ಸಾಹಗೊಳ್ಳುತ್ತಿದೆ. ಆದ್ಯಂತರಹಿತನಾಗಿಯೂ, ವಾಚಾಮಗೋಚರನಾಗಿಯೂ, ಇರುವ ನಿನ್ನನ್ನು ಹೊಗಳಲು ನನಗೆ ಶಕ್ತಿಯು ಸಾಲದೆ ಇದೆ. ನಿನ್ನ ರೂಪವು ಸೂಕ್ಷ್ಮವಾಗಿಯೂ ಅವ್ಯಕ್ತವಾಗಿಯೂ, ದೇಹದ್ವಯವಿಲಕ್ಷಣವಾಗಿಯೂ ಇರುವುದು. ದೃಶ್ಯವಾದ ಈ ಜಗತ್ತೆಲ್ಲವೂ ಜಡವಾಗಿಯೂ ಅನಾತ್ಮವಾಗಿಯೂ ಇದೆ. ಬುದ್ಧ್ಯಾತ್ಮಾಭಾಸಗಳ ಐಕ್ಯವೇ ಜೀವವೆಂದು ಹೇಳಲ್ಪಡುವುದು. ಬ್ರಹ್ಮನೇ ಬುದ್ಧ್ಯಾದಿಗಳಿಗೆ ಸಾಕ್ಷಿಭೂತನಾಗಿರುವನು, ನಿರ್ವಿಕಾರವಾಗಿಯೂ, ಅಖಿಲಾತ್ಮನಾಗಿಯೂ ಇರುವ ನಿನ್ನಲ್ಲಿ ಅಜ್ಞಾನವಶದಿಂದ ದೇಹಾತ್ಮಭ್ರಾಂತಿಯು ಆರೋಪಿಸಲ್ಪಡುತ್ತದೆ. ನಿನ್ನ ಸೂಕ್ಷ್ಮದೇಹವೇ ಹಿರಣ್ಯಗರ್ಭನು. ಸ್ಥೂಲದೇಹವೇ ವಿರಾಟ್‌ಸ್ವರೂಪವು. ಭೂತ, ಭವ್ಯ, ಭವಿಷ್ಯತ್ತು ಇವುಗಳಲ್ಲಿ ದೃಶ್ಯವಾದ ಈ ಜಗತ್ತೆಲ್ಲವೂ ನಿನ್ನ ಭಾವನಾವಿಷಯವಾದ ಸೂಕ್ಷ್ಮರೂಪವಾಗಿದೆ. ಮಹದಾದಿಗಳಿಂದ ಆವೃತವಾಗಿ ಸ್ಥೂಲವಾದ ಅಂಡಕೋಶವುಳ್ಳ ನಿನ್ನ ದೇಹದಲ್ಲಿ ಏಳರಷ್ಟು ಉತ್ತರಗುಣವುಳ್ಳ ವಿರಾಟ್‌ಸ್ವರೂಪವು ಪ್ರಕಾಶಿಸುತ್ತಿರುವುದು. ನೀನೇ ಸರ್ವ ಕೈವಲ್ಯಸ್ವರೂಪನು. ಈ ಸಮಸ್ತ ಲೋಕಗಳೂ ನಿನ್ನ ಅವಯವಗಳೇ ಆಗಿವೆ. ಪಾತಾಳವೇ ನಿನ್ನ ಪಾದಮೂಲವು. ನಿನ್ನ ಬೆರಳುಗಳೇ ಮಹಾತಲವು. ನಿನ್ನ ಕಣಕಾಲುಗಳೇ ರಸಾತಲವು. ಗುಲ್ಫಗಳೇ ತಲಾತಲವು. ಮೊಣಕಾಲುಗಳೇ

ಸುತಲವು. ನಿನ್ನ ತೊಡೆಗಳೇ ವಿತಲವು. ನಿನ್ನ ಜಘನವೇ ಅತಲವು. ನಾಭಿಯೇ ಆಕಾಶವು. ನಿನ್ನ ವಕ್ಷಸ್ಥಳವೇ ಜ್ಯೋತಿಸ್ಸುಗಳು. ನಿನ್ನ ಕಂಠವೇ ಮಹತ್ತು ಲೋಕವು. ನಿನ್ನ ಮುಖವೇ ಜನಲೋಕವು. ಶಂಖದೇಶವೇ ತಪೋಲೋಕವು. ನಿನ್ನ ಶಿರಸ್ಸೇ ಸತ್ಯಲೋಕವು. ಇಂದ್ರಾದಿ ಲೋಕಪಾಲಕರೇ ನಿನ್ನ ಬಾಹುಗಳು. ದಿಕ್ಕುಗಳೇ ನಿನ್ನ ಕಿವಿಗಳು. ಅಶ್ವಿನೀದೇವತೆಗಳೇ ನಿನ್ನ ಮೂಗು. ಅಗ್ನಿಯೇ ನಿನ್ನ ಬಾಯಿ, ಸೂರ್ಯನೇ ನಿನ್ನ ಕಣ್ಣು, ಚಂದ್ರನೇ ನಿನ್ನ ಮನಸ್ಸು, ಭ್ರೂಭಂಗವೇ ಕಾಲವು. ಬೃಹಸ್ಪತಿಯೇ ನಿನ್ನ ಬುದ್ಧಿಯು. ರುದ್ರನೇ ನಿನ್ನ ಅಹಂಕಾರ ರೂಪವು. ಛಂದಸ್ಸುಗಳೇ ನಿನ್ನ ವಾಕ್ಕುಗಳು, ಯಮನೇ ನಿನ್ನ ದಂಷ್ಟ್ರವು. ನಕ್ಷತ್ರಗಳೇ ದಂತಪಂಙ್ತಿಯು. ಮಾಯೆಯೇ ಜಗನ್ಮೋಹಕವಾದ ನಗುವು. ಸೃಷ್ಟಿಯೇ ನಿನ್ನ ಕಟಾಕ್ಷವೀಕ್ಷಣವು. ಧರ್ಮಾಧರ್ಮಗಳೇ ನಿನ್ನ ಪುರೋಭಾಗಪಶ್ಚಾದ್ಭಾಗಗಳು, ದಿವಾರಾತ್ರಿಗಳೇ ನಿನ್ನ ನಿಮೇಷೋನ್ಮೇಷಗಳು. ಸಪ್ತಸಮುದ್ರಗಳೇ ನಿನ್ನ ಕುಕ್ಷಿಯು. ನದಿಗಳೆಲ್ಲವೂ ನಿನ್ನ ನಾಡಿಗಳು. ವೃಕ್ಷಗಳೆಲ್ಲವೂ ನಿನ್ನ ರೋಮಗಳು. ಜ್ಞಾನಶಕ್ತಿಯೇ ನಿನ್ನ ಮಹಿಮೆ. ಇದು ನಿನ್ನ ಸ್ಥೂಲಶರೀರವು. ಇದನ್ನು ಯಾವನು ತನ್ನ ಮನಸ್ಸಿನಲ್ಲಿ ಗ್ರಹಿಸುವನೋ ಅವನು ಅನಾಯಾಸದಿಂದ ಮುಕ್ತಿಯನ್ನು ಪಡೆಯುವನು. ಆದುದರಿಂದ ನಿನ್ನ ಈ ಸ್ಥೂಲರೂಪವನ್ನೇ ನಾನು ಸದಾ ಧ್ಯಾನಿಸಿಕೊಂಡಿರುವೆನು. ಧನುರ್ಬಾಣಧರನಾಗಿಯೂ, ಶ್ಯಾಮಲವರ್ಣನಾಗಿಯೂ,ಜಟಾವಲ್ಕಲಭೂಷಿತನಾಗಿಯೂ ಇರುವ ಎಲೈ ಶ್ರೀರಾಮಚಂದ್ರನೇ, ಸಾಕ್ಷಾತ್ಪರಮೇಶ್ವರನು ನಿನ್ನ ನಾಮವನ್ನು ಸದಾ ಜಪಿಸುತ್ತಿರುವನು. ನೀನೇ ಪರಮಾತ್ಮಸ್ವರೂಪನು, ಎಲ್ಲವೂ ನಿನ್ನ ಮಾಯೆಯಿಂದಲೇ ನಡೆಯುತ್ತಿರುವುದು. ಎಲೈ ಅಯೋಧ್ಯಾಧಿಪತಿಯೇ, ರಾವಣಾದಿ ದುಷ್ಟರಾಕ್ಷಸರನ್ನು ಕೊಲ್ಲಲಿಕ್ಕಾಗಿಯೇ ಅವತರಿಸಿರುವ ನೀನು ಮಾಯೆಯಿಂದ ಏತಕ್ಕೆ ಸ್ವಸ್ವರೂಪವನ್ನು ಮುಚ್ಚಿಡುವೆ? ಭಕ್ತನಾದ ನನ್ನನ್ನು ರಕ್ಷಿಸು. ಇನ್ನೂ ಹೆಚ್ಚಾಗಿ ನುತಿಸಲು ನನಗೆ ಶಕ್ತಿ ಇಲ್ಲ.

ಈ ರೀತಿಯಲ್ಲಿ ಸ್ತೋತ್ರಮಾಡಿದ ಗಂಧರ್ವಪತಿಯನ್ನು ನೋಡಿ ಶ್ರೀರಾಮಚಂದ್ರನು "ಎಲೈ ಗಂಧರ್ವನೇ ನಿನ್ನ ಭಕ್ತಿಗೆ ಪ್ರಸನ್ನನಾಗಿದ್ದೇನೆ. ಲೋಕವಿಡಂಬನಾರ್ಥವಾಗಿ ನಾನು ಮನುಷ್ಯನಂತೆ ನಟಿಸಬೇಕಾಗಿದೆ. ನೀನು ಮೊದಲು ಹೇಳಿದಂತೆ ಸೀತಾನ್ವೇಷಣಕ್ಕೆ ದಾರಿಯನ್ನು

ತೋರಿಸೆಂದು ಕೇಳಿದನು. ಆಗಲಾಗಂಧರ್ವನು ಶ್ರೀರಾಮನನ್ನು ನೋಡಿ "ಎಲೈ ದಾಶರಥೀ, ಇದೇಮಾರ್ಗವಾಗಿ ಸ್ವಲ್ಪ ದೂರ ಹೋದರೆ ಶಬರಿಯ ಆಶ್ರಮವು ಸಿಕ್ಕುವುದು. ಅವಳು ನಿನ್ನ ಪಾದಕಮಲಗಳಲ್ಲಿ ದೃಢವಾದ ಭಕ್ತಿಯುಳ್ಳವಳಾಗಿರುವಳು. ಅವಳು ನಿನಗೆ ಸಕಲವಿಷಯಗಳನ್ನೂ ಹೇಳುವಳು. ನನಗೆ ಅಪ್ಪಣೆಕೊಟ್ಟರೆ ಹೊರಡುವೆನು." ಎಂದು ಹೇಳಿ ಆ ಸ್ವಾಮಿಯ ಅಪ್ಪಣೆಪಡೆದು ಆಕಾಶಮಾರ್ಗವಾಗಿ ಹೊರಟು ಹೋದನು.

ಶ್ರೀರಾಮಲಕ್ಷ್ಮಣರು ಆ ಗಂಧರ್ವನು ತೋರಿಸಿದ ಮಾರ್ಗದಿಂದ ಸ್ವಲ್ಪದೂರ ಹೋದಮೇಲೆ ಒಂದು ಆಶ್ರಮವು ಸಿಕ್ಕಿತು. ಪರಮಭಕ್ತೆಯಾದ ಶಬರಿಯು ಬಂದು ಶ್ರೀರಾಮನನ್ನು ಕಂಡು, ಭಕ್ತಿಯಿಂದ ಪ್ರದಕ್ಷಿಣನಮಸ್ಕಾರಗಳನ್ನು ಮಾಡಿ, ಸ್ವಾಗತವನ್ನು ಹೇಳಿ, ಅರ್ಘ್ಯಪಾದ್ಯಾದ್ಯುಪಚಾರಗಳಿಂದ ಸತ್ಕರಿಸಿ, ಶ್ರೀರಾಮನಿಗೋಸ್ಕರವೇ ತಾನು ಸಂಗ್ರಹಮಾಡಿದ್ದ ಅಮೃತಸಮಾನವಾದ ಫಲಗಳನ್ನು ಒಪ್ಪಿಸಿದಳು. ರಾಮನು ಅನುಜಸಮೇತನಾಗಿ ಆಕೆಯ ಆತಿಥ್ಯವನ್ನು ಪರಿಗ್ರಹಿಸಿ, "ಎಲೌ ಭಕ್ತೆಯೇ! ನಿನ್ನ ಪೂಜೆಯಿಂದ ಸಂತುಷ್ಟನಾದೆನು. ಪುರುಷನಾಗಲಿ, ಸ್ತ್ರೀಯಾಗಲಿ, ಉತ್ತಮಜಾತಿಯವನಾಗಲಿ, ನಿಕೃಷ್ಟಜಾತಿಯಲ್ಲಿ ಹುಟ್ಟಿರಲಿ. ನನಗೆ ಭಕ್ತಿಯು ಮುಖ್ಯವೇ ಹೊರತು ಇತರ ಕಾರಣಗಳು ಬೇಕಾಗಿಲ್ಲ, ಯಜ್ಞವು, ದಾನವು, ತಪಸ್ಸು, ವೇದಾಧ್ಯಯನ ಮುಂತಾದ ಕರ್ಮಗಳನ್ನು ಮಾಡಿದರೂ ಭಕ್ತಿಹೀನನಾದವನು ನನ್ನ ಪ್ರಸನ್ನತೆಯನ್ನು ಪಡೆಯಲಾರನು. ಎಲೌ ಭಾಮಿನಿ, ಭಕ್ತಿಸಾಧನಗಳನ್ನು ಸಂಕ್ಷೇಪವಾಗಿ ಹೇಳುವೆನು ಕೇಳು, ಸಜ್ಜನಸಾಂಗತ್ಯವು ಭಕ್ತಿಗೆ ಮೊದಲನೆಯ ಸಾಧನವು. ನನ್ನ ಕಥಾಲಾಪಗಳನ್ನು ಮಾಡುವುದು ಎರಡನೆಯ ಸಾಧನವು. ನನ್ನ ಗುಣಗಳನ್ನು ವರ್ಣಿಸುತ್ತಿರುವುದು ಮೂರನೆಯ ಸಾಧನವು. ನನ್ನ ವಾಕ್ಯಗಳನ್ನು ವ್ಯಾಖ್ಯಾನಮಾಡುತ್ತಿರುವುದು ನಾಲ್ಕನೆಯ ಸಾಧನವು. ನಿಷ್ಕಪಟವಾಗಿ ಗುರುವಿನಲ್ಲಿ ನಾನೇ ಎಂಬ ಬುದ್ಧಿ ಇಟ್ಟುಕೊಂಡು, ಆತನನ್ನು ಭಕ್ತಿಯಿಂದ ಪೂಜಿಸುವುದು ಐದನೆಯ ಸಾಧನವು. ನಿಷ್ಕಾಮಬುದ್ಧಿಯಿಂದ ತಾನು ಮಾಡಿದ ಕರ್ಮಗಳನ್ನೆಲ್ಲಾ ಭಗವಂತನಿಗೆ ಸಮರ್ಪಿಸುವುದು ಆರನೆಯ ಸಾಧನವು. ಸಾಂಗವಾಗಿ ನನ್ನ ಮಂತ್ರೋಪಾಸನೆ ಮಾಡುವುದು ಏಳನೆಯ ಸಾಧನವು.

ನನ್ನ ಭಕ್ತರಲ್ಲಿ ಅಧಿಕವಾದ ವಿಶ್ವಾಸವಿಟ್ಟು, ಸರ್ವಭೂತಗಳೂ ಪರಮಾತ್ಮನೇ ಎಂಬ ಬುದ್ಧಿಯುಳ್ಳವರಾಗಿ, ಶಮದಮಾದಿ ಗುಣಸಂಪನ್ನರಾಗಿಯೂ, ಬಾಹ್ಯಾರ್ಥಗಳಲ್ಲಿ ವೈರಾಗ್ಯವುಳ್ಳವರಾಗಿಯೂ ಇರುವುದೇ ಎಂಟನೆಯುದು. ತತ್ವವಿಚಾರವೇ ಒಂಭತ್ತನೆಯ ಸಾಧನವು. ಇವೇ ನವವಿಧ ಭಕ್ತಿಸಾಧನಗಳು. ಸ್ತ್ರೀಯರಾಗಲಿ, ಪುರುಷರಾಗಲಿ, ತಿರ್ಯಗ್ಜಂತುಗಳೇ ಆಗಲಿ, ನನ್ನಲ್ಲಿ ಭಕ್ತಿಯುಕ್ತರಾಗಿದ್ದರೆ ಮುಕ್ತಿಯನ್ನು ಪಡೆಯುವರು. ನೀನು ನನ್ನಲ್ಲಿ ಅನನ್ಯಸಾಮಾನ್ಯವಾದ ಭಕ್ತಿಯುಳ್ಳವಳಾದುದರಿಂದ ನಿನಗೆ ನಿಸ್ಸಂಶಯವಾಗಿ ಮುಕ್ತಿಯನ್ನು ಅನುಗ್ರಹಿಸಿದ್ದೇನೆ. ನನ್ನ ಪ್ರಿಯಳಾದ ಸೀತಾದೇವಿಯು ಎಲ್ಲಿರುವಳೆಂಬುದು ನಿನಗೆ ತಿಳಿದಿದ್ದರೆ ಹೇಳು." ಎಂದು ಕೇಳಲಾ ಶಬರಿಯು ಕೈಮುಗಿದುಕೊಂಡು "ಎಲೈ ಸರ್ವಜ್ಞನೇ, ನಿನಗೆ ತಿಳಿಯದೆ ಇರುವ ವಿಷಯವು ಯಾವುದೂ ಇಲ್ಲವು. ಆದರೂ ನನ್ನನ್ನು ಕೇಳಿದ್ದರಿಂದ ನನಗೆ ತಿಳಿದಿರುವುದನ್ನು ಹೇಳುವೆನು. ರಾವಣನಿಂದ ಅಪಹರಿಸಲ್ಪಟ್ಟ ಸೀತಾದೇವಿಯು ಈಗ ಲಂಕಾದ್ವೀಪದಲ್ಲಿರುವಳು. ಇಲ್ಲಿಗೆ ಸಮೀಪದಲ್ಲಿಯೇ ಪಂಪಾ ಎಂಬ ಸರೋವರವಿರುವುದು. ಅದರ ಹತ್ತಿರ ಋಷ್ಯಮೂಕವೆಂಬ ಬೆಟ್ಟವೊಂದುಂಟು. ಅದರಮೇಲೆ ಸುಗ್ರೀವನೆಂಬ ಕಪಿರಾಜನು ತನ್ನ ನಾಲ್ವರು ಮಂತ್ರಿಗಳೊಂದಿಗೆ ವಾಸಮಾಡಿಕೊಂಡಿರುವನು. ಅವನ ಅಣ್ಣನಾದ ವಾಲಿಯ ಭಯದಿಂದ ಅವನು ಅಲ್ಲಿ ಅಡಗಿರುವನು. ನೀನು ಅಲ್ಲಿಗೆ ಹೋಗಿ ಅವನ ಸ್ನೇಹವನ್ನು ಸಂಪಾದಿಸಿಕೊ, ಅವನು ನಿನಗೆ ಬೇಕಾದ ಸಹಾಯಗಳನ್ನು ಮಾಡಿಕೊಡುವನು. ನಾನು ನಿನ್ನ ಸಮಕ್ಷಮದಲ್ಲಿಯೇ ಅಗ್ನಿಪ್ರವೇಶಮಾಡುವೆನು. ನನಗೆ ಅಪ್ಪಣೆಕೊಡು," ಎಂದು ಹೇಳಿ, ಅಗ್ನಿಯಲ್ಲಿ ಪ್ರವೇಶಿಸಿದಳು.

ಶ್ರೀರಾಮಲಕ್ಷ್ಮಣರು ಅಲ್ಲಿಂದ ದಕ್ಷಿಣಕ್ಕೆ ಹೊರಟು ಪಂಪಾ ಸರೋವರದಬಳಿಗೆ ಬಂದರು. ಬೆಟ್ಟದ ಮೇಲೆ ಇದ್ದ ಸುಗ್ರೀವನು ಈ ರಾಜಕುಮಾರರನ್ನು ನೋಡಿ, ಇವರ ಸ್ಥಿತಿಯನ್ನು ತಿಳಿದುಬರಲು ತನ್ನ ಮಂತ್ರಿಯಾದ ಹನುಮಂತನನ್ನು ಕಳುಹಿದನು. ಅವನು ಬ್ರಹ್ಮಚಾರಿಯವೇಷದಿಂದ ಈ ರಾಮ ಲಕ್ಷ್ಮಣರ ಸಮೀಪಕ್ಕೆ ಬಂದು, ಭಕ್ತಿಯಿಂದ ನಮಸ್ಕರಿಸಿ "ಅಯ್ಯಾ ನೀವು ಯಾರು ? ಇಲ್ಲಿಗೆ ಏತಕ್ಕೆ ಬಂದಿರಿ ?" ಎಂದು ಕೇಳಲು ಶ್ರೀರಾಮನು ತನ್ನ ವೃತ್ತಾಂತವನ್ನೆಲ್ಲಾ

ಅವನಿಗೆ ಹೇಳಿದನು. ಆಗ ಹನುಮಂತನು ಸುಗ್ರೀವನ ದುರವಸ್ಥೆಯನ್ನು ಆತನಿಗೆ ತಿಳಿಸಿ, ನೀವು ಬೆಟ್ಟದಮೇಲಕ್ಕೆ ದಯಮಾಡಿಸಿದರೆ ಸುಗ್ರೀವನ ಸ್ನೇಹಮಾಡಿಸುವೆನೆಂದು ಹೇಳಲು ಶ್ರೀರಾಮನು ಅದಕ್ಕೆ ಒಪ್ಪಿದನು. ಆಂಜನೇಯನು ಅವರಿಬ್ಬರನ್ನೂ ತನ್ನ ಹೆಗಲಿನ ಮೇಲೆ ಕುಳ್ಳಿರಿಸಿಕೊಂಡು ಹೋಗಿ, ಸುಗ್ರೀವನ ಬಳಿಯಲ್ಲಿಳಿಸಿ, ಅವರ ಸಮಾಚಾರವನ್ನು ತನ್ನ ಪ್ರಭುವಿಗೆ ವಿವರಿಸಿದನು. ರಾಮ ಸುಗ್ರೀವರು ಅಗ್ನಿ ಸಾಕ್ಷಿಯಾಗಿ ಸ್ನೇಹಮಾಡಿಕೊಂಡು ಪರಸ್ಪರ ಸಹಾಯಮಾಡುವುದಾಗಿ ಪ್ರತಿಜ್ಞೆಮಾಡಿದರು. ಬಳಿಕ ಶ್ರೀರಾಮನು ವಾಲಿಯೊಡನೆ ಯುದ್ಧ ಮಾಡು, ನಿನಗೆ ಸಹಾಯಮಾಡುವೆನೆಂದು ಹೇಳಲು ಸುಗ್ರೀವನು ಅದರಂತೆ ವಾಲಿಯೊಂದಿಗೆ ಯುದ್ಧಕ್ಕೆ ನಿಂತನು. ಶ್ರೀರಾಮನು ಒಂದೇ ಬಾಣದಿಂದ ವಾಲಿಯನ್ನು ಸಂಹರಿಸಿ, ಸುಗ್ರೀವನಿಗೆ ಕಪಿರಾಜ್ಯದ ಪಟ್ಟಾಭಿಷೇಕವನ್ನೂ, ವಾಲಿ ಪುತ್ರನಾದ ಅಂಗದನಿಗೆ ಯುವರಾಜಪಟ್ಟಾಭಿಷೇಕವನ್ನೂ ಮಾಡಿಸಿದನು. ವರ್ಷಾಕಾಲವು ಪೂರಯಿಸುವತನಕ ಕಿಷ್ಕಿಂಧೆಯಲ್ಲಿದ್ದು, ಶರತ್ಕಾಲ ಪ್ರಾರಂಭದಲ್ಲಿ ನಿನ್ನ ಕಪಿಬಲವನ್ನೆಲ್ಲಾ ಕೂಡಿಸಿಕೊಂಡು ಬಾರೆಂದು ರಾಮನಿಂದ ಸುಗ್ರೀವನಿಗೆ ಆಜ್ಞೆ ಕೊಡಲ್ಪಟ್ಟಿತು. ಅದರಂತೆ ಸುಗ್ರೀವನು ಕಪಿಸೈನ್ಯವನ್ನು ಕೂಡಿಸಿಕೊಂಡು ಬಂದು ಸೇರಿದನು. ಸೀತಾದೇವಿಯನ್ನು ಹುಡುಕಲಿಕ್ಕೆ ನಾನಾದಿಕ್ಕುಗಳಿಗೂ ಕಪಿಗಳನ್ನು ಕಳುಹಿದನು. ಶ್ರೀರಾಮನು ಪೂರ್ವಪರಿಚಿತನಾದ ಹನುಮಂತನನ್ನು ಕರೆದು, ನೀನು ಸೀತಾದೇವಿಯನ್ನು ಕಂಡು, ಈ ಮುದ್ರಿಕೆಯನ್ನೊಪ್ಪಿಸಿ, ಅವಳ ಕ್ಷೇಮಸಮಾಚಾರವನ್ನು ತಿಳಿದುಕೊಂಡು ಬರಬೇಕೆಂದು ಹೇಳಿಕಳುಹಿದನು. ಜಾಂಬವನು, ಹನುಮಂತನು, ಅಂಗದನು, ಮುಂತಾದವರು ದಕ್ಷಿಣದಿಕ್ಕಿಗೆ ಪ್ರಯಾಣಮಾಡಿದರು. ಜಟಾಯುವಿನ ಸಹೋದರನಾದ ಸಂಪಾತಿಯು ಸೀತಾದೇವಿಯು ಲಂಕೆಯಲ್ಲಿರುವ ಸುದ್ದಿಯನ್ನು ಅವರಿಗೆ ಹೇಳಿದನು. ಹನುಮಂತನು ಜಾಂಬವಾದಿಗಳ ಅನುಮತಿಯಿಂದ ಶತಯೋಜನವಿಸ್ತಾರವಾದ ಸಮುದ್ರವನ್ನು ದಾಟ, ರಾವಣನ ಅಶೋಕವನದಲ್ಲಿ ಸೀತಾದೇವಿಯನ್ನು ಕಂಡು, ಶ್ರೀರಾಮನ ಸಂದೇಶವನ್ನು ತಿಳಿಸಿ, ರಾಮನ ಮುದ್ರಿಕೆಯನ್ನೊಪ್ಪಿಸಿದನು. ಸೀತಾದೇವಿಯು ಬಹು ಸಂತುಷ್ಟಳಾಗಿ, ತನಗೆ ಉಂಟಾಗಿರುವ ಕಷ್ಟವನ್ನು ಶ್ರೀರಾಮನಿಗೆ ಹೇಳಿ, ಗುರುತಿಗಾಗಿ ತನ್ನ ಚೂಡಾಮಣಿ

ಯನ್ನು ಕೊಟ್ಟಳು, ಹನುಮಂತನು ತನ್ನ ಸುದ್ದಿಯನ್ನು ರಾವಣನಿಗೆ ತಿಳಿಸಬೇಕೆಂದು ಯೋಚಿಸಿ, ಆ ವನವನ್ನು ಭಂಗಮಾಡಿದನು. ರಾವಣನಿಗೆ ಈ ಸಮಾಚಾರವು ತಿಳಿದು, ಅವನನ್ನು ಹಿಡಿದುಕೊಂಡುಬರಲಿಕ್ಕೆ ತನ್ನ ಮಗನಾದ ಅಕ್ಷನನ್ನು ಕಳುಹಲು ಆಂಜನೇಯನು ಅವನೊಂದಿಗೆ ಕಾದಿ ಅವನನ್ನು ಕೊಂದುಬಿಟ್ಟನು. ಬಳಿಕ ಇಂದ್ರಜಿತುವೆಂಬ ಮತ್ತೊಬ್ಬ ಮಗನನ್ನು ಕಳುಹಿದನು. ಹನುಮಂತನು ಅವನಬ್ರಹ್ಮಾಸ್ತ್ರದಿಂದ ಬದ್ಧನಾಗಿ ರಾವಣನ ಬಳಿಗೆ ಹೋಗಿ, ಸೀತೆಯನ್ನು ಶ್ರೀರಾಮನಿಗೆ ಒಪ್ಪಿಸು, ಇಲ್ಲದಿದ್ದರೆ ರಾಮಬಾಣಗಳಿಂದ ನೀನು ಸಾಯುವೆ, ಎಂದು ಬುದ್ಧಿ ಹೇಳಿದನು. ಇದರಿಂದ ರಾವಣನಿಗೆ ಕೋಪಬಂದು ಈ ಕಪಿಯನ್ನು ಕೊಂದುಹಾಕಿರೆಂದು ಆಜ್ಞೆ ಮಾಡಿದನು. ದೂತರನ್ನು ಕೊಲ್ಲಿಸುವುದು ಶಾಸ್ತ್ರಸಮ್ಮತವಲ್ಲವೆಂದು ರಾವಣನ ತಮ್ಮನಾದ ವಿಭೀಷಣನು ಹೇಳಲು, ರಾವಣನು ಆ ಆಜ್ಞೆಯನ್ನು ತಪ್ಪಿಸಿ, ಈ ಕಪಿಯ ಬಾಲಕ್ಕೆ ಬೆಂಕೀ ಹತ್ತಿಸಿ ಸುಟ್ಟುಬಿಡಿರೆಂದು ಅಪ್ಪಣೆಮಾಡಿದನು. ಅದರಂತೆ ಹಲವು ಬಟ್ಟೆಗಳನ್ನು ತಂದು ಎಣ್ಣೆಯಲ್ಲಿ ಅದ್ದಿ ಬಾಲಕ್ಕೆ ಸುತ್ತಿ ಬೆಂಕಿತೋರಿಸಿದರು. ಹನುಮಂತನು ಮನೆಯಿಂದ ಮನೆಗೆ ಹಾರುತ್ತಾ ಹೋಗಿ ಲಂಕಾಪಟ್ಟಣವನ್ನೆಲ್ಲಾ ಸುಟ್ಟುಬಿಟ್ಟು, ಪುನಃ ಸೀತಾದೇವಿಯ ಬಳಿಗೆ ಹೋಗಿ, ಆಕೆಯ ಅಪ್ಪಣೆ ಪಡೆದು ಸಮುದ್ರವನ್ನು ದಾಟಿ, ಜಾಂಬವಾದಿಗಳನ್ನು ಕಂಡು ನಡೆದ ಸುದ್ದಿಯನ್ನೆಲ್ಲಾ ತಿಳಿಸಿದನು. ಬಳಿಕ ಅವರೆಲ್ಲರೂ ಅಲ್ಲಿಂದಹೊರಟು ಶ್ರೀ ರಾಮಚಂದ್ರನಬಳಿಗೆ ಹೋಗಿ ಸೀತಾದೇವಿಯ ಕ್ಷೇಮಸಮಾಚಾರವನ್ನು ತಿಳಿಸಿ, ಚೂಡಾರತ್ನವನ್ನು ಆತನಿಗೆ ಒಪ್ಪಿಸಲು ಶ್ರೀರಾಮನು ಅವರನ್ನು ವಿಶೇಷವಾಗಿ ಮನ್ನಿಸಿದನು.

ಬಳಿಕ ಶ್ರೀರಾಮನು ಕಪಿಸೈನ್ಯಸಹಿತವಾಗಿ ಲಂಕಾಪಟ್ಟಣಕ್ಕೆ ಜೈತ್ರಯಾತ್ರೆ ಹೊರಟು, ಸಮುದ್ರತೀರದಲ್ಲಿ ಬಂದು ನಿಂತನು. ದುಸ್ತರವಾದ ಸಮುದ್ರವನ್ನು ಕಪಿಸೈನ್ಯವು ದಾಟುವುದಕ್ಕೆ ಮಾರ್ಗವಿರಲಿಲ್ಲ. ಮುಂದಿನ ಕರ್ತವ್ಯವೇನೆಂದು ಯೋಚಿಸುತ್ತಿದ್ದರು.

ಇತ್ತ ರಾವಣನು ಒಬ್ಬ ಕಪಿಯಿಂದ ತನ್ನ ಮಕ್ಕಳು ಸತ್ತುದಲ್ಲದೆ ರಾಜಧಾನಿಯೂ ಭಸ್ಮವಾದುದನ್ನು ನೋಡಿ, ಮುಂದೆ ಏನುಮಾಡಬೇಕೆಂದು ಒಂದು ಸಭೆಕೂಡಿಸಿದನು. ಮುಖ್ಯಮಂತ್ರಿಗಳೂ, ರಾವಣನ ತಮ್ಮನಾದ ವಿಭೀಷಣನೂ, ಮಗನಾದ ಇಂದ್ರಜಿತುವೂ ಎಲ್ಲರೂ ಸೇರಿ

ದ್ದರು. ರಾಮನೊಂದಿಗೆ ಯುದ್ಧಮಾಡಿ ಅವನನ್ನು ಕೊಂದುಹಾಕುವೆವೆಂದು ಸೇನಾಪತಿಗಳೆಲ್ಲರೂ ಅಬ್ಬರಿಸುತ್ತಿದ್ದರು. ಆಗ ವಿಭೀಷಣನು ರಾವಣನನ್ನು ನೋಡಿ "ಅಣ್ಣಾ! ಇವರ ಬಣಜಂಬದ ಮಾತುಗಳನ್ನು ನಂಬಿ ಕೆಡಬೇಡ. ಶ್ರೀರಾಮನು ಮನುಷ್ಯಮಾತ್ರನಲ್ಲ. ಸಾಕ್ಷಾನ್ನಾರಾಯಣನೇ ಭೂಭಾರಹರಣಾರ್ಥವಾಗಿ ಭೂಮಿಯಲ್ಲಿ ಅವತರಿಸಿರುವನು. ಜಗನ್ಮಾತೆಯಾದ ಸೀತೆಯನ್ನು ನೀನು ಅಪಹರಿಸಿ ತಂದುದು ತಪ್ಪುಕೆಲಸ. ಈಗಲಾದರೂ ಆ ದೇವಿಯನ್ನು ಕರದೊಯ್ದು ಶ್ರೀರಾಮಪಾದಕ್ಕೆ ಒಪ್ಪಿಸಿ, ಆ ದೇವದೇವನಿಗೆ ಶರಣಾಗತನಾದರೆ ನೀನು ಸುಖವಾಗಿರುವೆ. ಇಲ್ಲದಿದ್ದರೆ ಪುತ್ರಮಿತ್ರಾಮಾತ್ಯಸಹಿತನಾಗಿ ಸಾಯುವೆ," ಎಂದು ಬುದ್ಧಿ ಹೇಳಿದನು. ರಾವಣನಿಗೆ ಈ ಮಾತುಗಳನ್ನು ಕೇಳಿ ಬಹುಕೋಪಬಂತು. ಇವನು ತಮ್ಮನೆಂದು ನೋಡದೆ ಕಾಲಿನಿಂದ ಒದೆದು, ನೀನು ರಾಮನ ಬಳಿಗೇನೆ ಹೋಗಿ ಸೇರಿಕೊಳ್ಳೆಂದು ಅಟ್ಟಿಬಿಟ್ಟನು. ಆ ವಿಭೀಷಣನು ಕೂಡಲೇ ಅಲ್ಲಿಂದ ಹೊರಟು, ಶ್ರೀರಾಮನ ಬಳಿಗೆ ಹೋಗಿಸೇರಿ, ಅವನಿಗೆ ಶರಣಾಗತನಾಗಿ ನನ್ನನ್ನು ರಕ್ಷಿಸಬೇಕೆಂದು ಪ್ರಾರ್ಥಿಸಿದನು. ವಿಭೀಷಣಗೆ ಶ್ರೀರಾಮನು ಅಭಯವನ್ನು ಕೊಟ್ಟು ಲಂಕಾರಾಜ್ಯದ ಪಟ್ಟಾಭಿಷೇಕಮಾಡಿಸಿ ಮನ್ನಿಸಿದನು. ಸಮುದ್ರ ದಾಟಲಿಕ್ಕೆ ಉಪಾಯವೇನೆಂದು ವಿಭೀಷಣನನ್ನು ಕೇಳಲು ಸಮುದ್ರರಾಜನನ್ನು ಪ್ರಾರ್ಥಿಸಿ, ದಾರಿಪಡೆಯಬಹುದೆಂದು ಅವನು ಯೋಚನೆ ಹೇಳಿದನು. ಬಳಿಕ ಶ್ರೀರಾಮನು ವಿಭೀಷಣನ ಸೂಚನೆಯಂತೆ ಸಮುದ್ರ ರಾಜನನ್ನು ಕುರಿತು ಸ್ತೋತ್ರಮಾಡಲು ಅವನು ಪ್ರಸನ್ನನಾಗಿ ರಾಮನನ್ನು ಕುರಿತು "ಎಲೈ ದೇವದೇವನೇ, ಮಾಯಾಮಾನುಷವಿಗ್ರಹನಾದ ನೀನು ನೆನಸಿದರೆ ನೆರವೇರದ ಕಾರ್ಯ ಉಂಟೆ? ವಿಶ್ವಕರ್ಮನ ಮಗನಾದ ನಳನು ಸಮುದ್ರಕ್ಕೆ ಸೇತುವನ್ನು ಕಟ್ಟಲಿ. ಅವನು ಕೈಮುಟ್ಟಿ ನನ್ನಲ್ಲಿ ಹಾಕುವ ಕಲ್ಲುಮುಳ್ಳುಗಳೆಲ್ಲಾ ನೀರಲ್ಲಿ ಮುಳುಗದೆ ಸೇತುವಿನಂತೆ ನಿಲ್ಲುವುವು. ನಿನ್ನ ಪ್ರತಿಷ್ಠೆಯು ಇದರಿಂದ ಜಗದ್ವಿಖ್ಯಾತವಾಗುವುದು," ಎಂದು ಹೇಳಿ ಆತನ ಅಪ್ಪಣೆಪಡೆದು ಹೊರಟುಹೋದನು.

ಬಳಿಕಲಾರಾಮಚಂದ್ರನು ಸೇತುವನ್ನು ಕಟ್ಟಲಿಕ್ಕೆ ಸಂಕಲ್ಪಿಸಿ, ಸಮುದ್ರತೀರದಲ್ಲಿ ರಾಮೇಶ್ವರನನ್ನುಸ್ಥಾಪಿಸಿ ಷೋಡಶೋಪಚಾರಗ

ಓಂದ ಲಾಪರಮೇಶ್ವರನನ್ನು ಪೂಜೆಮಾಡಿ, " ಯಾವ ಮನುಷ್ಯನೇ ಆಗಲಿ, ನಿಯಮದಿಂದ ಈ ರಾಮೇಶ್ವರನನ್ನು ಪೂಜಿಸಿ ಕಾಶಿಗೆ ಹೋಗಿ ಗಂಗೆಯಿಂದ ಉದಕವನ್ನು ತಂದು ಈಶ್ವರನಿಗೆ ಅಭಿಷೇಕ ಮಾಡಿದರೆ ಅವನು ಸಾಕ್ಷಾತ್ ಬ್ರಹ್ಮನೇ ಆಗುವನು. '' ಎಂದು ಹೇಳಿ ಮೊದಲನೆಯ ದಿನ ಸಮುದ್ರಕ್ಕೆ ಹದಿನಾಲ್ಕು ಯೋಜನದ ದೂರ ಸೇತುವನ್ನು ಕಟ್ಟಿದನು. ಎರಡನೆಯ ದಿನ ಇಪ್ಪತ್ತು ಯೋಜನವನ್ನೂ ಮೂರನೆಯ ದಿನ ಇಪ್ಪತ್ತೊಂದು ಯೋಜನವನ್ನೂ ನಾಲ್ಕನೆಯ ದಿನ ಇಪ್ಪತ್ತೆರಡು ಯೋಜನವನ್ನೂ ಐದನೆಯ ದಿನ ಇಪ್ಪತ್ತಮೂರು ಯೋಜನವನ್ನೂ ಕಟ್ಟಿಸಿದನು. ಅಲ್ಲಿಗೆ ಶತಯೋಜನದ ಸೇತುವೆಯು ಕಟ್ಟಿ ಮುಗಿಸಲ್ಪಟ್ಟಿತು. ಅಸಂಖ್ಯಾತವಾದ ಕಪಿಸೈನ್ಯವೆಲ್ಲವೂ ಆ ಸೇತುವಿನ ಮೇಲೆ ನಡೆದು ಸಮುದ್ರವನ್ನು ದಾಟಿತು. ರಾಮನು ಆಂಜನೇಯನ ಮೇಲೆಯೂ ಲಕ್ಷ್ಮಣನು ಅಂಗದನಮೇಲೆಯೂ ಕುಳಿತು ಸಮುದ್ರವನ್ನು ದಾಟಿ ಬಂದರು. ರಾಮಲಕ್ಷ್ಮಣರು ಸುವೇಲಾದ್ರಿಯನ್ನುಹತ್ತಿ ಅದರಮೇಲೆ ನಿಂತು ಲಂಕಾಪಟ್ಟಣದ ಸೊಬಗನ್ನು ನೋಡಿ ಅತ್ಯಾಶ್ಚರ್ಯಗೊಂಡರು. ರಾಮಸೈನ್ಯವನ್ನು ನೋಡಲಿಕ್ಕೆ ರಾವಣನಿಂದ ಕಳುಹಲ್ಪಟ್ಟ ಶುಕನು ವೇಷಾಂತರದಿಂದ ಅಲ್ಲಿಗೆ ಬರಲು ಕಪಿಗಳು ಅವನನ್ನು ಹಿಡಿದುಕೊಂಡು ಹೋಗಿ ಶ್ರೀರಾಮನ ಬಳಿಯಲ್ಲಿ ಬಿಟ್ಟರು. ರಾಮನು ಅವನನ್ನು ಕೊಲ್ಲಿಸದೆ, ಕಪಿಸೈನ್ಯವನ್ನೆಲ್ಲಾ ಅವನಿಗೆ ತೋರಿಸಿ, ರಾವಣನ ಬಳಿಗೆ ಹೊರಟುಹೋಗೆಂದು ಅವನನ್ನು ಕಳುಹಿಸಿಬಿಟ್ಟನು. ಅವನು ಅಲ್ಲಿಂದ ಹೊರಟು ತನ್ನ ಒಡೆಯನಾದ ರಾವಣನ ಬಳಿಗೆ ಹೋಗಿ ಆತನಿಗೆ ನಮಸ್ಕರಿಸಿ, ಶ್ರೀರಾಮನ ಬಳಿಯಲ್ಲಿ ಸೇರಿರುವ ಕಪಿಸೈನ್ಯದ ವಿಸ್ತಾರವನ್ನೆಲ್ಲಾ ವರ್ಣಿಸಿ ಹೇಳಿ ಎಲೈ ಲಂಕೇಶನೇ, ಆ ರಾಮನ ಸೇನೆಯು ಅಪರಿಮಿತವಾದದ್ದು ಆ ವೀರನೊಂದಿಗೆ ಕಾದಿ ಗೆಲ್ಲುವವನು ತ್ರಿಲೋಕಗಳಲ್ಲಿಯೂ ಒಬ್ಬನಾದರೂ ಇಲ್ಲವು. ನೀನು ಆ ಮಹಾನುಭಾವನೊಂದಿಗೆ ಸಂಧಿಯನ್ನುಮಾಡಿಕೊಂಡು ಆತನ ಪತ್ನಿಯಾದ ಸೀತಾದೇವಿಯನ್ನು ತೆಗೆದುಕೊಂಡು ಹೋಗಿ ಆತನಿಗೆ ಒಪ್ಪಿಸಿಬಿಡುವದು ಲೇಸು, ಆ ರಾಮಸೇನೆಯು ನಾಳೆಯ ದಿನವೇ ನಮ್ಮ ದುರ್ಗವನ್ನು ಮುತ್ತಿ ಧ್ವಂಸಮಾಡಲು ಪ್ರಯತ್ನಿಸಿಕೊಂಡಿರುವುದು. ಆ ಸೇನೆಯಲ್ಲಿ ಸುಗ್ರೀವ, ನಳ,ನೀಲ, ಅಂಗದ, ಜಾಂಬವಂತ, ಹನುಮಂತ, ಪ್ರಮುಖರಾದ ವೀರರು ಅನೇಕರಿರುವರು, ಸುಗ್ರೀವನೊಬ್ಬನ ಸೇನೆಯೋ

ಸಹಸ್ರಕೋಟಿ ಸಂಖ್ಯೆಯುಳ್ಳದ್ದು. ಇತರರ ಸೈನ್ಯವನ್ನು ಲೆಕ್ಕಿಸುವುದಕ್ಕೆ ನನ್ನಿಂದ ಸಾಧ್ಯವಲ್ಲದೆ ಹೋಯಿತು. ಶ್ರೀರಾಮನು ಮನುಷ್ಯಮಾತ್ರ ದವನೆಂದು ತಿಳಿಯಬೇಡ, ಎಲೈ ದಾನವೇಂದ್ರನೇ, ಅವನು ಸಾಕ್ಷಾದಾದಿ ನಾರಾಯಣನು. ಜಗಜ್ಜನನಿಯಾದ ಲಕ್ಷ್ಮೀದೇವಿಯೇ ಸೀತೆಯೆಂದು ತಿಳಿ. ಅವರಿಬ್ಬರಿಂದಲೇ ಸ್ಥಾವರ ಜಂಗಮಾತ್ಮಕವಾದ ಈ ಸಮಸ್ತ ಲೋಕ ಗಳೂ ಸೃಷ್ಟಿಸಲ್ಪಟ್ಟವು. ಆ ಸೀತಾರಾಮರೇ ಈ ಲೋಕದ ತಾಯಿ ತಂದೆಗಳೆಂದು ನಿಶ್ಚಯವಾಗಿ ನಂಬು. ಈ ಸಂಸಾರವು ನಶ್ವರವಾದದ್ದು. ಶರೀರವು ಕ್ಷಣಭಂಗುರವಾದುದು. ಪಂಚಭೂತಾತ್ಮಿಕವಾದ ಈ ದೇಹವು ಇಪ್ಪತ್ತೈದು ತತ್ವಗಳಿಂದ ಸೇರಿದೆ, ಮಲ, ಮಾಂಸ, ಅಸ್ಥಿ ಮುಂತಾ ದುವುಗಳ ದುರ್ಗಂಧದಿಂದ ತುಂಬಿ, ಅಹಂಕಾರದಿಂದ ಕೂಡಿ, ಜಡತರ ವಾದ ಈ ದೇಹದಲ್ಲಿ ವಿಶ್ವಾಸವಿಡಬೇಡ, ಈ ಶರೀರವು ಬ್ರಹ್ಮಹತ್ಯಾದಿ ಮಹಾಪಾತಕಗಳನ್ನು ಮಾಡಿ ಅವುಗಳ ಫಲವನ್ನು ಅನುಭವಿಸಿ. ಕಡೆಗೆ ಲಯವಾಗುವುದು. ತಾನುಮಾಡಿದ ಪುಣ್ಯಪಾಪಗಳಿಗೆ ಅನುರೂಪವಾದ ಸುಖದುಃಖಗಳನ್ನು ಕಾರಣದೇಹದಲ್ಲಿ ಅನುಭವಿಸಬೇಕಾಗುವುದು. ಎಲೈ ಮಹಾರಾಜನೇ, ಈ ದೇಹಾಭಿಮಾನವನ್ನು ಬಿಟ್ಟುಬಿಡು,ಆತ್ಮನು ಅತಿನಿರ್ಮಲನು, ಶುದ್ಧನು, ವಿಜ್ಞಾನಿಯು, ಅಚಲನು, ನಾಶರಹಿತನು, ಅಜ್ಞಾನವಶದಿಂದ ಬಂಧದಲ್ಲಿ ಸಿಕ್ಕಿ ಮೋಹಗೊಂಡು ಕೆಡುವನು. ಆದುದ ರಿಂದ ನೀನು ಪರಿಶುದ್ಧಭಾವದಿಂದ ಆತ್ಮನನ್ನು ತಿಳಿದುಕೊಂಡು, ಪುತ್ರ ದಾರ ಗೃಹಾದಿಗಳಲ್ಲಿ ಅಭಿಮಾನವನ್ನು ತೊರೆದು ವಿರಕ್ತನಾಗು. ಅನ್ಯಾ ಯವಾಗಿ ನರಕದಲ್ಲಿ ಬಿದ್ದು ದುಃಖಗಳನ್ನು ಅನುಭವಿಸಿ, ನಾಯಿ, ಹಂದಿ, ಮುಂತಾದ ನೀಚಜನ್ಮಗಳಲ್ಲಿ ಹುಟ್ಟಿ ಏತಕ್ಕೆ ಕೆಟ್ಟುಹೋಗುತ್ತೀಯೆ? ಬ್ರಹ್ಮವಂಶೋತ್ಪನ್ನನಾಗಿ ಭಾರತಭೂಮಿಯಲ್ಲಿ ಉತ್ತಮಜನ್ಮವನ್ನು ಪಡೆದಿರುವ ನೀನು ಅಜ್ಞಾನಿಯಂತೆ ಭೋಗಾಸಕ್ತನಾಗಿ ಏತಕ್ಕೆ ವೃಥಾ ಕೆಟ್ಟುಹೋಗುವೆ! ಇನ್ನುಮುಂದೆಯಾದರೂ ನೀನು ಸರ್ವಸುಖಗ ಳನ್ನು ಪರಿತ್ಯಾಗಮಾಡಿ ಸರ್ವದಾ ಭಕ್ತಿಭಾವದಿಂದ ಪರಾತ್ಮನಾಗಿಯೂ ಆತ್ಮಾರಾಮನಾಗಿಯೂ ಇರುವ ಶ್ರೀರಾಮನ ಪಾದಕಮಲಗಳನ್ನಾಶ್ರ ಯಿಸಿ, ಸೀತಾದೇವಿಯನ್ನು ಕೊಂಡೊಯ್ದು ಆ ಪರಮಾತ್ಮನಿಗೆ ಒಪ್ಪಿಸಿ, ಅತನ ಅನುಗ್ರಹಕ್ಕೆ ಪಾತ್ರನಾಗಿ ಸುಖದಿಂದಿರು. ಇದರಿಂದ ನೀನು ಸರ್ವ ಪಾಪವಿನಿರ್ಮುಕ್ತನಾಗಿ ವಿಷ್ಣುಲೋಕವನ್ನು ಪಡೆಯುತ್ತೀಯೆ. ಹಾಗೆ

ಮಾಡದೆ ಹೋದರೆ ಮಹಾಂಧನರಕದಲ್ಲಿ ಬಿದ್ದು ಕೆಟ್ಟುಹೋಗುವುದೇ ಸಿದ್ಧವು. ನಿನ್ನ ಹಿತಕ್ಕೋಸ್ಕರವಾಗಿಯೇ ನಾನು ಈ ರಹಸ್ಯವನ್ನು ತಿಳಿಸಿದ್ದೇನೆ. ಇಷ್ಟರಮೇಲೆ ನಿನ್ನ ಇಷ್ಟಬಂದಂತೆ ಮಾಡು " ಎಂದು ಹೇಳಿದನು.

ಈ ರೀತಿಯಿಂದ ಹೇಳಿದ ಶುಕನ ವಾಕ್ಯಗಳನ್ನು ಕೇಳಿ ರಾವಣನು ಕಣ್ಣುಗಳನ್ನು ಕೆಂಪಗೆ ಮಾಡಿಕೊಂಡು ಇಂತೆಂದನು—' ಎಲೈ ನೀಚನೆ! ನಿನಗೆ ಕೇಡುಗಾಲ ಬಂದಿದೆಯೋ? ಹುಚ್ಚನ ಹಾಗೆ ಮನಸ್ಸಿಗೆ ಬಂದಂತೆ ಬಗುಳುತ್ತೀಯೆ? ನಾನು ತ್ರಿಲೋಕಾಧಿಪತಿಯೆಂಬುದನ್ನರಿಯೆಯಾ? ಈಗಲೇ ನಿನ್ನನ್ನು ಕೊಂದು ಬಿಸುಡುತ್ತಿದ್ದೆನು. ಆದರೂ ನೀನು ಪೂರ್ವಜನ್ಮದಲ್ಲಿ ಮಾಡಿದ ಸೇವೆಯನ್ನು ಮನಸ್ಸಿನಲ್ಲಿಟ್ಟು ನೀನು ವಧ್ಯನಾಗಿದ್ದರೂ ನಿನ್ನನ್ನು ಕ್ಷಮಿಸಿದ್ದೇನೆ. ಎಲಾ ಮೂಢ! ಇಲ್ಲಿ ಒಂದು ಕ್ಷಣವೂ ನಿಲ್ಲದೆ ತೊಲಗಿಹೋಗು " ಎಂದು ಗದರಿಸಲು ' ನಿನ್ನ ಇಷ್ಟಬಂದಂತಾಗಲಿ ' ಎಂದು ನಡುಗುತ್ತ ಅವನು ತನ್ನ ಮನೆಗೆ ಹೊರಟುಹೋದನು. ಆ ಶುಕನು ಪೂರ್ವದಲ್ಲಿ ಬ್ರಾಹ್ಮಣನು; ಒಳ್ಳೆಯ ಬ್ರಹ್ಮಜ್ಞನು. ವಾನಪ್ರಸ್ಥಾಶ್ರಮದಿಂದ ಕಾಡಿನಲ್ಲಿದ್ದುಕೊಂಡು ತನ್ನ ನಿತ್ಯಕರ್ಮಗಳನ್ನು ಮಾಡುತ್ತ ದೇವತೆಗಳ ಹಿತವನ್ನೂ ರಾಕ್ಷಸರ ನಾಶವನ್ನೂ ಬಯಸಿ ಹಲವು ಯಜ್ಞಗಳನ್ನು ಮಾಡಿದನು. ದೇವಕಾರ್ಯಾಸಕ್ತನಾದ ಅವನನ್ನು ನೋಡಿ ರಾಕ್ಷಸರಿಗೆ ಬಹು ಕೋಪಬಂದಿತು. ಅವರಲ್ಲಿ ವಜ್ರದಂಷ್ಟ್ರನೆಂಬ ಒಬ್ಬ ರಾಕ್ಷಸನು ಅವನ ಅಂತರಂಗವನ್ನು ತಿಳಿಯಬೇಕೆಂದು ಯೋಚಿಸಿ ಶುಕನ ಆಶ್ರಮದ ಬಳಿಯಲ್ಲಿಯೇ ಸಮಯ ನಿರೀಕ್ಷಿಸಿಕೊಂಡು ಪ್ರಚ್ಛನ್ನನಾಗಿ ಅಲ್ಲಿಯೇ ಇದ್ದನು. ಒಂದಾನೊಂದು ದಿನ ಅಗಸ್ತ್ಯಮಹರ್ಷಿಗಳು ಅವನ ಆಶ್ರಮಕ್ಕೆ ಬರಲು ಶುಕನು ಆ ಮಹರ್ಷಿಯನ್ನು ಸತ್ಕರಿಸಿ ಭೋಜನಕ್ಕೋಸ್ಕರ ಆಮಂತ್ರಣ ಹೇಳಿದನು. ಬಳಿಕಲಾ ಅಗಸ್ತ್ಯನು ಸ್ನಾನಾರ್ಥವಾಗಿ ನದಿಗೆ ಹೋಗಿರಲು ಪ್ರಚ್ಛನ್ನನಾಗಿದ್ದ ಆ ದೈತ್ಯನು ಅಗಸ್ತ್ಯವೇಷವನ್ನು ಧರಿಸಿ ಬಂದು ಶುಕನನ್ನು ನೋಡಿ ' ಎಲೈ ಬ್ರಾಹ್ಮಣನೇ! ನನಗೆ ನೀನು ಭೋಜನವನ್ನು ಬಡಿಸುವುದಾದರೆ ಮಾಂಸವನ್ನು ಬಡಿಸಬೇಕು. ನಾನು ಆದಿನ ಮಾಂಸವನ್ನು ತಿಂದು ಬಹುದಿನಗಳಾದುವು ಈಗ ಆ ಮಾಂಸಾಪೇಕ್ಷೆ ನನಗೆ ಹೆಚ್ಚಾಗಿದೆ ' ಎಂದು ಹೇಳಿದನು. ಶುಕನು ಆ ಮಾತನ್ನು ಕೇಳಿ,

ಶವನ್ನು ಇಷ್ಟಾನುಸಾರ ಮಾಡಿಸುವೆನು—ಎಂದೊಪ್ಪಿಕೊಂಡು ಅದೇ ರೀತಿಯಲ್ಲಿ ಪಾಕವನ್ನು ಸಿದ್ಧಪಡಿಸಿದನು. ಸ್ವಲ್ಪ ಹೊತ್ತಿನಮೇಲೆ ಅಗಸ್ತ್ಯ ಮುನಿಯು ಬಂದು ಅವನಿಂದ ಸತ್ಕೃತರಾಗಿ ಊಟಕ್ಕೆ ಕುಳಿತರು. ಆಗಲಾ ರಾಕ್ಷಸನು ಅತ್ಯಂತ ಸುಂದರವಾದ ರೂಪವುಳ್ಳ ಶುಕನ ಭಾರ್ಯೆಯ ವೇಷವನ್ನು ಧರಿಸಿಕೊಂಡು ಬಂದು ಆ ಮಹರ್ಷಿಗೆ ಪಕ್ವವಾಗಿದ್ದ ನರಮಾಂಸವನ್ನು ತಂದು ಬಡಿಸಿ ತಾನು ಕಣ್ಮರೆಯಾದನು. ಅಗಸ್ತ್ಯ ಮಹರ್ಷಿಯು ತನ್ನ ಎಲೆಯಲ್ಲಿ ಬಡಿಸಿದ್ದ ನರಮಾಂಸವನ್ನು ನೋಡಿ 'ಎಲೈ ಮೂಢಾತ್ಮನೇ! ಅಪರಿಶುದ್ಧವಾದ ಮನುಷ್ಯಮಾಂಸವನ್ನು ನನಗೇತಕ್ಕೆ ಬಡಿಸಿದೆ? ಇಂತಹ ನೀಚಕೃತ್ಯಮಾಡಿದುದರಿಂದ ನೀನು ರಾಕ್ಷಸನಾಗಿ ನರಮಾಂಸವನ್ನು ಭಕ್ಷಿಸುತ್ತಾ ಬಿದ್ದಿರು. ಎಂದುಶಪಿಸಿದನು. ಆಗ ಶುಕನು ಭಯಗ್ರಸ್ಥನಾಗಿ ಆ ಮಹರ್ಷಿಗೆ ಕೈಮುದುಗಿ ನಿಂತುಕೊಂಡು ಭಕ್ತಿಯಿಂದ ಸ್ವಾಮಿ! ಇದಕ್ಕೆ ಸ್ವಲ್ಪ ಹೊತ್ತಿಗೆ ಮುಂಚೆ ತಾವು ದಯಮಾಡಿ "ಮಾಂಸದಮೇಲೆ ಬಹಳವಾಗಿ ನನಗೆ ಆಶೆ ಇದೆ. ಜಾಗ್ರತೆಯಲ್ಲಿ ಅಡಿಗೆ ಮಾಡಿಸಬೇಕು. ಎಂದಪ್ಪಣೆಕೊಡಿಸಿದಿರಿ, ನಾನು ಅದರಂತೆಯೇ ಮಾಂಸವನ್ನು ಅಡಿಗೆ ಮಾಡಿಸಿ ಬಡಿಸಿದನು. ಇದರಲ್ಲಿ ನನ್ನ ದೋಷವೇನೂ ಕಾಣಲಿಲ್ಲ. ನನಗೆ ಈ ರೀತಿ ಶಾಪವನ್ನು ಕೊಟ್ಟದ್ದಕ್ಕಾಗಿ ಚಿಂತಿಸುತ್ತೇನೆ." ಎಂದು ವಿನಯದಿಂದ ಹೇಳಿಕೊಂಡನು! ಈ ಮಾತನ್ನು ಕೇಳಿ ಅಗಸ್ತ್ಯಮಹರ್ಷಿಯು ಕ್ಷಣಕಾಲ ಧ್ಯಾನಮಾಡಿ ದಿವ್ಯದೃಷ್ಟಿಯಿಂದ ಇದು ರಾಕ್ಷಸನ ಕಪಟ ಕೃತ್ಯವೆಂದು ತಿಳಿದು ಆ ಶುಕನನ್ನು ನೋಡಿ 'ಅಯ್ಯಾ ಬ್ರಾಹ್ಮಣನೇ! ನಿಜಸ್ಥಿತಿ ಈಗ ಗೊತ್ತಾಯಿತು. ನಿನಗೆ ಅಪಕಾರಿಯಾದ ರಾಕ್ಷಸನೊಬ್ಬನು ಈ ರೀತಿಯಲ್ಲಿ ವಂಚಿಸಿದನು. ಇದನ್ನು ವಿಚಾರಮಾಡದೆ ನಿನಗೆ ಶಾಪವನ್ನು ಕೊಟ್ಟೆನು. ನನ್ನ ಶಾಪವು ವ್ಯರ್ಥವಾಗಲಿಕ್ಕಿಲ್ಲ. ನೀನು ರಾಕ್ಷಸದೇಹವನ್ನು ಧರಿಸಿ ರಾವಣನಬಳಿ ಸಹಾಯಕನಾಗಿದ್ದುಕೊಂಡು ಇರು. ಆ ರಾವಣನನ್ನು ವಧಿಸುವುದಕ್ಕೋಸ್ಕರ ಶ್ರೀರಾಮನು ಲಂಕಾದ್ವೀಪದ ಹತ್ತಿರಕ್ಕೆ ಬರುವನು. ಆಗ ನೀನು ರಾವಣನ ಗೂಢಚಾರನಾಗಿ ಕಪಿಸೈನ್ಯದೊಳಕ್ಕೆ ಹೋಗಿ ಶ್ರೀರಾಮನ ದರ್ಶನವನ್ನು ಮಾಡಿಕೊಂಡರೆ ನಿನಗೆ ಈ ನನ್ನ ಶಾಪವಿಮೋಚನೆಯಾಗುವುದು. ಬಳಿಕ ನೀನು ರಾವಣನ ಬಳಿಗೆ ಹೋಗಿ ಅವನಿಗೆ ತತ್ವಜ್ಞಾನವನ್ನುಪದೇಶಿಸಿ ಮುಕ್ತಿ ಪದವಿಯನ್ನು ಪಡೆಯುವೆ, ಎಂದು ಹೇಳಿ ಅಲ್ಲಿಂದ ಹೊರಟುಹೋದನು. ಬಳಿಕ ಶುಕನು

ರಾಕ್ಷಸರೂಪವನ್ನು ಧರಿಸಿ ರಾವಣನ ಬಳಿಗೆ ಬಂದು ಅವನ ಸಹಾಯಕ
ನಾಗಿದ್ದನು. ಅವನು ಈಗ ಚಾರರೂಪದಿಂದ ಬಂದು ರಾಮಲಕ್ಷ್ಮಣರನ್ನು
ಕಂಡು ಅಲ್ಲಿಂದ ರಾವಣನ ಬಳಿಗೆ ಹೋಗಿ ಅವನಿಗೆ ತತ್ವಜ್ಞಾನವನ್ನು
ತಿಳಿಸಿ ಪೂರ್ವದಂತೆ ಬ್ರಾಹ್ಮಣನಾಗಿ ಹೊರಟು ಹೋಗಿ ವನದಲ್ಲಿ ತಪಸ್ಸು
ಮಾಡಿಕೊಂಡಿದ್ದನು.

ತರುವಾಯ ರಾವಣನ ಮಾತಾಮಹನಾದ ಮಾಲ್ಯವಂತನು ಅಲ್ಲಿಗೆ
ಬಂದು ತನ್ನ ಮೊಮ್ಮಗನನ್ನು ನೋಡಿ 'ಎಲೈ ರಾಜನೆ! ನನ್ನ ಮಾತನ್ನು
ಕೇಳು, ರಾಮಪತ್ನಿಯಾದ ಸೀತೆಯು ಈ ಲಂಕೆಗೆ ಬಂದಂದಿನಿಂದ
ದುರ್ನಿಮಿತ್ತಗಳು ಕಾಣಬರುತ್ತಿವೆ. ಇವು ರಾಕ್ಷಸರಿಗೆ ಭಯಂಕರವಾಗಿ
ನಾಶಹೇತುಗಳಾಗಿ ತೋರುತ್ತವೆ. ಅವುಗಳನ್ನು ವಿವರಿಸುತ್ತೇನೆ ಕೇಳು,
ಕತ್ತೆಗಳು ಗುಡುಗಿನ ಧ್ವನಿಗಳಂತೆ ಭಯಂಕರವಾಗಿ ಕಿರಿಚುತ್ತಿವೆ.
ಉಷ್ಣವಾದ ರಕ್ತದ ಮಳೆಯು ಈ ಪಟ್ಟಣದಮೇಲೆಲ್ಲಾ ಸುರಿಯಿತು.
ಆಲಯಗಳಲ್ಲಿರುವ ದೇವತಾವಿಗ್ರಹಗಳೆಲ್ಲ ಬೆವತು ಕದಲುತ್ತಾ ಅಳುತ್ತಿವೆ.
ಶಕ್ತಿದೇವತೆಗಳು ಹಲ್ಲುಕಿರಿದುಕೊಂಡು ಎದುರಿಗೆ ಹಾಸ್ಯಮಾಡುತ್ತಲಿವೆ.
ಹಸುಗಳ ಹೊಟ್ಟೆಯಲ್ಲಿ ಕತ್ತೆಯ ಮರಿಗಳು ಹುಟ್ಟುತ್ತಿವೆ. ಇಲಿಗಳೂ
ಮುಂಗುಸಿಗಳೂ, ಬೆಕ್ಕುಗಳೂ, ನಾಯಿಗಳೂ, ಹಾವುಗಳೂ, ಗರುಡನೂ,
ಪರಸ್ಪರ ಯುದ್ಧ ಮಾಡುತ್ತಲಿವೆ. ಭಯಂಕರನಾದ ಕಾಲಪುರುಷನು
ಮುಂಡಿತಶಿರಸ್ಕನಾಗಿ ಆಗಾಗ್ಗೆ ಜನಗಳೆಲ್ಲರಿಗೂ ದರ್ಶನಕೊಡುತ್ತಿರುವನು.
ಇಂಥ ಉತ್ಪಾತಗಳು ಇನ್ನೂ ಅನೇಕ ಹುಟ್ಟುತ್ತಿರುವುದರಿಂದ ನಮಗೆ
ಕ್ಷೇಮವಿಲ್ಲವೆಂದು ಕಾಣುತ್ತದೆ. ಆದಕಾರಣ ಕುಲಸಂರಕ್ಷಣಾರ್ಥ
ವಾಗಿ ಶಾಂತಿಯನ್ನು ಮಾಡಿಸುವುದವಶ್ಯಕ. ಸೀತಾದೇವಿಯನ್ನು ಸತ್ಕ
ರಿಸಿ ತಪ್ಪುಕಾಣಿಕೆ ಸಹಿತವಾಗಿ ತೆಗೆದುಕೊಂಡುಹೋಗಿ ಶ್ರೀರಾಮದೇವ
ರಿಗೊಪ್ಪಿಸು. ರಾಮನು ಮನುಷ್ಯಮಾತ್ರನಲ್ಲ. 'ಸಾಕ್ಷಾತ್ ನಾರಾ
ಯಣಮೂರ್ತಿಯೆಂದು ಭಾವಿಸು. ನೀನು ಆತನಲ್ಲಿ ದ್ವೇಷವನ್ನು
ಬಿಟ್ಟುಬಿಡು, ಆ ಪರಮಾತ್ಮನ ಪಾದಾರವಿಂದವೆಂಬ ನಾವೆಯ ಸಹಾಯ
ದಿಂದ ಜ್ಞಾನಿಗಳು ಜನ್ಮಸಮುದ್ರವನ್ನು ದಾಟುತ್ತಾರೆ. ನೀನು
ಭಕ್ತಿಭಾವದಿಂದ ಶ್ರೀರಾಮನನ್ನು ನಿನ್ನ ಮನಸ್ಸಿನಲ್ಲಿ ಧ್ಯಾನಿಸಿ
ಆತನಿಗೆ ಶರಣಾಗತನಾಗು,' ಎಂದು ಹೇಳಿದನು. ದುರಾತ್ಮನಾದ
ರಾವಣನು ಕಾಲಪ್ರೇರಿತನಾಗಿ ತನ್ನ ಅಜ್ಜನ ಮಾತನ್ನೂ ಪರಿಗಣಿಸದೆ

ಆತನನ್ನು ಕುರಿತು, 'ತಾತಾ! ಮುದುಕರಾದ ನಿಮಗೆ ಈಗಿನ ಸಮಾಚಾರಗಳು ಗೊತ್ತಿಲ್ಲ. ನಿಮ್ಮ ಮಾತನ್ನು ನಾನೊಪ್ಪುವುದಿಲ್ಲ. ಸದ್ಯಕ್ಕೆ ಮನೆಗೆ ಹೋಗಿರಿ,' ಎಂದು ಹೇಳಿ ಆತನನ್ನು ಕಳುಹಿಬಿಟ್ಟು ತಾನು ತನ್ನ ಪ್ರಾಸಾದದ ತುದಿಯನ್ನೇರಿ ಕಪಿಸೈನ್ಯವನ್ನೆಲ್ಲ ಚೆನ್ನಾಗಿ ದೃಷ್ಟಿಸಿನೋಡಿ ತನ್ನ ಸೇನೆಯೆಲ್ಲವೂ ಯುದ್ಧಕ್ಕೆ ಸಿದ್ಧವಾಗಿರಬೇಕೆಂದು ಆಜ್ಞೆ ಮಾಡಿ ಅಲ್ಲಿಯೇ ನಿಂತಿದ್ದನು. ಧನುಷ್ಪಾಣಿಯಾದ ಶ್ರೀರಾಮನು ಲಕ್ಷ್ಮಣ ಸಮೇತನಾಗಿ ಪಾಳಯದಲ್ಲಿದ್ದು ಪ್ರಾಸಾದಾಗ್ರದಲ್ಲಿ ಮಂತ್ರಿಸಮೇತನಾಗಿ ನಿಂತಿರುವ ರಾವಣನನ್ನು ನೋಡಿ ತಾನು ನಿಂತಿದ್ದ ಸ್ಥಳದಿಂದಲೇ ಒಂದು ಬಾಣಪ್ರಯೋಗ ಮಾಡಿದನು. ಅಮೋಘವಾದ ಆ ರಾಮಬಾಣವು ರಾವಣನಿಗೆ ಹಿಡಿದಿದ್ದ ಸಾವಿರ ಶ್ವೇತಚ್ಛತ್ರಿಗಳನ್ನೂ, ಅವನ ತಲೆಯ ಮೇಲಿದ್ದ ಹತ್ತು ಕಿರೀಟಗಳನ್ನೂ ನಿಮಿಷಾರ್ಧದಲ್ಲಿ ಕಡಿದುಹಾಕಿತು. ಈ ಅದ್ಭುತಕೃತ್ಯವನ್ನು ನೋಡಿ ರಾವಣನು ನಾಚಿಕೊಂಡು ಅಲ್ಲಿ ನಿಲ್ಲದೆ ತತ್ಕ್ಷಣವೇ ಹೊರಟುಬಂದು ತನ್ನ ಅರಮನೆಯನ್ನು ಸೇರಿಕೊಂಡನು. ಬಳಿಕಲಾ ರಾವಣನು ಪ್ರಹಸ್ತಾದಿ ಮಂತ್ರಿಶ್ರೇಷ್ಠರನ್ನು ನೋಡಿ 'ನೀವೆಲ್ಲರೂ ಯುದ್ಧಕ್ಕೆ ಸಿದ್ಧರಾಗಿ ನಿಖಿಲಾಯುಧಗಳನ್ನೂ ಧರಿಸಿಕೊಂಡು ಹೋಗಿ ಶತ್ರುಗಳೊಂದಿಗೆ ಯುದ್ಧಮಾಡಿರಿ,' ಎಂದು ಅಪ್ಪಣೆ ಕೊಟ್ಟು ಕಳುಹಿಸಿದನು. ಅದಕ್ಕೆ ಮುಂಚೆಯೇ ಶ್ರೀರಾಮನ ಆಜ್ಞೆಯಿಂದ ಕಪಿವೀರರು ಲಂಕಾದುರ್ಗವನ್ನು ಮುತ್ತಿ ಬೆಟ್ಟಗುಡ್ಡಗಳಿಂದಲೂ ಮರಗಿಡಗಳಿಂದಲೂ ಅಲ್ಲಿದ್ದ ರಾಕ್ಷಸಸೈನ್ಯದೊಡನೆ ಹೋರಾಡುತ್ತ, ರಾಮನಿಗೆ ಜಯವಾಗಲಿ! ಲಕ್ಷ್ಮಣನಿಗೆ ಜಯವಾಗಲಿ! ಶ್ರೀರಾಮನ ಮಿತ್ರನಾದ ಸುಗ್ರೀವರಾಜನು ಯುದ್ಧದಲ್ಲಿ ಗೆಲುವನ್ನು ಪಡೆಯಲಿ! ಎಂದು ಉದ್ಘೋಷಿಸುತ್ತಾ ಕಾಳಗ ಮಾಡುತ್ತಿದ್ದರು. ಆ ಸೇನೆಯಲ್ಲಿ ಹನುಮಂತನೂ, ಅಂಗದನೂ, ಕುಮುದನೂ, ನೀಲನೂ, ನಲನೂ, ಶರಭನೂ, ಮೈಂದದ್ವಿವಿಧರೂ ಜಾಂಬವಂತ ಮುಂತಾದ ವೀರರೆಲ್ಲರೂ ಲಂಕಾದ್ವಾರಗಳನ್ನು ಮುತ್ತಿಕೊಂಡು ಘೋರಯುದ್ಧ ಮಾಡುತ್ತಿದ್ದರು, ಪರಸ್ಪರ ಜಯಾಭಿಲಾಷೆಯಿಂದ ಯುದ್ಧಮಾಡುತ್ತಿರುವಾಗ ಶ್ರೀರಾಮನು ತನ್ನ ಸೈನ್ಯವನ್ನು ನೋಡಿ ದಿವ್ಯಶಕ್ತಿಯಿಂದ ಕಾದಿರೆಂದು ಅವರನ್ನು ಹುರಿದುಂಬಿಸಲು ಅವರು ಅಮೃತಪಾನಮಾಡಿದವರಂತೆ ನಿಮಿಷನಿಮಿಷಕ್ಕೂ ಹೆಚ್ಚು ಹೆಚ್ಚು ಬಲವುಳ್ಳವರಾಗಿ ಶತ್ರುಸೈನ್ಯವನ್ನು ಕೆಡಹುತ್ತಾ ಬಂದರು.

ಸೀತಾದೇವಿಯನ್ನು ತಂದು ಸೆರೆಯಲ್ಲಿಟ್ಟ ಪಾಪದ ದೆಸೆಯಿಂದ ರಾವಣ ನಿಗೆ ದೈವಬಲ ತಪ್ಪಿ ಅವನ ಸೇನೆಯಲ್ಲಿ ನಾಲ್ಕನೇ ಒಂದುಭಾಗ ನಷ್ಟ ವಾಯಿತು. ಇದನ್ನು ಕಂಡು ರಾವಣನ ಮಗನಾದ ಇಂದ್ರಜಿತುವು ಬ್ರಹ್ಮನಿಂದ ಕೊಡಲ್ಪಟ್ಟ ವರದ ಹೆಮ್ಮೆಯಿಂದ ಶ್ರೀರಾಮನ ಎದುರಿಗೆ ಯುದ್ಧಕ್ಕೆ ನಿಂತನು. ಆಗ ಶ್ರೀರಾಮನು ಲಕ್ಷ್ಮಣನನ್ನು ನೋಡಿ 'ತಮ್ಮಾ! ಬಿಲ್ಲನ್ನಿಲ್ಲಿ ಕೊಡು, ಬ್ರಹ್ಮಾಸ್ತ್ರದಿಂದ ಈ ರಾಕ್ಷಸರನ್ನು ಸುಟ್ಟುಬೂದಿಮಾಡುವೆನು, ನನ್ನ ಬಲವನ್ನು ದೇವತೆಗಳು ನೋಡಲಿ,' ಎಂದು ಗರ್ಜಿಸಿದನು. ಇಂದ್ರಜಿತುವು ಈ ವಾಕ್ಯವನ್ನು ಕೇಳಿ ಮನ ಸ್ಸಿನಲ್ಲಿ ಹೆದರಿ ತತ್‍ಕ್ಷಣವೇ ಮಾಯೆಯಿಂದ ಓಡಿಹೋಗಿ ತನ್ನ ಅರಮನೆ ಯನ್ನು ಸೇರಿಕೊಂಡನು.

ಬಳಿಕ ಶ್ರೀರಾಮನು ಯುದ್ಧದಲ್ಲಿ ಸತ್ತು ಬಿದ್ದಿದ್ದ ಕಪಿಸೈನ್ಯ ವನ್ನು ನೋಡಿ ತುಂಬ ವ್ಯಸನಾಕ್ರಾಂತನಾಗಿ ಆಂಜನೇಯನನ್ನು ಕರೆದು 'ಎಲೈ ಮಾರುತಿಯೆ! ನೀನು ಜಾಗ್ರತೆಯಲ್ಲಿ ಕ್ಷೀರಸಮುದ್ರಕ್ಕೆ ಹೋಗಿ ಅಲ್ಲಿರುವ ದ್ರೋಣಗಿರಿಯಲ್ಲಿ ದಿವ್ಯೌಷಧಿಗಳನ್ನು ಹುಡುಕಿ ತಂದು ಸತ್ತು ಹೋಗಿರುವ ಈ ಕಪಿಬಲವನ್ನು ಎಬ್ಬಿಸು,' ಎಂದು ಅಪ್ಪಣೆಕೊಟ್ಟನು. ಕೂಡಲೆ ಆಂಜನೇಯನು ರಾಮಾಜ್ಞೆಯಂತೆ ಹೋಗಿ ದಿವ್ಯೌಷಧಿಗಳನ್ನು ತಂದುಬಿದ್ದಿದ್ದ ಕಪಿಸೈನ್ಯಗಳಿಗೆಲ್ಲ ಜೀವವುಳಿಸಿ ಪುನಃ ಬೆಟ್ಟವನ್ನು ಪೂರ್ವದಲ್ಲಿದ್ದ ಸ್ಥಳದಲ್ಲಿಯೇ ನಿಲ್ಲಿಸಿ ಜಾಗ್ರತೆಯಲ್ಲಿ ಹೊರಟುಬಂದನು. ಕಪಿಸೈನ್ಯವೆಲ್ಲ ಮೊದಲಿನಂತೆ ಎದ್ದು ಗರ್ಜಿಸುತ್ತ ಲಂಕೆಯನ್ನು ಮುತ್ತಿಗೆ ಹಾಕಿತು. ಆಗ ರಾವಣನು ಯುದ್ಧಕ್ಕೆ ಪ್ರಮುಖರಾದ ರಾಕ್ಷಸವೀರ ರನ್ನು ಕಳುಹಿಸುತ್ತಾ ಬಂದನು. ಅತಿಕಾಯನೂ ಪ್ರಹಸ್ತನೂ ಮೇಘ ನಾದನೂ ಮಹೋದರನೂ ನಿಕುಂಭನೂ ದೇವಾಂತಕ ನರಾಂತಕರೂ ಮೊದಲಾದ ಶೂರರೆಲ್ಲ ಯುದ್ಧಮಾಡಲಿಕ್ಕೆ ರಾವಣನಿಂದ ಅಪ್ಪಣೆ ಪಡೆದು ವಿವಿಧಾಯುಧಪಾಣಿಗಳಾಗಿ ಕಪಿಸೈನ್ಯದಮೇಲೆ ಬಿದ್ದು ಕಾದುತ್ತಾ ಇದ್ದರು. ಅವರಲ್ಲಿ ಕೆಲವರು ರಾಮನಿಂದಲೂ ಕೆಲವರು ಸುಗ್ರೀವ ನಿಂದಲೂ ಕೆಲವರು ಹನುಮಂತನಿಂದಲೂ ಕೆಲವರು ಅಂಗದನಿಂದಲೂ ಕೆಲವರು ಲಕ್ಷ್ಮಣನಿಂದಲೂ ಕೆಲವರು ನಳನಿಂದಲೂ ಕೆಲವರು ನೀಲ ನಿಂದಲೂ ಹತರಾದರು. ಕಪಿಸೈನ್ಯಕ್ಕೆ ಶ್ರೀರಾಮಾನುಗ್ರಹದಿಂದ ಶಕ್ತಿ ಯು ಹೆಚ್ಚುತ್ತ ಬಂತು, ದೈವಬಲಹೀನನಾದ ರಾವಣನ ಸೇನೆಯೆಲ್ಲವೂ ಕ್ಷಿಲವಾಗುತ್ತ ಬಂದಿತು.

ಆಗ ರಾವಣನು ತನ್ನ ಮಕ್ಕಳಲ್ಲಿ ಶೂರರಾದ ಅತಿಕಾಯ ಮುಂತಾದವರು ಯುದ್ಧದಲ್ಲಿ ಮಡಿದ ಸುದ್ದಿಯನ್ನು ಕೇಳಿ ಲಂಕಾದುರ್ಗದ ರಕ್ಷಣೆಗಾಗಿ ಶೂರನಾದ ಇಂದ್ರಜಿತುವನ್ನು ನಿಲ್ಲಿಸಿ ಶ್ರೀರಾಮನೊಂದಿಗೆ ಯುದ್ಧ ಮಾಡಲಿಕ್ಕೆ ತಾನೇ ಹೊರಟನು. ಆತನ ಸಂಗಡ ಕೋಟ್ಯಾಂತರ ಸೈನಿಕರು ವಿವಿಧಾಯುಧ ಪಾಣಿಗಳಾಗಿ ನುಗ್ಗಿದರು. ಆಗ ರಾವಣನು ಸುಗ್ರೀವ ಮೊದಲಾದ ಸೇನಾಪತಿಗಳನ್ನು ಸೋಲಿಸಿ ತನ್ನನ್ನು ಎದುರಿಸಿದ ಮಹಾಬಲಶಾಲಿಯಾದ ವಿಭೀಷಣನನ್ನು ನೋಡಿ ಅವನ ಸಂಹಾರಾರ್ಥವಾಗಿ ಮಹಾಶಕ್ತಿಯೊಂದನ್ನು ಪ್ರಯೋಗಿಸಿದನು. ಶ್ರೀರಾಮನು ತನ್ನ ಮಿತ್ರನನ್ನು ಕೊಲ್ಲಲಿಕ್ಕೆ ಬರುತ್ತಿರುವ ಆ ಶಕ್ತಿಯನ್ನು ತಡೆಯಬೇಕೆಂದು ಲಕ್ಷ್ಮಣನಿಗೆ ಆಜ್ಞಾಪಿಸಲು ಅವನು ಧನುರ್ಬಾಣಗಳನ್ನು ತೆಗೆದುಕೊಂಡು ವಿಭೀಷಣನ ಮುಂದುಗಡೆಯಲ್ಲಿ ರಾವಣನ ಶಕ್ತಿಗೆ ಎದುರಿಗೆ ಪರ್ವತದಂತೆ ಚಲಿಸದೆ ನಿಂತುಕೊಂಡನು. ಆಗಲಾಶಕ್ತಿಯು ಶೇಷಾಂಶ ಸಂಭವನಾದ ಲಕ್ಷ್ಮಣನನ್ನು ಕೊಲ್ಲಲಿಕ್ಕೆ ಶಕ್ತಿಯಿಲ್ಲದಿದ್ದರೂ ಮಂತ್ರಬಲದಿಂದ ಆ ಮಹಾಶೂರನನ್ನು ಮೂರ್ಛೆಗೊಳಿಸಿತು. ಆಗ ರಾವಣನು ಮೈಮರೆತು ಬಿದ್ದಿದ್ದ ಲಕ್ಷ್ಮಣನನ್ನು ತನ್ನ ಅರಮನೆಗೆ ಕೊಂಡೊಯ್ಯಬೇಕೆಂದು ತನ್ನ ಇಪ್ಪತ್ತು ಕೈಗಳಿಂದಲೂ ಎತ್ತಲಿಕ್ಕೆ ಹೋದರೂ ಅವನ ಶರೀರವು ಸ್ವಲ್ಪವಾದರೂ ಕದಲದೆ ಇತ್ತು. ಆಗ ರಾವಣನು ಅತ್ಯಾಶ್ಚರ್ಯವುಳ್ಳವನಾಗಿ ' ಪರಮೇಶ್ವರನ ಕೈಲಾಸವನ್ನು ಕೂಡ ಮೇಲಕ್ಕೆತ್ತಿದ ನನಗೆ ಈ ಮೂರ್ಛೆಬಿದ್ದಿರುವ ಈ ಮನುಷ್ಯನನ್ನು ಎತ್ತಲು ಶಕ್ತಿಯಿಲ್ಲದೆ ಹೋಯಿತಲ್ಲಾ ! ಆಗಲಿ, ಇನ್ನೊಂದು ಸಾರಿ ಯತ್ನಿಸಿ ನೋಡುವೆನು.' ಎಂದು ಮತ್ತೊಂದುಸಾರಿ ಕದಲಿಸಿ ನೋಡಿದನು. ಅದನ್ನು ತಿಳಿದು ಆಂಜನೇಯನು ತತ್ಕ್ಷಣವೇ ಅಲ್ಲಿಗೆ ಓಡಿ ಬಂದು ವಜ್ರಸಮಾನವಾದ ತನ್ನ ಮುಷ್ಟಿಯಿಂದ ಆ ರಾವಣನ ಎದೆಯ ಮೇಲೆ ಬಡಿದನು. ರಾವಣನು ಆ ಪೆಟ್ಟಿಗೆ ತಡೆಯಲಾರದೆ ಬಾಯಿ ಕಣ್ಣು ಕಿವಿಗಳಿಂದ ರಕ್ತವನ್ನು ಕಾರುತ್ತ ನಿಶ್ಚೇಷ್ಟಿತನಾಗಿ ಭೂಮಿಯಲ್ಲಿ ಬಿದ್ದನು, ಬಳಿಕ ಆಂಜನೇಯನು ಲಕ್ಷ್ಮಣನನ್ನು ಎತ್ತಿಕೊಂಡು ಬಂದು ಶ್ರೀರಾಮನ ಸನ್ನಿಧಿಯಲ್ಲಿರಿಸಿದನು. ಅತ್ತ ರಾವಣನು ಸ್ವಲ್ಪಹೊತ್ತಿಗೆ ಎಚ್ಚತ್ತು ತನ್ನ ಶಕ್ತಿ ಹೋದುದಕ್ಕೂ ಕೈಗೆ ಸಿಕ್ಕಿದ್ದ ಲಕ್ಷ್ಮಣನು ತಪ್ಪಿಸಿಕೊಂಡುಹೋದುದಕ್ಕೂ ಬಹಳವಾಗಿ ಚಿಂತಿಸಿ ಅಲ್ಲಿಂದ ರಥದ

ಮೇಲೆ ಕುಳಿತು ಶ್ರೀರಾಮನನ್ನು ಹುಡುಕಿಕೊಂಡು ಹೋಗಿ ಅವನನ್ನು ಎದುರಿಸಿ ಯುದ್ಧಕ್ಕೆ ನಿಂತನು. ಅವನನ್ನು ನೋಡಿ ಶ್ರೀರಾಮನು ಗಂಭೀರವಾಕ್ಯಗಳಿಂದ ಅವನನ್ನು ಕುರಿತು ‘ ಎಲೈ ರಾವಣನೆ ! ನೀನು ನನಗೆ ಅಪರಾಧಮಾಡಿದವನಾಗಿದ್ದರೂ ನಾನು ಇನ್ನೂ ನಿನ್ನನ್ನು ಕೊಲ್ಲದೆ ಮತ್ತೊಂದುಸಾರಿ ಎಚ್ಚರಿಕೆ ಕೊಡುವೆನು, ಈಗಲಾದರೂ ಶರಣಾಗತನಾಗಿ ಬಂದರೆ, ನೀನು ಜೀವಸಹಿತನಾಗಿ ಉಳಿಯುವೆ,’ ಎಂದು ಹೇಳಿದನು. ರಾವಣನು ಆ ಮಾತಿನಿಂದ ಕ್ರೋಧತಾಮ್ರಾಕ್ಷನಾಗಿ ಶ್ರೀರಾಮನ ಮೇಲೆ ಬಾಣಪ್ರಯೋಗ ಮಾಡಿದನು. ರಾಮನು ಅವುಗಳನ್ನು ಖಂಡಿಸಿ ಆ ರಾವಣನ ಕುದುರೆ, ಧ್ವಜ, ರಥ, ಸಾರಥಿ, ಶಸ್ತ್ರಾಸ್ತ್ರಗಳು, ಛತ್ರ ಮುಂತಾದುವುಗಳನ್ನೆಲ್ಲ ದಿವ್ಯಬಾಣಗಳಿಂದ ಕತ್ತರಿಸಿ ಆ ಅರ್ಧಚಂದ್ರಾಕಾರವಾದ ಬಾಣಗಳಿಂದ ಅವನ ಕಿರೀಟವನ್ನು ತುಂಡುತುಂಡಾಗಿ ಮಾಡಿ ‘ಅಯ್ಯಾ, ನಾರೀಚೋರನೆ ! ನೀನು ಶಕ್ತಿಹೀನನಾಗಿರುವುದರಿಂದ ಈ ವೇಳೆಯಲ್ಲಿ ನಿನ್ನನ್ನು ಬಿಟ್ಟಿರುವೆನು. ನಿನ್ನ ಪಟ್ಟಣಕ್ಕೆ ಹೋಗಿ ಸಿದ್ಧಪಡಿಸಿಕೊಂಡು, ಮತ್ತೆ ನಾಳೆ ಕಾಳಗಕ್ಕೆ ಬಾ,’ ಎಂದು ಹೇಳಿ ಕಳುಹಿಸಿದನು. ಇದರಿಂದ ರಾವಣನು ತುಂಬ ನಾಚಿಗೊಂಡು ಅಲ್ಲಿ ನಿಲ್ಲದೆ ಹಿಂದಿರುಗಿ ತನ್ನ ಅರಮನೆಗೆ ಹೋಗಿ ಸೇರಿಕೊಂಡನು.

ಯುದ್ಧಭೂಮಿಯಲ್ಲಿ ಮೂರ್ಛೆ ಬಿದ್ದಿರುವ ಲಕ್ಷ್ಮಣನನ್ನು ನೋಡಿ ಶ್ರೀರಾಮನು ಪ್ರಾಕೃತ ಮನುಷ್ಯನಂತೆ ದುಃಖಿಸುತ್ತ ಹನುಮಂತನನ್ನು ನೋಡಿ ‘ಆಂಜನೇಯನೆ ! ಮಹೌಷಧಿಗಳನ್ನು ತಂದು ನನ್ನ ತಮ್ಮನನ್ನು ಬದುಕಿಸಲಾರೆಯಾ ?’ ಎಂದು ಬೇಡಿಕೊಂಡನು. ಕೂಡಲೆ ಆ ಮಾರುತಿಯು ಮಹಾಪ್ರಸಾದವೆಂದು ಹೊರಟು, ಕ್ಷೀರಸಾಗರ ಮಾರ್ಗವಾಗಿ ಹೋಗುತ್ತಿದ್ದನು. ರಾವಣನು ಗೂಢಚಾರರಿಂದ ಈ ವೃತ್ತಾಂತವನ್ನು ತಿಳಿದು ಆಂಜನೇಯನ ಪ್ರಯತ್ನವನ್ನು ವಿಫಲಗೊಳಿಸಬೇಕೆಂದು ಯೋಚಿಸಿ ತತ್‌ಕ್ಷಣದಲ್ಲಿಯೇ ಕಾಲನೇಮಿಯ ಮನೆಗೆ ಹೋದನು. ಆ ರಾಕ್ಷಸನು ರಾವಣನನ್ನು ನೋಡಿ ಭಯದಿಂದ ಕಂಪಿಸುತ್ತ ಆತನಿಗೆ ಕೈ ಮುಗಿದು ‘ಎಲೈ ರಾಜೇಂದ್ರನೆ ! ಹೀಗೆ ಏಕಾಂಗಿಯಾಗಿ ನೀನು ಬಂದುದಕ್ಕೆ ಕಾರಣವೇನು ?’ ಎಂದು ಕೇಳಲಾರಾವಣನು ಅದುವರೆಗೆ ಯುದ್ಧಭೂಮಿಯಲ್ಲಿ ನಡೆದ ವೃತ್ತಾಂತವನ್ನೆಲ್ಲಾ ತಿಳುಹಿ, ‘ಎಲೈ ಮಿತ್ರನೆ ! ನೀನು ಕಪಟಮುನಿಯಾಗಿ ಆಂಜನೇಯನನ್ನು ವಂಚಿಸಿ,

ಕಾಲಹರಣಮಾಡುತ್ತಿದ್ದರೆ ಲಕ್ಷ್ಮಣನು ಪ್ರಾಣಬಿಡುವನು. ನನಗೆ ಈ ಉಪಕಾರಮಾಡಬೇಕು.' ಎಂದು ಪ್ರಾರ್ಥಿಸಲಾಕಾಲನೇಮಿಯು ರಾವಣನನ್ನು ಕುರಿತು ಇಂತೆಂದನು :—

'ಎಲೈ ರಾಕ್ಷಸರಾಜನೆ! ನನ್ನ ಮಾತನ್ನು ಸಾವಧಾನದಿಂದ ಕೇಳು. ನಿನಗೆ ಹಿತವನ್ನಾಚರಿಸಬೇಕೆಂಬುದು ನನ್ನ ಇಷ್ಟವು. ನನ್ನ ಪ್ರಾಣಗಳಮೇಲೆ ಸುದಾ ನನಗಾಶೆಯಿಲ್ಲ. ಹಿಂದೆ ಮಾಯಾಮೃಗರೂಪಿಯಾದ ಮಾರೀಚನಿಗೆ ಸಂಭವಿಸಿದ ಅಪಾಯುವೇ ನನಗೂ ಉಂಟಾಗುವುದು ನಿಶ್ಚಯ. ಇದರಿಂದ ನಿನಗಾದರೂ ಕ್ಷೇಮವುಂಟಾದೀತೆ? ಅದೂ ಇಲ್ಲ. ನಿನ್ನ ಪುತ್ರಪೌತ್ರರೂ ಬಾಂಧವರೂಆದ ರಾಕ್ಷಸರಲ್ಲಿ ಅನೇಕರು ಮಡಿದರು. ಉಳಿದವರು ಕೂಡ ತಮ್ಮ ಪ್ರಾಣಗಳಿಗೆ ಸಂಚಕಾರವನ್ನು ಪಡೆದಿರುವರು. ಇದರಿಂದ ನೀನಾದರೂ ಜೀವಸಹಿತನಾಗಿ ಉಳಿಯುವೆಯೆಂದು ನನಗೆ ತೋರಲಿಲ್ಲ. ಎಲೈ ಪ್ರಭುವೆ! ನಿನಗೊಂದು ರಹಸ್ಯವನ್ನು ಹೇಳುವೆನು ಕೇಳು. ನಿನಗೆ ಈ ರಾಜ್ಯದಿಂದಲಾಗಲಿ ಸೀತೆಯಿಂದಲಾಗಲಿ ಜಡಾತ್ಮಕವಾದ ದೇಹದಿಂದಲಾಗಲಿ ಏನು ಪ್ರಯೋಜನ? ಜಗನ್ಮಾತೆಯಾದ ಸೀತೆಯನ್ನು ಕೊಂಡೊಯ್ದು ಶ್ರೀರಾಮನಿಗೆ ಒಪ್ಪಿಸಿಬಿಡು. ನಿನ್ನ ರಾಜ್ಯವನ್ನು ವಿಭೀಷಣನಿಗೆ ಒಪ್ಪಿಸಿ, ವನಕ್ಕೆ ಹೋಗಿ ಮುನಿವೃತ್ತಿಯಿಂದ ಸ್ನಾನಸಂಧ್ಯಾದಿಕ್ರಿಯೆಗಳನ್ನು ಮಾಡಿಕೊಂಡು ಸರ್ವಸಂಗಪರಿತ್ಯಾಗಮಾಡಿ ಭಗವಧ್ಯಾನಪರನಾಗಿರು. ತುಚ್ಛಗಳಾದ ವಿಷಯಸುಖಗಳನ್ನು ಬಯಸಬೇಡ. ಪ್ರಕೃತಿಗೆ ಭಿನ್ನನಾಗಿರುವ ಪರಮಾತ್ಮನ ವಿಚಾರದಲ್ಲಿ ಆಲೋಚನೆ ಮಾಡು.

ಶ್ಲೋ॥ ಚರಾಚರಜಗತ್ಕೃತ್ಸ್ನಂ ದೇಹಬುದ್ಧೀಂದ್ರಿಯಾದಿಕಂ ।
ಆಬ್ರಹ್ಮಸ್ತಂಭಪರ್ಯಂತಂ ದೃಶ್ಯತೇಶ್ರೂಯತೇಚಯತ್ ॥
ಸೈಷಾಪ್ರಕೃತಿರಿತ್ಯುಕ್ತಾಸೈವಮಾಯೇತಿ ಕೀರ್ತಿತಾ ।
ಸರ್ಗಸ್ಥಿತಿವಿನಾಶಾನಾಂ ಜಗದ್ವೃಕ್ಷಸ್ಯಕಾರಣಂ ।
ಲೋಹಿತಶ್ವೇತಕೃಷ್ಣಾದಿ ಪ್ರಜಾಃಸೃಜತಿಸರ್ವದಾ ।
ಕಾಮಕ್ರೋಧಾದಿಪುತ್ರಾದ್ಯಾಃ ಹಿಂಸಾತೃಷ್ಣಾದಿಕನ್ಯಕಾಃ ।
ಮೋಹಯತ್ಯನಿಶಂದೇಹಂ ಆತ್ಮಾನಂಸ್ವಗುಣೈರ್ವೃಥಾ ॥

ಎಲೈ ರಾವಣನೆ! ಬ್ರಹ್ಮನಿಂದ ಹಿಡಿದು ಸ್ತಂಭಪರ್ಯಂತವಾಗಿರುವ ಚರಾಚರಾತ್ಮಕವಾದ ಈ ಸಕಲಜಗತ್ತುಗಳೂ ದೇಹಬುದ್ಧಿ ಇಂದ್ರಿಯಾ

ದಿಗಳೂ ಪ್ರಕೃತಿಯೆಂದು ಹೇಳಲ್ಪಡುವುವು. ಅದಕ್ಕೇನೇ ಮಾಯೆಯೆಂದು ಹೆಸರು. ಅದೇ ಈ ಜಗತ್ತೆಂಬ ವೃಕ್ಷದ ಜನ್ಮಕ್ಕೂ ಸ್ಥಿತಿಗೂ ನಾಶಕ್ಕೂ ಕಾರಣವಾದುದು. ಆ ಮಾಯೆಯೇ ಸರ್ವದಾ ಈ ಜಗತ್ತನ್ನು ಸೃಷ್ಟಿಮಾಡುತ್ತಿರುವುದು. ಆ ಮಾಯೆಗೆ ಕಾಮಕ್ರೋಧಾದಿಪುತ್ರರೂ ಹಿಂಸಾತೃಷ್ಣಾದಿ ಕನ್ನಿಕೆಯರೂ ಅನೇಕರಿರುವರು. ಆ ಮಾಯೆಯು ತನ್ನ ಗುಣಗಳಿಂದ ದೇವದೇವನಾದ ಆತ್ಮವನ್ನೂ ಮೋಹಗೊಳಿಸುತ್ತಿರುವಳು. ಅವಳು ಆ ಆತ್ಮನಲ್ಲಿ ಕರ್ತೃತ್ವ ಭೋಕ್ತೃತ್ವ ಮುಂತಾದ ತನ್ನ ಗುಣಗಳನ್ನು ಆರೋಪಿಸಿ ಅವನನ್ನು ತನ್ನ ವಶಮಾಡಿಕೊಂಡು ಆಟವಾಡಿಸುತ್ತಿರುವಳು. ಆತ್ಮನು ಶುದ್ಧನಾಗಿದ್ದರೂ ಆ ಮಾಯೆಯೊಂದಿಗೆ ಸೇರಿ ಅದರ ಗುಣಗಳಿಂದ ಮೋಹಿತನಾಗಿ ತಾನು ಆತ್ಮನೆಂಬುದನ್ನು ಮರೆತು ಪ್ರಾಪಂಚಿಕ ವ್ಯವಹಾರಗಳನ್ನು ನಡಿಸುತ್ತಿರುವನು. ಯಾವಾಗ ಅವನು ಸದ್ಗುರುವಿನಿಂದ ಎಚ್ಚರಿಸಲ್ಪಡುವನೋ ಆಗ ತನ್ನನ್ನು ತಾನೇ ತಿಳಿದು ಜೀವನ್ಮುಕ್ತನಾಗಿ ಪ್ರಾಕೃತಗುಣಗಳಿಂದ ಬಿಡಲ್ಪಡುವನು. ಎಲೈ ರಾವಣನೆ! ನೀನೂ ಕೂಡ ಇದನ್ನು ವಿಚಾರಮಾಡಿ ಇಂದ್ರಿಯಗಳನ್ನು ನಿಗ್ರಹಿಸಿ ಪ್ರಕೃತಿಗಿಂತ ಅನ್ಯನಾದ ಆತ್ಮನನ್ನು ತಿಳಿದುಕೊಂಡು ಮುಕ್ತನಾಗು. ಹೀಗೆ ಆತ್ಮಪೂಜೆಯಿಂದ ಧ್ಯಾನಮಾಡಲಿಕ್ಕೆ ಶಕ್ತಿಯಿಲ್ಲದಿದ್ದರೆ ಸಗುಣನಾದ ದೇವರನ್ನು ಆರಾಧಿಸು. ನಿನ್ನ ಹೃದಯಕಮಲದಲ್ಲಿ ಸ್ವರ್ಣಸಿಂಹಾಸನವನ್ನು ಸ್ಥಾಪಿಸಿ ಅದರಮೇಲೆ ಜಾನಕೀಸಹಿತನಾಗಿಯೂ ವಿಶಾಲಾಕ್ಷನಾಗಿಯೂ ವೀರಾಸನನಾಗಿಯೂ ಮಿಂಚಿನಂತೆ ಹೊಳೆಯುವವನಾಗಿಯೂ ಕಿರೀಟಾಂಗದಹಾರ ಕೌಸ್ತುಭನೂಪುರಾದ್ಯಾಭರಣಗಳಿಂದ ಪ್ರಕಾಶಮಾನನಾಗಿಯೂ ಇರುವ ಆತ್ಮಾರಾಮನಾದ ಶ್ರೀರಾಮನನ್ನು ಭಕ್ತಿಯಿಂದ ಧ್ಯಾನಿಸಿ ಷೋಡಶೋಪಚಾರಗಳಿಂದಅವನನ್ನರ್ಚಿಸು. ಹೀಗೆ ಮಾಡಿದರೆ ನೀನು ಹಿಂದೆ ಮಾಡಿದ ಪಾಪಗಳೆಲ್ಲ ಕ್ಷಯವಾಗಿ ಶುದ್ಧನಾಗುತ್ತೀಯೆ.

ಶ್ಲೋ॥ ಭಜಸ್ವರಾಮಂ ಪರಿಪೂರ್ಣಮೇಕಂ ।
ವಿಹಾಯವೈರಂ ನಿಜಭಕ್ತಿಯುಕ್ತಃ ॥
ಹೃದಾಸದಾಭಾವಿತಭಾವರೂಪಂ ।
ಅನಾಮರೂಪಂ ಪುರುಷಂಪುರಾಣಂ ॥

ಈ ರೀತಿಯಲ್ಲಿ ಹೇಳಿದ ಅಮೃತ ಸಮಾನವಾದ ಕಾಲನೇಮಿಯ ವಾಕ್ಯಗಳು ಆ ರಾವಣನಿಗೆ ವಿಷದ ಗುಳಿಗೆಗಳಂತಿದ್ದುವು. ಅವನು ಕೋಪದಿಂದ ಕಣ್ಣುಗಳನ್ನು ಕೆಂಪಗೆ ಮಾಡಿಕೊಂಡು 'ಎಲಾ ನೀಚ! ನೀನು ರಾಮನ ಕಿಂಕರನಂತೆ ಇದ್ದು ನನ್ನ ಮಾತುಗಳಿಗೆ ಎದುರುತ್ತರ ಕೊಡುತ್ತೀಯ? ನಿನ್ನನ್ನೀಗಲೇ ಕೊಂದುಹಾಕಿ ಮನೆಗೆ ಹೋಗುವೆನು' ಎಂದು ಚಂದ್ರಹಾಸವೆಂಬ ಕತ್ತಿಯನ್ನೆತ್ತಿದನು. ಅದನ್ನು ನೋಡಿ, ಕಾಲನೇಮಿಯು 'ಅಯ್ಯಾ! ನಿನ್ನ ಹಿತಕ್ಕಾಗಿ ಹೇಳಿದ ಮಾತುಗಳು ಗ್ರಹಚಾರವಶದಿಂದ ನಿನಗೆ ರುಚಿಸದೆ ಹೋದುವು. ಇದಕ್ಕೆ ನೀನೇಕೆ ಕೋಪಿಸಿಕೊಳ್ಳಬೇಕು? ನಿನ್ನ ಅಪ್ಪಣೆಯಂತೆ ನಡೆಸಿಬಿಡುವೆನು' ಎಂದು ಹೇಳಿ ಕಾಮರೂಪವನ್ನು ಧರಿಸಿ ಆಗಲೇ ಹೊರಟು ಹಿಮವತ್ಪರ್ವತ ಪ್ರಾಂತಕ್ಕೆ ಹೋಗಿ ಹನುಮಂತನು ಹೋಗುವ ದಾರಿಯಲ್ಲಿ ಮಾಯೆಯಿಂದ ಒಂದು ತಪೋವನವನ್ನು ಕಲ್ಪಿಸಿದನು. ಅಲ್ಲಿ ತಾನೊಂದು ಮುನಿರೂಪವನ್ನು ಧರಿಸಿ ಶಿಷ್ಯರ ಗುಂಪಿನಿಂದ ಕೂಡಿಕೊಂಡು ಆಂಜನೇಯನ ಆಗಮನವನ್ನು ನಿರೀಕ್ಷಿಸಿಕೊಂಡಿದ್ದನು. ಆವೇಳೆಗೆ ಸರಿಯಾಗಿ ಆಂಜನೇಯನು ಅಲ್ಲಿಗೆ ಬಂದು ಆಶ್ರಮವನ್ನು ನೋಡಿ 'ಆಹಾ! ಇದೇನು ಆಶ್ಚರ್ಯವಾಗಿದೆ! ಹಿಂದೆ ನಾನು ಬಂದಿದ್ದಾಗ ಇಲ್ಲಿ ಆಶ್ರಮವೊಂದೂ ಇರಲಿಲ್ಲ. ಈಗ ಇದು ನಿರ್ಮಾಣವಾಗಿರುವುದು ನೋಡಿದರೆ ಇದು ವಾಸ್ತವವೋ ಅಥವ ಕೃತ್ರಿಮವೋ ಅಥವ ನನ್ನ ಮನೋವಿಭ್ರಮವೋ ತಿಳಿಯದೆ ಇದೆ. ಹೇಗಾದರೂ ಆಗಲಿ, ಈ ಆಶ್ರಮಕ್ಕೆ ಹೋಗಿ ನೀರು ಕುಡಿದು ಬಾಯಾರಿಕೆಯನ್ನು ತೀರಿಸಿಕೊಂಡು ದ್ರೋಣಾಚಲಕ್ಕೆ ಹೋಗುವೆನು.' ಎಂದು ಯೋಚಿಸಿ ಅದರೊಳಕ್ಕೆ ಪ್ರವೇಶಮಾಡಿದನು. ಅಲ್ಲಿ ಮಾಯಾಮುನಿಯ ವೇಷವನ್ನು ಧರಿಸಿರುವ ಕಾಲನೇಮಿಯನ್ನು ನೋಡಿ ನಮಸ್ಕರಿಸಿ ಎಲೈ ಮೌನಿಯೇ! ನಾನು ಶ್ರೀರಾಮದೂತನು, ಸ್ವಾಮಿ ಕಾರ್ಯಾರ್ಥವಾಗಿ ಕ್ಷೀರಸಮುದ್ರಕ್ಕೆ ಹೋಗಲು ಹೊರಟಿರುವೆನು. ನನಗೆ ನೀರಡಿಕೆ ಹೆಚ್ಚಾಗಿರುವದರಿಂದ ದಯಮಾಡಿ ಸಿಹಿನೀರಿರುವ ಸ್ಥಳವನ್ನು ತೋರಿಸಬೇಕೆಂದು ಪ್ರಾರ್ಥಿಸಿದನು. ಕಾಲನೇಮಿಯು ಅವನನ್ನು ನೋಡಿ ಅಯ್ಯಾ! ಆಂಜನೇಯನೆ! ನನ್ನ ಕಮಂಡಲದಲ್ಲಿರುವ ನೀರನ್ನು ನೀನು ಕುಡಿದು, ಈ ಪಕ್ವ ಫಲಗಳನ್ನು ಭುಜಿಸಿ, ಈ ರಾತ್ರಿ ಇಲ್ಲಿ ಸುಖವಾಗಿ ವಿಶ್ರಮಿಸಿಕೊ, ನನ್ನ ದಿವ್ಯದೃಷ್ಟಿಯಿಂದ ಭೂತಭವಿಷ್ಯತ್ವರ್ತ

ಮಾನಸ್ಥಿತಿಗಳನ್ನೆಲ್ಲ ಚೆನ್ನಾಗಿ ತಿಳಿದಿರುವೆನು. ಲಕ್ಷ್ಮಣನು ಈಗತಾನೆ ಮೂರ್ಛೆಯಿಂದೆಚ್ಚತ್ತಿರುವನು. ಕಪಿಸೈನ್ಯವೆಲ್ಲ ಕ್ಷೇಮವಾಗಿರುವುದು. ಎಂದು ಹೇಳಿದನು. ಅದನ್ನು ಕೇಳಿ ಆಂಜನೇಯನು 'ಸ್ವಾಮಿ! ನನಗೆ ದಾಹ ಹೆಚ್ಚಾಗಿದೆ'. ನಿನ್ನ ಕಮಂಡಲೋದಕದಿಂದ ಅದು ತೀರುವಹಾಗಿಲ್ಲ. ಸಿಹಿನೀರಿನ ಬಾವಿಯನ್ನೇ ತೋರಿಸಬೇಕು.' ಎಂದು ಪ್ರಾರ್ಥಿಸಲಾಕಪಟಮುನಿಯು ಮಾಯಾಶಿಷ್ಯನೊಬ್ಬನನ್ನು ಕರೆದು 'ಎಲಾ ಮಾಣಿ! ಇವನಿಗೆ ವಿಸ್ತಾರವಾದ ಕೆರೆಯನ್ನು ತೋರಿಸು' ಎಂದು ಹೇಳಿ 'ಅಯ್ಯಾ! ರಾಮದೂತನೆ! ನೀನು ಕಣ್ಣು ಮುಚ್ಚಿಕೊಂಡು ಯಥೇಷ್ಟವಾಗಿ ನೀರು ಕುಡಿದು ಬೇಗ ಇಲ್ಲಿಗೆ ಬಾ, ಔಷಧಿಗಳನ್ನು ನೋಡುವ ಮಂತ್ರಗಳನ್ನು ಉಪದೇಶಿಸುವೆನು.' ಎಂದು ಹೇಳಿದನು. ಹನುಮಂತನು ಆವನ ಶಿಷ್ಯರೊಂದಿಗೆ ಜಲಾಶಯಕ್ಕೆ ಹೋಗಿ ಕಪಟಮುನಿಯು ಹೇಳಿದ್ದಂತೆ ಕಣ್ಣುಮುಚ್ಚಿಕೊಂಡು ನೀರು ಕುಡಿಯುತ್ತಿದ್ದನು. ಆಗಲಾಕೊಳದಲ್ಲಿ ದೀರ್ಘಕಾಯವುಳ್ಳ ಒಂದು ಮೊಸಳೆಯು ಭಯಂಕರಾಕಾರದಿಂದ ಬಂದು ಹನುಮಂತನನ್ನು ನುಂಗುತ್ತಿತ್ತು. ಅದನ್ನು ಕಂಡು ಆ ಧೀರನು ತನ್ನ ಕೈ ಉಗುರುಗಳಿಂದ ಆ ಮೊಸಳೆಯ ಬಾಯನ್ನು ಸೀಳಿಬಿಟ್ಟನು. ಕೂಡಲೆ ಅದು ಸತ್ತುಹೋಗಿ ಆಕಾಶದಲ್ಲಿ ದಿವ್ಯರೂಪವನ್ನುಧರಿಸಿದ ದೇವಕನ್ನಿಕೆಯಾಗಿ ಆಂಜನೇಯನನ್ನು ಕುರಿತು ಇಂತೆಂದಿತು—'ಎಲೈ ಮಹಾವೀರನೇ! ನಾನು ಧಾನ್ಯಮಾಲಿನಿ ಎಂಬ ದೇವತಾಸ್ತ್ರೀಯು, ನಿನ್ನ ಅನುಗ್ರಹದಿಂದ ನನ್ನ ಶಾಪವಿಮೋಚನೆಯಾಯಿತು. ನಾನು ಪೂರ್ವದಲ್ಲಿ ಒಬ್ಬ ಋಷಿಯಿಂದ ಮೊಸಳೆಯಾಗಿ ಬಿದ್ದಿರಬೇಕೆಂದು ಶಪಿಸಲ್ಪಟ್ಟದ್ದೆನು. ಆಶ್ರಮದಲ್ಲಿದ್ದ ಕಪಟಮುನಿಯು ಕಾಲನೇಮಿ ಎಂಬ ರಾಕ್ಷಸನು, ರಾವಣನ ಪ್ರೇರಣೆಯಿಂದ ನಿನ್ನ ಪ್ರಯಾಣಕ್ಕೆ ವಿಘ್ನವಾಚರಿಸಬೇಕೆಂದು ಹೀಗೆ ಅವನು ಮಾಡಿದನು. ಅವನು ನಿಜವಾದ ಮುನಿಯಲ್ಲ. ನೀನು ಈಗಲೇಹೋಗಿ ಅವನನ್ನು ಕೊಂದು ದ್ರೋಣಗಿರಿಗೆ ಹೋಗಿ ರಾಮಕಾರ್ಯವನ್ನು ಸಾಧಿಸು, ಪರಿಶುದ್ಧಳಾದ ನಾನು ಬ್ರಹ್ಮಲೋಕಕ್ಕೆ ಹೋಗುವೆನು.' ಎಂದು ಹೇಳಿ ಅದೃಶಳಾದಳು. ಹನುಮಂತನು ಅಲ್ಲಿಂದ ಹೊರಟು ಕಾಲನೇಮಿಯ ಬಳಿಗೆ ಬಂದನು. ಆವನಾಕಪಿವೀರನನ್ನು ನೋಡಿ 'ಏಕಯ್ಯಾ! ಇಷ್ಟುಹೊತ್ತು ಮಾಡಿದೆ? ಇಗೋ ಮಂತ್ರೋಪದೇಶಮಾಡುವೆನು. ಇದನ್ನು ಗ್ರಹಿಸಿ ನನಗೆ ಗುರು

ದಕ್ಷಿಣೆಯನ್ನು ಕೊಡು ಎಂದು ಕೇಳಲು ಹನುಮಂತನು 'ಇಗೋ ಗುರುದಕ್ಷಿಣೆಯನ್ನು ಕೊ' ಎಂದು ದೃಢವಾದ ಮುಷ್ಟಿಯಿಂದ ಅವನನ್ನು ಹಿಡಿದು ಹೊಡೆಯಲು ಅವನು ಮುನಿವೇಷವನ್ನು ಬಿಟ್ಟು ರಾಕ್ಷಸರೂಪನಾಗಿ ಬಿದ್ದು ನೆಲದಲ್ಲಿ ಉರುಳಿದನು. ಬಳಿಕ ಹನುಮಂತನು ಕ್ಷೀರಸಮುದ್ರಕ್ಕೆ ಹೋಗಿ ದ್ರೋಣಗಿರಿಯನ್ನು ನೋಡಿ ಅಲ್ಲಿ ಔಷಧಿಗಳನ್ನು ಎಷ್ಟು ಹೊತ್ತು ಹುಡುಕಿದರೂ ಸಿಕ್ಕಲಿಲ್ಲ. ಬಳಿಕಲಾಬೆಟ್ಟವನ್ನೇ ಕಿತ್ತು ಹೊತ್ತುಕೊಂಡು ಬಂದು ರಾಮನ ಸನ್ನಿಧಿಯಲ್ಲಿಳಿಸಿ, ನಡೆದ ವರ್ತಮಾನವನ್ನು ತಿಳಿಸಿದನು. ಶ್ರೀರಾಮನು ಸಂತುಷ್ಟ ಹೃದಯನಾಗಿ ಸುಷೇಣನಿಂದ ಔಷಧಿಯನ್ನು ಹುಡುಕಿಸಿ ಲಕ್ಷ್ಮಣನಿಗೆ ಚಿಕಿತ್ಸೆ ಮಾಡಿಸಿದನು. ಕೂಡಲೆ ಲಕ್ಷ್ಮಣನು ಮಲಗಿದ್ದವನು ಎದ್ದಂತೆ ಎದ್ದು ಎಲಾ! ರಾವಣನೇ! ಎಲ್ಲಿಹೋಗುತ್ತೀಯೆ? ನಿಲ್ಲು ನಿಲ್ಲು ಈಗಲೇ ನಿನ್ನನ್ನು ಕೊಲ್ಲುವೆನು ?' ಎನ್ನುತ್ತಿದ್ದನು. ಆಗ ಶ್ರೀರಾಮನು ಲಕ್ಷ್ಮಣನನ್ನಾಲಿಂಗಿಸಿಕೊಂಡು ನಡೆದ ವೃತ್ತಾಂತವನ್ನೆಲ್ಲಾ ತಿಳಿಸಿ, ಮರುದಿನದ ಯುದ್ಧಕ್ಕೆ ಎಲ್ಲರೂ ಸಿದ್ಧರಾಗುವಂತೆ ತಕ್ಕ ಜಾಗ್ರತೆ ಮಾಡುತ್ತಿದ್ದನು.

ಅತ್ತ ರಾವಣನು ರಾಮಬಾಣಗಳಿಂದ ನೊಂದು ಅವಮಾನಪಟ್ಟು ಅರಮನೆಗೆ ಹೋಗಿ ಚಿಂತೆಯಿಂದ ಕೊರಗುತ್ತ ಬಂದು ಸಭೆ ಕೂಡಿಸಿ ಸಿಂಹಾಸನದಲ್ಲಿ ಕುಳಿತು ರಾಕ್ಷಸರೊಂದಿಗೆ 'ಸಾಮಾಜಿಕರೆ! ಪೂರ್ವದಲ್ಲಿ ನಮ್ಮ ತಾತನು ಮನುಷ್ಯನಿಂದಲೇ ನನಗೆ ಮರಣ ಸಂಭವಿಸುವುದೆಂದು ಹೇಳಿದ್ದನು. ನನ್ನನ್ನು ಕೊಲ್ಲುವುದಕ್ಕೆ ಈ ಭೂಲೋಕದಲ್ಲಿ ಶಕ್ತನಾದ ಮನುಷ್ಯನಾರಿರುವನು ? ಶ್ರೀಮನ್ನಾರಾಯಣನೇ ಮನುಷ್ಯರೂಪದಿಂದ ಅವತರಿಸಿರುವದರಲ್ಲಿ ಸಂಶಯವಿಲ್ಲ. ಶ್ರೀರಾಮನೇ ದಶರಥನ ಮಗನಾಗಿ ಹುಟ್ಟಿ ನನ್ನನ್ನು ಸಂಹರಿಸಲು ಬಂದಿರುವನು. ಪೂರ್ವದಲ್ಲಿ ನಾನು ಸೂರ್ಯವಂಶದ ಅನರಣ್ಯರಾಜನನ್ನು ಕೊಂದಾಗ ಅವನು ನನ್ನ ವಂಶದಲ್ಲಿ ಆದಿಪುರುಷನಾದ ಪರಮಾತ್ಮನು ಹುಟ್ಟಿ ಪುತ್ರಪೌತ್ರ ಸಹಿತನಾದ ನಿನ್ನನ್ನು ಕೊಲ್ಲುವನು. ಎಂದು ನನಗೆ ಶಾಪವನ್ನು ಕೊಟ್ಟು ಸ್ವರ್ಗಲೋಕಕ್ಕೆ ಹೋದನು. ಅದರಂತೆಯೇ ರಾಮನು ನನ್ನ ಸಂಹಾರಾರ್ಥವಾಗಿ ಸಂಭವಿಸಿ ಇಲ್ಲಿಗೆ ಬಂದಿರುವನು. ಮಹಾತ್ಮನಾದ ನಮ್ಮ ಕುಂಭಕರ್ಣನು ನಿದ್ರಾವಶನಾಗಿ ಬಿದ್ದಿರುವನು. ಬಹು, ಬಲಶಾಲಿಯಾದ ಅವನನ್ನು ಈಗಲೇ ಎಬ್ಬಿಸಿ ನನ್ನ ಬಳಿಗೆ ಕರೆದುಕೊಂಡು ಬನ್ನಿರಿ, ಎಂದು

ಆಜ್ಞಾಪಿಸಿದನು. ಬಳಿಕ ಆ ಪ್ರಭುವಿನ ಅಪ್ಪಣೆಯಂತೆ ರಾಕ್ಷಸರು ಜಾಗ್ರತೆಯಾಗಿ ಹೋಗಿ ಶೂರನಾದ ಆ ಕುಂಭಕರ್ಣನನ್ನೆಬ್ಬಿಸಿ ಕರೆದು ತಂದರು. ಆ ರಾಕ್ಷಸನು ರಾವಣನ ಸನ್ನಿಧಿಗೆ ಬಂದು ಆತನಿಗೆ ನಮಸ್ಕರಿಸಿ ಉಚಿತಾಸನದಮೇಲೆ ಕುಳಿತುಕೊಂಡನು. ಆಗ ರಾವಣನು ಅವನನ್ನು ನೋಡಿ ದೈನ್ಯವಾಕ್ಯಗಳಿಂದ ‘ ತಮ್ಮಾ ! ಕೇಳು, ಈಗ ನನಗೆ ಮಹಾ ಕಷ್ಟಕಾಲವು ಬಂದಿದೆ, ಅಯೋಧ್ಯಾಧಿಪತಿಯಾದ ದಶರಥನ ಮಗ ಶ್ರೀರಾಮನು ಪತ್ನೀಸಹಿತನಾಗಿ ವನವಾಸಕ್ಕೆ ಬಂದಿದ್ದನು. ಅವನಿಲ್ಲದವೇಳೆಯಲ್ಲಿ ನಾನು ಆ ರಾಮನ ಹೆಂಡತಿಯಾದ ಸೀತೆಯನ್ನು ಕದ್ದು ತಂದು ಸೆರೆಯಲ್ಲಿಟ್ಟೆನು. ಆ ರಾಮನು ಸುಗ್ರೀವಾದಿ ಕಪಿಸೈನ್ಯದಿಂದ ಕೂಡಿ ಸಮುದ್ರವನ್ನು ದಾಟಿಬಂದು ನಮ್ಮ ಮೇಲೆ ಯುದ್ಧಕ್ಕೆ ಪ್ರಯತ್ನಿಸಿರುವನು. ನನ್ನ ಮಕ್ಕಳೂ ಮೊಮ್ಮಕ್ಕಳೂ ಬಂಧುಗಳೂ ಅವನ ಬಾಣಗಳಿಂದ ಮೃತರಾದರು. ನನಗೂ ಮೃತ್ಯುಕಾಲವು ಸಮೀಪಿಸಿದಂತೆ ಇದೆ. ಆದುದರಿಂದ ನಿನ್ನ ಸಹಾಯವನ್ನಪೇಕ್ಷಿಸಿ ನಿನ್ನನ್ನೆಬ್ಬಿಸಿ ಕರೆಸಿದೆನು. ನೀನು ಜಾಗ್ರತೆಯಲ್ಲಿ ಯುದ್ಧಕ್ಕೆ ಹೋಗಿ ಆ ಕಪಿಸೈನ್ಯವನ್ನು ನಾಶಮಾಡು ’ ಎಂದು ಹೇಳಿದನು. ಅಣ್ಣನಮಾತುಗಳನ್ನು ಕೇಳಿ ಕುಂಭಕರ್ಣನು ಗಹಗಹಿಸಿ ನಕ್ಕು ಆ ರಾವಣನನ್ನು ಕುರಿತು ಇಂತೆಂದನು:— ‘ ಅಣ್ಣಾ ಕೇಳು, ಪೂರ್ವವೇ ಮಂತ್ರಾಲೋಚನಸಭೆಯಲ್ಲಿ ನಾನು ಹೇಳಿದ ಮಾತುಗಳನ್ನು ಮರೆತು ಬಿಟ್ಟೆಯಾ ? ಈಗಲೂ ಹೇಳುವೆನು ಕೇಳು, ರಾಮನು ಸಾಕ್ಷಾತ್ ಪರಮಾತ್ಮನಾದ ನಾರಾಯಣನು. ಸೀತಾದೇವಿಯು ಯೋಗಮಾಯೆಯು, ಬಂದಾನೊಂದು ಕಾಲದಲ್ಲಿ ನಾನು ಘೋರಾರಣ್ಯಕ್ಕೆ ಹೋಗಿದ್ದಾಗ ದೇವಮುನಿಯಾದ ನಾರದನು ಅಲ್ಲಿಗೆ ಬಂದಿದ್ದನು. ನಾನು ಅವನನ್ನು ನೋಡಿ “ ಸ್ವಾಮಿ ! ಎಲ್ಲಿಂದ ಬಂದಿರಿ ? ಏನುವಿಶೇಷ ? ” ಎಂದು ಕೇಳಿದೆನು. ಅದಕ್ಕಾತನು “ ಅಯ್ಯಾ ! ನಾನು ಸತ್ಯಲೋಕಕ್ಕೆ ಹೋಗಿದ್ದೆನು. ಅಲ್ಲೊಂದು ಆಲೋಚನಾ ಸಭೆ ನಡೆಯಿತು. ಅಣ್ಣತಮ್ಮಂದಿರಾದ ನಿಮ್ಮಿಂದ ನೊಂದಿರುವ ದೇವತೆಗಳು ಮಹಾವಿಷ್ಣುವನ್ನು ಪ್ರಾರ್ಥಿಸಿ ಲೋಕಕಂಟಕರಾದ ನಿಮ್ಮನ್ನು ಸಂಹರಿಸಬೇಕೆಂದು ಪ್ರಾರ್ಥಿಸಿದರು. ಆಗಲಾ ಪರಮಾತ್ಮನು ತಾನು ರಘುಕುಲದಲ್ಲಿ ಅವತರಿಸಿ ರಾವಣ ಕುಂಭಕರ್ಣರನ್ನು ಕೊಂದುಬಿಡುವೆನೆಂದು ಅವರಿಗೆ ಅಭಯ ಪ್ರದಾನ ಮಾಡಿದನು. ” ಎಂದು

ಹೇಳಿ ಆ ಮುನಿಯು ಅಂತರ್ಧಾನನಾದನು. ಆದಕಾರಣ ಆ ಶ್ರೀರಾಮನೇ ಪರಮಾತ್ಮನೆಂದು ತಿಳಿ. ಅವನಲ್ಲಿ ವೈರವನ್ನು ಬಿಟ್ಟು ಅವನಿಗೆ ಶರಣಾಗತನಾಗಿ ಅವನನ್ನು ಭಜಿಸು. ಆತನು ಪ್ರಸನ್ನನಾಗಿ ನಿನಗೆ ಮುಕ್ತಿಯನ್ನನುಗ್ರಹಿಸುವನು: 'ಎಂದು ಹೇಳಿದನೆಂದು ನುಡಿದನು. ಆ ಮಾತನ್ನು ಕೇಳಿ ರಾವಣನು ಬಹಳವಾಗಿ ಕೋಪಿಸಿಕೊಂಡು 'ಎಲಾ ಮೂಢನೆ! ನನಗೆ ಉಪದೇಶ ಹೇಳಲಿಕ್ಕೆ ನಿನ್ನನ್ನು ನಾನು ಕರೆಸಲಿಲ್ಲ, ನನ್ನ ಅಪ್ಪಣೆಯಂತೆ ಈ ಯುದ್ಧಕ್ಕೆ ಹೋಗಲು ನಿನಗೆ ಸಮಾಧಾನವಾಗಿ ತೋರಿದರೆ ಹೋಗಿ, ನಿನ್ನ ಶಕ್ತಿಯಿದ್ದಷ್ಟು ಯುದ್ಧಮಾಡು. ಹಾಗಿಲ್ಲದಿದ್ದರೆ ಸ್ವಸ್ಥವಾಗಿ ಹೋಗಿ ಮಲಗಿ ನಿದ್ರಿಸು.' ಎಂದು ಗದರಿಸಿಕೊಂಡನು. ಆಗ ಕುಂಭಕರ್ಣನು 'ಈ ನೀಚನಿಗೆ ತಿಳಿಯಹೇಳುವುದರಿಂದ ಏನೂ ಫಲವಿಲ್ಲ.' ಎಂದು ಹೇಳಿ ಕೂಡಲೇ ಶ್ರೀರಾಮನ ಮೇಲೆ ಯುದ್ಧಕ್ಕೆ ಹೊರಟು ಆತನ ಸಂಗಡ ಬಲವಾಗಿ ಕಾದಿದನು. ಶ್ರೀರಾಮನು ದಿವ್ಯಾಸ್ತ್ರಗಳಿಂದ ಆ ಕುಂಭಕರ್ಣನನ್ನು ಸಂಹಾರಮಾಡಿದನು. ಆಗ ದೇವತೆಗಳು ಶ್ರೀರಾಮನಮೇಲೆ ಪುಷ್ಪವೃಷ್ಟಿಯನ್ನು ಸುರಿಸಿದರು. ಆ ವೇಳೆಯಲ್ಲಿ ದೇವಮುನಿಯಾದ ನಾರದನು ಅಲ್ಲಿಗೆ ಬಂದು ಸ್ವಾಮಿಗೆ ಭಕ್ತಿಯಿಂದ ಕೈ ಮುಗಿದು ಹೀಗೆ ಸ್ತುತಿಸಿದನು:—

ಎಲೈ ದೇವದೇವನಾದ ಶ್ರೀಮನ್ನಾರಾಯಣನೇ, ಸಕಲ ಜಗದಾಧಾರನಾಗಿರುವ ನಿನಗೆ ನಮಸ್ಕಾರವು. ನೀನು ಶುದ್ಧಜ್ಞಾನಸ್ವರೂಪನಾಗಿದ್ದರೂ ಲೋಕಗಳನ್ನು ವಂಚಿಸಲಿಕ್ಕೆ ಮಾಯೆಯಿಂದ ಮನುಷ್ಯಾಕಾರವನ್ನು ಧರಿಸಿ ಅವತರಿಸಿದ್ದಿಯೇ. ಸ್ವಯಂಜ್ಯೋತಿಸ್ವರೂಪನಾದ ನೀನು ಮಾಯೆಯಿಂದ ಎಲ್ಲರ ಮನಸ್ಸನ್ನೂ ಮೋಹಗೊಳಿಸುತ್ತಿಯೇ, ಸಮಸ್ತ ಲೋಕಗಳ ಸೃಷ್ಟಿಸ್ಥಿತಿಲಯಕರ್ತನು ನೀನೇ, ನೀನು ಕಣ್ಣು ತೆರೆದರೆ ಈ ಲೋಕವೆಲ್ಲವೂ ಸೃಷ್ಟಿಸಲ್ಪಡುವುದು. ಕಣ್ಣು ಮುಚ್ಚಿದರೆ ಎಲ್ಲವೂ ಲಯವಾಗುವುದು. ಸರ್ವವ್ಯಾಪಿಯಾದ ನೀನು ಚರಾಚರವಾದ ಈ ಜಗತ್ತಿನಲ್ಲಿ ಎಲ್ಲೆಲ್ಲಿಯೂ ಪ್ರಕಾಶಿಸುತ್ತಿರುವೆ. ಪ್ರಕೃತಿಯೂ ನೀನೇ, ಪುರುಷನು ನೀನೇ ಕಾಲಸ್ವರೂಪನೂ ನೀನೆ, ನೀನು ವಿಕಾರರಹಿತನೆಂತಲೂ, ಪರಿಶುದ್ಧನೆಂತಲೂ. ಜ್ಞಾನಸ್ವರೂಪನೆಂತಲೂ ವೇದಗಳೆಲ್ಲವೂ ಹೊಗಳುತ್ತಿರುವುವು. ನೀನೇ ಸರ್ವಜಗತ್ತುಗಳಿಗೂ ಆಧಾರಸ್ವರೂಪನು. ನಿನ್ನ ಮಾಯೆಯಿಂದ ಆವರಿಸಲ್ಪಟ್ಟ ಜಗತ್ತು ನಿನ್ನನ್ನು

ತಿಳಿಯಲಾರದೆ ಇದೆ. ಸೂರ್ಯ ಕಿರಣಗಳು ನೀರಿನಂತೆ ತೋರಿ ಭ್ರಾಂತಿ ಗೊಳಿಸುವಂತೆ ನಿನ್ನಲ್ಲಿ ಈ ಸಮಸ್ತವೂ ಕಲ್ಪಿಸಲ್ಪಡುತ್ತವೆ. ನೀನು ನಿರ್ಗುಣನಾಗಿದ್ದರೂ ಗುಣವಂತನಂತೆ ಕಾಣುತ್ತೀಯೆ, ಕಾಮ ಕ್ರೋಧಾದಿ ಬಹುಮಂದಿ ಶತ್ರುಗಳು ಬೆಕ್ಕು ಇಲಿಯನ್ನು ಭಯಗೊಳಿಸುವಂತೆ ಮನಸ್ಸನ್ನು ಹೆದರಿಸುತ್ತಲಿವೆ. ನಿತ್ಯವೂ ನಿನ್ನ ನಾಮಸ್ಮರಣೆ ಮಾಡುತ್ತಾ, ನಿನ್ನ ರೂಪವನ್ನು ಮನಸ್ಸಿನಿಂದ ನೋಡುತ್ತಾ, ನಿನ್ನನ್ನೇ ಆರಾಧಿಸುತ್ತಾ. ನಿನ್ನ ಭಕ್ತರನ್ನು ಸತ್ಕರಿಸುತ್ತಾ ಇರುವ ಮಹಾತ್ಮರಿಗೆ ಈ ಸಂಸಾರಸಾಗರವು ಗೋಷ್ಪದದಂತೆ ಸುಲಭವಾಗಿ ದಾಟಲಾಗುವುದು. ಆದುದರಿಂದ ನಾನು ನಿನ್ನ ಸಗುಣ ಸ್ವರೂಪವನ್ನು ಸದಾಕಾಲದಲ್ಲಿಯೂ ಹೃದಯದಲ್ಲಿ ಧ್ಯಾನಿಸುತ್ತಾ ಸಕಲಲೋಕಗಳಲ್ಲಿಯೂ ಸಂಚಾರ ಮಾಡುತ್ತಿರುವೆನು. ಎಲೈ ಶ್ರೀರಾಮನೇ, ಕುಂಭಕರ್ಣನ ವಧೆಯಿಂದ ಈ ಭೂಭಾರದಲ್ಲಿ ಅರ್ಧಭಾಗವು ತಗ್ಗಿತು. ನಾಳೆಯದಿನವೇ ನೀನು ಈ ರಾವಣನನ್ನು ಕೊಂದುಹಾಕುವೆ. ಆಗ ಭೂಮಿಯ ಭಾರವು ನಿಶ್ಶೇಷವಾಗಿ ಪರಿಹಾರವಾಗುವುದು, ನನ್ನನ್ನು ಅನುಗ್ರಹಿಸು.

ಈ ಪ್ರಕಾರ ಸ್ತೋತ್ರಮಾಡಿ ದೇವರ್ಷಿಯಾದ ನಾರದನು ಶ್ರೀರಾಮನ ಅಪ್ಪಣೆ ಪಡೆದು ದೇವಲೋಕಕ್ಕೆ ಪ್ರಯಾಣಮಾಡಿದನು.

ಬಲಶಾಲಿಯಾದ ಕುಂಭಕರ್ಣನು ಮಡಿದ ವರ್ತಮಾನವನ್ನು ಕೇಳಿ ರಾವಣನು ತುಂಬಾ ದುಃಖಿಸಿ ಭೂಮಿಯಲ್ಲಿ ಬಿದ್ದು ಹೊರಳಾಡುತ್ತಾ ಮುಂದುತೋರದೆ ದುಃಖಿಸುತ್ತಿದ್ದನು. ಆಗಲಾರಾವಣನ ಜ್ಯೇಷ್ಠ ಪುತ್ರನಾದ ಇಂದ್ರಜಿತುವು ಅಲ್ಲಿಗೆ ಬಂದು ಚಿಂತಿಸುತ್ತಿರುವ ತಂದೆಯನ್ನು ನೋಡಿ ' ಅಪ್ಪಾ! ದುಃಖವನ್ನುಬಿಡು. ಬಲಶಾಲಿಯಾದ ನಾನು ಜೀವ ಸಹಿತನಾಗಿರುವಾಗ ನಿನಗೆ ದುಃಖಕ್ಕೆ ಅವಕಾಶವೆತ್ತಣದು ? ನಾನು ಈಗಲೇ ಯುದ್ಧಕ್ಕೆ ಹೋಗಿ ನಿನ್ನಶತ್ರುಗಳೆಲ್ಲರನ್ನೂ ಕೊಂದು ಅಗ್ನಿಯನ್ನು ಕುರಿತು ನಿಕುಂಭಿಳಾ ಯಾಗವನ್ನುಮಾಡಿ ದಿವ್ಯರಥಾದಿಗಳನ್ನು ಪಡೆದು ಅಜೇಯನಾಗಿ ಬರುವೆನು. ಚಿಂತಿಸಬೇಡ ' ಎಂದು ಹೇಳಿ ವೇಗವಾಗಿ ಹೊರಟು ನಿಕುಂಭಿಳಾ ದೇವಸ್ಥಾನಕ್ಕೆ ಹೋಗಿ ನಿಯಮದಿಂದ ಕುಳಿತು ಯಾಗಕ್ಕೆ ಆರಂಭಿಸಿದನು. ವಿಭೀಷಣನು ಇದನ್ನರಿತು ಶ್ರೀರಾಮನಿಗೆ ತಿಳಿಸಿ ' ಈ ವೇಳೆಯಲ್ಲಿ ಸುಮ್ಮನಿದ್ದರೆ ಇಂದ್ರಜಿತು ಪ್ರಬಲಿಸಿ ಎಲ್ಲರನ್ನೂ ಸಂಹಾರಮಾಡಿ ಬಿಡುವನು. ಆಮೇಲೆಅವನನ್ನು ಕೊಲ್ಲು

ವುದುವುಹಾಕಷ್ಟ, ಹನ್ನೆರಡುವರುಷಕಾಲ ನಿದ್ರಾಹಾರಗಳಿಲ್ಲದೆಇರತಕ್ಕಹ ನಿಂವಲೇ ಅವನಿಗೆ ಮೃತ್ಯು ಸಂಭವಿಸುವುದೆಂದು ಬ್ರಹ್ಮದೇವನ ವರ ವಾಗಿರುವುದು. ನಿನ್ನ ತಮ್ಮನಾದ ಲಕ್ಷ್ಮಣನು ಅಯೋಧ್ಯೆಯಿಂದ ಹೊರಟುಬಂದ ಮೊದಲು ಇದುವರೆಗೂ ನಿದ್ರಾಹಾರಾದಿಗಳನ್ನು ಮು ಟ್ಟದೆ ಇರುವುದರಿಂದ ಅವನನ್ನು ನನ್ನ ಸಂಗಡ ಕಳುಹಿಸಿಕೊಟ್ಟರೆ ಈತನು ಬಂದು ಇಂದ್ರಜಿತುವನ್ನು ಕೊಂದುಹಾಕುವನು. ಇವನು ಶೇಷಾಂಶ ಸಂಭವನು. ನೀನು ಪರಮಾತ್ಮನ ಅವತಾರ. ಸರ್ವಜ್ಞನಾದ ನಿನಗೆ ತಿಳಿಯದಿರುವುದು ಏನಿದೆ ?' ಎಂದು ಹೇಳಿದನು. ಆಗ ಶ್ರೀರಾ ಮನು ವಿಭೀಷಣನ ವಾಕ್ಯವನ್ನುಮನ್ನಿಸಿ ಕೂಡಲೇ ಹನುಮಂತನನ್ನೂ ಜಾಂಬವಂತನನ್ನೂ ಅಂಗದನನ್ನೂ ಅವನ ಜೊತೆಯಲ್ಲಿ ಕಳುಹಿಸಿದನು. ಅವರು ನಿಕುಂಭಿಳಾದೇವಸ್ಥಾನವನ್ನು ಮುತ್ತಿಗೆ ಹಾಕಿದರು. ಲಕ್ಷ್ಮಣನು ಧನುರ್ಬಾಣಗಳನ್ನು ಧರಿಸಿ, ಇಂದ್ರಜಿತುವನ್ನು ನೋಡಿ ಯುದ್ಧಕ್ಕೆ ಸನ್ನ ದ್ಧನಾಗೆಂದು ಎಚ್ಚರಿಸಿದನು. ಇಂದ್ರಜಿತುವು ತನ್ನ ಚಿಕ್ಕಪ್ಪನಾದ ವಿಭೀಷ ಣನನ್ನುನೋಡಿ ಇವನಿಂದಲೇ ಇಷ್ಟು ಕಾರ್ಯವೂ ನಡೆದಿರುವುದೆಂದು ತಿಳಿದು, ಅವನನ್ನು ನಾನಾ ಮಾತುಗಳಿಂದ ಬೈದು, ಯಾಗವನ್ನು ನಿಲ್ಲಿಸಿ ಯುದ್ಧಕ್ಕೆ ಸಿದ್ಧನಾದನು. ಆಗ ಅವರಿಬ್ಬರಿಗೂ ಘೋರವಾದ ಯುದ್ಧನಡೆ ದು, ಲಕ್ಷ್ಮಣಾಸ್ತ್ರಗಳಿಂದ ಇಂದ್ರಜಿತುವು ಹತನಾದನು. ಆಗ ಲಕ್ಷ್ಮಣನು ಜಯಶಾಲಿಯಾಗಿ ವಿಭೀಷಣಾದಿಗಳೊಡನೆ ಬಂದುಶ್ರೀರಾಮನನ್ನು ಕಾಣಿ ಸಿಕೊಂಡನು. ಆತನು ತಮ್ಮನನ್ನು ಮನ್ನಿಸಿ ಅವನ ಸಾಮರ್ಥ್ಯವನ್ನು ಹೊಗಳಿದನು.

ಅತ್ತ ರಾವಣನು ಮಗನು ಸತ್ತನೆಂದು ಕೇಳಿ ಬಹಳವಾಗಿ ದುಃಖಿಸಿ ಕೂಡಲೇ ಯುದ್ಧಕ್ಕೆ ಹೊರಟು ಶ್ರೀರಾಮನಬಳಿಗೆಬಂದು ಅವನನ್ನು ಎದುರಿಸಿ ಘೋರವಾಗಿ ಕಾದಿದನು. ಪರಮಾತ್ಮನಾದ ಶ್ರೀರಾಮನು ಆ ರಾವಣನ ಶಿರಸ್ಸುಗಳನ್ನು ದಿವ್ಯಾಸ್ತ್ರಗಳಿಂದ ಖಂಡಿಸಿದನು. ಕತ್ತರಿ ಸಲ್ಪಟ್ಟ ರಾವಣನ ತಲೆಗಳು ರಕ್ತಸಿಕ್ತಗಳಾಗಿ, ರಾವಣನ ಆಕಾರಗಳನ್ನು ವಹಿಸಿ ಯುದ್ಧವನ್ನು ಮಾಡತೊಡಗಿದವು. ಸರ್ವಜ್ಞನಾದ ಶ್ರೀರಾಮನು ಅನೇಕವಾದ ಅಸ್ತ್ರಗಳಿಂದ ಅವುಗಳನ್ನೆಲ್ಲಾ ಕಡಿದು ಹಾಕುತ್ತಾ ಬಂದನು. ಇವನು ತಲೆಗಳನ್ನು ಕತ್ತರಿಸುತ್ತಾ ಬಂದಹಾಗೆಲ್ಲಾ ಅವು ಒಂದಕ್ಕೆ ನೂರಾಗಿ ಬೆಳೆದು ಶ್ರೀರಾಮಚಂದ್ರನೊಡನೆ ಕಾದುತ್ತಾ ಬಂದುವು.

ಇವುಗಳನ್ನು ನೋಡಿ ರಾಮನು ಭ್ರಾಂತನಾಗಿ ರಾವಣ ಸಂಹಾರಕ್ಕೆ ಮಾರ್ಗವೇ ಇಲ್ಲವಲ್ಲಾ ಎಂದು ಚಿಂತಿಸುತ್ತಿದ್ದನು. ಆಗ ವಿಭೀಷಣನು ದೇವದೇವನಾದ ರಾಮನನ್ನು ನೋಡಿ, ಸ್ವಾಮಿ ! ಯಾತಕ್ಕೆ ಚಿಂತಿಸುತ್ತೀಯೆ? ಇವನ ನಾಭಿಯಲ್ಲಿ ಅಮೃತ ಕಲಶವಿರುವುದು. ಬ್ರಂಹದೇವರ ವರದಿಂದ ಅದು ಒಣಗುವತನಕ ಇವನಿಗೆ ಮೃತ್ಯುವಿಲ್ಲ. ಈಗಲೇ ಆಗ್ನೇಯಾಸ್ತ್ರವನ್ನು ಪ್ರಯೋಗಿಸಿ, ಆ ಕಲಶವನ್ನು ಬತ್ತಿಸಿಬಿಡು. ಕೂಡಲೇ ಇವನು ಸಾಯುವನು ಎಂದು ಹೇಳಿದನು. ಶ್ರೀರಾಮನು ವಿಭೀಷಣನ ಮಾತಿನಂತೆ ಆಗ್ನೇಯಾಸ್ತ್ರವನ್ನು ಪ್ರಯೋಗಮಾಡಿ ಅಮೃತಕಲಶವನ್ನು ಈಚೆಗೆ ತೆಗೆದನು. ಕೂಡಲೇ ಆ ರಾವಣನ ಜನ್ಮವುಮುಗಿದು ಅವನು ಪ್ರಾಣಗಳನ್ನು ಬಿಟ್ಟನು. ಆಗ ಸಮಸ್ತದೇವತೆಗಳೂ ಬಹು ಸಂತೋಷಪಟ್ಟು ದೇವದುಂದುಭಿಗಳನ್ನು ಮೊಳಗಿಸಿ ಪುಷ್ಪವೃಷ್ಟಿಯನ್ನು ಸುರಿಸಿದರು. ಪತಿಯ ಮರಣವಾಕ್ಯವನ್ನು ಕೇಳಿ ಮಂಡೋದರಿಯು ಬಹಳವಾಗಿ ದುಃಖಿಸಿ, ಅಲ್ಲಿಗೆ ಬಂದು ನಾನಾ ವಿಧವಾಗಿ ಗೋಳಾಡುತ್ತಿದ್ದಳು. ಶ್ರೀರಾಮನು ಆಕೆಗೆ ಸಮಾಧಾನಮಾಡಿ ವಿಭೀಷಣನಿಂದ ಆ ರಾವಣಾದಿಗಳಿಗೆ ಅಪರಸಂಸ್ಕಾರಗಳನ್ನು ಮಾಡಿಸಿದನು.

ತರುವಾಯ ವಿಭೀಷಣನು ಶ್ರೀರಾಮನ ಅಪ್ಪಣೆಪಡೆದು ಅಶೋಕವನದಲ್ಲಿ ಸೆರೆಯಲ್ಲಿದ್ದ ಸೀತಾದೇವಿಗೆ ಶ್ರೀರಾಮಚಂದ್ರನ ವಿಜಯ ವಾಕ್ಯವನ್ನು ಹೇಳಿ, ಆಕೆಗೆ ಮಂಗಳಸ್ನಾನವನ್ನು ಮಾಡಿಸಿ, ಶ್ರೀರಾಮನ ಸನ್ನಿಧಿಗೆ ಕರೆದುತಂದನು. ರಾಮನು ಜಾನಕಿಯು ಪರಿಶುದ್ಧಚಿತ್ತಳೆಂದು ತಿಳಿದಿದ್ದರೂ ಲೋಕದ ಜನರನ್ನು ಮೆಚ್ಚಿಸುವುದಕ್ಕೋಸ್ಕರ ಅವಳನ್ನು ನೋಡಿ "ಎಲೌ ಜಾನಕೀ, ರಾವಣನಿಂದ ಅಪಹೃತಳಾದ ನಿನ್ನನ್ನು ಬಿಡಿಸದಿದ್ದರೆ ನಾನು ಹೇಡಿಯೆಂದು ಜನರು ನಿಂದಿಸುವರು. ಇದಕ್ಕಾಗಿಯೇ ರಾವಣನೊಡನೆ ಘೋರಯುದ್ಧಮಾಡಿ, ಅವನನ್ನು ಸಂಹರಿಸಿ ನಿನ್ನ ಸೆರೆಯನ್ನು ಬಿಡಿಸಿದೆನು. ನನ್ನ ಕರ್ತವ್ಯವನ್ನು ನಾನು ನೆರವೇರಿಸಿದೆನು. ಇನ್ನು ನೀನು ಸ್ವೇಚ್ಛೆಯಿಂದ ಬೇಕಾದ ಕಡೆಗೆ ಹೋಗಬಹುದು," ಎಂದು ಹೇಳಿದನು. ಅದನ್ನು ಕೇಳಿ ಮಾಯಾಸೀತೆಯು ಈ ಸಂದರ್ಭದಲ್ಲಿಯೇ ಅಗ್ನಿಗರ್ಭದಲ್ಲಿರುವ ಸೀತಾದೇವಿಯನ್ನು ಪ್ರಕಾಶಗೊಳಿಸಬೇಕೆಂದು ಯೋಚಿಸಿ, ಲಕ್ಷ್ಮಣನನ್ನು ನೋಡಿ "ಮೈದುನಾ ! ನಾನು ಕರಣತ್ರಯದಲ್ಲಿಯೂ ಪರಿಶುದ್ಧಳಾಗಿಯೇ ಇದ್ದರೂ ಶ್ರೀರಾಮನು ನನ್ನನ್ನು ಸಂಬ

ಲ್ಲಿಲ್ಲ. ಅವನ ವಿಶ್ವಾಸಾರ್ಥವಾಗಿ ನಾನು ಅಗ್ನಿಪ್ರವೇಶಮಾಡುವೆನು. ನಾನು ಅನನ್ಯಮನಸ್ಕಳಾಗಿ ಶ್ರೀರಾಮನೇ ಪತಿಯೆಂದು ಭಾವಿಸಿರುವುದು ನಿಜವಾಗಿದ್ದರೆ ಅಗ್ನಿಯಿಂದ ತೇಜೋವತಿಯಾಗಿ ಹೊರಬೀಳುವೆನು. ಅಶುದ್ಧಳಾಗಿದ್ದರೆ ಅಗ್ನಿದೇವನು ನನ್ನನ್ನು ಸುಟ್ಟುಬಿಡಲಿ,'' ಎಂದು ಹೇಳಿದಳು. ಲಕ್ಷ್ಮಣನು ಶ್ರೀರಾಮನ ಕಣ್ಸನ್ನೆಯಿಂದ ಅಗ್ನಿಯನ್ನು ಉರಿಗೊಳಿಸಿ ದೊಡ್ಡದೊಡ್ಡ ಮರದ ತುಂಡುಗಳನ್ನೊಟ್ಟಿದನು. ಅಗ್ನಿಜ್ವಾಲೆಯು ಮೇಘಮಂಡಲದತನಕ ಆವರಿಸಿತು. ಮಾಯಾಸೀತೆಯು ಶ್ರೀರಾಮನಾಮವನ್ನು ಜಪಿಸುತ್ತಾ ಅಗ್ನಿಕುಂಡದಲ್ಲಿ ಧುಮುಕಿಬಿಟ್ಟಳು.

ಆಗ ಇಂದ್ರಾದಿ ದಿಕ್ಪಾಲಕರೂ, ಪರಮೇಶ್ವರನೂ, ಬ್ರಹ್ಮನೂ, ಸಿದ್ಧಚಾರಣರೂ, ಪಿತೃದೇವತೆಗಳೂ, ಮಹರ್ಷಿಗಳೂ, ಗಂಧರ್ವಾಪ್ಸರರೂ, ಇತರ ದೇವತೆಗಳೂ ಅಲ್ಲಿಗೆ ಬಂದು, ಪರಮಾತ್ಮನಾದ ಶ್ರೀರಾಮನನ್ನು ನೋಡಿ, ಕೈಮುಗಿದುಕೊಂಡು ಇಂತೆಂದರು.

''ಎಲೈ ಸ್ವಾಮಿಯೇ, ನೀನು ಸರ್ವಲೋಕಗಳಿಗೂ ಕರ್ತೃವಾಗಿಯೂ ಸಾಕ್ಷಿಯಾಗಿಯೂ ವಿಜ್ಞಾನಸ್ವರೂಪನಾಗಿಯೂ ಇದ್ದೀಯೆ. ನೀನು ವಸುಗಳಲ್ಲಿ ಎಂಟನೆಯವನು. ರುದ್ರರಲ್ಲಿ ಶಂಕರನು, ನೀನೇ ಚತುರ್ಮುಖನಾದ ಬ್ರಹ್ಮನು, ಅಶ್ವಿನೀದೇವತೆಗಳೇ ನಿನ್ನ ಕಿವಿಗಳು, ಚಂದ್ರಸೂರ್ಯರೇ ನಿನ್ನ ನೇತ್ರಗಳು. ಲೋಕಗಳಿಗೆಲ್ಲಾ ನೀನೇ ಆದಿಯೂ ಅಂತ್ಯವೂ ಆಗಿದ್ದೀಯೆ. ನೀನು ಸದಾಶುದ್ಧನೂ, ಬುದ್ಧನೂ, ಮುಕ್ತನೂ ಅದ್ವಯನೂ ಆಗಿದ್ದೀಯೆ. ನಿನ್ನ ಮಾಯೆಯಿಂದ ಆವೃತರಾದವರಿಗೆ ಮನುಷ್ಯನಾಗಿ ಕಾಣಿಸುತ್ತೀಯೆ. ನಿನ್ನ ನಾಮಸ್ಮರಣೆ ಮಾಡತಕ್ಕವರಿಗೆ ನೀನು ಸಚ್ಚಿದಾನಂದ ವಿಗ್ರಹನಾಗಿ ತೋರುತ್ತೀಯೆ. ನಿನ್ನಿಂದ ಈಗ ವಧಿಸಲ್ಪಟ್ಟ ರಾವಣನು ತನ್ನ ಪೂರ್ವಸ್ಥಾನವಾದ ವೈಕುಂಠವನ್ನು ಸೇರಿದನು.'' ಈಪ್ರಕಾರ ಸ್ತುತಿಸಿದಮೇಲೆ ಸರ್ವಲೋಕಪಿತಾಮಹನಾದ ಬ್ರಹ್ಮನು ಆ ದೇವದೇವನಿಗೆ ನಮಸ್ಕರಿಸಿ ಇಂತೆಂದು ಸ್ತುತಿಸಿದನು.

ವಂದೇವಿಷ್ಣುಂ ದೇವಮಶೇಷಹೇತುಂ ತ್ವಾಮಧ್ಯಾತ್ಮಜ್ಞಾನೀಜ್ಞಾನಿಭಿರಂತರ್ಹೃದಿಭಾವ್ಯಂ । ಹೇಯಾಹೇಯದ್ವಂದ್ವವಿಹೀನಂ ಪರಮೇಶಂ ಸತ್ತಾಮಾತ್ರಂ । ಸರ್ವಹೃದಿಸ್ಥಂದೃಶಿರೂಪಂ । ಪ್ರಾಣಾಪಾನೌ ನಿಶ್ಚಯಬುದ್ಧ್ಯಾಹೃದಿರುಧ್ವಾ । ಛಿತ್ವಾಸರ್ವಂಸಂಶಯಬಂಧಂ ವಿಷ

ಯಾತ್ಯೇಶ್ವರ್ಯ । ಪಶ್ಯಂತೀಶಂಯಂಗತಮೋಹಾಯುತಯಸ್ತಂ ॥ ವಂದೇ ರಾಮಂ ರತ್ನಕಿರೀಟಂ ರವಿಭಾಸಂ ಮಾಯಾತೀತಂ । ಮಾಧವಮಾದ್ಯಂ ಜಗದಾದ್ಯಂ ನಿತ್ಯಾನಂದಂ ಮೋಹವಿನಾಶಂ ಮುನಿವಂದ್ಯಂ । ಯೋಗಿ ಧ್ಯೇಯಂ ಯೋಗವಿಧಾನಂ ಪರಿಪೂರ್ಣಂ । ವಂದೇರಾಮಂ ಜಿತ ಲೋಕಂ ರಮಣೀಯಂ ॥

ಎಲೈ ಪರಮಾತ್ಮನೆ, ನೀನೇ ವಿಷ್ಣುವು. ಸಮಸ್ತಲೋಕಗಳ ಸ್ಥಿತಿಗೆ ಕಾರಣನು. ಅಧ್ಯಾತ್ಮಜ್ಞಾನಿಗಳಹೃದಕ್ಕೆ ಗೋಚರನಾಗುವೆ. ನೀನು ಹೇಯಾಹೇಯಗಳೆಂಬ ದ್ವಂದ್ವವಿಹೀನನು. ಪರಮೇಶ್ವರನು ಸಮಸ್ತವಸ್ತುಗಳಲ್ಲಿಯೂ ನೆಲಸಿರುವೆ. ನಿಶ್ಚಯಬುದ್ಧಿಯಿಂದ ಪ್ರಾಣಾ ಪಾನಗಳನ್ನು ಹೃದಯದಲ್ಲಿ ಬಂಧಿಸಿ, ಇಂದ್ರಿಯವಿಷಯಗಳನ್ನು ನಿಗ್ರಹಿ ಸಿದವರಿಗೆ ಪ್ರತ್ಯಕ್ಷನಾಗಿ ಗೋಚರಿಸುವೆ. ನೀನೇ ನಿತ್ಯನು, ಅನಂತನು, ಈ ರಾವಣನ ಸಂಹಾರಕ್ಕೋಸ್ಕರವಾಗಿ ನೀನು ಮಾಯಾಸೀತೆಯನ್ನು ನಿರ್ಮಿಸಿ, ಅವನಿಂದ ಅಪಹೃತಳಾಗುವಂತೆಮಾಡಿ, ಆ ನೆವದಿಂದ ಅವ ನನ್ನು ಪುತ್ರಮಿತ್ರಾಮಾತ್ಯಬಂಧುಜನಸಹಿತವಾಗಿ ಸಂಹಾರಮಾಡಿ ಭೂಭಾ ರವನ್ನು ಇಳುಹಿದೆ. ನೀನು ಅಗ್ನಿಯಲ್ಲಿ ಸ್ಥಾಪಿಸಿದ ಸೀತೆಯು ಈಗ ಹೊರಕ್ಕೆ ಬರುವಳು. ಅವಳನ್ನು ಪರಿಗ್ರಹಿಸು, ಎಂದನು. ಆಗ ಇಂದ್ರ ನಿಂತೆಂದನು.

ಭಜೇಹಂಸದಾರಾಮಮಿಂದೀವರಾಭಂ । ಭವಾರಣ್ಯದಾವಾನ ಲಾಭಾಭಿದಾನಂ । ಭವಾನೀಹೃದಾಭಾವಿತಾನಂದರೂಪಂ । ಭವಾಭಾವ ಹೇತುಂ ಭವಾದಿಪ್ರಸನ್ನಂ ॥ ಸ್ಫುರದ್ರತ್ನಕೇಯೂರಹಾರಾಭಿರಾಮಂ । ಧರಾಭಾರಭೂತಾಸುರಾನೀಕದಾವಂ ॥ ಶರಚ್ಚಂದ್ರವಕ್ತ್ರಂ ಸ್ಫುರತ್ಪದ್ಮ ನೇತ್ರಂ । ಘೃಣಾಪಾರವಾರಂ ಭಜೇರಾಘವೇಶಂ ॥

"ಎಲೈ ರಾಮನೇ, ಸಂಸಾರಸಾಗರವನ್ನು ದಾಟಿಸಲು ನಾವೆಯಂ ತಿರುವ ನಿನ್ನ ಪಾದಾರವಿಂದವನ್ನು ನಂಬಿ ಪ್ರಾಣಿಗಳು ಮುಕ್ತಿ ಪಡೆಯು ವರು. ಸ್ವತಃ ಪರಿಶುದ್ಧಳಾಗಿ ಯೋಗಮಾಯಾಸ್ವರೂಪಿಣಿಯಾದ ಈ ಸೀತಾದೇವಿಯನ್ನು ಪರಿಗ್ರಹಿಸು" ಎಂದು ಪ್ರಾರ್ಥಿಸಿದನು.

ಈಪ್ರಕಾರ ಪ್ರಾರ್ಥಿಸುವಷ್ಟರಲ್ಲಿ ಅಗ್ನಿದೇವನು ಸೀತಾದೇವಿ ಯನ್ನು ಕರೆದುತಂದು ಶ್ರೀರಾಮನ ಪಾದಗಳಲ್ಲಿ ಸಮರ್ಪಿಸಿದನು. ಆಕೆ ಯು ಮುಡಿದಹೂಗಳು ಬಾಡದೆಯೂ ಉಟ್ಟಸೀರೆಯು ಮಾಸದೆಯೂ,

ಕಾಂತಿಯು ತಗ್ಗದೆಯೂ, ತೇಜೋಮಯಿಯಾಗಿ ಪ್ರಕಾಶಿಸುತ್ತಿದ್ದಳು. ಇಂದ್ರಾದಿದೇವತೆಗಳು ಶ್ರೀರಾಮನನ್ನು ನೋಡಿ "ಎಲೈ ಲೋಕನಾಥನೇ, ಪರಿಶುದ್ಧಳಾದ ಈ ದೇವಿಯನ್ನು ಪರಿಗ್ರಹಿಸು. ಇಗೋ ನಿನ್ನ ತಂದೆಯಾದ ದಶರಥನು ಬಂದಿರುವನು. ನೋಡು." ಎಂದನು ಆಗ ದಶರಥನು ಶ್ರೀರಾಮನನ್ನು ನೋಡಿ, ಪ್ರೀತಿಯಿಂದ ಅಪ್ಪಿಕೊಂಡು "ಮಗನೇ, ಹದಿನಾಲ್ಕುವರುಷಗಳತನಕ ವನವಾಸದ ಕ್ಲೇಶಗಳನ್ನನುಭವಿಸಿ, ಬಹುಕಷ್ಟಪಟ್ಟು ನನ್ನನ್ನು ಸತ್ಯಪ್ರತಿಜ್ಞನನ್ನಾಗಿಮಾಡಿದೆ. ನನ್ನ ಸೊಸೆಯಾದ ಈ ಸೀತೆಯು ನಿರ್ದೋಷಿಯು. ಇವಳನ್ನು ಪರಿಗ್ರಹಿಸಿ, ಅಯೋಧ್ಯಾಪಟ್ಟಣಕ್ಕೆ ಹೋಗಿ ರಾಜ್ಯಾಧಿಕಾರವನ್ನೂ ಪಡೆದು ಪ್ರಜೆಗಳನ್ನು ಮಕ್ಕಳಂತೆ ಪಾಲಿಸು" ಎಂದು ಹರಸಿದನು.

ಬಳಿಕಲಾರಾಮನು ಅಲ್ಲಿಗೆ ಬಂದಿದ್ದ ಬ್ರಹ್ಮಾದಿದೇವತೆಗಳನ್ನೆಲ್ಲಾ ಪ್ರೀತಿಪೂರ್ವಕ ಸತ್ಕರಿಸಿ, ಅವರ ಅಪ್ಪಣೆಯಿಂದ ಸೀತಾದೇವಿಯನ್ನು ಪರಿಗ್ರಹಿಸಿ ಅವರನ್ನು ತಮ್ಮನೆಲೆಗಳಿಗೆ ಹೊರಡಬಹುದೆಂದು ಪ್ರಾರ್ಥಿಸಿದನು. ಅವರು ಶ್ರೀರಾಮನಿಗೆ ವಂದಿಸಿ ತಮ್ಮ ಸ್ಥಾನಗಳಿಗೆ ಹೋದರು. ಬಳಿಕ ವಿಭೀಷಣನು ರಾವಣನ ಪುಷ್ಪಕವಿಮಾನವನ್ನು ತಂದು ಶ್ರೀರಾಮನಿಗೆ ಸಮರ್ಪಿಸಲು, ಸೀತಾರಾಮಲಕ್ಷ್ಮಣರು ಅದರಲ್ಲಿ ಕುಳಿತರು. ಸುಗ್ರೀವಾಂಗದ ಜಾಂಬವತ್ಪ್ರಮುಖರೂ, ವಿಭೀಷಣನೂ, ಉಳಿದಕಪಿವೀರರೂ ವಿಮಾನದಲ್ಲಿ ಕುಳಿತರು. ತರುವಾಯ ಶ್ರೀರಾಮಾಜ್ಞೆಯಿಂದ ವಿಮಾನವು ಅಯೋಧ್ಯಾಭಿಮುಖವಾಗಿ ಹೊರಟಿತು. ರಾಮನು ಸೀತಾದೇವಿಗೆ ಸಮುದ್ರಸೇತುವನ್ನೂ, ಕಿಷ್ಕಿಂಧಾಪುರವನ್ನೂ, ಪಂಪಾಸರಸ್ಸನ್ನೂ ತೋರಿಸುತ್ತಾ ಪಂಚವಟಿ, ಚಿತ್ರಕೂಟ ಮುಂತಾದುವುಗಳ ಮಾರ್ಗವಾಗಿ ಹೊರಟು ಭರದ್ವಾಜಾಶ್ರಮಕ್ಕೆ ಬಂದು ಸೇರಿದನು. ಭರದ್ವಾಜಮುನಿಯು ಶ್ರೀರಾಮಾದಿಗಳನ್ನು ಸತ್ಕರಿಸಿ, ಈ ದಿನ ಇಲ್ಲಿಯೇ ಆತಿಥ್ಯವನ್ನು ಪಡೆದು ಹೋಗಬೇಕೆಂದು ಪ್ರಾರ್ಥಿಸಿದನು. ಈದಿನ ನಂದಿಗ್ರಾಮಕ್ಕೆ ಹೋಗಿ ಸೇರದಿದ್ದರೆ ಭರತನು ತನ್ನ ಪ್ರತಿಜ್ಞೆಯಂತೆ ಅಗ್ನಿಪ್ರವೇಶಮಾಡುವನು. ನಿಲ್ಲಲಿಕ್ಕೆ ಅವಕಾಶವಿಲ್ಲವೆಂದು ತಿಳಿಸಿದನು. ಅದಕ್ಕೆ ಭರದ್ವಾಜಮುನಿಯು "ಎಲೈ ರಾಮನೇ! ಚಿಂತಿಸಬೇಡ. ನೀನು ಇಲ್ಲಿಗೆ ಬಂದಿರುವುದಾಗಿ ಈ ಆಂಜನೇಯನ ಮೂಲಕ ಹೇಳಿಕಳುಹು. ಎಲ್ಲರೂ ಇಲ್ಲಿ ಈದಿನವಿದ್ದು ಆತಿಥ್ಯವನ್ನು ಪಡೆದು ನಾಳೆ

ಹೊರಡಬಹುದು.” ಎಂದು ಹೇಳಲು ಶ್ರೀರಾಮನು ಅದಕ್ಕೆ ಒಪ್ಪಿ ಮಾರುತಿಯನ್ನು ಭರತನಬಳಿಗೆ ಕಳುಹಿ, ಕಪಿಸೇನಾಸಹಿತವಾಗಿ ತಾನು ಅಲ್ಲಿಯೇ ಆದಿನ ನಿಂತುಬಿಟ್ಟನು. ಅಂಜನೇಯನು ಬಹುವೇಗವಾಗಿ ಹೋಗಿ, ಆಗತಾನೇ ಅಣ್ಣನು ಬರಲಿಲ್ಲವೆಂಬ ಚಿಂತೆಯಿಂದ ಅಗ್ನಿಪ್ರವೇಶ ಮಾಡಲಿಕ್ಕೆ ಸಿದ್ಧನಾಗಿರುವ ಭರತನಿಗೆ ಶ್ರೀರಾಮನ ವೃತ್ತಾಂತವನ್ನು ಹೇಳಿ ತಡೆದು, ಅವನ ಚಿಂತೆಯನ್ನು ಪರಿಹರಿಸಿದನು.

ಬಳಿಕ ಶ್ರೀರಾಮನು ಭರದ್ವಾಜಾಶ್ರಮದಲ್ಲಿ ಆ ದಿನವಿದ್ದು ಮರು ದಿನದುದಯದಲ್ಲಿ ಎಲ್ಲರೊಂದಿಗೆ ವಿಮಾನದಲ್ಲಿ ಕುಳಿತು ನಂದಿಗ್ರಾಮಕ್ಕೆ ಹೋಗಿ ಸೇರಿದನು. ಭರತನು ಸಕಲಮರ್ಯಾದೆಗಳಿಂದ ಬಂದು ಅಣ್ಣನನ್ನು ಎದುರುಗೊಂಡು ವಂದಿಸಿ, ರಾಮಪಾದುಕೆಗಳನ್ನು ಮುಂದಿರಿಸಿ, ನಿನ್ನರಾಜ್ಯವನ್ನು ಪರಿಗ್ರಹಿಸಬೇಕೆಂದು ಬೇಡಿಕೊಂಡನು. ಶ್ರೀರಾಮನು ಆದರಪೂರ್ವಕ ತಮ್ಮನನ್ನು ಆಲಿಂಗಿಸಿಕೊಂಡು, ಕೌಸಲ್ಯಾದಿ ಮಾತೃವರ್ಗಕ್ಕೂ ವಸಿಷ್ಠಾದಿಮಹರ್ಷಿಗಳಿಗೂ ವಂದಿಸಿ, ಅರಮನೆಗೆ ಹೋಗಿ ಸೇರಿದನು. ತರುವಾಯ ಶುಭಲಗ್ನದಲ್ಲಿ ರಾಮಲಕ್ಷ್ಮಣಭರತ ಶತ್ರುಘ್ನರು ಜಟಾಶೋಧನವನ್ನು ಮಾಡಿಕೊಂಡರು. ಬ್ರಾಹ್ಮಣರು ವೇದೋಕ್ತಮಂತ್ರಗಳಿಂದ ಗಂಗಾದಿ ಪುಣ್ಯತೀರ್ಥಗಳನ್ನು ತಂದು, ಶ್ರೀರಾಮನನ್ನು ರತ್ನಸಿಂಹಾಸನದಲ್ಲಿ ಕುಳ್ಳಿರಿಸಿ, ಅಭಿಷೇಕಮಾಡಿದರು. ಸಮಸ್ತ ಜನರಿಗೂ ಭಕ್ಷ್ಯಭೋಜ್ಯಗಳಿಂದಲೂ ದಾನದಕ್ಷಿಣೆಗಳಿಂದಲೂ ಸಂತೋಷಪಡಿಸಿ, ಶ್ರೀರಾಮನು ಭರತನಿಗೆ ಯುವರಾಜ ಪಟ್ಟವನ್ನು ಕಟ್ಟಿ, ಬಂಧುಮಿತ್ರರಿಗೆಲ್ಲಾ ಅವರವರ ಯೋಗ್ಯತಾನುಗುಣವಾಗಿ ಸನ್ಮಾನಗಳನ್ನುಮಾಡಿ ಅವರವರ ದೇಶಗಳಿಗೆ ಕಳುಹಿಸಿಕೊಟ್ಟನು. ಶ್ರೀರಾಮನ ರಾಜ್ಯಭಾರದಲ್ಲಿ ಎಲ್ಲರೂ ಸುಖವಾಗಿದ್ದರು. ಭೂಮಿಯು ಸರ್ವಸಸ್ಯಸಮೃದ್ಧವಾಗಿತ್ತು. ಮಳೆಗಳು ಯಥೇಷ್ಟವಾಗಿ ಸುರಿಯುತ್ತಿದ್ದುವು. ಹಿರಿಯರ ಎದುರಿಗೆ ಚಿಕ್ಕವರು ಸಾಯುತ್ತಿರಲಿಲ್ಲ. ವಿಧವೆಯರಾಗಲಿ, ದರಿದ್ರರಾರಲಿ, ಅಂಗಹೀನರಾಗಲಿ ರಾಮರಾಜ್ಯದಲ್ಲಿ ಇರಲೇ ಇಲ್ಲ. ಆ ಶ್ರೀರಾಮನು ಅಮಾನುಷವಾದ ಅನೇಕಕಾರ್ಯಗಳನ್ನು ಮಾಡಿ, ಲೋಕದಲ್ಲಿ ಕೀರ್ತಿಯನ್ನು ಪಡೆದನು. ಒಂದುದಿನ ಒಬ್ಬ ಬ್ರಾಹ್ಮಣನಮಗನು ಅಕಾಲಮೃತ್ಯುವಿಗೆ ಗುರಿಯಾಗಿ ಸಾಯಲು ಶ್ರೀರಾಮನು ಅದಕ್ಕೆ ಕಾರಣವನ್ನು ತಿಳಿದು ತಪಸ್ಸುಮಾಡುತ್ತಿದ್ದ ಶಂಬೂಕನೆಂಬ



ಶೂದ್ರನನ್ನು ಸಂಹಾರಮಾಡಿ ಆ ಬ್ರಾಹ್ಮಣಬಾಲಕನನ್ನು ಬದುಕಿಸಿದನು. ಪರಮಾತ್ಮನಾದ ಶ್ರೀರಾಮನು ಲೋಕೋಪಕಾರಾರ್ಥವಾಗಿ ಎಲ್ಲಾ ಕಡೆಗಳಲ್ಲಿಯೂ ಅನೇಕ ಕೋಟಿ ಶಿವಲಿಂಗಗಳನ್ನು ಪ್ರತಿಷ್ಠೆಮಾಡಿಸಿದನು.

ಈಪ್ರಕಾರವಾಗಿ ಶ್ರೀರಾಮಚಂದ್ರನು ಧರ್ಮಮಾರ್ಗವನ್ನು ಅತಿಕ್ರಮಿಸದೆ ಹತ್ತುಸಾವಿರ ವರುಷಗಳಕಾಲ ರಾಜ್ಯವನ್ನಾಳಿದನು. ಅವನು ರಾಜರ್ಷಿಯಂತೆ ಏಕಪತ್ನೀವ್ರತನಾಗಿ ಗೃಹಸ್ಥಧರ್ಮಗಳನ್ನಾಚರಿಸುತ್ತಾ ಸುಖವಾಗಿ ಇರುವಾಗ ಒಂದಾನೊಂದುದಿನ ಏಕಾಂತದಲ್ಲಿ ಸೀತೆಯು ಪತಿಯಪಾದಗಳಿಗೆ ನಮಸ್ಕರಿಸಿ ವಿನಯದಿಂದ ಇಂತೆಂದಳು. ‹‹ ಎಲೈ ಲೋಕನಾಯಕನೇ, ಬ್ರಹ್ಮಾದಿ ದೇವತೆಗಳು ನನ್ನ ಬಳಿಗೆ ಬಂದು, ಬಹುವಿಧವಾಗಿ ಪ್ರಾರ್ಥಿಸಿ, ವೈಕುಂಠಕ್ಕೆ ದಯಮಾಡಿಸುವಂತೆ ನಿನಗೆ ಶ್ರುತಪಡಿಸಬೇಕೆಂದು ಹೇಳಿಹೋದರು. ನಾವು ವೈಕುಂಠವನ್ನು ಬಿಟ್ಟುಬಂದು ಬಹುಕಾಲವಾಯಿತು. ತಮ್ಮ ಚಿತ್ತಕ್ಕೆ ಒಪ್ಪಿದರೆ ಅವರ ಪ್ರಾರ್ಥನೆಯನ್ನು ನೆರವೇರಿಸಬಹುದು, ›› ಎಂದು ಅರಿಕೇಮಾಡಿದಳು. ಅದಕ್ಕೆ ಶ್ರೀರಾಮನು ‹‹ ಎಲೌ ದೇವೀ ! ನಿನ್ನ ಮಾತು ವಾಸ್ತವ. ಸಮಸ್ತ ವಿಷಯಗಳನ್ನೂ ನಾನು ಚೆನ್ನಾಗಿ ಬಲ್ಲೆನು. ಲೋಕಾಪವಾದ ಶಂಕೆಯನ್ನು ನಿನ್ನಲ್ಲಿ ಆರೋಪಿಸಿ, ಆ ನೆವದಿಂದ ನಿನ್ನನ್ನು ತ್ಯಜಿಸಿಬಿಡುವೆನು. ಈಗ ನೀನು ಗರ್ಭವತಿಯಾಗಿರುವುದರಿಂದ ವಾಲ್ಮೀಕಿಮುನಿಯ ಆಶ್ರಮಕ್ಕೆ ಹೋಗಿ ಅಲ್ಲಿ ಇಬ್ಬರು ಮಕ್ಕಳನ್ನು ಪಡೆದು ನನ್ನ ಬಳಿಗೆ ಬಾ. ಲೋಕಕ್ಕೆ ವಿಶ್ವಾಸ ಹುಟ್ಟಿಸುವುದಕ್ಕೋಸ್ಕರ ನೀನು ಪ್ರತಿಜ್ಞೆಮಾಡಿ ಭೂಮಿಯಲ್ಲಿ ಪ್ರವೇಶಮಾಡಿ ವೈಕುಂಠಕ್ಕೆ ಹೋಗು. ನಾನು ಆ ಬಳಿಕ ಅಲ್ಲಿಗೆ ಬಂದುಸೇರುವೆನು. ›› ಎಂದು ಹೇಳಿದನು.

ಮತ್ತೊಂದುದಿನ ಲೋಕವಾರ್ತೆಯನ್ನು ತಿಳಿಯಲಿಕ್ಕೆ ಕಳುಹಲ್ಪಟ್ಟಿದ್ದ ದೂತರು ಶ್ರೀರಾಮನಬಳಿಗೆ ಬಂದು "ಒಬ್ಬ ಅಗಸನು ರಾಕ್ಷಸನ ಮನೆಯಲ್ಲಿದ್ದ ಸೀತೆಯನ್ನು ಪರಿಗ್ರಹಿಸಿದ ರಾಮನಂತೆ ನಾನು ಅಪ್ಪಣೆ ಪಡೆಯದೆ ತೌರುಮನೆಗೆ ಹೋದ ಸೀತೆಯನ್ನು ಮರಳಿ ಸ್ವೀಕರಿಸಲಾರೆನೆಂದು ತಿರಸ್ಕರಿಸಿದನು." ಎಂಬ ಸುದ್ದಿಯನ್ನು ತಿಳಿಸಿದರು. ಶ್ರೀರಾಮನು ಕೂಡಲೇ ತಮ್ಮಂದಿರನ್ನು ಕರೆಯಿಸಿ, ಈ ಲೋಕಾಪವಾದವಾರ್ತೆಯನ್ನು ತಿಳುಹಿ, ಸೀತಾದೇವಿಯನ್ನು ಪರಿತ್ಯಜಿಸುವೆನೆಂದು

ಹೇಳಿದನು. ಯುಃಕಶ್ಚಿತನಾದ ಒಬ್ಬನ ಮಾತಿಗೋಸ್ಕರ ಪರಮಪಾವನೆಯಾದ ಸೀತೆಯನ್ನು ತ್ಯಾಗಮಾಡಬಾರದೆಂದು ಭರತಾದಿಗಳು ಎಷ್ಟು ಸಮಾಧಾನ ಮಾಡಿದರೂ ಆತನು ಒಪ್ಪಲಿಲ್ಲ. ಅವನು ಲಕ್ಷ್ಮಣನನ್ನು ಕರೆದು, ಸೀತೆಯನ್ನು ರಥದಲ್ಲಿ ಕುಳ್ಳಿರಿಸಿಕೊಂಡುಹೋಗಿ ಅರಣ್ಯದಲ್ಲಿ ಬಿಟ್ಟುಬಾರೆಂದು ಆಜ್ಞಾಪಿಸಿದನು. ಲಕ್ಷ್ಮಣನು ಅಣ್ಣನ ಆಜ್ಞೆಯನ್ನು ಮೀರದೆ ಲೋಕಮಾತೆಯಾದ ಸೀತೆಯನ್ನು ಕರೆದುಕೊಂಡುಹೋಗಿ ಕಾಡಿನಲ್ಲಿ ಬಿಟ್ಟು ಹಿಂದಿರುಗಿ ಬಂದನು. ಅಷ್ಟರಲ್ಲಿ ವಾಲ್ಮೀಕಿಮಹರ್ಷಿಯು ಅರಣ್ಯದಲ್ಲಿ ಒಂಟಿಯಾಗಿ ಅಳುತ್ತಿದ್ದ ಸೀತೆಯ ಬಳಿಗೆ ಹೋಗಿ, ಕ್ಷೇಮಸಮಾಚಾರಗಳನ್ನು ವಿಚಾರಿಸಿ, ಸಮಾಧಾನ ಹೇಳಿ, ತನ್ನ ಆಶ್ರಮಕ್ಕೆ ಕರೆದುಕೊಂಡು ಹೋಗಿ, ರಾಜೋಪಚಾರಗಳಿಂದ ಅವಳನ್ನು ಸತ್ಕರಿಸುವ ಹಾಗೆ ಮುನಿಪತ್ನಿಯರನ್ನು ನಿಯಮಿಸಿದನು. ಕೆಲವು ದಿನಗಳು ಕಳೆದ ಬಳಿಕ ಸೀತೆಯು ಅವಳಿ ಮಕ್ಕಳನ್ನು ಹಡೆಯಲು ಅವರಿಗೆ ಲವಕುಶರೆಂಬ ಹೆಸರುಗಳನ್ನು ಇಟ್ಟು ಬಹು ಪ್ರೀತಿಯಿಂದ ಸಾಕಿ, ಉಪನಯನಮಾಡಿಸಿ, ವಿದ್ಯಾಭ್ಯಾಸವನ್ನೂ ಧನುರ್ವೇದವನ್ನೂ ಸಾಂಗವಾಗಿ ಕಲಿಸಿಕೊಟ್ಟನು. ಮತ್ತು ಅವರಿಗೆ ಶ್ರೀಮದ್ರಾಮಾಯಣವನ್ನು ಸಮಗ್ರವಾಗಿ ಅಭ್ಯಾಸಮಾಡಿಸಿ ಪಂಡಿತರೆನಿಸಿದನು.

ಇತ್ತ ಅಯೋಧ್ಯೆಯಲ್ಲಿ ಶ್ರೀರಾಮನು ಧರ್ಮದಿಂದ ರಾಜ್ಯಪರಿಪಾಲನೆಮಾಡುತ್ತಾ ಇದ್ದನು. ಒಂದುದಿನ ಲಕ್ಷ್ಮಣನು ಏಕಾಂತವಾಗಿ ಕುಳಿತಿದ್ದ ಶ್ರೀರಾಮನ ಬಳಿಗೆ ಬಂದು “ ಎಲೈ ಪರಬ್ರಹ್ಮಮೂರುತಿಯೇ! ನೀನು ಪರಿಶುದ್ಧನು. ಸರ್ವಪ್ರಾಣಿಗಳಿಗೂ ಆತ್ಮಕ್ಕೂ ಆತ್ಮನಾಗಿದ್ದೀಯೆ. ನೀನು ಸರ್ವೇಶ್ವರನು; ನಿರಾಕಾರನು, ಜ್ಞಾನಚಕ್ಷುಸ್ಸುಗಳಾದ ಮಹಾತ್ಮರುಗಳಿಗೆ ನೀನು ಪಾಪದರ್ಶನವನ್ನು ಕೊಡುತ್ತೀಯೆ, ನಾನು ನಿನಗೆ ಶರಣಾಗತನಾಗಿದ್ದೇನೆ. ನನ್ನಲ್ಲಿ ಕರುಣಿಸಿ ನನಗೆ ಜ್ಞಾನೋಪದೇಶಮಾಡು. ” ಎಂದು ಪ್ರಾರ್ಥಿಸಿದನು. ಆಗ ಶ್ರೀರಾಮನು ತಮ್ಮನ ಮಾತುಗಳನ್ನು ಕೇಳಿ ಅವನಲ್ಲಿ ಪ್ರಸನ್ನನಾಗಿ ಅವನ ಅಜ್ಞಾನಾಂಧಕಾರಪರಿಹಾರವಾಗುವಂತೆ ಅವನಿಗೆ ಜ್ಞಾನೋಪದೇಶಮಾಡತೊಡಗಿ ಇಂತೆಂದನು.—‘ ಎಲೈ ಲಕ್ಷ್ಮಣನೇ! ಜನರು ಆದಿಯಲ್ಲಿ ತಮ್ಮ ತಮ್ಮ ವರ್ಣಾಶ್ರಮಧರ್ಮಗಳಿಗೆ ಉಚಿತವಾದ ಕ್ರಿಯೆಗಳನ್ನು ಮಾಡುತ್ತಿದ್ದು ಪರಿಶುದ್ಧಮನಸ್ಕರಾಗಿ ತಕ್ಕ ಸಾಧನಗಳನ್ನು ಸಿದ್ಧಪಡಿಸಿಕೊಂಡು ಆತ್ಮ

ಲಾಭಕ್ಕೋಸ್ಕರ ಸದ್ಗುರುವನ್ನಾಶ್ರಯಿಸಬೇಕು. ಈ ಶರೀರೋತ್ಪತ್ತಿಗೆ ಹೇತುವಾದ ಸಂಸಾರದ ಅನುರಾಗವನ್ನು ಪರಿತ್ಯಜಿಸಬೇಕು. ಅಜ್ಞಾನವೇ ಜನ್ಮಕ್ಕೆ ಮೂಲಕಾರಣವು. ವಿದ್ಯಾಸಂಪಾದನೆಯಿಂದ ಅದನ್ನು ನಾಶಪಡಿಸಬೇಕು. ಅಜ್ಞಾನವು ಬಿಟ್ಟಹೊರತು ವೈರಾಗ್ಯ ಹುಟ್ಟುವುದಿಲ್ಲ. ಕರ್ಮಪರಿತ್ಯಾಗಮಾಡಿದಹೊರತು ದೋಷವು ಹೋಗುವುದಿಲ್ಲ. ಜನ್ಮಜನ್ಮಗಳಲ್ಲಿಯೂ ಪುಣ್ಯಪಾಪಗಳನ್ನು ಮಾಡುತ್ತಾ ತತ್ತತ್ ಫಲಗಳನ್ನು ಅನುಭವಿಸುತ್ತಿರಬೇಕು. ವಿದ್ಯೆಯು ಹೇಗೆ ಪ್ರಾಣಿಗಳಿಗೆ ಪುರುಷಾರ್ಥಸಾಧಕವಾದುದೋ ಹಾಗೆಯೇ ಅವಿದ್ಯೆಯು ಸಂಸಾರಬಂಧಕ್ಕೆ ಕಾರಣವಾದುದು. ಮುಮುಕ್ಷುವಾದವನು ಕರ್ತವ್ಯಕರ್ಮಗಳನ್ನು ಬಿಡಬಾರದು, ಅವುಗಳಲ್ಲಿ ಫಲಾಪೇಕ್ಷೆಯಿಲ್ಲದೆ ಅವುಗಳನ್ನು ಮಾಡಿ ಪರಮೇಶ್ವರನಿಗೆ ಸಮರ್ಪಿಸಬೇಕು. ಕೆಲವರು ವಿತರ್ಕವಾದಿಗಳು ಕರ್ಮಗಳಿಂದಲೇ ಮುಕ್ತಿಯುಂಟಾಗುವುದೆಂದು ಹೇಳುವರು. ದೇಹಾಭಿಮಾನದಿಂದ ಅಹಂಕಾರ ಹೆಚ್ಚುವುದು. ಶುದ್ಧವಾದ ಜ್ಞಾನದಿಂದ ಅವಿದ್ಯಾನಾಶವಾಗಿ ಕರ್ಮಗಳು ಸ್ವಾಧೀನವಾಗುವುವು. ಜ್ಞಾನಿಯು ಸರ್ವೇಂದ್ರಿಯಗೋಚರಗಳಾದ ವಿಷಯಗಳನ್ನು ಪರಿತ್ಯಜಿಸಿ ಆತ್ಮಾನುಸಂಧಾನದಲ್ಲಿ ಆಸಕ್ತಿಯನ್ನಿಡಬೇಕು. ಶರೀರಾದಿಗಳಲ್ಲಿ ಯಾವವರೆಗೆ ಅಭಿಮಾನವಿರುವುದೋ ಅದುವರೆಗೂ ಕರ್ಮಫಲಗಳೂ ಬೆನ್ನಹತ್ತಿರುವುವು. ಇದು ನನಗಿಲ್ಲವೆಂದು ಸಮಸ್ತವನ್ನೂ ನಿಷೇಧಮಾಡಿ ಪರಮಾತ್ಮನನ್ನು ತಿಳಿದುಕೊಂಡು ಆಮೇಲೆ ಕ್ರಿಯೆಗಳನ್ನೆಲ್ಲಾ ಬಿಟ್ಟುಬಿಡಬೇಕು. ಜೀವಾತ್ಮಪರಮಾತ್ಮರುಗಳಿಗೆ ಭೇದವಿಲ್ಲವೆಂಬ ಬುದ್ಧಿಯು ಯಾವಾಗ ಹುಟ್ಟುವುದೋ ಆಗ ಮಾಯೆಯು ತೊಲಗಿಹೋಗುವುದು. ವಿಜ್ಞಾನದಿಂದ ಅವಿದ್ಯಾನಾಶವಾಗಿ ಅದ್ವಿತೀಯವಾದ ಆತ್ಮಜ್ಞಾನ ಹುಟ್ಟುವುದಿಲ್ಲ. ಎಂದುತಿಳಿದಮೇಲೆ ಇದಕ್ಕೆ ನಾನು ಕರ್ತನೆಂಬ ಬುದ್ಧಿ ಹೇಗೆತಾನೆ ಹುಟ್ಟುವುದು? ಆದುದರಿಂದ ನಾನು ಸ್ವತಂತ್ರನಲ್ಲವೆಂದು ಭಾವಿಸುವುದೇ ಅ ವಿದ್ಯಾಮೋಕ್ಷಣಕ್ಕೆ ಸಾಧಕವಾಗುವುದು. ಜ್ಞಾನವೇ ಮೋಕ್ಷಸಾಧನವಲ್ಲದೆ ಕರ್ಮವು ಮೋಕ್ಷಸಾಧನವಲ್ಲ. ಯಜ್ಞಾದಿಕರ್ಮಗಳನ್ನು ಬಹಳವಾಗಿ ಆಚರಿಸಿದರೂ ಫಲಾಭಿಲಾಷೆಯಿದ್ದಲ್ಲಿ ಮೋಕ್ಷವು ಲಭಿಸದು. ರಸ ಮೊದಲಾದ ಪಂಚಭೂತಗಳಿಂದ ಹುಟ್ಟದ್ದಾಗಿಯೂ ಸುಖದುಃಖಾದಿಕರ್ಮಗಳ ಭೋಗಕ್ಕೆ ಮನೆಯಾಗಿಯೂ

ಇರುವ ಶರೀರವು ಪಾಪಕರ್ಮಗಳಿಂದ ಉಂಟಾಗಿಯೂ ಮಾಯಾಮಯ ವಾಗಿಯೂ ಆತ್ಮನಿಗೆ ಸ್ಥೂಲೋಪಾದಿಯಾಗಿಯೂ ಇರುವುದು. ಮನಸ್ಸು, ಬುದ್ಧಿ, ಇಂದ್ರಿಯ, ಪ್ರಾಣಗಳಿಂದ ಅಪಂಚೀಕೃತವಾದ ಸೂಕ್ಷ್ಮಶರೀರವನ್ನು ಅನುಭವಿಸುವುದಕ್ಕೆ ಅನ್ಯಶರೀರವೂ ಸಾಧನವೆಂದು ವಿದ್ವಾಂಸರು ಹೇಳುವರು. ಕರ್ಮವೂ ಮಿಥ್ಯೆಯು. ಪರಬ್ರಹ್ಮನೇ ಸತ್ಯವು. ಎಂದು ನಂಬಿ ಜ್ಞಾನಾಮೃತವನ್ನು ಸೇವಿಸಿದರೆ ಅವನೇ ನಿರಾಕಾರನಾಗುವನು. ಆತ್ಮನು ಮೃತನಾಗುವನಲ್ಲ; ಹುಟ್ಟುವವನೂ ಅಲ್ಲ; ಕ್ಷಯವಾಗುವವನೂ ಅಲ್ಲ; ಬೆಳೆಯುವವನೂ ಅಲ್ಲ; ಆತ್ಮನು ಸರ್ವದಾ ಸುಖಿಯು; ಸ್ವಯಂಪ್ರಕಾಶನು; ಸರ್ವವ್ಯಾಪಿಯು; ಅದ್ವಿತೀಯನು ಎಂಬ ಜ್ಞಾನವುಂಟಾದರೆ ಅಂಥ ಸುಖಿಗೆ ದುಃಖಮಯವಾದ ಜನ್ಮವು ಹೇಗೆ ಬರುವುದು? ಅಜ್ಞಾನದಿಂದ ದುಃಖಗಳು ಪ್ರಾಪ್ತವಾಗಿ ಬಾಧಿಸುವುವು. ಈ ಜ್ಞಾನದಿಂದ ಅವು ತತ್‌ಕ್ಷಣವೇ ಲಯವಾಗುವುವು. ಮಾಯಾಶೂನ್ಯವಾಗಿ ಜ್ಞಾನಾತ್ಮಕವಾದ ಆತ್ಮನಲ್ಲಿ ಅಹಂಕಾರವು ಮೊದಲು ಕಲ್ಪಿತವಾಗುವುದು ಎಂದು ಕೆಲವುಕಡೆ ಹೇಳುವರು. ಸರ್ವಕಾಮನಾಗಿಯೂ ನಿರಾಮಯನಾಗಿಯೂ ಇರುವ ಪರಮಾತ್ಮನಲ್ಲಿಯೇ ಈ ಅಹಂಕಾರ ವೃದ್ಧಿಯಾಗುವುದೆಂದು ಕೆಲವರು ಹೇಳುವರು ಇನ್ನೂ ಕೆಲವರು, ಸಂಸಾರಹೇತುಗಳಾದ ಇಚ್ಛಾನುರಾಗಾದಿಗಳಿಂದ ಉಂಟಾಗುವುದೆಂದು ಹೇಳುವರು. ಆತ್ಮನು ಸರ್ವಸಾಕ್ಷಿಯಾಗಿದ್ದರೂ ಮಾಯೆಯಿಂದ ಪರಿಚ್ಛಿನ್ನನಂತೆ ಕಾಣಬರುವನು. ಗುರೂಪದೇಶದಿಂದಲೂ ದೇವವಾಕ್ಯಗಳಿಂದಲೂ ಬ್ರಹ್ಮಜ್ಞಾನವನ್ನು ಪಡೆದು ಸ್ವಾನುಭವದಿಂದ ಆತ್ಮನನ್ನು ನೋಡಿ ಆತ್ಮನಲ್ಲಿರುವ ಉಪಾಧಿವರ್ಜಿತವಾದ ತನ್ನನ್ನು ತಿಳಿದುಕೊಂಡು, ಜಡವಾಗಿರುವ ಸಮಸ್ತಪ್ರಪಂಚವನ್ನೂ ಬಿಟ್ಟುಬಿಡಬೇಕು. ನಾನೇ ಪ್ರಕಾಶಸ್ವರೂಪನು; ಜನ್ಮರಹಿತನು; ಅದ್ವಿತೀಯನು; ನಿರ್ಮಲನು; ಪರಿಶುದ್ಧಜ್ಞಾನಮಯನು; ನಿರಾಮಯನು; ಸಂಪೂರ್ಣನು; ಆನಂದನು; ಕ್ರಿಯಾರಹಿತನು; ಅತೀಂದ್ರಿಯಜ್ಞಾನಿಯು; ಆನಂದಪರನು,' ಎಂದು ತಿಳಿದುಕೊಳ್ಳಬೇಕು. ನಿರ್ಜನಪ್ರದೇಶದಲ್ಲಿ ಕುಳಿತು ಇಂದ್ರಿಯಗಳನ್ನೆಲ್ಲಾ ಜಯಿಸಿ ಪರಿಶುದ್ಧಾಂತಃಕರಣನಾಗಿ ಅನನ್ಯಸಾಧನನಾಗಿ ಜ್ಞಾನದೃಷ್ಟಿಯಿಂದ ಪರಮಾತ್ಮನನ್ನು ನೋಡಿ ತಿಳಿಯಬೇಕು. ಈ ಜಗತ್ತೆಲ್ಲವೂ ಪರಮಾತ್ಮನೇ

ಎಂದೂ, ಇದರ ಚೇಷ್ಟೆಗಳೆಲ್ಲ ಆತನ ವಿಳಾಸಗಳೇ ಎಂದೂ ತಿಳಿಯ ಬೇಕು. ಆತ್ಮನು ಪೂರ್ಣನಾಗಿಯೂ ಚಿದಾನಂದಮಯನಾಗಿಯೂ ಇರುವನು, ಅವನು ಹೊರಕ್ಕೆ ಕಾಣಿಸತಕ್ಕವನಲ್ಲ. ಚರಾಚರಾತ್ಮಕ ವಾದ ಈ ಜಗತ್ತೆಲ್ಲ ಓಂಕಾರಮಾತ್ರದಲ್ಲಿ ಅಡಗಿವೆ.' ಎಂದು ತಿಳಿದು ಜ್ಞಾನದಿಂದ ಎಚ್ಚತ್ತುಕೊಳ್ಳಬೇಕು, ಆ ಪ್ರಣವದಲ್ಲಿ ಅಕಾರ ಉಕಾರ ಮಕಾರಗಳೆಂಬ ಮೂರಕ್ಷರಗಳು ಸೇರಿಕೊಂಡಿರುವುವು. ಅಕಾರಸಂಜ್ಞನಾದ ಪುರುಷನೇ ವಿಶ್ವವ್ಯಾಪಿಯಾಗಿರುವನು; ಉಕಾರ ವೆಂಬುದೇ ಅವನ ತೇಜಸ್ಸು ಮಕಾರವು ಸಮಾಧಿಪೂರ್ವಕವಾದ ಜ್ಞಾನ ವು. ಈ ವಿಷಯವೇ ಪುರುಷಸ್ವರೂಪವಾದ ಅಕಾರವು, ಅದರ ವಿಲಾ ಸವೇ ಉಕಾರವು, ಮಕಾರವೇ ತೇಜಸ್ಸು. ಈ ರೀತಿಯಲ್ಲಿ ಪರಮಾ ತ್ಮನ ಸ್ವರೂಪವನ್ನು ತಿಳಿದು ಆನಂದದಿಂದ ಸಂತುಷ್ಟನಾಗಿ ಸಮಸ್ತ ವನ್ನೂ ಮರೆತು ನಿತ್ಯಾತ್ಮನಾಗಿ ಗಂಭೀರವಾದ ಸಮುದ್ರದಂತೆ ಪೂರ್ಣ ವಾದ ಆತ್ಮಸುಖವನ್ನೂ ಪಡೆಯುವನು. ಈರೀತಿಯಲ್ಲಿ ಅಭ್ಯಾಸಬಲ ದಿಂದ ಸಮಾಧಿಯೋಗದಲ್ಲಿ ನೆಲಸಿ ಸರ್ವೇಂದ್ರಿಯಗೋಚರಗಳಾದ ವಿಷಯಗಳನ್ನೆಲ್ಲಾ ಪರಿತ್ಯಜಿಸಿ ಅಜಾತಶತ್ರುವಾಗಿಯೂ ಜಿತಷಡ್ಗು ಣಾತ್ಮನಾಗಿಯೂ ಆಗಿ ಆತ್ಮನನ್ನು ಅಹೋರಾತ್ರಿಗಳಲ್ಲಿಯೂ ಧ್ಯಾನಿ ಸುತ್ತಾ ಸಮಸ್ತಬಂಧಗಳಿಂದ ಮುಕ್ತನಾಗಿ ಅಭಿಮಾನವನ್ನು ಬಿಟ್ಟು ಪ್ರಾರಬ್ಧವನ್ನನುಭವಿಸುತ್ತಾ ಸಾಕ್ಷಾತ್ತಾದ ನನ್ನಲ್ಲಿಯೇ ವಿಲೀನನಾಗು ವನು. ಆದಿಯಲ್ಲಿಯೂ ಮಧ್ಯದಲ್ಲಿಯೂ ಅಂತ್ಯದಲ್ಲಿಯೂ ಸಂಭವಿಸುವ ಭಯಶೋಕಕಾರಣಗಳಾದ ಸಮಸ್ತವನ್ನೂ ಬಿಟ್ಟುಬಿಟ್ಟು ಸರ್ವಾತ್ಮಕ ನಾದ ಆತ್ಮನನ್ನು ತನ್ನಲ್ಲಿಯೇ ತಿಳಿದು ಅಭೇದಭಾವದಿಂದ ಸುಖವನ್ನು ಪಡೆಯುವನು. ಸಮುದ್ರದಲ್ಲಿ ನೀರು ಹೇಗೋ ಹಾಲಿನಲ್ಲಿ ಕ್ಷೀರಬಿಂ ದುಗಳು ಹೇಗೋ ಆಕಾಶದಲ್ಲಿ ಗಗನವೂ ಗಾಳಿಯಲ್ಲಿ ವಾಯುವೂ ಹೇಗೆ ಅಡಗಿವೆಯೋ ಹಾಗೆಯೇ ಈ ಜಗತ್ತೆಲ್ಲ ಮಿಥ್ಯೆಯೆಂದೂ ತಾನೇ ಆತ್ಮನೆಂದೂ ತಿಳಿದುಕೊಳ್ಳುವವನು ಸುಖಪಡುವನು. ಶ್ರದ್ಧಾಳು ವಾಗಿಯೂ ಭಕ್ತಿಯುಕ್ತನಾಗಿಯೂ ಇದ್ದುಕೊಂಡು ಸಮಸ್ತ ವನ್ನೂ ಬ್ರಹ್ಮವೆಂದು ತಿಳಿದು ನನ್ನ ಆರಾಧನೆಯಲ್ಲಿ ತತ್ಪರನಾ ಗಿರು. ಆಗ ನೀನೇ ಬ್ರಹ್ಮನಾಗಿ ನಿತ್ಯಾನಂದವನ್ನು ಹೊಂದುವೆ.' ಎಂದು ಹೇಳಿದನು.

ಕೆಲವು ದಿನಗಳು ಕಳೆದ ಬಳಿಕ ಯಮುನಾತೀರವಾಸಿಗಳಾದ ಮಹರ್ಷಿಗಳು ಭಾರ್ಗವಚ್ಯವನನನ್ನು ಮುಂದಿಟ್ಟುಕೊಂಡು, ಶ್ರೀರಾಮನ ಬಳಿಗೆ ಬಂದು, ಅಭಯವನ್ನು ಪ್ರಾರ್ಥಿಸಿದರು. ಆಗ ಶ್ರೀರಾಮನು ಅವರನ್ನು ಸತ್ಕರಿಸಿ, "ಮಹಾತ್ಮರೇ, ತಮ್ಮ ದರ್ಶನದಿಂದ ಧನ್ಯನಾದೆನು. ತಾವು ಬಂದ ಕಾರ್ಯವನ್ನು ದಯಮಾಡಿ ತಿಳಿಸಿದರೆ ಮಾಡಿಕೊಡುವೆನು. ಅಪ್ಪಣೆ ಕೊಡಿಸಿರಿ," ಎಂದನು. ಅದಕ್ಕಾ ಮಹರ್ಷಿಗಳ ಪರವಾಗಿ ಚ್ಯವನನಿಂತೆಂದನು. "ಎಲೈ ಲೋಕನಾಥನೇ, ಪೂರ್ವದಕೃತಯುಗದಲ್ಲಿ ಮಧುವೆಂಬ ದೈತ್ಯನು ಧರ್ಮಿಷ್ಠನಾಗಿ ಮಹಾದೇವನನ್ನು ಕುರಿತು ಬಹುಕಾಲ ತಪಸ್ಸು ಮಾಡಲು ಆ ದೇವನು ಸಂತುಷ್ಟನಾಗಿ ಅವನಿಗೆ ಒಂದು ಶೂಲವನ್ನು ಕೊಟ್ಟನು. ಆ ಶೂಲವನ್ನು ಯಾರಮೇಲೆ ಪ್ರಯೋಗಿಸಿದರೂ ಅವನು ಭಸ್ಮವಾಗುವನೆಂದು ವರವಾಯಿತು. ಆ ಮಧುವು ರಾವಣನ ತಂಗಿಯಾದ ಕುಂಭೀನಸಿಯನ್ನು ಮದುವೆಯಾದನು. ಅವಳಲ್ಲಿ ಆ ರಾಕ್ಷಸನಿಗೆ ಲವಣಾಸುರನೆಂಬ ಮಗನು ಹುಟ್ಟಿದನು. ದುರಾತ್ಮನಾದ ಆ ಲವಣನು ದೇವಬ್ರಾಹ್ಮಣಹಿಂಸಕನಾಗಿ, ಅವರು ಮಾಡುವ ಯಜ್ಞಯಾಗಾದಿಗಳಿಗೆ ವಿಘ್ನಮಾಡುತ್ತಾ, ಲೋಕಕಂಟಕನಾಗಿರುವನು. ಅವನದೆಸೆಯಿಂದ ಭೀತರಾದ ಋಷಿಗಳೆಲ್ಲರೂ ನಿನ್ನಿಂದ ಅಭಯವನ್ನು ಪಡೆಯಲಪೇಕ್ಷಿಸಿ ಬಂದಿರುವರು. ನೀನು ಕರುಣಿಸಿ, ಆ ರಾಕ್ಷಸನನ್ನು ವಧಿಸಿ, ನಮ್ಮಭಯವನ್ನು ಪರಿಹರಿಸಬೇಕು." ಎಂದು ಪ್ರಾರ್ಥಿಸಿದನು. ಅದನ್ನು ಕೇಳಿ ಶ್ರೀರಾಮನು "ಲವಣಾಸುರನನ್ನು ಕೊಲ್ಲಿಸುವೆನು. ನೀವು ನಿಶ್ಚಿಂತರಾಗಿ ನಿಮ್ಮ ಆಶ್ರಮಗಳಿಗೆ ದಯಮಾಡಿಸಬಹುದು." ಎಂದು ಹೇಳಿ ಅವರನ್ನು ಕಳುಹಿ, ತನ್ನ ತಮ್ಮಂದಿರಿಗೆ ಈ ವಾರ್ತೆಯನ್ನು ತಿಳಿಸಿದನು. ಲಕ್ಷ್ಮಣನು ಲಂಕಾಯುದ್ಧದಲ್ಲಿ ಪ್ರತಾಪತೋರಿಸಿ, ವಿಶ್ರಾಂತನಾಗಿದ್ದುದರಿಂದಲೂ, ಭರತನು ರಾಜಕಾರ್ಯಗಳಲ್ಲಿ ಮಗ್ನನಾಗಿ ಬಳಲಿದ್ದುದ್ದರಿಂದಲೂ, ಈ ಭಾರವನ್ನು ಅವರಮೇಲೆ ಹೊರಿಸದೆ ತನಗೆ ಈ ಕಾರ್ಯವನ್ನು ನಿಯಮಿಸಬೇಕೆಂದು ಶತ್ರುಘ್ನನು ಅಣ್ಣನನ್ನು ಕೇಳಿಕೊಳ್ಳಲು, ಶ್ರೀರಾಮನು ಹಾಗೆಯೇ ಆಗಲೆಂದು ಒಪ್ಪಿ, ಲವಣಾಸುರನನ್ನು ಕೊಂದುಬಾರೆಂದು ಅವನಿಗೆ ಅಪ್ಪಣೆಕೊಟ್ಟು ಕಳು ವನು. ಶತ್ರುಘ್ನನು ರಾಮಾಜ್ಞೆಯಂತೆ ಬೇಕಾದಷ್ಟು ಸೈನ್ಯವನ್ನು ದುಕೊಂಡು ಲವಣಾಸುರನಮೇಲೆ ಯುದ್ಧಕ್ಕೆ ಹೊರಟನು. ಇವನು

ಹೋಗುವವೇಳೆಗೆ ಆ ರಾಕ್ಷಸನು ಮಹೇಶ್ವರದತ್ತವಾದ ಶೂಲವನ್ನು ತನ್ನ ಅರಮನೆಯಲ್ಲಿ ಪೂಜಿಸಿಟ್ಟು ಮೃಗಯಾರ್ಥವಾಗಿ ಕಾಡಿಗೆ ಹೋಗಿದ್ದನು. ಶತ್ರುಘ್ನನು ಹೋಗಿ, ಆತನ ಪಟ್ಟಣವನ್ನು ಮುತ್ತಿಗೆ ಹಾಕಿದನು. ಸ್ವಲ್ಪಹೊತ್ತಿಗೆ ಆ ರಾಕ್ಷಸನು ಬರಲು, ಅವನನ್ನು ಅರಮನೆಯೊಳಕ್ಕೆ ಬಿಡದೆ, ಮಾರ್ಗದಲ್ಲಿಯೇ ತಡೆದು ಘೋರಯುದ್ಧಮಾಡಿ ಕೊಂದುಹಾಕಿ, ಆ ದೇಶದ ಜನರಿಗೆ ಅಭಯವನ್ನು ಕೊಟ್ಟು ಮುನಿಗಳ ಆಶೀರ್ವಚನವನ್ನು ಹೊಂದಿ, ಅಯೋಧ್ಯೆಗೆಬಂದು, ಶ್ರೀರಾಮನಿಗೆ ಅಲ್ಲಿ ನಡೆದ ವೃತ್ತಾಂತವನ್ನು ತಿಳಿಸಿ ಆತನಿಂದ ಸನ್ಮಾನಿಸಲ್ಪಟ್ಟನು.

ಕೆಲವುದಿನಗಳತರುವಾಯ ಶ್ರೀರಾಮನು ಅಶ್ವಮೇಧಯಾಗವನ್ನು ಮಾಡಲಿಕ್ಕೆ ಸಂಕಲ್ಪಿಸಿದನು. ಧರ್ಮಪತ್ನಿಯಾದ ಸೀತೆಯು ಅಲ್ಲಿ ಇಲ್ಲದ್ದರಿಂದ ಸ್ವರ್ಣದಲ್ಲಿ ಸೀತಾವಿಗ್ರಹವನ್ನು ಮಾಡಿಸಿ, ಯಜ್ಞಕರ್ಮಕ್ಕೆ ಆರಂಭಿಸಿ, ಅಶ್ವವನ್ನು ಬಿಟ್ಟು ಅದರ ರಕ್ಷಣೆಗಾಗಿ ಶತ್ರುಘ್ನನನ್ನು ಕಳುಹಿದನು. ಯಜ್ಞದೀಕ್ಷಿತನಾಗಿ ಕುಳಿತಿದ್ದ ಶ್ರೀರಾಮನಬಳಿಗೆ ಬ್ರಹ್ಮಚಾರಿಗಳಾದ ಲವಕುಶರು ಬಂದು ಶ್ರೀಮದ್ರಾಮಾಯಣವನ್ನು ತಾಳಲಯಗಳೊಂದಿಗೆ ಶ್ರಾವ್ಯವಾಗಿ ಹಾಡಿದರು. ಶ್ರೀರಾಮನು ಆಮೂಲಾಗ್ರವಾಗಿ ಅದನ್ನು ಕೇಳಿ ಬಹುಸಂತೋಷಪಟ್ಟು, ನೀವು ಯಾರೆಂದು ವಿಚಾರಿಸಲು ನಾವು ಸೀತಾದೇವಿಯ ಮಕ್ಕಳೆಂದು ಹೇಳಿದರು. ಅಷ್ಟರಲ್ಲಿ ವಾಲ್ಮೀಕಿ ಮಹರ್ಷಿಯು ಅಲ್ಲಿಗೆ ಬಂದು, ಕಾಡಿನಲ್ಲಿ ಒಂಟಿಗಳಾಗಿದ್ದ ಸೀತೆಯನ್ನು ತಾನು ಕರೆದುಕೊಂಡು ಹೋಗಿ, ಆಶ್ರಮದಲ್ಲಿರಿಸಿ ಪಾಲಿಸಿದ ಸಂಗತಿಯನ್ನೆಲ್ಲಾ ವಿವರಿಸಿದನು. ಶ್ರೀರಾಮನು ಸೀತಾದೇವಿಯನ್ನು ಇಲ್ಲಿಗೆ ಕರೆದುತರಬೇಕೆಂದು ಅಪೇಕ್ಷಿಸಲು ನಾಳೆಯದಿನ ಕರೆದುತರುವೆನೆಂದು ಹೇಳಿ, ಅದರಂತೆ ಮರುದಿನ ಸೀತೆಯನ್ನು ಕರೆದುತಂದನು. ಸಭೆಯಲ್ಲಿ ಮಂತ್ರಿಗಳೂ, ಬ್ರಾಹ್ಮಣರೂ, ಪುರಜನರೂ, ಬಂಧುಜನರೂ ಬಂದು ಸೇರಿದ್ದರು. ಆಗ ವಾಲ್ಮೀಕಿಯು, ಸೀತಾದೇವಿಯನ್ನು ಹಿಂದಿಟ್ಟುಕೊಂಡು, ಶ್ರೀರಾಮನನ್ನು ಕುರಿತು ಇಂತೆಂದನು. “ಎಲೈ ರಾಮನೆ! ಅಶೇಷಮಹಾಜನಗಳಿರಾ ಕೇಳಿರಿ. ಈ ಸೀತೆಯು ಸುವ್ರತೆಯು, ಧರ್ಮಚಾರಿಣಿಯು. ಲೋಕಾಪವಾದಭೀತಿಯಿಂದ ಇವಳನ್ನು ಶ್ರೀರಾಮನು ತ್ಯಜಿಸಿ ನನ್ನ ಆಶ್ರಮದಹತ್ತಿರ ಬಿಡಿಸಿದನು. ಅಲ್ಲಿ ಈಕೆಯು ಈ ಎರಡುಮಕ್ಕಳನ್ನು ಪಡೆದಳು. ನನ್ನಮಾತಿನಲ್ಲಿ ಸ್ವಲ್ಪವೂ

ಸುಳ್ಳಲ್ಲ." ಎಂದು ಹೇಳಿದನು. ಅದಕ್ಕೆ ಶ್ರೀರಾಮನು "ಮಹರ್ಷಿಯೇ, ತಮ್ಮವಾಕ್ಯದಲ್ಲಿ ನನಗೆ ಪೂರ್ಣವಿಶ್ವಾಸವಿದೆ. ಈ ಸೀತೆಯು ಲಂಕಾಪಟ್ಟಣದಲ್ಲಿ ಸೆರೆಯಿದ್ದಾಗ ಪರಿಶುದ್ಧಳಾಗಿದ್ದಳೆಂದು ಸ್ಥಾಪಿಸುವುದಕ್ಕೆ ತಕ್ಕ ಪ್ರತ್ಯಯವನ್ನು ಕೊಡಬೇಕೆಂದು ಕೇಳಲು ಈಕೆಯು ಅಗ್ನಿಯಲ್ಲಿ ಪ್ರವೇಶಿಸಿದಳು. ಅಗ್ನಿಪುರುಷನು ಈಕೆಯನ್ನು ತಂದು ಒಪ್ಪಿಸಿ ನಿರ್ದೋಷಿಯೆಂದು ಹೇಳಿದುದಲ್ಲದೆ ಬ್ರಹ್ಮಾದಿದೇವತೆಗಳೂ, ನನ್ನ ತಂದೆಯಾದ ದಶರಥನೂ ಪೂರ್ಣವಾದ ನಂಬುಗೆಕೊಟ್ಟರು. ಪುನಃ ಇಲ್ಲಿ ಲೋಕಾಪವಾದ ಭೀತಿಯಿಂದ ಈಕೆಯನ್ನು ನಾನು ಪರಿತ್ಯಜಿಸಿದುದು ನಿಜವು. ಕ್ಷಮಿಸಬೇಕು." ಎಂದು ಹೇಳಿದನು. ಅಷ್ಟರಲ್ಲಿ ಶ್ರೀರಾಮನ ಅಭಿಪ್ರಾಯವನ್ನು ತಿಳಿದು ಬ್ರಹ್ಮಾದಿದೇವತೆಗಳೆಲ್ಲರೂ ಅಲ್ಲಿಗೆ ಬಂದು ಸೇರಿದರು. ಆಗ ಸೀತೆಯು ಸಭಾಮಧ್ಯದಲ್ಲಿ ನಿಂತು, ತಲೆತಗ್ಗಿಸಿಕೊಂಡು ಕೈಮುಗಿದು ಇಂತೆಂದಳು. "ಎಲೌ ಭೂದೇವಿಯೆ ಮಹಾತಾಯಿ, ನಾನು ಕರಣತ್ರಯದಲ್ಲಿಯೂ ಶ್ರೀರಾಮನನ್ನು ಹೊರತು ಮತ್ತಾರನ್ನೂ ಚಿಂತಿಸದೆ ಇದ್ದುದು ನಿಜವಾದರೆ ನನಗೆ ಮಾರ್ಗಕೊಟ್ಟು ನಿನ್ನಲ್ಲಿ ಸೇರಿಸಿಕೋ."

ಈ ರೀತಿಯಲ್ಲಿ ಸೀತಾದೇವಿಯು ಶಪಥಮಾಡಿದ ಕೂಡಲೇ ಮಹಾದ್ಭುತವುಂಟಾಯಿತು. ಭೂಮಿಯಿಂದ ದಿವ್ಯವಾದ ಸಿಂಹಾಸನವೊಂದು ಮೇಲಕ್ಕೆ ಎದ್ದುಬಂದಿತು. ಕೋಟಿಸೂರ್ಯಪ್ರಕಾಶಮಾನವಾಗಿದ್ದ ಆ ಸಿಂಹಾಸನದಮೆಲೆ ಭೂದೇವಿಯು ಕುಳಿತಿದ್ದಳು. ಅವಳು ತನ್ನ ಭುಜಗಳಿಂದ ಸೀತಾದೇವಿಯನ್ನು ಅಪ್ಪಿಹಿಡಿದು, ತನ್ನ ತೊಡೆಯಮೇಲೆ ಕುಳ್ಳಿರಿಸಿಕೊಂಡು ರಸಾತಲವನ್ನು ಪ್ರವೇಶಿಸಿದಳು. ಅಂತರಿಕ್ಷದಲ್ಲಿ ದೇವತೆಗಳೆಲ್ಲಾ ಜಯಧ್ವನಿಮಾಡಿ ಪುಷ್ಪವೃಷ್ಟಿಯನ್ನು ಸುರಿಸಿದರು. ಜನರೆಲ್ಲರೂ ಭ್ರಾಂತರಾಗಿ ಏನೂ ಆಡಲಾರದೆ ಮೌನದಿಂದ ಇದ್ದರು. ಸರ್ವಜ್ಞನಾದ ಶ್ರೀರಾಮನು ಇವೆಲ್ಲಾ ತಾನುಹೇಳಿದಂತೆಯೇ ನಡೆದುವುಗಳೆಂದು ತಿಳಿದಿದ್ದರೂ ಲೋಕವಿಡಂಬನಾರ್ಥವಾಗಿ ಪ್ರಾಕೃತನಂತೆ ಸೀತಾವಿಯೋಗಕ್ಕೋಸ್ಕರ ದುಃಖಿಸುತ್ತಿದ್ದನು. ಆಗ ಬ್ರಹ್ಮಾದಿದೇವತೆಗಳೂ ಮಹರ್ಷಿಗಳೂ ಶ್ರೀರಾಮನಿಗೆ ಸಮಾಧಾನಗೊಳಿಸಿ ಚಿಂತೆಯನ್ನು ಬಿಡಿಸಿದರು.

ಅಂದಿನಿಂದ ಶ್ರೀರಾಮನು ಸಮಸ್ತಭೋಗಗಳಲ್ಲಿಯೂ ನಿಸ್ಪೃಹನಾಗಿ ಆತ್ಮಚಿಂತಾಪರನಾಗಿದ್ದನು. ಒಂದಾನೊಂದುದಿನ ರಾಮಚಂದ್ರನು ಏಕಾಂತದಲ್ಲಿ ಕುಳತಿರುವಾಗ ಕೌಸಲ್ಯಾದೇವಿಯು, ತನ್ನ ಮಗನೇ ಸಾಕ್ಷಾತ್‌ನಾರಾಯಣನೆಂದು ತಿಳಿದು ಭಕ್ತಿಯಿಂದ ಬಂದುನಿಲ್ಲಲು ಆತನು ತಾಯಿಗೆ ನಮಸ್ಕಾರಮಾಡಿ, ನೀವು ಬಂದ ಕಾರ್ಯಾರ್ಥವೇನೆಂದು ಕೇಳಲು ಆಕೆ ಇಂತೆಂದಳು.

ಎಲೈ ರಾಮನೆ, ನೀನು ಆಧಿಮಧ್ಯಾಂತರಹಿತನಾದ ಪರಮಾತ್ಮನು ನನ್ನ ಪುಣ್ಯವಿಶೇಷದಿಂದ ನೀನು ನನ್ನ ಗರ್ಭದಲ್ಲಿ ಉದಿಸಿದೆ. ನನ್ನ ಅವಸಾನಕಾಲವು ಸಮೀಪಿಸಿಬಂತು. ನನಗೆ ಸಂಸಾರತಾಪತ್ರಯಗಳಿಂದ ಬ್ರಹ್ಮಜ್ಞಾನದಲ್ಲಿ ಬುದ್ಧಿಯು ಹೋಗದೆ ಮಾಯೆಯು ಆವರಿಸಿಕೊಂಡಿದೆ. ಈ ಭವಬಂಧವು ಪರಿಹಾರವಾಗುವಂತೆ ಆತ್ಮಜ್ಞಾನವನ್ನು ತಿಳಿಸಿ ಮುಕ್ತಿ ಮಾರ್ಗವನ್ನು ತೋರಿಸು.

ಈ ಮಾತುಗಳನ್ನು ಕೇಳಿ ಮಾತೃವತ್ಸಲನಾದ ಶ್ರೀರಾಮನು ಆ ದೇವಿಯನ್ನು ನೋಡಿ, “ತಾಯೇ! ನಿನ್ನ ಸಂಸಯನಿವೃತ್ತಿಯಾಗುವಂತೆ ಬ್ರಹ್ಮವಿಚಾರವಾಗಿ ಹೇಳುವೆನು ಕೇಳು. ಕರ್ಮಯೋಗ, ಜ್ಞಾನಯೋಗ, ಭಕ್ತಿಯೋಗ ಇವು ಮೂರೂ ಮೋಕ್ಷಪ್ರಾಪ್ತಿಗೆ ಸಾಧಕಗಳಾದ ಮಾರ್ಗಗಳು. ಇವುಗಳಲ್ಲಿ ಭಕ್ತಿಯೋಗವೇ ಸರ್ವಜನರಿಗೂ ಸುಲಭವಾದ ಸಾಧನವು ಇದು ಗುಣಭೇದದಿಂದ ಮೂರುವಿಧವಾಗಿರುವುದು ಯಾವನು ಹಿಂಸೆಯನ್ನು ಉದ್ದೇಶಿಸಿ, ದಂಭ, ಮತ್ಸರ ಮುಂತಾದ ಕುಮಾರ್ಗಗಳಿಂದ ಲೋಕವಿಡಂಬನಾರ್ಥವಾಗಿ ಭಕ್ತಿಯನ್ನು ತೋರಿಸುವನೋ ಅವನಭಕ್ತಿಯು ತಾಮಸಭಕ್ತಿಯೆನಿಸುವುದು. ಧನಕಾಮನಾಗಿ ಅಥವಾ ಕೀರ್ತಿಕಾಮನಾಗಿ ಅರ್ಚಾದಿಗಳಲ್ಲಿ ಬೇಧಬುದ್ಧಿಯನ್ನಿಟ್ಟುಕೊಂಡುನನ್ನನ್ನುಪೂಜಿಸುವನೋಅಂತಹಭಕ್ತಿಯು ರಾಜಸವೆನಿಸುವುದು. ಯಾವನುಫಲಾಭಿಲಾಷೆಯಿಲ್ಲದೆ ನಿಷ್ಕಾಮನಾಗಿ ಕರ್ತವ್ಯವನ್ನು ಬಿಡದೆಆಚರಿಸಿ, ಎಲ್ಲವನ್ನೂ ನನಗೆ ಸಮರ್ಪಣೆಮಾಡುವನೋ ಅಂತಹ ಭಕ್ತಿಯು ಸಾತ್ವಿಕವೆನಿಸುವುದು. ಸಾಲೋಕ್ಯಸಾಮೀಪ್ಯ ಸಾರೂಪ್ಯಸಾಯುಜ್ಯಗಳೆಂದು ಮುಕ್ತಿಯು ನಾಲ್ಕುವಿಧವಾಗಿರುವುದು. ನನ್ನ ಭಕ್ತನಾದವನು ನನ್ನ ಸೇವೆಯಲ್ಲಿಯೇ ನಿರತನಾಗಿ ದಾನಪ್ರತಿಗ್ರಹಾದಿಗಳನ್ನು ನನಗೋಸ್ಕರವೇ ಮಾಡುತ್ತಿರುವನು. ಅಂತವನು ನಿಷ್ಕಾಮಿಯಾಗಿ ಸ್ವಧರ್ಮಾಚರಣೆ

ಯನ್ನು ಮಾಡುತ್ತಾ, ಪ್ರಾಣಿಹಿಂಸೆಗಳನ್ನುಳಿದು, ನನ್ನ ದರ್ಶನ, ಸ್ತೋತ್ರ, ಪೂಜೆ, ನಾಮಸ್ಮರಣೆ, ವಂದನೆ, ಸರ್ವಭೂತಗಳೂ ನಾನೇ ಎಂಬ ಭಾವನೆ, ಸಜ್ಜನ ಸಾಂಗತ್ಯ, ದುಃಖಿತರಲ್ಲಿ ಅನುಕಂಪೆ, ಇಂದ್ರಿಯ ನಿಗ್ರಹ, ವೇದಾಂತ ಶಾಸ್ತ್ರಾಭ್ಯಾಸ, ಯೋಗಸಾಧನೆ ಋಜುವರ್ತನೆ ಮುಂತಾದ ಸದ್ಗುಣಗಳಿಂದ ನಡೆಯುತ್ತಿದ್ದು ಕೊನೆಗೆ ನನ್ನ ಸಾನ್ನಿಧ್ಯ ವನ್ನು ಸೇರುವನು. ಯಾವನು ಆತ್ಮನುಬೇರೆ, ನಾನುಬೇರೆ ಎಂದು ತಿಳಿಯುವನೋ ಅವನು ಮೃತ್ಯುವಶನಾಗುವನು, ಆದುದರಿಂದ ಸರ್ವ ಭೂತಗಳಲ್ಲಿಯೂ ವ್ಯಾಪಿಸಿರುವ ನಾನೇ ತಾನೆಂದು ಭಾವಿಸಿ ಭಕ್ತಿ ಯೋಗದಿಂದಲಾಗಲಿ ಜ್ಞಾನಯೋಗದಿಂದಲಾಗಲಿ, ಕರ್ಮಯೋಗದಿಂದ ಲಾಗಲಿ ನನ್ನನ್ನು ನಂಬಿದರೆ ಸುಲಭವಾಗಿ ಮುಕ್ತಿಯನ್ನು ಹೊಂದುವನು" ಎಂದನು.

ಇದನ್ನು ಕೇಳಿ ಕೌಸಲ್ಯೆಯು ಆನಂದಭರಿತಳಾಗಿ ಸಂಸಾರಬಂಧ ವನ್ನು ಛೇದಿಸಿ, ಶ್ರೀರಾಮನನ್ನೇ ತನ್ನ ಮನಸ್ಸಿನಲ್ಲಿ ಧ್ಯಾನಿಸುತ್ತಾ ಮೂರುದಿನಗಳಿದ್ದು ನಾಲ್ಕನೆಯದಿನ ಪರಮಪದವನ್ನು ಹೊಂದಿದಳು. ಕೈಕೆಯಿ ಸುಮಿತ್ರೆಯರೂ ಇದೇ ಭಕ್ತಿಯೋಗ ಮಾರ್ಗದಿಂದ ಕೌಸ ಲ್ಯೆಯ ಹಿಂದೆಯೇ ತಾವೂ ಮೃತರಾಗಿ ಕೈವಲ್ಯವನ್ನು ಪಡೆದರು.

ಕೆಲವುದಿನಗಳ ತರುವಾಯ ಭರತನು ತನ್ನ ಸೋದರ ಮಾವನಾದ ಯುಧಾಜಿತುವಿನಿಂದ ಕರೆಸಲ್ಪಟ್ಟು, ರಾಮಾಜ್ಞೆಯಿಂದ ಸೇನಾಸಹಿತ ನಾಗಿ ಅಲ್ಲಿಗೆ ಹೋಗಿ, ಶತ್ರುಗಳಾದ ಗಂಧರ್ವನಾಯಕರನ್ನು ಕೊಂದು, ತನ್ನ ಮಕ್ಕಳಲ್ಲಿ ಹಿರಿಯನಾದ ಪುಷ್ಕರನನ್ನು ಪುಷ್ಕರಾವರ್ತದಲ್ಲಿಯೂ, ಕಿರಿಯನಾದ ತಕ್ಷನನ್ನು ತಕ್ಷಶಿಲೆಯಲ್ಲಿಯೂ ರಾಜರನ್ನಾಗಿಮಾಡಿ, ಅಯೋಧ್ಯೆಗೆ ಹಿಂದಿರುಗಿ ಬಂದು ಶ್ರೀರಾಮನ ಸೇವೆಮಾಡಿಕೊಂಡಿ ದ್ದನು. ಬಳಿಕ ಶ್ರೀರಾಮನು ಲಕ್ಷ್ಮಣನನ್ನುಕರೆದು, "ನೀನು ಪಶ್ಚಿಮ ದಿಕ್ಕಿಗೆ ಹೋಗಿ ದುಷ್ಟರಾದ ಮಲ್ಲರನ್ನು ಜಯಿಸಿ ನಿನ್ನ ಮಕ್ಕಳಾದ ಅಂಗದ, ಚಿತ್ರಕೇತು ಇವರಿಬ್ಬರಿಗೂ ಎರಡು ನಗರಗಳನ್ನು ಕಟ್ಟಿಸಿ ಅಲ್ಲಿ ಪಟ್ಟಾಭಿಷಿಕ್ತರನ್ನಾಗಿಮಾಡಿಬಾ" ಎಂದು ಹೇಳಲು ಅವನು ಶ್ರೀರಾಮನ ಆಜ್ಞೆಯಂತೆ ಹೋಗಿ ಕಾರ್ಯವನ್ನು ನೆರವೇರಿಸಿ ಬಂದನು. ಶ್ರೀರಾಮನುಧರ್ಮದಿಂದ ರಾಜ್ಯವಾಳುತ್ತಿದ್ದನು.

ಬಂದಾನೊಂದು ದಿನ ಶ್ರೀರಾಮನ ದರ್ಶನಾರ್ಥವಾಗಿ ಯಮನು ಮುನಿವೇಷಧರನಾಗಿ ಅಯೋಧ್ಯೆಗೆ ಬಂದನು. ಅವನು ಅರಮನೆಯನ್ನು ಹೊಕ್ಕು ಲಕ್ಷ್ಮಣನಮೂಲಕ ತಾನು ಬಂದಿರುವ ವರ್ತಮಾನವನ್ನು ಹೇಳಿ ಕಳುಹಲು ಶ್ರೀರಾಮನು ಆದರ ಪೂರ್ವಕ ಮಹರ್ಷಿರೂಪದಲ್ಲಿರುವ ಯಮನನ್ನು ಬರಮಾಡಿಕೊಂಡು, ಷೋಡಶೋಪಚಾರಗಳಿಂದ ಸತ್ಕರಿಸಿ " ಸ್ವಾಮಿ ! ತಾವು ಬಂದಿರುವ ಕಾರ್ಯವನ್ನು ದಯಮಾಡಿ ತಿಳಿಸಬೇಕೆಂದು ಪ್ರಾರ್ಥಿಸಿದನು, ಅದಕ್ಕಾಯಮನು " ಎಲೈ ರಾಮನೇ ನಾನು ಹೇಳುವ ಮಾತುಗಳನ್ನು ನಿನ್ನ ಹೊರತು ಮತ್ತಾರೂ ಕೇಳಕೂಡದು. ಆದುದರಿಂದ ಯಾರನ್ನೂ ಒಳಕ್ಕೆ ಪ್ರವೇಶಿಸದಂತೆ ಕಟ್ಟುಮಾಡು " ಎಂದು ಹೇಳಿದನು. ಶ್ರೀರಾಮನು ಲಕ್ಷ್ಮಣನನ್ನು ಬಾಗಿಲಲ್ಲಿರಿಸಿ, ಯಾರನ್ನೂ ಪ್ರವೇಶಗೊಳಿಸಬೇಡವೆಂದು ಹೇಳಿದನು. ಅವನು ಅದರಂತೆಯೇ ಜಾಗರೂಕನಾಗಿ ಕಾದುಕೊಂಡಿದ್ದನು.

ಆಗ ಯಮನು ಶ್ರೀರಾಮನನ್ನು ನೋಡಿ " ಎಲೈ ಪರಮಾತ್ಮನೇ ನಾನು ಬ್ರಹ್ಮನಿಂದ ಕಳುಹಲ್ಪಟ್ಟು ಬಂದು ಕಾರ್ಯಾರ್ಥವಾಗಿ ನಿನ್ನ ಬಳಿಗೆ ಬಂದಿರುವೆನು. ಆತನ ಸಂದೇಶವನ್ನು ಕೇಳು—ಸ್ವಾಮಿ ! ನಾನು ನಿನ್ನ ಮಗನು, ನೀನು ದೇವಲೋಕವನ್ನು ರಕ್ಷಿಸಲು ದಯಮಾಡಿಸಬೇಕು. ಪೂರ್ವದಲ್ಲಿ ನೀನು ಲೋಕವನ್ನೆಲ್ಲಾ ಲಯಮಾಡಿ ಒಬ್ಬನೇ ಉಳಿದಿದ್ದೆ ತರುವಾಯ ಭಾರ್ಯಾಸಹಿತನಾಗಿ ನನ್ನನ್ನು ಪಡೆದೆ, ಬಳಿಕ ಜಲಶಾಯಿಯಾಗಿ ಭೋಗವತನೆಂಬ ಸರ್ಪರಾಜನನ್ನು ಸೃಷ್ಟಿಸಿದೆ, ಮತ್ತು ನೀನು ಮಾಯೆಯಿಂದ ಮಧುಕೈಟಭರೆಂಬ ರಾಕ್ಷಸರನ್ನು ಜಯಿಸಿ, ಮಹಾ ಬಲರಾದ ಅವರನ್ನು ಸಂಹರಿಸಿ ಅವರ ಮೇದಸ್ಸಿನಿಂದಲೂ ಅಸ್ಥಿಯಿಂದಲೂ ಪರ್ವತ ವಿಶಿಷ್ಟವಾದ ಈ ಭೂಮಿಯನ್ನು ನಿರ್ಮಿಸಿದೆ, ನಿನ್ನ ಅಪ್ಪಣೆಯಿಂದ ನಾನು ಲೋಕಸೃಷ್ಟಿಮಾಡುತ್ತಲಿದ್ದೇನೆ. ಒಂದು ಕಾಲದಲ್ಲಿ ಭೂಭಾರವು ಹೆಚ್ಚಾಗಲು ನೀನು ವಾಮನರೂಪದಿಂದ ಕಶ್ಯಪನ ಹೆಂಡತಿಯಾದ ಅದಿತಿಯಲ್ಲಿ ಅವತರಿಸಿ ಭೂಭಾರವನ್ನು ಹರಿಸಿದೆ. ಈಚೆಗೆ ರಾವಣನ ಬಾಧೆಯಿಂದ ಲೋಕಕ್ಕೆಲ್ಲಾ ಉಪದ್ರವವುಂಟಾಗಲು ದೇವತೆಗಳ ಪ್ರಾರ್ಥನೆಯಂತೆ ನಾನು ನಿನ್ನನ್ನು ಕೇಳಿಕೊಂಡುದರಿಂದ ನೀನು ಭೂಲೋಕದಲ್ಲಿ ಅವತರಿಸಿ, ದುಷ್ಟದಾನವರನ್ನೆಲ್ಲಾ ಸಂಹಾರ ಮಾಡಿದೆ. ನೀನು ಭೂಮಿಗೆ ಹೋಗಿ ಹನ್ನೊಂದು ಸಾವಿರ ವರ್ಷಗಳಾ

ದುವು. ಇನ್ನೂ ರಾಜ್ಯಭಾರವಮಾಡುತ್ತಿರಬೇಕೆಂಬ ಬುದ್ಧಿಯು ನಿನಗಿದ್ದರೆ ಅಲ್ಲಿ ಇಷ್ಟಬಂದಷ್ಟು ಕಾಲವಿರಬಹುದು. ದೇವಕಾರ್ಯವು ಪೂರಯಿಸಿದುದರಿಂದ ಚಿತ್ತಕ್ಕೆ ಸೂಕ್ತವಾಗಿ ತೋರಿದರೆ ವೈಕುಂಠಕ್ಕೆ ದಯಮಾಡಿಸ ಬಹುದು.

ಈ ರೀತಿಯಾಗಿ ಯಮನು ಹೇಳಿದ ಬ್ರಹ್ಮನ ಸಂದೇಶವನ್ನು ಕೇಳಿ, ಸರ್ವಜ್ಞನಾದ ಶ್ರೀರಾಮನು ಅವನನ್ನು ನೋಡಿ " ಎಲೈ ಕಾಲನೇ, ಬ್ರಹ್ಮನು ಹೇಳಿಕಳುಹಿದುದೆಲ್ಲಾ ನಿಜವೇ, ನಾನು ಇದೇ ಆಲೋಚನೆಯಲ್ಲಿರುವೆನು. ಜಾಗ್ರತೆಯಲ್ಲಿ ಹೊರಟುಬರುವೆನೆಂದು ಹೇಳು. " ಎಂದು ನುಡಿಯುತ್ತಿರುವಷ್ಟರಲ್ಲಿ ದೂರ್ವಾಸಮುನಿಯು ಶ್ರೀರಾಮನ ದರ್ಶನಾರ್ಥನಾಗಿ ಅರಮನೆಗೆ ಬಂದನು. ರಾಜದ್ವಾರದಲ್ಲಿ ಕುಳಿತಿರ್ದ ಲಕ್ಷ್ಮಣನು ಆ ಮಹರ್ಷಿಯನ್ನು ನೋಡಿ, " ಸ್ವಾಮಿ, ಶ್ರೀರಾಮನು ಕಾರ್ಯಗೌರವದಲ್ಲಿರುವುದರಿಂದ ಪ್ರವೇಶಕ್ಕೆ ಇದು ಸಮಯವಲ್ಲವು " ಎಂದು ವಿನಯದಿಂದ ಅರಿಕೆಮಾಡಿದನು. ಚಂಡಕೋಪನಾದ ದೂರ್ವಾಸನು ಮಹದಾಗ್ರಹಗೊಂಡು, " ನನ್ನನ್ನು ಒಳಕ್ಕೆ ಬಿಡುವೆಯೋ, ಅಥವಾ ನಿಮ್ಮ ವಂಶವನ್ನೆಲ್ಲಾ ಭಸ್ಮಮಾಡಿಬಿಡಲೋ " ಎಂದು ಗದರಿಸಿದನು. ಆಗ ಲಕ್ಷ್ಮಣನು ತನ್ನ ಮನಸ್ಸಿನಲ್ಲಿ ಯೋಚಿಸಿ, ಈತನನ್ನು ಒಳಕ್ಕೆ ಬಿಟ್ಟರೆ ರಾಜಾಜ್ಞೆಯನ್ನು ಮೀರಿದ ತಪ್ಪಿಗೆ ನಾನೊಬ್ಬನು ಮಾತ್ರವೇ ಸಿಕ್ಕಿವಧ್ಯನಾಗುವೆನು, ಬಿಡದೆಹೋದರೆ ಈತನ ಕೋಪದಿಂದ ನಮ್ಮ ವಂಶವೆಲ್ಲವೂ ನಾಶವಾಗುವುದು. ಆದುದರಿಂದ ಇವನನ್ನು ಒಳಕ್ಕೆ ಬಿಡುವೆನೆಂದು ನಿಶ್ಚಯಿಸಿ, ಶ್ರೀರಾಮನ ಬಳಿಗೆ ಕರೆದುಕೊಂಡು ಹೋಗಿ ಬಿಟ್ಟನು. ತತ್ಕ್ಷಣವೇ ಯಮನು ಅದೃಶ್ಯನಾದನು. ಶ್ರೀರಾಮನು ಮಹರ್ಷಿಯನ್ನು ಸತ್ಕರಿಸಿ, ತಮ್ಮ ಇಷ್ಟವೇನೆಂದು ಕೇಳಲು " ಎಲೈ ರಾಮನೇ, ಸಾವಿರ ವರುಷಗಳಿಂದ ಉಪವಾಸ ಮಾಡಿದೆನು ನನಗೆ ಮೃಷ್ಟಾನ್ನ ಭೋಜನವನ್ನು ಕೊಡಿಸಬೇಕು. " ಎಂದು ಪ್ರಾರ್ಥಿಸಲು ಶ್ರೀರಾಮನು ಕೂಡಲೇ ಆತನ ಇಷ್ಟದಂತೆ ಭೋಜನಮಾಡಿಸಿದನು. ಆತನು ಬಹು ಸಂತೋಷಪಟ್ಟು ಶ್ರೀರಾಮನನ್ನು ಆಶೀರ್ವದಿಸಿ, ಹೊರಟು ಹೋದನು.

ಬಳಿಕ ಲಕ್ಷ್ಮಣನು ದುಃಖದಿಂದ ದೀನವದನನಾಗಿ ತನ್ನ ಬಳಿಯಲ್ಲಿ ನಿಂತಿರುವುದನ್ನು ಕಂಡು, ಶ್ರೀರಾಮನು " ತಮ್ಮಾ ! ಚಿಂತಿಸಬೇಡ,

ನೀನು ನನ್ನ ಆಜ್ಞೆಯನ್ನು ಉಲ್ಲಂಘಿಸಿದುದರಿಂದ ದಂಡನಾರ್ಹನೆಂದು ತಿಳಿದಿರುವೆ, ಭೂಭಾರಹರಣವಾದುದರಿಂದ ನೀನು ಇನ್ನು ಹೊರಟು ಹೋಗ ಬಹುದು. ಇದರಿಂದ ನಿನ್ನ ಪ್ರತಿಜ್ಞೆಗೆ ಯಾವ ಲೋಪವೂ ಇಲ್ಲ. ನಾನುಜಾಗ್ರತೆಯಲ್ಲಿಯೇ ವೈಕುಂಠಕ್ಕೆ ಹೊರಟು ಬರುವೆನು." ಎಂದು ಹೇಳಲು ಲಕ್ಷ್ಮಣನು ಶ್ರೀರಾಮನಿಗೆ ನಮಸ್ಕರಿಸಿ ಆತನ ಅಪ್ಪಣೆ ಪಡೆದು ಹೊರಟುಹೋದನು.

ತರುವಾಯ ಒಂದುದಿನ ಶ್ರೀರಾಮನು ವಸಿಷ್ಠಾದಿ ಮಹರ್ಷಿಗಳನ್ನು ಕರೆಯಿಸಿ, ಸರ್ವಾನುಮತದಿಂದ ಭರತನಿಗೆ ಅಯೋಧ್ಯಾರಾಜ್ಯದ ಪಟ್ಟಾಭಿಷೇಕಮಾಡಿಸಬೇಕೆಂದು ಯತ್ನಿಸಲು ಭರತನು ಅದಕ್ಕೊಡಂಬಡದೆ "ಸ್ವಾಮಿ! ನಿಮ್ಮಮಕ್ಕಳಾದ ಲವಕುಶರು ಈ ರಾಜ್ಯವಾಳಲಿಕ್ಕೆ ಅರ್ಹರು .ಅವರಿಗೆ ರಾಜ್ಯಾಭಿಷೇಕಮಾಡು. ನಾನೂ ಶತ್ರುಘ್ನನೂ ನಿನ್ನನ್ನು ಹಿಂಬಾಲಿಸಿಬರುವೆವು, ನಮ್ಮನ್ನು ಕೈಬಿಡಬೇಡ," ಎಂದು ಪ್ರಾರ್ಥಿಸಿದನು. ಶ್ರೀರಾಮನು ಹಾಗೆಯೇಆಗಲೆಂದು ಕೋಸಲದೇಶಕ್ಕೆ ಕುಶನನ್ನೂ, ಉತ್ತರಕೋಸಲಕ್ಕೆ ಲವನನ್ನೂ ರಾಜರನ್ನಾಗಿ ನಿಯಮಿಸಿ, ಭರತಶತ್ರುಘ್ನರನ್ನೂ ಪರಿಜನರನ್ನೂ ಆವೇಳೆಗೆ ಸರಿಯಾಗಿಬಂದ ಸುಗ್ರೀವಾದಿ ಕಪಿವೀರರನ್ನೂ ಕರೆದುಕೊಂಡು, ಸರಯೂನದಿಯಲ್ಲಿಳಿದು ವೈಕುಂಠಕ್ಕೆ ಹೋಗಿಸೇರಿ ಸೀತಾಸಮೇತನಾಗಿ ಸುಖದಿಂದಿರುವನು.

ಎಲೌ ಪಾರ್ವತಿಯೇ! ಅಧ್ಯಾತ್ಮ ರಾಮಚರಿತವನ್ನು ಕೇಳಬೇಕೆಂದು ನೀನು ಅಪೇಕ್ಷಿಸಿದುದರಿಂದ ಇದನ್ನು ಸಂಕ್ಷೇಪವಾಗಿ ಹೇಳಿದೆನು. ಮತ್ತೇನಾದರೂ ಕೇಳಬೇಕೆಂಬ ಆಸೆಯಿದ್ದರೆ ಸಂಶಯಗೊಳ್ಳದೆ ಕೇಳಬಹುದೆಂದು ನಿರೂಪಿಸಿದನು.

ನಾಲ್ಕನೆಯ ಸಂಧಿ ಮುಗಿದುದು.



ಐದನೆಯ ಸಂಧಿ.

ಬಳಿಕ ಪಾರ್ವತಿಯು ಪರಮೇಶ್ವರನನ್ನು ನೋಡಿ,—ಎಲೈ ಪ್ರಾಣಪ್ರಿಯನೆ. ಅಧ್ಯಾತ್ಮರಾಮಾಯಣವನ್ನು ಕೇಳಿ ಬಹುಸಂತೋಷಪಟ್ಟೆನು. ಮುಕ್ತಿಕಾಂತಾಸ್ವಯಂವರವನ್ನು ಕೇಳಬೇಕೆಂಬ ಇಷ್ಟ ಇರುವುದರಿಂದ ದಯಮಾಡಿ ಅದನ್ನು ತಿಳಿಸಬೇಕೆಂದು ಪ್ರಾರ್ಥಿಸಿದಳು. ಅದಕ್ಕೆ ಪರಮೇಶ್ವರನು,—ಎಲೌ ಗೌರಿಯೇ ಕೇಳು. ಈ ವಿಷಯದಲ್ಲಿ ಪುರಾಣಕರ್ತನಾದ ವೇದವ್ಯಾಸನು ಪಾಂಡವಾಗ್ರಜನಾದ ಯುಧಿಷ್ಠಿರನಿಗೆ ನಿರೂಪಿಸಿದ ಶ್ರೀರಾಮಸ್ತವರಾಜವೆಂಬ ಇತಿಹಾಸವನ್ನು ಹೇಳಿದನು. ಅದನ್ನೀಗ ನಿನಗೆ ವಿವರಿಸುವೆನು, ಸಾವಧಾನಚಿತ್ತಳಾಗಿ ಲಾಲಿಸು,

ಕುಂತೀಪುತ್ರನಾದ ಯುಧಿಷ್ಠಿರನು ಪ್ರಭುತ್ವಮಾಡುತ್ತಿರುವ ಕಾಲದಲ್ಲಿ ಒಂದಾನೊಂದುದಿನ ಭಗವಂತನಾದ ವ್ಯಾಸಮುನೀಶ್ವರನು ಆತನನ್ನು ನೋಡುವುದಕ್ಕಾಗಿ ಹಸ್ತಿನಾಪುರಕ್ಕೆ ಬಂದನು. ಯುಧಿಷ್ಠಿರನು ಆ ಮಹರ್ಷಿಗೆ ಪ್ರತ್ಯುತ್ಥಾನ, ಅಭಿವಂದನಾದಿ ಸತ್ಕಾರಗಳನ್ನು ಮಾಡಿ, ಸುಖಾಸನದಲ್ಲಿ ಕುಳ್ಳಿರಿಸಿ, ಕುಶಲಪ್ರಶ್ನೆಗಳನ್ನು ವಿಚಾರಿಸಿದ ಮೇಲೆ ಆತನನ್ನುಕುರಿತು, "ಮಹಾತ್ಮನೇ, ಮಹಾಯೋಗೀಶ್ವರನಾಗಿಯೂ ನಿಖಿಲಶಾಸ್ತ್ರಜ್ಞನಾಗಿಯೂ ಇರುವ ನಿನಗೆ ತಿಳಿಯದವಿಷಯವು ಒಂದೂ ಇಲ್ಲವು. ಮುಕ್ತಿಸಾಧನೆಗೆ ಸುಲಭೋಪಾಯವು ಯಾವುದೆಂಬುದನ್ನು ತಿಳಿಯಲಪೇಕ್ಷಿಸುವೆನು. ನನ್ನ ಪ್ರಾರ್ಥನೆಯನ್ನು ನೆರವೇರಿಸಬೇಕು." ಎಂದು ಕೇಳಿಕೊಂಡನು. ಅದಕ್ಕಾಮುನೀಂದ್ರನು "ಎಲೈ ರಾಜರ್ಷಿಯೇ ಕೇಳು. ನನಗೆ ತಿಳಿದಿರುವಮಟ್ಟಿಗೆ ಶ್ರೀರಾಮನಾಮವನ್ನು ಜಪಿಸುವುದೊಂದೇ ಮುಕ್ತಿಸಾಧನವಾಗಿದೆ. ಆ ರಾಮಜಪವು ತಾರಕಬ್ರಹ್ಮವೆಂಬ ಸಂಜ್ಞೆಯಿಂದ ಪ್ರಸಿದ್ಧವಾಗಿದೆ. ಅದನ್ನು ಜಪಿಸುವವರಿಗೆ ಯಾವದೋಷಗಳೂ ಸಮೀಪಕ್ಕೆ ಬರಲಾರವು. ಯಾವನೇ ಆಗಲಿ, 'ಶ್ರೀರಾಮರಾಮರಾಮ' ಎಂದು ಸದಾಕಾಲವೂ ಪಠಿಸುತ್ತಿರುವನೋ ಅವನು ಭುಕ್ತಿಮುಕ್ತಿಗಳೆರಡನ್ನೂ ಸುಲಭವಾಗಿ ಪಡೆಯುವನು. ಈ ರಾಮಸ್ತವರಾಜವನ್ನು ಆತ್ಮಜ್ಞಾನಿಯಾದ ನಾರದಮಹರ್ಷಿಯು ನನಗೆ ಉಪದೇಶಿಸಿದನು. ಅದನ್ನು ನಿನಗೆ ಹೇಳುವೆನು ಕೇಳು.

ಅಯೋಧ್ಯಾಪಟ್ಟಣದಲ್ಲಿ ರಮ್ಯವಾದ ರತ್ನಮಂಟಪದಬಳಿಯಲ್ಲಿ ಒಂದು ಕಲ್ಪವೃಕ್ಷದ ಮೂಲದಲ್ಲಿ ರತ್ನಸಿಂಹಾಸನವನ್ನು ನಿರ್ಮಿಸಿ, ಅದರ ಮಧ್ಯದಲ್ಲಿ ಅಷ್ಟದಳಪದ್ಮದ ಆಕೃತಿಯನ್ನು ಅಲಂಕರಿಸಿ, ಅದರ ನಡುವೆ ಶ್ರೀರಾಮಚಂದ್ರನು ಕುಳಿತಿರುವಂತೆ ಭಾವಿಸು. ಕೋಟಿಸೂರ್ಯಪ್ರಕಾಶಮಾನನಾಗಿ, ನೀಲಮಣಿಯ ಕಾಂತಿಯಿಂದೊಪ್ಪುವ ಆ ಪರಮಾತ್ಮನು ತನ್ನ ತಂದೆಯಾದ ದಶರಥನ ತೊಡೆಯಮೇಲೆ ಕುಳಿತುಕೊಂಡಿರುವಂತೆ ತಿಳಿದುಕೋ. ಆ ಮಹಾತ್ಮನು ಕೋಮಲಾಂಗನು, ವಿಶಾಲವಾದ ನೇತ್ರಗಳುಳ್ಳವನು. ದಿವ್ಯಪೀತಾಂಬರವನ್ನು ಧರಿಸಿರುವನು. ಮಾಣಿಕ್ಯಮಯವಾದ ಕರ್ಣಕುಂಡಲಗಳನ್ನೂ, ಕಿರೀಟಹಾರಕಂಕಣಕಟಿಸೂತ್ರಮಂಜೀರಾದಿ ಸಮಸ್ತಾಭರಣಗಳನ್ನು ಧರಿಸಿ, ಹಸನ್ಮುಖನಾಗಿ, ಯೋಗಶಾಸ್ತ್ರವನ್ನು ಓದುತ್ತಾ "ರಮಂತೆಯೋಗಿ ನೋನಂತೇ

ಸತ್ಯಾಸಂದೇಚಿದಾತ್ಮನಿ । ತೇನರಾಮುಪದೇನಾಸೌ ಪರಬ್ರಹ್ಮಾಭಿಧೀಯತೇ" ಎಂಬಂತೆ ತ್ರಿಲೋಕವನ್ನೂ ಮೋಹಿಸುವ ಸುಂದರಾಕಾರದಿಂದ ಒಪ್ಪುತ್ತಿರುವನು. ಅವನೇ ತಾರಕನಾಮನೆಂದು ಮನಸ್ಸಿನಲ್ಲಿ ತಿಳಿ. ಗಂಧರ್ವಕಿನ್ನರ ಕಿಂಪುರುಷಾದಿದೇವತೆಗಳೂ, ನಾರದಾದಿದೇವರ್ಷಿಗಳೂ ಓಲಗಿಸುತ್ತಿರಲು, ಭರತಲಕ್ಷ್ಮಣಶತ್ರುಘ್ನಸಮೇತನಾಗಿಯೂ, ವಸಿಷ್ಠವಿಶ್ವಾಮಿತ್ರಾದಿಮಹರ್ಷಿಗಳಿಂದಲೂ, ಸನಕಾದಿಯೋಗೀಂದ್ರರಿಂದಲೂ ಪರಿವೃತನಾಗಿ ಇರುವನೆಂದು ಭಾವಿಸು.

ಆ ಮಹಾಸಭೆಯಲ್ಲಿ ಸ್ಥಾನತ್ರಯ, ಸಂಗತ್ರಯ, ಬಂಧತ್ರಯ ಇವುಗಳನ್ನು ಓಡಿಸಿದವರೂ, ಜೀವತ್ರಯ, ಬಿಂಬತ್ರಯಗಳನ್ನು ಸ್ವಾಧೀನಪಡಿಸಿಕೊಂಡಿರುವವರೂ, ದೈವತ್ರಯ, ತಾಪತ್ರಯ, ಈಷಣತ್ರಯಗಳನ್ನು ಪರಿಹರಿಸಿದವರೂ, ಆಗಿರುವ ಮಹಾತ್ಮರು ತುಂಬಿದ್ದರು. ಅವರು ಮಾಯೆಯೆಂಬ ಕವಚವನ್ನು ತೊಡದೆ, ಶರೀರವೆಂಬ ರಥವನ್ನೇರಿ, ಕರ್ಮವೆಂಬ ಧನುಸ್ಸಿಗೆ ಆಶೆಯೆಂಬ ಬಾಣವನ್ನು ಹೂಡಿ ಪ್ರಯೋಗಿಸಲು ಮನಸ್ಸೆಂಬರಾಜನು ಬಿದ್ದು ಮೈಮರೆಯುತ್ತಿದ್ದನು. ಮತ್ತು ಅಲ್ಲಿ ಮನೋವೃತ್ತಿಗಳನ್ನು ತಿಳಿಸತಕ್ಕವರೂ, ಸದ್ಗುರುಕಟಾಕ್ಷವೀಕ್ಷಣದಿಂದ ಮೋಕ್ಷವು ಲಭಿಸುವುದೇ ಹೊರತು ಕಠಿನವಾದ ದುಷ್ಕರಾಭ್ಯಾಸಯೋಗಗಳಿಂದ ಸಿಕ್ಕಲಾರದೆಂದು ಹೇಳತಕ್ಕವರೂ, ಮನೋವೃತ್ತಿಯು ನಿರೋಧವಾದ ಯೋಗಾಭ್ಯಾಸವಿಲ್ಲದೆ ಜಯಿಸಲಾಗದೆಂಬುವವರೂ, ಜೀವಪರಮಾತ್ಮರ ಐಕ್ಯಸ್ವಭಾವದಿಂದ ಪಾವನಸಂಕಲ್ಪವು ಬಹುಪ್ರಯಾಸದಿಂದ ನಿಲ್ಲುವುದಾದಕಾರಣ ಆ ಪ್ರಯಾಸವು ರೋಗಾಸ್ಪದವೆನ್ನುವವರೂ, ರೋಗಗಳಿಂದ ತಪ್ಪಿಸಿಕೊಂಡರೆ ವಾಯುನಿರೋಧಯೋಗಫಲವೂ ಅಧಿಕವಾದ ಆಯುಸ್ಸೂ ಉಂಟಾಗುವವೆಂಬವರೂ, ಆ ಮಾಯಾ ಮಹತ್ವಮಹಿಮೆಗಳು ಸಿದ್ಧಕ್ರಿಯಾ ಮೂಲಿಕಾಮಂತ್ರತಪಸ್ಸಿದ್ಧಿಗಳಿಂದ ಉಂಟಾಗುವುವೆನ್ನುವವರೂ, ಶಿವಾಗಮದಲ್ಲಿ ಹೇಳಲ್ಪಟ್ಟಿರುವ ಮಂತ್ರಲಯ ಹಠರಾಜಯೋಗಗಳಲ್ಲಿ ಮಂತ್ರ ರಾಜಯೋಗಗಳು ಶಿವಪಂಚಾಕ್ಷರೀ ಯುಕ್ತವಾಗಿ ಕಲ್ಪಿತಾಕಲ್ಪಿತ ಮಾಲಿಕಾ ಜಪದಲ್ಲಿ ಲಯವಾದರೆ ಅಜಪಾಮಾರ್ಗದಲ್ಲಿ ಪ್ರವೇಶಿಸಿ, ಬಂಧತ್ರಯ, ರೇಚಕ, ಪೂರಕ, ಕುಂಭಕಗಳನ್ನು ಗುಂಭಿಸಿ, ಕರ್ಮ, ಅಷ್ಟಾಂಗ, ಹಠಯೋಗಪ್ರಯಾಸದಿಂದ ಅಷ್ಟೈಶ್ವರ್ಯ ಯುಕ್ತನಾಗಿ, ಈಶ್ವರಾನುಗ್ರಹ ಶಕ್ತಿ

ನಿಪಾತಸಮಯದಲ್ಲಿ ಸದಾಚಾರ್ಯನ ಅನುಗ್ರಹದಿಂದ ಸಾಂಖ್ಯತಾರಕ ಗಳನ್ನು ವಿಚಾರಿ, ಕೇವಲ ಕುಂಭಕವಾದ ವಿರಾಜಯೋಗದಿಂದ ಜಾಗ್ರತೆ, ಸ್ವಪ್ನ, ಸುಷುಪ್ತಿಗಳೆಂಬ ಅವಸ್ಥೆಗಳನ್ನು ಅತಿಕ್ರಮಿಸಿ, ನಿಷ್ಪ್ರಪಂಚ ವಾದ ಬೆಳದಿಂಗಳಿನ ಬಯಲನ್ನು ಅನುಸರಿಸಿ, ದುರ್ಲಭವಾದ ಆನಂದ ಸಮುದ್ರದಲ್ಲಿ ಮುಳುಗಿ, ತೆರೆ, ಮರೆ, ಸಂಕಲ್ಪ, ಸ್ವರೂಪಾನುಸಂಧಾನ, ಧ್ಯಾನ, ಜಪಗಳೊಂದೂ ಇಲ್ಲದೆ ಅಮನಸ್ಕವಾದ ತುರ್ಯದಲ್ಲಿ ಜ್ಞಾನವು ಕೆಡದೆ, ತನ್ನನ್ನು ತಾನೇ ಕಾಣುವ ಚತುರ್ವಿಧಯೋಗ ರಹಸ್ಯಗಳನ್ನು ತಿಳಿಸುವವರೂ, ವೇದಾಂತಶಾಸ್ತ್ರಗಳಿಂದ ನಿರಾಮಯ, ನಿರಾಭಾಸ, ನಿರ್ವಿಕಲ್ಪ ನಿಷ್ಪ್ರಪಂಚವಾದ ಸನಾತನ ಬ್ರಹ್ಮನ ಚಿದಂಶದಲ್ಲಿ ರಜ್ಜು, ಶುಕ್ತಿ, ಸ್ಥಾಣುವುಗಳಲ್ಲದ ಸರ್ಪ, ರಜತ, ಚೋರಾದ್ಯಾರೋಪಗಳಲ್ಲಿ ಹೇಗಹೇಗೆ ತೋರಿದರೆ ಮಾಯಾ ಪ್ರಪಂಚವು ಮಿಥ್ಯೆಯೆಂದು ತಿಳಿದು ಬರುವಂತೆ ಸಂವಿನ್ಮಾತ್ರನಾಗಿ ಜೀವನು ತನ್ನನ್ನು ತಾನೇ ತಿಳಿದುಕೊಂಡರೆ ಮುಕ್ತನಾಗುವನು. ಮಾಯಾ ಮಹಿಮೆಯಿಂದ ತನ್ನನ್ನು ತಿಳಿಯದೆ ಹೋದರೆ ಬದ್ಧನಾಗುವನು. ಈ ಬಂಧ ಮುಕ್ತಿಗಳು ಆತ್ಮನಿಗೆ ಇಲ್ಲವು. ಇವು ಸಂಕಲ್ಪದ ಸ್ವಭಾವಗಳೇ ಎನ್ನುವವರೂ, ಆತ್ಮಸಾಕ್ಷಾತ್ಕಾರ ಪರನಾದಕಾರಣ ಗುರುವು ಶಕ್ತಿನಿಪಾತ ಸಮಯದಲ್ಲಿ ಕಾಣಿಸಿಕೊಳ್ಳುವ ನೆನ್ನುವವರೂ, ಕರ್ಮಮುಕ್ತಿಗಳು ಮಹಾಸಂಕಲ್ಪ ಭೋಗಗಳಲ್ಲಿ ಇರುವುವೆಂಬವರೂ, ಈಶ್ವರಾನುಗ್ರಹಜ್ಞಾನಗಳು ಸದ್ಭಕ್ತಿಯಿಂದಲ್ಲದೆ ಮತ್ತಾವುದರಿಂದಲೂ ಉಂಟಾಗುವುದಿಲ್ಲವೆನ್ನುವವರೂ, ಇನ್ನೂ ಉಳಿದ ಅನೇಕ ಜನರೂ ಪರಿವೇಷ್ಟಿಸಿ ಓಲಗಿಸುತ್ತಿರಲು, ರತ್ನಸಿಂಹಾಸನದಲ್ಲಿ ಸೀತಾಸಮೇತನಾಗಿ ಕುಳಿತಿರುವ ಶ್ರೀರಾಮಚಂದ್ರನಿಗೆ ನಮಸ್ಕಾರ ಮಾಡುತ್ತೇನೆ.

ಮತ್ತು ಗೋಕುಲವಾಸನಾಗಿಯೂ, ಗೋವಿಂದನಾಗಿಯೂ ಗೋಪಿಕಾನಾಥನಾಗಿಯೂ, ವೇಣುನಾದಾನುಭವದಿಂದ ಆನಂದಿಸುತ್ತಾ, ಸ್ತ್ರೀಯರೊಂದಿಗೆ ಕ್ರೀಡಿಸುತ್ತಿರುವನಾಗಿಯೂ ಇರುವ ಶ್ರೀರಾಮಕೃಷ್ಣ ಪರಬ್ರಹ್ಮನನ್ನು ಸ್ತೋತ್ರಮಾಡುತ್ತೇನೆ.

ಎಲೈ ಧರ್ಮರಾಯನೇ ಕೇಳು. ಈ ಲೋಕದಲ್ಲಿ ಜನರು ಸಂಸಾರಾಭಿವೃದ್ಧಿಯೇ ತಮ್ಮ ಪುರುಷಾರ್ಥಸಿದ್ಧಿಯೆಂದು ಭಾವಿಸಿ, ಹೆಂಡತಿ, ಮಕ್ಕಳು, ಬಾಂಧವರು ಎಂಬ ಮೋಹದಲ್ಲಿ ಸಿಕ್ಕಿ ಇಕ್ಕಟ್ಟುಗಳಲ್ಲಿ ನರಳಿ

ಸಂಕಟಪಡುತ್ತಾ, ಸ್ವಲ್ಪವೂ ಸುಖವಿಲ್ಲದೆ ದುಃಖದಲ್ಲಿಬಿದ್ದು ನರಳು ತ್ತಿರುವರು. ಇಂತಹ ಮನೋಭ್ರಮೆಯನ್ನು ಹೇಗೆ ಪರಿಹರಿಸಿಕೊಳ್ಳ ಲಾದೀತು ? ನಾನು ಮತ್ತೂ ನನ್ನದು ಎಂಬ ಅಹಂಕಾರ ಮಮಕಾರ ಗಳಲ್ಲಿ ಸಿಕ್ಕಿ ಒದ್ದಾಡುತ್ತಿರುವ ತನಕ ಇವರಿಗೆ ಬ್ರಹ್ಮಜ್ಞಾನವು ಉದಿಸ ಲಾರದು. ನಾನು ಉಂಟಾದರೆ ನೀನೆಂಬುದು ಕಾಣಬಾರದು. ನಾನೂ ನೀನೂ ಇದ್ದರೆ ಈ ಜಗತ್ತು ಇರುವುದು. ನೀನೂ ನಾನೂ ಒಂದೇ ಆದರೆ ಆಗ ಇದು ಮುಗಿದು ಹೋಗುವುದು. ನಮ್ಮ ದೃಷ್ಟಿಗೆ ಕಾಣ ಬರುತ್ತಿರುವವುಗಳೆಲ್ಲಾ ದೃಶ್ಯವೆನ್ನಲ್ಪಡುವುವು. ಈ ದೃಶ್ಯಗಳನ್ನು ಸುಟ್ಟುಬಿಡುವ ಜ್ಞಾನವೇ ಬ್ರಹ್ಮಜ್ಞಾನವು. ಹೊರಗಿನ ಪ್ರಪಂಚ ವನ್ನೂ, ನೀನು ಎಂಬುದನ್ನೂ ಬಿಟ್ಟುಬಿಟ್ಟರೆ ನಿರ್ವಿಕಲ್ಪಸಮಾಧಿಯು ಲಭ್ಯವಾಗುವುದು.

ವೇದಶಾಸ್ತ್ರಾದಿ ವಿದ್ಯೆಗಳ ವಾಸನೆಗಳೂ ಈ ಲೋಕದ ವಿಷಯಾ ಸಕ್ತಿಯ ಲೋಕವಾಸನೆಗಳೂ, ತೀರ್ಥಯಾತ್ರೆಗಳಿಂದ, ಕಾಲಕಳೆ ಯುವ ದೇಹವಾಸನೆಗಳೂ ಇವು ಮೂರೂ ವಾಸನಾತ್ರಯವೆನಿಸುವುವು. ಇವುಗಳನ್ನು ಬಿಟ್ಟು, ಗುರುಬೋಧೆಯೇ ಶುದ್ಧವಾದ ವಾಸನಾಸ್ಪದವೆಂದು ತಿಳಿಯತಕ್ಕದು. ಶಾಸ್ತ್ರ, ಲೋಕ, ದೇಹ ಈ ಮೂರುಬಗೆಯ ವಾಸನೆಗಳನ್ನು ಮುಕ್ತಿಯ ಮಾರ್ಗದಲ್ಲಿಬಿಡದೆ ಕಾಮ್ಯಮಾರ್ಗದಲ್ಲಿ ಬಿಟ್ಟರೆ ಸುಖವಿಲ್ಲ. ತನಗೆ ತಾನೇ ಹೊರತು ತನಗೆ ಯಾವುದೂ ಇಲ್ಲ ವೆಂಬ ಅಭಿಪ್ರಾಯವುಳ್ಳವನೇ ತತ್ವಜ್ಞನು. ತತ್ವದಮೇಲೆ ಮನಸ್ಸು ತಗಲಿದರೆ ಎಂದಿಗೂ ಅದನ್ನು ಬಿಡಬೇಕೆಂಬ ಇಚ್ಛೆಯೇ ಹುಟ್ಟದು. ಈ ಶರೀರವು ನೀನಲ್ಲ. ಸಂಕಲ್ಪಗಳೂ ನೀನಲ್ಲ. ಇಂದ್ರಿಯಗಳೂ ನೀನಲ್ಲ. ತೆರವು ಮರವುಗಳಿಲ್ಲದ ಬ್ರಹ್ಮಜ್ಞಾನವೇ ನೀನೆಂದು ತಿಳಿದು ನಿಶ್ಚಿಂತ ನಾಗಿ ಮುಕ್ತಿಕಾಂತೆಯೊಂದಿಗೆ ಸೇರಿ ಸುಖಪಡಯ್ಯಾ. ನೀನಿದ್ದಕಡೆ ನಿಬಿಡವಾದ ಆನಂದಸಂಭ್ರಮಗಳು ತುಂಬಿರುವುವು. ನೀನು ಇಲ್ಲದ ಕಡೆ ಬತ್ತಾದ ಅಂಧಕಾರದಿಂದ ತುಂಬಿದ ಕರ್ಮಬಂಧವು ಬಂಧಕವಾಗಿರು ವುದು. ನಿನ್ನಲ್ಲಿ ನೀನೇ ಲೀಲಾಮಾನುಷವಿಗ್ರಹವೆಂದು ತಿಳದುಕೊಂಡರೆ ನಿನ್ನಲ್ಲಿ ಆಶ್ಚರ್ಯವು ಹುಟ್ಟಿ, ನೀರಾಗಿ ಕರಗಿಹೋಗುವುದು.

ಎಲೈ ಧರ್ಮರಾಯನೇ, ಜೀವನೆಂಬ ಭ್ರಾಂತಿಯನ್ನು ಬಿಟ್ಟು, ಮನಸ್ಸಿನಲ್ಲಿ ನೀನೇ ನೀನೆಂದು ಕಂಡುಕೊಂಡರೆ ನಿತ್ಯಾನಂದವನ್ನು

ಹೊಂದುವೆ. ಜ್ಞಾನವು ಸುಲಭ ಮತ್ತು ಕಠಿನ ಎಂಬ ಎರಡು ಮಾರ್ಗ ಗಳುಳ್ಳದ್ದು. ಹೇಗೆಂದರೆ—ತಾನೇಎಂದು ತಿಳಿಯುವಜ್ಞಾನವು ಸುಲಭವು. ತಾನಲ್ಲವೆಂದು ತಿಳಿಯುವ ಮಾರ್ಗವೇ ಕಠಿನವು, ಸರ್ವ ಕರ್ಮಗಳನ್ನು ಬಿಟ್ಟಹೊರತು ಸಂಶಯವುತೀರದು. ಆ ಸಂಶಯವು ತೊಲಗಿದಹೊರತು ದಿವ್ಯಸುಖವು ತೋರದು. ಆ ಸುಖವು ತಾನೇ ಎಂದು ತಿಳಿದವನೇ ಧೀರಪುರುಷನು. ಅಯ್ಯಾ! ಬಾಹ್ಯ ಪ್ರಪಂಚವು ಮಿಥ್ಯೆಯೆಂದು ತಿಳಿದು ತನ್ನನ್ನು ತಾನೇ ತಿಳಿಯಬಲ್ಲಯೋಗೀಶ್ವರನು ಮನೆಯಲ್ಲಿದ್ದರೂ, ಅರಣ್ಯದಲ್ಲಿದ್ದರೂ, ಅವೆರಡೂ ಬಂದಾಗಿಯೇ ತೋರುತ್ತದೆಯೇಹೊರತು ಸ್ವಲ್ಪವೂ ವ್ಯತ್ಯಾಸವು ತೋರುವುದಿಲ್ಲ. ಧೀರಾತ್ಮನಿಗೆಪ್ರಾರಬ್ಧ ಕರ್ಮಗಳನ್ನು ಅನುಭವಿಸದೆ ತೀರದು. ಆಗಾ ಮಿಯು ಎಂದಿಗೂ ನಮ್ಮನ್ನು ಅಂಟದು. ಕ್ರಮಕ್ರಮವಾಗಿ ತೀರು ವುದು ಸಂಚಿತಗಳು ತನ್ನನ್ನು ಕಂಡಕೂಡಲೇ ತೀರಿಹೋಗುವುವು. ಮತ್ತು ಕರ್ಮಸ್ವರೂಪವನ್ನು ಕೇಳು. ಕರ್ಮಗಳನ್ನುಮಾಡಿದರೆ ಅದರಿಂದ ಬಿಡುಗಡೆ ಹೊಂದಲಿಕ್ಕೆ ಆಗುವುದೇ ಇಲ್ಲ. ಮಾಡದೆ ಬಿಟ್ಟರೆ ಸದ್ಗತಿಯು ಸಿಕ್ಕುವುದಿಲ್ಲ. ಆದುದರಿಂದ ಕರ್ಮವನ್ನುಮಾಡಿ, ಫಲಾ ಪೇಕ್ಷೆಯಿಲ್ಲದೆ ಆ ಕರ್ಮಗಳನ್ನೆಲ್ಲಾ ಪರಮೇಶ್ವರನಿಗೆ ಅರ್ಪಿಸತಕ್ಕದು. ಕರ್ಮಗಳನ್ನು ಮಾಡಿದರೂ ಮಾಡದೆಇದ್ದಂತೆಯೇ ಭಾವಿಸುವುದೇ ಜಾಣತನವು. ನಿತ್ಯ, ನೈಮಿತ್ತಿಕ, ಆಚಾರವೆಂದು ತ್ರಿಗುಣ ಸ್ವಭಾವ ವಾದ ಕರ್ಮಗಳನ್ನು ಶಕ್ತಿಗೆತಕ್ಕಮಟ್ಟಿಗೆ ಆಚರಿಸಬೇಕು. ಸಕಲ ವಾದ ಮಾಯಾಪ್ರಪಂಚವೂ ಸಗುಣವಾಯಿತು. ಸಗುಣ ನಿರ್ಗುಣ ರೂಪವು ಸಾಕ್ಷಿಯಾಯಿತು. ಸಾಕ್ಷಿರೂಪವೇ ನಿರ್ಗುಣ ಸ್ವರೂಪವು. ಮತ್ತೂ ಸಚ್ಚಿದಾನಂದವು, ಇದೇರಾಮಚಂದ್ರನು, ಅಂತಹ ರಾಮ ಚಂದ್ರನನ್ನು ಸದಾಕಾಲವೂ ಕೀರ್ತನ ಧ್ಯಾನಾದಿಗಳಿಂದ ಆತ್ಮದಲ್ಲಿ ಸ್ಮರಿಸಿ, ಶಾಂತಹೃದಯನಾಗಿ, ಸತ್ಸಂಗದಲ್ಲಿ ಸೇರಿ, ಭಕ್ತಿಯಿಂದ ಆರಾ ಧಿಸುವವನು ಭಾಗವತನೆನಿಸಿಕೊಳ್ಳುವನು. ಕರ್ಮಭಕ್ತಿಗಳಿಂದ ಕ್ರಮವಾಗಿ ಅಂತವನು ಚಿತ್ತಶಾಂತಿಯನ್ನು ಹೊಂದುವನು. ಆದುದ ರಿಂದ ಕರ್ಮ ಭಕ್ತಿಗಳೇ ಜೀವನಿಗೆ ಮಾಡಬೇಕಾದ ಕಾರ್ಯಗಳೆಂದು ತಿಳಿಯತಕ್ಕದ್ದು.

ಎಲೈ ರಾಯನೇ ಕೇಳು, ಪಾಮರನಾದ ಮನುಷ್ಯನು ತಾಮ್ರ, ಮಣ್ಣು, ಕಲ್ಲು, ಮರ ಇವುಗಳಿಂದ ಆದ ರೂಪಗಳನ್ನೇ ಪೂಜಿಸುತ್ತಿರುವನು. ಮಧ್ಯಮನು ಇದು ಚಿಕ್ಕದು, ಇದು ಹಿರಿಯದು ಎಂಬ ತಾರತಮ್ಯಜ್ಞಾನದಿಂದ ಸನ್ಮಾನಿಸಿ ಸಂತೋಷಪಡುತ್ತಿರುವನು. ಉತ್ತಮನು ತಾರತಮ್ಯಭಾವನೆಇಲ್ಲದೆ ದೈವವು ಎಲ್ಲರಲ್ಲಿಯೂ ಏಕಪ್ರಕಾರವಾಗಿ ಇರುವುದೆಂದು ಕಾಣುತ್ತಿರುವನು. ಈ ಉತ್ತಮನೇ ಈಶ್ವರನನ್ನು ಯಾವಾಗಲೂ ಪ್ರತ್ಯಕ್ಷವಾಗಿ ನೋಡುತ್ತಲಿರುವನು. ಈಶ್ವರನಲ್ಲಿ ಜಗತ್ತೂ, ಜಗತ್ತಿನಲ್ಲಿ ಈಶ್ವರನೂ ಭೇದವಿಲ್ಲದೆ ಪ್ರಕಾಶಿಸುತ್ತಿರುವ ರೀತಿಯನ್ನು ತಿಳಿದುಕೊಂಡರೆ ಕೃತಕೃತ್ಯನಾಗುತ್ತೀಯೆ. ತಾಮ್ರ, ಮಣ್ಣು, ಕಲ್ಲು, ಮರಗಳೆಂಬ ಸಂಕಲ್ಪದಿಂದ ಈಶ್ವರನನ್ನು ಪೂಜಿಸಿದರೆ ಫಲವೇನು ? ಈಶ್ವರನು ತನ್ನ ಮನಸ್ಸಿನಲ್ಲಿಯೇ ಇರುವನು. ತನ್ನನ್ನು ತಾನೇ ತಿಳಿಯಲಾರದವನಿಗೆ ಇದರಹೊರತು ಬೇರೆಮಾರ್ಗವಿಲ್ಲ. ಸತ್ಸಂಗ, ಆತ್ಮಚಿಂತೆ, ಗುರುವಿನಲ್ಲಿ ವಿಶ್ವಾಸ, ವೈರಾಗ್ಯ, ವಾತ್ಸಲ್ಯ. ಚಿತ್ತಶಾಂತಿ, ಸರ್ವಭ್ರಾಂತಿಗಳಲ್ಲಿಯೂ ಶೂನ್ಯಭಾವನೆ, ಮಾತ್ಸರ್ಯವಿಲ್ಲದಿರುವಿಕೆ ಇವುಗಳೇ ಸನ್ಮಾರ್ಗಗಳು.

ಎಂದು ಅನೇಕ ವಿಧವಾಗಿಹೇಳಿ ಕರ್ಮ ಭಕ್ತಿ ವೈರಾಗ್ಯಗಳು ಚಿತ್ತವಿಶ್ರಾಂತಿಗೆ ಕಾರಣಗಳೆಂದು ಜೀವನ ನಿಶ್ಚಯವನ್ನೂ, ಸ್ವರೂಪ ಸಂದರ್ಶನ ಸುಖಹೇತುತ್ವವನ್ನೂ, ಹೇಳುವೆನು ಕೇಳಯ್ಯಾ, ಅನಾದಿ ನಿರ್ವಿಕಲ್ಪನಾದ ಆತ್ಮನಲ್ಲಿ ಮಿಥ್ಯಾರೂಪವಾದ ಪ್ರಪಂಚವು ತೋರುವ ರೀತಿಯು ಹೇಗೆಂದರೆ—ಮಾಯಾ ಬ್ರಹ್ಮಸಾನ್ನಿಧ್ಯದಲ್ಲಿ ಶುದ್ಧ ಸ್ಫಟಿಕದಮೇಲೆ ದಾಸವಾಳದ ಹೂವನ್ನು ಇಟ್ಟರೆ ಅದರ ಮಧ್ಯದಲ್ಲಿ ಛಾಯೆಯು ಕಾಣಿಸುವಂತೆ ಜೀವನು ಕಾಣಬರುವನು. ಆ ಜೀವನು ತನ್ನಮುಖದಲ್ಲಿ ವಿಶ್ವನೆಂಬ ಹೆಸರಿನಿಂದ ವಿಷಯಗಳನ್ನು ಅನುಭವಿಸುವನು. ಜಾಗ್ರದವಸ್ಥೆಯಲ್ಲಿ ಜನವೆಂಬ ಹೆಸರಿನಿಂದ/ಸ್ವಪ್ನದಲ್ಲಿ ಕಂಠಪ್ರದೇಶದಲ್ಲಿ ಆ ಜಾಗ್ರತೆಯ ವಾಸನಾಯುಕ್ತನಾಗಿ/ ವಕ್ಷಸ್ಥಳವನ್ನು ಪ್ರವೇಶಿಸಿ, ಸುಷುಪ್ತಿಯೆಂಬ ಅವಸ್ಥೆಯನ್ನು ಹೊಂದಿ ಪ್ರಾಜ್ಞನೆನ್ನಿಸಿಕೊಂಡು/ ಅಹಂಕಾರವೆಂಬ ತಮಸ್ಸಿನಲ್ಲಿ ಲೀನನಾಗಿ, ಅದರಲ್ಲಿ ಏನೂ ತಿಳಿಯದವನಾಗಿರುತ್ತಾನೆ. ಸಂವಿತ್ತು ಸಾಕ್ಷಿರೂಪವಲ್ಲಿ ಇರುವುದರಿಂದ ಅದರ ಸಾನ್ನಿಧ್ಯದಿಂದ ಬಂದವನಾದುದರಿಂದ ಇದುವರೆಗೂ ಏನುಮಾಡಿದೆನೋ ಎಂದು ಸುಮ್ಮನೆ

ಇರುವ ವಿಧವನ್ನು ತಿಳಿಸುವನು. ಆ ವಿಧವು ಚಿತ್ತುವಿನ ಸಹಾಯದಿಂದ ತಿಳಿಯುವುದು. ಆ ಸಂವಿತ್ತುವಿನ ಸಾನ್ನಿಧ್ಯವಿಲ್ಲದಿದ್ದರೆ ಸುಮ್ಮನಿರುವು ದೆಂದು ತಿಳಿದಿರಬೇಕು. ಆ ಅಹಂಕಾರವು ಯಾವಾಗ ಜಾಗ್ರದಭಿಮುಖ ವಾಗುವುದೋ ಆಗ ಸಂವಿತ್ತು ಸಾನ್ನಿಧ್ಯಸಹಾಯ ತಾತ್ಪರ್ಯದಿಂದ ಸುಖ ದಲ್ಲಿರುವೆನೆಂಬ ಜ್ಞಾನವು ಉಂಟಾಗುವುದು. ಆ ಸುಷುಪ್ತಿಯಿಂದ ತುರ್ಯ ನಾಮದಲ್ಲಿ ತುರ್ಯಾವಸ್ಥೆಯನ್ನು ಹೊಂದಿ, ಬ್ರಹ್ಮಾನಂದವನ್ನು ಅನುಭವಿ ಸುತ್ತಾ ನಾಭಿಯಿಂದ ತುರ್ಯಾತೀತದಲ್ಲಿ ಅತೀತನಾಮವನ್ನು ಧರಿಸಿ, ಮೂಲಾಧಾರದಲ್ಲಿ ಅರೆಕ್ಷಣಕಾಲ ಪರಮಾನಂದ ಸುಖಸ್ವರೂಪದಲ್ಲಿದ್ದು ಯಥಾಪ್ರಕಾರವಾಗಿ ತಿರುಗುವುದು. ಯಾವಾಗಲೂ ಈ ಅವಸ್ಥಾಪಂಚಕ ಗಳಲ್ಲಿ ಐದು ದೇಹಗಳನ್ನು ಧರಿಸಿ, ಆ ಪಂಚಕಗಳನ್ನೂ ಸೇರುವುದು. ಇದನ್ನು ಯೋಗಿಯು ತಿಳಿಯುವನೇಹೊರತು ಇತರರು ಅರಿಯರು. ಆ ಜೀವನು ಆತ್ಮವಾಸನಾಸಮಯದಲ್ಲಿ ಅವಸ್ಥಾತ್ರಯಗಳನ್ನು ದಾಟಿ ಮೂರು ವಾಸನೆಗಳನ್ನೂ ನೂಕಿ, ಆತ್ಮೈಕ್ಯಾನುಭವವನ್ನು ಹೊಂದುವನು. ಆ ಆತ್ಮಾನುಭವಸಾರದಿಂದ ಪಂಚದೇಹಾವಸ್ಥಾಭಿ ಮಾನ ಭಂಗವಾಗಿ ಹೃದಯಗ್ರಂಥಿಯು ನಾಶವಾಗುವುದು. ಆಗ ಶುದ್ಧ ಜ್ಞಾನದಿಂದ ಪ್ರಪಂಚವಿಲ್ಲವೆಂಬುದು ಸಿದ್ಧವಾಗುವುದು. ಆದ್ದರಿಂದ ಸುಷುಪ್ತ್ಯವಸ್ಥೆಯಲ್ಲಿ ಚಿತ್ತು ಸಾಕ್ಷಿಯೆಂದು ಹೇಳುವುದು ಉಪಚಾರವು ಶುದ್ಧ ಸಂವಿತ್ತಿನಲ್ಲಿ ಪ್ರಪಂಚ ಭ್ರಾಂತಿಯು ಹಗ್ಗವನ್ನು ಹಾವೆಂದು ತಿಳಿಯುವ ಹಾಗೆ ತೋರುವುದೆಂದರೆ ಬಿಳಿಯ ಶಂಖವನ್ನು ನೋಡಿ ಇದು ಪಚ್ಚೆಯೆಂದು ಭ್ರಮಿಸಿದರೆ ಅದು ಪಚ್ಚೆಯಾಗಲಾರದು. ಸಿಹಿಯಾದ ಹಾಲಿಗೆ ಕಹಿಯೆಂದು ಹೇಳಿದರೆ ದೋಷ ಭ್ರಾಂತಿಯಾಗುವುದೇಹೊರತು ಸಿಹಿಹಾಲು ಕಹಿಯಾದುದಲ್ಲವೆಂಬ ನಿಶ್ಚಯವು ಸುಜ್ಞಾನಮಾರ್ಗದಿಂದ ಇದ್ದದ್ದು ಇದ್ದಹಾಗೆಯೇ ತಿಳಿದರೆ ಜಗತ್ತೆಂಬ ಭ್ರಾಂತಿಯು ಶ್ರೀಗುರುವಿನ ಕಟಾಕ್ಷದಿಂದ ಪರಿಹರವಾಗುವುದು. ನೀನು ಸದ್ಗುರುವಿನ ಕಟಾಕ್ಷದಿಂದ ಸ್ಥಾನತ್ರಯವ್ಯತೀತವಾದ ತುರ್ಯದಲ್ಲಿ ಪರಮಾನಂದವನ್ನು ಹೊಂದು. ಆ ಸುಖವು ಬುದ್ಧಿಯಿಂದಲೇ ತಿಳಿಯಲ್ಪಡುವುದು. ಬುದ್ಧಿಗೆ ಜ್ಞಾನ ವಿಲ್ಲವೆಂದು ಹೇಳಿದರೆ—ಹೌದು, ನಿಜವೇ, ಬುದ್ಧಿಯು ಜಡವಾದುದರಿಂದ ಬುದ್ಧಿಯಿಂದ ತಿಳಿಯುವುದು ಅನುಪಪನ್ನವು. ಆದರೂ ಕಣ್ಣುಗಳಿದ್ದ ರೇನೇಹೊರತು ಸೂರ್ಯನನ್ನೂ ನೋಡುವುದಕ್ಕಾಗುವುದಿಲ್ಲ. ನೇತ್ರೋ

ಪಾಧಿಯಲ್ಲಿ ಸೂರ್ಯಾಂಶವಾದ ನೇತ್ರದೃಷ್ಟಿಯು ಸೂರ್ಯನನ್ನು ಕಾಣುವಹಾಗೆ ಸಂವಿತ್ತು ಬುದ್ಧಿಯ ಉಪಾಧಿಯನ್ನು ತಿಳಿಯುವುದು. ಅಂತಃಕರಣದಲ್ಲಿ ಪ್ರತಿಫಲಿಸಿದ ಚಿತ್ತು ಬುದ್ಧ್ಯುಪಾದಿಯಲ್ಲಿ ತನ್ನನ್ನು ತಾನೇ ನೋಡುವುದು. ಅಗ್ನಿಯ ಅಂಶವಾದ ದೃಷ್ಟಿಯು ಅದರ ಸಹಾಯದಿಂದ ತನ್ನನ್ನು ಕಾಣುವಹಾಗೆ ವೃತ್ತಿಶೂನ್ಯವಾದ ಬುದ್ಧ್ಯುಪಾಧಿಯು ವಶದಿಂದ ತನ್ನನ್ನು ತಾನೇ ನೋಡುತ್ತಾ ಎರಡುವಿಧವಾದಹಾಗೆ ಸುಖವನ್ನು ಹೊಂದುವುದು. ಆ ಬುದ್ಧಿಶಕ್ತಿಯಾದ ಚಿತ್ತುವಾಸನಾಚತುಷ್ಟಯುವಮಾಲಿನ್ಯವಿಲ್ಲದುದಾದ್ದರಿಂದ ಬುದ್ಧ್ಯುಪಾಧಿಯಾದ ತನ್ನನ್ನು ತಾನು ನೋಡುತ್ತಾ ಇರುವನೆವದಿಂದ ಅಂತಃಕರಣೋಪಾಧಿಯು ಉಪಪನ್ನವಾಗುವುದು. ಮತ್ತು ಬುದ್ಧಿಯು ಶೂನ್ಯವೆಂದರೆ. ಜ್ಞಾನದಿಂದ ಕೂಡಿದುದಾದ್ದರಿಂದ ಶೂನ್ಯವೆಂದು ಹೇಳಲಾಗದು. ಆದರೂ ಸುಷುಪ್ತಿಯಾಗುವುದು. ಆ ಸುಷುಪ್ತಿಯು ನಿರ್ವಾಸನೆಯಾಗಿದ್ದರೂ ಅದರಿಂದ ಏನೂತಿಳಿಯದೆ ಬಳಿಕ ಜ್ಞಾನವುಂಟಾಗುವುದು. ಆದುದರಿಂದ ಸುಷುಪ್ತಿಯಲ್ಲದೆ ಬೋಧೆಯಿಂದ ಕೂಡಿದರೆ ತುರ್ಯವು. ಆ ಬೋಧೆಯು ಇಲ್ಲದಿದ್ದರೆ ಅಜ್ಞಾನವಾಗುವುದು. ವಿಷಯಾಹಂಕಾರ ಮಾಲಿನ್ಯವೃತ್ತಿ ಶೂನ್ಯತೆಯೇ ಬುದ್ಧಿಶೂನ್ಯತೆಯೆನಿಸುವುದು. ಆ ಬುದ್ಧಿಶಕ್ತಿಯಾದ ಚಿತ್ತನ್ನು ಸಂವಿತ್ತಿನಲ್ಲಿ ನೋಡುತ್ತಾ ಸುಖಸ್ವರೂಪನಾಗುವುದೇ ಬ್ರಹ್ಮಾನಂದವನ್ನು ಪಡೆಯುವುದು. ಆ ಆನಂದದಲ್ಲಿ ಸೊಕ್ಕುತ್ತಾ ಬಾಹ್ಯಪ್ರಪಂಚವನ್ನು ಮರೆಯುವನು. ಅಜ್ಞಪ್ತಿಮಾತ್ರನಾಗಿ ಬುದ್ಧಿಯಿಂದಲ್ಲದೆ ತಿಳಿಯಲಾರದವನಾಗಿ ಇರುವನು ಆ ಸಮಾಧಿಸಮಯದಲ್ಲಿ ಮನೋಲಯು ಚಿತ್ಪ್ರಕಾಶವಾದ ಜ್ಞಾನವೊಂದಿರುವುದೇಹೊರತು ಉಳಿದ ಪ್ರಪಂಚವೊಂದೂ ಇರದು. ಆ ಸಮಾಧಿಯು ಅಂತರದಲ್ಲಿ ಲಯವಾದ ಮನಸ್ಸಿಗೆ ಬಹಿರ್ವ್ಯಾಪಾರಗಳು ಉಂಟಾಗುವುದು ಹೇಗೆಂದರೆ,— ರಥಕ್ಕೆ ಕುದುರೆಗಳನ್ನು ಕಟ್ಟಿ, ಅಭ್ಯಾಸಮಾರ್ಗದಿಂದ ನಡಿಸುತ್ತಾ ಮಧ್ಯದಲ್ಲಿ ರಥಿಕನು ಸುಮ್ಮನೆಕುಳಿತಿದ್ದರೂ ರಥವು ಯಥಾಕ್ರಮವಾಗಿ ನಡೆಯುತ್ತಿರುವಂತೆ ಬುದ್ಧಿಗೆ ವೃತ್ತಿಶೂನ್ಯವಾದರೆ ಪ್ರಾರಬ್ಧನಾಶಪರ್ಯಂತವೂ ಈ ಶರೀರವು ಸುಖದುಃಖಗಳನ್ನು ಅನುಭವಿಸುತ್ತಿರುವುದು. ಅದು ಆತ್ಮಾಲೋಕನಪರನಾದಾಗ ಇತರಪ್ರಪಂಚವು ಕಂಡರೂ ಕಾಣದವನಂತೆಯೇ ಇರುವನು. ನಾನೇಬ್ರಹ್ಮನೆಂದು ಬೇಕಾದಷ್ಟು

ಸಾರಿ ಅನ್ನಬಹುದು. ಬ್ರಹ್ಮಬೋಧೆಯನ್ನು ತಿಳಿದುಕೊಳ್ಳುವುದು ಕಷ್ಟವು. ವೇದಾಂತಶಾಸ್ತ್ರಗಳನ್ನೆಲ್ಲಾ ವಿಭಾಗಮಾಡಬಹುದು. ಆತ್ಮಾರ್ಥಗಳನ್ನು ತಿಳಿಸುವುದು ಕಷ್ಟವು. ಸರ್ವಸಂಗಪರಿತ್ಯಾಗಮಾಡಿ ಸನ್ಯಾಸಿಯಾಗಬಹುದು. ಶೂನ್ಯಮಾರ್ಗದಲ್ಲಿ ಕಾಣುವುದು ಕಷ್ಟವು. ಬಂಧಮೋಕ್ಷಗಳೆಂದು ಹೇಳುವುದು ಸುಲಭವು. ತಾನು ಮನಸ್ಥೈರ್ಯವನ್ನು ಹೊಂದುವುದು ಕಷ್ಟವು. ತನ್ನ ಶರೀರವೂ ದ್ರವ್ಯವೂ ಗುರುವಿನದೇ ಎಂದು ಹೇಳಬಹುದು. ಲೋಭತ್ಯಾಗಮಾಡುವುದು ಕಷ್ಟವು. ಮನಸ್ಸಾಮರ್ಥ್ಯದ ಮರ್ಮವನ್ನು ತಿಳಿಯುವುದೂ, ಎಲ್ಲವೂ ತಾನಾಗಿಯೂ ಆಗದೆ ಇರುವುದೂ ಬಹುಕಷ್ಟವು. ಶುಷ್ಕವೇದಾಂತವಾದಿಗಳು ಆತ್ಮನನ್ನರಿಯದೆ, ವ್ಯರ್ಥವಾದ ಅರ್ಥಗಳನ್ನು ಹೇಳಿ ಲೋಕವನ್ನೆಲ್ಲಾ ಕೆಡಿಸುತ್ತಿರುವರು. ಇದರಿಂದ ನಿಜವು ಸುಳ್ಳಾಗಿಯೂ ಸುಳ್ಳು ನಿಜವಾಗಿಯೂ ಪರಿಣಮಿಸಿದೆ. ಅಸತ್ಯವನ್ನು ತಿಳಿಯಲು ಪ್ರಯತ್ನಿಸುವುದು ಪ್ರತಿಬಿಂಬನಿಗೂ ಅಸತ್ಯವಾಗಿದೆ.

ಈ ಪ್ರಕಾರ ಹೇಳಿದ ವಾಕ್ಯಗಳನ್ನು ಕೇಳಿ ಯುಧಿಷ್ಠಿರನು ವ್ಯಾಸಮಹರ್ಷಿಯನ್ನು ನೋಡಿ. "ಆರ್ಯರೇ, ಈ ಪ್ರಪಂಚವೆಲ್ಲವೂ ಮನೋವಿಕಾರವಾಗಿರುವುದರಿಂದ ಮನಸ್ತ್ಯಾಗದ ಕರ್ಮವನ್ನು ದಯಮಾಡಿ ತಿಳಿಸಬೇಕೆಂದು ಪ್ರಾರ್ಥಿಸಿದನು. ಅದಕ್ಕಾವ್ಯಾಸಮಹರ್ಷಿಯು ಇಂತೆಂದನು.

ಎಲೈ ರಾಯನೇ ಕೇಳು, ಮನಸ್ತ್ಯಾಗಕ್ಕೆ ಗುರುವಿನಸೇವೆಯು ಅಗತ್ಯವಾದುದು. ತಾಯಿತಂದೆಗಳಿಲ್ಲದ ಮಗುವಿನಂತೆಯೂ. ಗಂಡನಿಲ್ಲದ ಹೆಂಡತಿಯಂತೆಯೂ, ಗುರುವಿಲ್ಲದ ವಿದ್ಯೆಯು. ನಿಷ್ಫಲವು. ಸೂಚಕ, ನಿಷಿದ್ಧ, ಬೋಧಕ. ವಾಚಕ, ಕಾಮ್ಯ, ಸಮಯ, ಕಾರಣ ಎಂದು ಗುರುಗಳಲ್ಲಿ ಎಂಟುಬಗೆಯುಂಟು. ಇದರಲ್ಲಿ ಕಾರಣನ ಗುರುವೇ ಶ್ರೇಷ್ಠನೆನಿಸುವನು.' ಅಂತಹ ಕಾರಣ ಗುರುವು ಶ್ರೀರಾಮನೇ ಹೊರತು ಮತ್ತೊಬ್ಬರೂ ಅಲ್ಲವು. ಹಲವುಬಗೆಯ ಶಾಸ್ತ್ರಾಭ್ಯಾಸಮಾಡಿದರೂ ಗುರುಬೋಧನೆಯಿಂದ ಸಂಶಯನಿವೃತ್ತಿಯಾಗುವಂತ ಶಾಸ್ತ್ರಜ್ಞಾನದಿಂದ ಅನುಮಾನಪರಿಚ್ಛೇದವಾಗುವುದಿಲ್ಲ. ಮೊದಲು ಜೀವಸ್ವರೂಪವನ್ನು ತಿಳಿಯಬೇಕಾಗಿದೆ. ಆ ಕಾರಣಗುರುವಿನ ಕರುಣೆಯಿಂದ ತಿಳಿದಷ್ಟು ಹೇಳುವೆನು ಕೇಳು.

ಸ್ವಯಂಪ್ರಕಾಶದಿಂದ ಚರಿಸುತ್ತಿರುವ ಅಹಂಕಾರವು ಆವರಣ ವಿಕ್ಷೇಪವಾಗಿ, ಸ್ವರೂಪವನ್ನು ಮರೆಯಿಸಿ, ಪುರುಷನಿಗೆ ಭ್ರಾಂತಿಯು ನ್ನುಂಟುಮಾಡುವುದು. ಆಗ ಆ ಅಜ್ಞಾನವು ಮುಚ್ಚಿ, ತಾನುಮಾಡಬೇಕಾದುದಿಲ್ಲವೆಂದು ತಿಳಿಯದೆ ಹುಚ್ಚುಹಿಡಿದವನಹಾಗೆ ನಾನಾವಿಧವಾಸನೆಗಳಿಂದ ಜೀವನು ವ್ಯಥೆಪಡುತ್ತಾ, ಮೋಹಾತಿಶಯದಿಂದ ವಿಷಯಗಳಲ್ಲಿ ಸಿಕ್ಕಿಕೊಳ್ಳುತ್ತಿರುವನು. ಅಜ್ಞಾನವೇ ಆವರಣವು. ತಾನೆಂಬ ತನ್ನನ್ನೇ ಕಾಣದೆ ಇರುವಂತೆ ಆ ಮರವೆಯು ಮನುಷ್ಯನನ್ನು ಮರುಳುಗೊಳಿಸುವುದು. ಮೋಕ್ಷವ್ಯತಿರಿಕ್ತವಾದ ಮೋಹವಿಕಾರಗಳಿಗೆ ವಿಕ್ಷೇಪಶಕ್ತಿಯೆಂದು ಹೆಸರು. ಜೀವನು ಶರೀರವೆಂಬ ಮನೆಯನ್ನಾಶ್ರಯಿಸಿ, ತಾನುಬೇರೆ, ಆತ್ಮನುಬೇರೆ ಎಂಬ ಕಲ್ಪಿತದಿಂದ ಮಿಥ್ಯಾಪ್ರಪಂಚವನ್ನು ಸತ್ಯವೆಂದು ಭಾವಿಸುವನು. ಇನ್ನು ಬ್ರಹ್ಮಸ್ವರೂಪವನ್ನು ಕೇಳು. ನಿರ್ಮಲವಾಗಿಯೂ, ಸ್ವಚ್ಛವಾಗಿಯೂ, ಆದ್ಯಂತಶೂನ್ಯವಾಗಿಯೂ, ಶುಭ್ರವಾಗಿಯೂ, ನಿತ್ಯವಾಗಿಯೂ, ಸತ್ಯವಾಗಿಯೂ, ನಿರ್ಮಲಾಕಾರವಾಗಿಯೂ, ಪರಿಪೂರ್ಣವಾಗಿಯೂ, ದಿವ್ಯಬೋಧಸ್ವರೂಪವಾಗಿಯೂ, ಸ್ವತಸ್ಸಿದ್ಧವಾಗಿಯೂ, ನಿರಂಜನವಾಗಿಯೂ, ಪರಂಜ್ಯೋತಿಯಾಗಿಯೂ, ಅದ್ವಿತೀಯವಾಗಿಯೂ, ಪ್ರಕಾಶಿಸುತ್ತಲಿರುವುದೇ ಬ್ರಹ್ಮವು. ಆದಿಶಕ್ತಿಯುಕ್ತನಾಗಿಯೂ, ತಮೋಗುಣನಾಗಿಯೂ, ಜ್ಞಾನವಿಕಾರದಿಂದ ವಿಶ್ವಕಾರಣದೇಹನಾಗಿ ಕಲ್ಪಿತನಾದವನೇ ಬ್ರಹ್ಮನು. ಭೂತೋತ್ಪತ್ತಿಗೆ ಅವನೇ ಕಾರಣನು. ಆತ್ಮಸ್ವರೂಪನು, ಅವನದೃಷ್ಟಿಯೇ ಕಾಲವು. ಯಾವರೀತಿಯಿಂದ ನೋಡಿದರೂ ಸತ್ಯವು ಬಯಲಾಗಿರುವುದು. ವಿಸ್ತಾರವಾದ ಆಕಾಶದಲ್ಲಿ ಗಾಳಿಯು ಸುತ್ತಿಸುತ್ತಿ ಮಥಿಸಿದರೆ ಅಗ್ನಿಯು ಹುಟ್ಟುವದು. ಅದರ ಎದೆಯೇ ನೀರು, ಆ ನೀರೇ ಪೃಥ್ವೀತತ್ವವಾಗುವುದು. ಈ ರೀತಿಯಾಗಿ ಪಂಚಭೂತಗಳು ಕಲ್ಪಿಸಲ್ಪಟ್ಟವು. ಇದರಿಂದಲೇ ವ್ಯಷ್ಟಿಶರೀರವೆನಿಸಿಕೊಳ್ಳುವುದು. ಇನ್ನು ಪಂಚೀಕರಣತತ್ವವನ್ನು ಹೇಳುವೆನು ಕೇಳು. ಪಂಚಭೂತಗಳಲ್ಲಿ ಒಂದೊಂದನ್ನೂ ಎರಡೆರಡಾಗ ವಿಭಾಗಿಸಿ, ಅದರಲ್ಲಿ ಒಂದೊಂದು ನಿಜಾಂಶವನ್ನಿಟ್ಟು, ಉಳಿದ ಒಂದೊಂದನ್ನೂ ನಾಲ್ಕಾಗಿ ಭಾವಿಸಿ ಕೂಡಿಸಿದರೆ ಪಂಚೀಕೃತವಾಗುವುದು. ಹೇಗೆಂದರೆ.— ಆಕಾಶದ ಅರ್ಧಭಾಗವು ಜ್ಞಾತೃತ್ವವಾಯಿತು, ಉಳಿದ ನಾಲೂ

ವಾಯುವು, ಅಗ್ನಿ, ಜಲ, ಪೃಥ್ವಿ, ಇವುಗಳಿಂದ ಕೂಡಿ ಮನೋಬುದ್ಧಿ ಚಿತ್ತಾಹಂಕಾರಗಳಾದವು. ವಾಯುವಿನ ಅರ್ಧಭಾಗವು ವ್ಯಾನವಾಯಿತು. ಉಳಿದ ನಾಲ್ಕುಭಾಗಗಳು ಪೃಥ್ವಿ, ಅಪಸ್ಸು, ತೇಜಸ್ಸು ಆಕಾಶ ಇವುಗಳಿಂದ ಕೂಡಿ ಪ್ರಾಣ, ಅಪಾನ, ಉದಾನ, ಸಮಾನಗಳಾದವು. ಅಗ್ನಿಯು ಅರ್ಧಭಾಗವು ಚಕ್ಷುವಾಯಿತು. ಉಳಿದ ನಾಲ್ಕು ಪೃಥ್ವಿ, ಅಪ್ಪು, ವಾಯು, ಆಕಾಶ ಇವುಗಳನ್ನು ಕೂಡಿ, ಘ್ರಾಣ, ಜಿಹ್ವಾ, ತ್ವಕ್ಕು, ಶ್ರೋತ್ರಗಳಾದವು. ಜಲದ ಅರ್ಧಭಾಗವು ರಸವಾಯಿತು. ಉಳಿದ ನಾಲ್ಕು ಭೂಮಿ, ಅಗ್ನಿ, ವಾಯು, ಆಕಾಶವೆಂಬಿವುಗಳಿಂದ ಕೂಡಿ ಗಂಧರೂಪಸ್ಪರ್ಶಶಬ್ದಗಳಾದುವು. ಭೂಮಿತತ್ವದ ಅರ್ಧಭಾಗವು ಪಾಯುವಾಯಿತು. ಉಳಿದನಾಲ್ಕು ನೀರು, ಅಗ್ನಿ, ವಾಯು, ಅಂತರಿಕ್ಷಗಳೊಂದಿಗೆ ಕೂಡಿ ಗುಹ್ಯ, ಪಾಣಿ, ಪಾದ, ವಾಕ್ಕುಗಳಾದುವು. ಈ ಪ್ರಕಾರವಾಗಿ ಪಂಚವಿಂಶತಿ ತತ್ವಾತ್ಮಕವಾದ ಸ್ಥೂಲ ಶರೀರವು. ಕರ್ಮೇಂದ್ರಿಯಗಳೈದೂ ಜ್ಞಾನೇಂದ್ರಿಯಗಳೈದೂ, ಪಂಚ ಪ್ರಾಣಗಳೂ ಮನೋಬುದ್ಧಿಗಳೂ ಕೂಡಿ, ಸೂಕ್ಷ್ಮಾಂಗವು ಲಿಂಗಶರೀರವಾಯಿತು. ಇವೆರಡಕ್ಕೂ ಕಾರಣವಾದ ಅವಿದ್ಯೆಯು ಕಾರಣಾಂಗವಾಯಿತು. ಈ ದೇಹತ್ರಯಗಳಿಂದ ಕೂಡಿ ಜೀವನು ಜಾಗ್ರತೆ, ಸ್ವಪ್ನ, ಸುಷುಪ್ತಿಗಳೆಂಬ ಅವಸ್ಥಾತ್ರಯದಲ್ಲಿಬದ್ಧ ಹೊರಳುತ್ತಾ ಮಾಂಸನಿರ್ಮಿತವಾದ ಆ ಸ್ಥೂಲಶರೀರದಲ್ಲಿ ಅಹಂಕಾರಮಮಕಾರಗಳನ್ನು ಮಾಡುತ್ತಾ ದೇಹಾತ್ಮಭಾವಗಳಿಂದ ತನ್ನನ್ನು ತಿಳಿಯದೆ ಕರ್ಮಗಳನ್ನು ಮಾಡಿ ಸ್ವರ್ಗನರಕಗಳನ್ನು ಹೊಂದುತ್ತಾ, ಕ್ಷೀಣ ಭೋಗಗಳಿಂದ ಸರ್ವಜಂತುಯೋನಿದ್ವಾರಗಳಲ್ಲಿ ಹುಟ್ಟುತ್ತಲೂ ಸಾಯುತ್ತಲೂ ಎಡೆಯಿಲ್ಲದೆ ದುಃಖಗಳನ್ನು ಅನುಭವಿಸುತ್ತಿರುವನೇಹೊರತು ಸರ್ವಭೋಗ ವಿರಕ್ತನಾಗಿ ಶಾಂತಹೃದಯನಾಗುತ್ತಾ ಈಶ್ವರೋಪಾಸನಾ ವಿಶೇಷದಿಂದ ಚಿತ್ತವನ್ನು ಗೆಲ್ಲಲರಿಯನು. ಅದೆಂತೆಂದರೆ,— ಕೀವು ನೆತ್ತರುಗಳನ್ನು ಸುರಿಯುತ್ತಿರುವ ಮೂತ್ರಮಲಸಂಯುಕ್ತವಾದ ಚರ್ಮವು, ಕರುಳು, ಮಾಂಸಖಂಡ, ಮೂಳೆಗಳು. ಇವುಗಳಿಂದ ಕೂಡಿರುವ ದೇಹಗಳ ಅವಸ್ಥೆಯು ಕಡೆಗೆ ಏನಾಗುವುದೆಂದು ಬಲ್ಲೆಯೋ ? ದುಃಖವು ಬಹಳವಾಗಿಯೂ, ಎಂಜಲಿನಮನೆಯಾಗಿಯೂ, ರೋಗಗಳ ನೆಲೆಯಾಗಿಯೂ, ಅಸಹ್ಯದಕೊಂಪೆಯಾಗಿಯೂ, ಭಯಕ್ಕೆ

ತೌರುಮನೆಯಾಗಿಯೂ, ಪಾತಕಗಳಿಗೆ ಗಣಿಯಾಗಿಯೂ, ಮಲಮೂತ್ರ ರಕ್ತಮಾಂಸಪೂರ್ಣವಾಗಿಯೂ ಇರುವ ಈ ಕಷ್ಟಶರೀರವು ಹುಳುವಿನ ಹುತ್ತದಂತೆಯೂ, ಚರ್ಮದ ಚೀಲದಂತೆಯೂ ಇರುವುದು ಇದರಲ್ಲಿ ಸೌಖ್ಯವುಂಟೆಂದು ಬಯಸಿಬಯಸಿ ಜನರು ಪಶುಪ್ರಾಯರಾದರು.

ಲೋಭಗಳೆಂಬ ಹಗ್ಗಗಳೂ, ಸುಖದುಃಖಗಳೆಂಬ ಕೊಂಬುಗಳೂ, ಈಷಣಗಳೆಂಬ ತಲೆಬಾಲಗಳೂ, ಅವಧಿಯೆಂಬ ಬಾಯಿಯೂ ಇರುವ ಸಂಸಾರವೆಂಬ ಮಂದೆಯಲ್ಲಿ ಭ್ರಾಂತಿಯೆಂಬ ಗೌಳಿಗನು ಮನುಷ್ಯರೆಂಬ ಪಶುಗಳನ್ನು ಆಡಿಸುತ್ತಿರುವನು. ಹೀಗೆ ಪಶುಪ್ರಾಯರಾಗಿಯೂ, ದೂಷಿತರಾಗಿಯೂ ದುರಾಚಾರಿಗಳಾಗಿಯೂ ಅವರು, ನೀವು, ನಾವು ಎಂಬ ಭೇದಭಾವವನ್ನಿಟ್ಟುಕೊಂಡು ಸ್ತ್ರೀವ್ಯಾಮೋಹಾಯತ್ತಚಿತ್ತರಾಗಿ ಕೆಡುತ್ತಿರುವರು. ದಾರಾಪುತ್ರಾದಿಗಳಿಗೋಸ್ಕರ ಬಹುಕಷ್ಟಪಟ್ಟು ದ್ರವ್ಯಸಂಪಾದನೆಮಾಡಿ, ಅವನು ಸತ್ತಮೇಲೆ ಹೆಂಡತಿಯಾರೋ, ಮಕ್ಕಳುಯಾರೋ, ದ್ರವ್ಯವು ಯಾರಪಾಲೋ ಆಗಿ ಹೋಗುವುದು. ವಿಷಯಾಸಕ್ತಚಿತ್ತರಿಗೆ ಸ್ವಲ್ಪವಾದರೂ ಸುಖವಿಲ್ಲವು ಹಲವುಬಗೆಯ ರೋಗಗಳಿಗೆ ಮೂಲವು, ನಾಚಿಕೆಗೇಡು. ಮಹಾಪಾತಕಹೇತುವು. ಇಹಪರಸುಖಗಳನ್ನು ಹಾಳುಮಾಡುವುದೂ ಇದೇ. ಇದರಿಂದಲೇ ಸಂಸಾರಪಾಶಬದ್ಧನಾಗಿ ಮನುಷ್ಯನು ಘೋರನರಕದಲ್ಲಿ ಬೀಳುವನು. ಆದುದರಿಂದ ಇದು ಹೇಯವೆಂದು ತಿಳಿದು ಸನ್ಯಾಸವನ್ನು ಪಡೆದವನು. ಸುಖಪಡುವನು. ಮನೆಬಾಗಿಲುಗಳನ್ನು ರೋಸಿ, ಹೆಂಡತಿಯನ್ನು ಪರಿತ್ಯಾಗಮಾಡಿ ಬಂಧುಬಳಗಗಳನ್ನು ತೊರೆದು, ಆಶೆಗಳನ್ನುಬಿಟ್ಟು ಒಡವೆವಸ್ತು ಮುಂತಾದುವುಗಳನ್ನು ಪರಿತ್ಯಜಿಸಿ, ಕರ್ತೃತ್ವವನ್ನು ಮೀರಿ, ಕರ್ಮಗಳನ್ನು ದಾಟಿ, ಸದ್ಗುರುವಿನ ಪಾದವನ್ನು ಆಶ್ರಯಿಸಿದವನ ಜನ್ಮವು ಸಫಲವೆನಿಸುವುದು. ಸಂಗವಿಹೀನನೇ ಸಭಾಪೂಜ್ಯನು. ದೇವತಾಸಮಾನನು. ಆದುದರಿಂದ ಜನಸಾಂಗತ್ಯವನ್ನು ವರ್ಜಿಸ ತಕ್ಕದ್ದು. ಎಂದು ಹೇಳಿದನು. ಆಗ ಯುಧಿಷ್ಠಿರನು ಮಹರ್ಷಿಯನ್ನುನೋಡಿ, "ಆರ್ಯರೇ, ತಮ್ಮ ವಾಕ್ಯಾಮೃತಪಾನದಿಂದ ನನ್ನಮನಸ್ಸು ದಣಿಯದೆ, ಇನ್ನೂ ಹೆಚ್ಚುಹೆಚ್ಚಾಗಿ ತಿಳಿಯಬೇಕೆಂದು ತವಕಿಸುತ್ತಿದೆ. ನಾಮಕೀರ್ತನೆಯ ವಿಚಾರವನ್ನು ತಿಳಿಸಬೇಕು." ಎಂದು ಪ್ರಾರ್ಥಿಸಲಾಪಾರಾಶರಿಯಿಂತೆಂದನು.

ಎಲೈ ರಾಯನೇ ಕೇಳು. ಈ ಲೋಕದಲ್ಲಿ ಅಜ್ಞಾನಿಗಳಾದ ಮೂರ್ಖರು ತೀರ್ಥಯಾತ್ರೆಗಳೆಂತಲೂ, ದೇವತಾಸೇವೆಗಳೆಂತಲೂ ನೆವ ವಿಟ್ಟುಕೊಂಡು ಎಲ್ಲೆಲ್ಲಿಯೂ ಅಲೆದಾಡುತ್ತಿರುವರು. ಇದುಅವರಿಗೆ ಹತ್ತಿದ ಗ್ರಹಚಾರಬಾಧೆಯೇ ಹೊರತು ಮತ್ತೊಂದಲ್ಲ, ನಾಮಕೀರ್ತನಗೆ ಸಮಾನವಾದ ಪುಣ್ಯವೇ ಇಲ್ಲ. ಜಾರನಾಗಲಿ, ವೃದ್ಧಾಚಾರನಾಗಲಿ, ಗೃಹಸ್ಥನಾಗಲಿ, "ಶ್ರೀರಾಮಾ" ಎಂದು ಬಂದುಸಾರಿ ಬಾಯಿಂದ ಉಚ್ಚರಿಸಿದರೆ ಸಾಕು. ಮಹಾಪಾತಕಗಳಾದರೂ ಈ ಶಬ್ದವನ್ನುಕೇಳಿ ಓಡಿಹೋಗುವುವು.

ಶ್ಲೋ॥ರಾಶಬ್ದೋಚ್ಚಾರಮಾತ್ರೇಣ ಮುಖಾನ್ನಿರ್ಯಾಂತಿಪಾತಕಾಃ।
ಪುನಃಪ್ರವೇಶಭೀತ್ಯಾಚ ಮಕಾರಸ್ತು ಕವಾಟವತ್॥

ರಾಮಮಂತ್ರದಿಂದಲೇ ತಾನುಮಾಡಿದ ಪಾಪಗಳೆಲ್ಲವೂ ಮುಖದಿಂದ ಈಚೆಗೆ ಹೊರಟುಬರುವುವು. ಇವು ಪುನಃ ಒಳಕ್ಕೆ ಪ್ರವೇಶ ಮಾಡುವುವೆಂಬ ಭಯದಿಂದ ಮಕಾರವು ಬಾಗಿಲಕದದಂತೆ ಮುಚ್ಚಲ್ಪಡುವುದು. ಯಾವಜಾತಿಯವನೇ ಆಗಲಿ, ಯಾವವಯಸ್ಸಿನವನೇ ಆಗಲಿ, ಆತ್ಮಾವೇಶದಿಂದ "ರಾಮ, ಕೃಷ್ಣ, ಗೋವಿಂದಾ" ಇತ್ಯಾದಿ ಭಗವನ್ನಾಮಗಳನ್ನು ಶಕ್ತಿಯಿದ್ದಮಟ್ಟಿಗೆ ಉಚ್ಚರಿಸಿ ಚಿತ್ತಸ್ಥೈರ್ಯದಿಂದ ಕರೆದರೆ ಮುಹೂರ್ತಕಾಲದಲ್ಲಿಯೇ ಸ್ವಾಮಿಯು ಪ್ರತ್ಯಕ್ಷವಾಗಿ ಬಂದು ನಿಲ್ಲುವನು. ಭಕ್ತಿಯಿಂದ ಬಂದುಸಾರಿಕೂಗಿದರೂ ಸಾಕು. ನಾನು ಅವರ ಆಳಾಗಿ ಬಂದುನಿಲ್ಲುವೆನೆಂದು ಭಗವಂತನು ಹೇಳಿರುವನು. ಶ್ರೀ ಕೃಷ್ಣನು ಅರ್ಜುನನನಿಗೆ ಉಪದೇಶಿಸಿದ ಗೀತೆಯಲ್ಲಿ—

ಶ್ಲೋ॥ಅನನ್ಯಾಶ್ಚಿಂತಯಂತೋ ಮಾಂಯೇಜನಾಃಪರ್ಯುಪಾಸತೇ।
ತೇಷಾಂನಿತ್ಯಾಭಿಯುಕ್ತಾನಾಂ ಯೋಗಕ್ಷೇಮಂವಹಾಮ್ಯಹಂ॥

ಎಂದು ಹೇಳಿರುವನು. ಈ ಭಗವನ್ನಾಮಸ್ಮರಣೆಯಿಂದ ಚತುರ್ವಿಧಪುರುಷಾರ್ಥಗಳೂ ಸಿದ್ಧಿಸುವುವು. ಪೃಥ್ವಿಯಲ್ಲಿ ಸೃಷ್ಟಿಸಲ್ಪಟ್ಟಿರುವ ಪ್ರಾಣಿಗಳಲ್ಲಿ ಮನುಷ್ಯಜನ್ಮವೇ ಶ್ರೇಷ್ಠವಾದುದು. ಯಾವ ಬಗೆಯ ಇಷ್ಟಾರ್ಥವನ್ನು ಪಡೆಯಬೇಕಾದರೂ ಇದರಲ್ಲಿ ಅವಕಾಶವಿರುವುದು. ಅಂಥದನ್ನು ಹೊಂದಲು ನಾಮಸಂಕೀರ್ತನ ಹೊರತು ಬೇರೆ ಉಪಾಯವಿಲ್ಲ.

ಶ್ಲೋ॥ರಾಮಹರೇ ಕೃಷ್ಣಹರೇ ತವನಾಮವದಾಮಿಸದಾನೃಹರೇ ।
ನಾಮಸ್ಮರಣಾಪನ್ಯೋಪಾಯಂನಹಿಪಶ್ಯಾಮೋ ಭವತರಣೇ ॥

ಎಲೈ ಜಾನಕೀನಾಥಾ, ಕೌಸಲ್ಯಾನಂದನಾ, ಸೀತಾಮನೋ ನಾಯಕಾ, ಮುಂತಾದ ಹೆಸರುಗಳಿಂದ ಆ ಸ್ವಾಮಿಯನ್ನು ಧ್ಯಾನಿಸ ಬೇಕು. ಬಳಿಕಲಾದೇವದೇವನನ್ನು ಕುರಿತು ಸ್ತೋತ್ರಮಾಡಿ ಶರಣಾ ಗತನಾಗಬೇಕು. ಇದಕ್ಕೆ ಒಂದು ಇತಿಹಾಸವನ್ನು ಹೇಳುವೆನುಕೇಳು, ಪೂರ್ವಕಾಲದಲ್ಲಿ ನಾರದಮುನಿಯ ಶಿಷ್ಯನಾದ ಒಬ್ಬ ಬ್ರಾಹ್ಮಣ ನಿದ್ದನು. ಅವನಿಗೆ ಆತ್ಮರಾಮನೆಂದು ಹೆಸರು, ಅವನು ಶ್ರೀರಾಮ ಕೃಷ್ಣರನ್ನು ಅವರ ಹೆಸರುಗಳಿಂದ ಸ್ತೋತ್ರಮಾಡಿ ಕರೆಯಲು ಅವರಿಬ್ಬರೂ ತಮ್ಮತಮ್ಮ ಪತ್ನೀಸಮೇತರಾಗಿ ಪ್ರತ್ಯಕ್ಷವಾಗಿಬಂದು "ಎಲೈ ಬ್ರಾಹ್ಮಣನೇ, ನಿನ್ನ ಸ್ತೋತ್ರಕ್ಕೆ ಮೆಚ್ಚಿದೆವು. ನಿನಗೆ ಬೇಕಾದುದನ್ನು ಬೇಡಿಕೋ, ಕೊಡುವೆವು." ಎಂದು ಹೇಳಿದರು. ಆಗಲಾ ವಿಪ್ರನು ಅವರನ್ನುನೋಡಿ, ಕೈಮುಗಿದುಕೊಂಡು "ದೇವಾಧಿ ದೇವರುಗಳಿರಾ! ನೀವು ಇಲ್ಲಿಯೇ ಸಾನ್ನಿಧ್ಯವಾಗಿರಬೇಕೆಂದು ಪ್ರಾರ್ಥಿ ಸುತ್ತೇನೆ, ನನಗೆ ಮತ್ತಾವವರವೂ ಬೇಕಾಗಿಲ್ಲ" ಎಂದನು. ಅದಕ್ಕಾ ರಾಮಕೃಷ್ಣರಿಬ್ಬರೂ ಸಮ್ಮತಿಪಟ್ಟು ಅಲ್ಲಿಯೇ ನೆಲಸಿದರು. ಈ ರೀತಿಯಲ್ಲಿ ಶ್ರೀರಾಮಕೃಷ್ಣರನ್ನು ಭಕ್ತಿಯಿಂದ ಧ್ಯಾನಿಸಿದರೆ ಅವರ ಇಷ್ಟಾರ್ಥಗಳು ತಪ್ಪದೆ ನೆರವೇರುವುವು.

ಮನೇಬಾಗಿಲು, ಹೆಂಡಿರುಮಕ್ಕಳು ಒಡವೆವಸ್ತುಗಳು ಮುಂತಾ ದುವುಗಳೆಲ್ಲಾ ಪರಿತ್ಯಾಗಮಾಡಿ, ಕಾವಿವಸ್ತ್ರಗಳನ್ನು ಧರಿಸಿ ತಲೆ, ಕೂದಲುಗಳನ್ನು ಮುಂಡನಮಾಡಿಸಿಕೊಂಡು ಜಪಮಾಲೆಯನ್ನು ಕೈ ಯಲ್ಲಿ ಹಿಡಿದುಕೊಂಡು, ಜನರು ಕೂಡಿದಕಡೆಗಳಲ್ಲಿ ಹರಿಹರಿ ಎಂದು ನಾಮಸ್ಮರಣೆಮಾಡುತ್ತಾ, ಸನ್ಯಾಸಿಯವೇಷದಿಂದ ಭಿಕ್ಷವೆತ್ತಿಕೊಂಡು ಹೊಟ್ಟೇ ತುಂಬಿಸಿಕೊಳ್ಳುತ್ತಾ, ವಿಷಯವಾಸನೆಗಳಲ್ಲಿ ಸಿಕ್ಕಿ ತೊಳ ಲುವವನು ನಿಜವಾದ ಯತಿಯಾಗಲಾರನು. ತನ್ನನ್ನು ತಾನು ತಿಳಿದ ಮಹಾತ್ಮನಾದ ಗುರುವನ್ನು ಆಶ್ರಯಿಸದೆ ಇರುವವನಿಗೆ ಕರ್ಮಗಳು ಲಯವಾಗುವುದು ಹೇಗೆ! ಇದೂ [illegible] ದೇವಾಲಯಗಳು, ಪುಣ್ಯ ಕ್ಷೇತ್ರಗಳು, ಬೆಟ್ಟದಗುಹೆಗಳು, ಅರಣ್ಯಗಳು, ನದಿಗಳೂ, ರಥೋತ್ಸವ ಗಳು, ಮದುವೆಮುಂಜೆಗಳು, ಹಬ್ಬಹರಿದಿನಗಳು, ಮುಂತಾದುವುಗಳಿಗೆ

ತಿರುಗುತ್ತಾ ದಂಭವೃತ್ತಿಯಿಂದ ವರ್ತಿಸುತ್ತಿರುವವನಿಗೂ ಮೋಕ್ಷಲಕ್ಷ್ಮಿಯು ಲಭಿಸುವುದಿಲ್ಲವು. ಚಂಚಲವಾದ ಮನಸ್ಸು ಯಾವಾಗಲೂ ಕ್ರೋಧಾವಿಷ್ಟವಾಗಿ ಜಗಳಕ್ಕೇನೇ ಕಾಲುಕೆರೆಯುತ್ತಿರುವುದು. ಅದು ದುರ್ಮಾರ್ಗದಲ್ಲಿ ಹೋಗಬೇಕೆಂದು ಇಂದ್ರಿಯಗಳನ್ನು ಎಳೆಯುತ್ತಿರುವುದೇಹೊರತು ಮುಕ್ತಿಮಾರ್ಗದ ದಾರಿಯನ್ನೇ ಮೆಟ್ಟಗೊಳಿಸದು. ಅಂತಹ ಮನಸ್ಸನ್ನು ಸ್ವಾಧೀನಕ್ಕೆ ತೆಗೆದುಕೊಳ್ಳಬೇಕಾದರೆ ಸದ್ಗುರುವಿನ ಕಟಾಕ್ಷವು ಲಭಿಸಬೇಕು.

ಗುರವೋಬಹವಸ್ಸಂತಿ ಶಿಷ್ಯವಿತ್ತಾಪಹಾರಕಾಃ ।
ದುರ್ಲಭಸ್ಸದ್ಗುರುರ್ದೇವಿ ಶಿಷ್ಯಹೃತ್ತಾಪಹಾರಕಃ ॥

ಅಂತಹ ಯೋಗ್ಯನಾದ ಸದ್ಗುರುವನ್ನು ಪ್ರಯತ್ನದಿಂದ ಕಂಡುಹಿಡಿದು ಆತನ ಆಶ್ರಯವನ್ನು ಪಡೆಯಬೇಕು. ವಿಷಯಲೋಲುಪನು, ವಿಶ್ವಾಸಹೀನನು, ಕುಟಿಲನು, ಗುರುನಿಂದಕನು, ಚಿಂತಾತತ್ಪರನು ಇವರು ಉಪದೇಶಕ್ಕೆ ತಕ್ಕವರಲ್ಲವು. ಆಲಸ್ಯವು, ನಾಸ್ತಿಕ್ಯಬುದ್ಧಿಯು ಅಹಂಕಾರವು, ದ್ವೇಷವು, ಕಳ್ಳತನವು, ಕೃತಘ್ನತೆಯು, ಕಲಹವು, ವಿಷಯಾಸಕ್ತಿಯೂ ಮುಂತಾದ ದುರ್ಗುಣಗಳುಳ್ಳವರುಕೂಡ ಜ್ಞಾನೋಪದೇಶವನ್ನು ಪಡೆಯಲು ಅರ್ಹರಲ್ಲವು ಎಂದನು.

ಬಳಿಕ ಯುಧಿಷ್ಠಿರನು ವ್ಯಾಸಮಹರ್ಷಿಯನ್ನು ನೋಡಿ, "ಪೂಜ್ಯರೇ, ಅಧಿಕಾರಿಯ ಲಕ್ಷಣವನ್ನೂ ಗುರುಸೇವೆಯ ಲಕ್ಷಣವನ್ನು ದಯಮಾಡಿ ತಿಳಿಸಬೇಕು." ಎಂದು ಪ್ರಾರ್ಥಿಸಿದನು, ಅದಕ್ಕಾ ಮಹರ್ಷಿಯು ಇಂತೆಂದನು. "ಎಲೈ ಧರ್ಮಪುತ್ರನೇ ಕೇಳು. ಸಾಧನಚತುಷ್ಟಯ ಸಂಪತ್ತಿಯುಳ್ಳವನೇ ಉಪದೇಶಪಡೆಯಲು ತಕ್ಕ ಅಧಿಕಾರಿಯೆನಿಸುವನು. ಅವುಗಳ ಲಕ್ಷಣವನ್ನು ಹೇಳುವೆನು. ನಿತ್ಯಾನಿತ್ಯವಸ್ತುವಿಶೇಷವೂ, ಇಹಪರಲೋಕಗಳ ಭೋಗಫಲದಲ್ಲಿ ವಿರಾಗವೂ, ಶಮಾದಿಷಡ್ಗುಣಸಂಪತ್ತಿಯೂ ಮುಮುಕ್ಷುತ್ವವೆನ್ನಲ್ಪಡುವುದು, ಅದರ ವಿವರಣೆ ಹೇಗೆಂದರೆ,—ಆತ್ಮನು ನಿತ್ಯನು, ಜಗತ್ತು ಅನಿತ್ಯವು. ಎಂದು ತಿಳಿಯುವುದೇ ನಿತ್ಯಾನಿತ್ಯವಸ್ತುವಿವೇಕವು. ಇದು ಪ್ರಥಮಸಾಧನವು. ಇದರಲ್ಲಿ ಸ್ರಕ್ಚಂದನವನಿತಾದಿಭೋಗಗಳು ತುಚ್ಛವಾದುವುಗಳು. ಸ್ವರ್ಗಾದಿಲೋಕಗಳ ಸುಖಗಳೂ ಹಾಗೆಯೇಸರಿ. ಎಂದು ತಿಳಿದು ಇಹಪರಸುಖಗಳನ್ನು ಬಯಸದೇಇರುವುದೇ ಇಹಾಮುತ್ರಾ

ರ್ಥಭೋಗವಿರಕ್ತಿಯೆಂಬ ಎರಡನೆಯ ಸಾಧನವು. ಅಂತರಿಂದ್ರಿಯ ಗಳನ್ನು ನಿಗ್ರಹಿಸುವುದು ಶಮವು. ಬಾಹ್ಯಪಂಚೇಂದ್ರಿಯಗಳನ್ನು ನಿಗ್ರಹಿಸುವುದು ದಮವು. ಕಾಮಕ್ರೋಧಲೋಭ ಮೋಹ ಮದ ಮತ್ಸರಗಳೆಂಬ ಅರಿಷಡ್ವರ್ಗಗಳನ್ನು ಜಯಿಸುವುದೂ, ವೇದೋಕ್ತಗಳಾದ ಆಚಾರಗಳಲ್ಲಿ ವಿಶ್ವಾಸವುಳ್ಳವನಾಗಿರುವಿಕೆಯೂ ಶ್ರದ್ಧೆಯೆನಿಸುವುದು. ಹೀಗೆ ಶಮಾದಿಷಟ್ಕಸಾಧನಸಂಪತ್ತಿಯನ್ನು ಪಡೆಯುವುದೇ ಮೂರನೆಯ ಸಾಧನವು. ಈ ಸಾಧನಗಳಿಂದ ಶೀಘ್ರವಾಗಿ ಮೋಕ್ಷವಾಗಬೇಕೆಂದು ಬಯಸುವುದೇ ಮುಮುಕ್ಷುತ್ವವೆಂಬ ನಾಲ್ಕನೆಯ ಸಾಧನವು. ಈ ಸಾಧನಗಳುಳ್ಳವನೇ ಅಧಿಕಾರಿಯೆನಿಸಿಕೊಳ್ಳುವನು. ಮತ್ತು ನಾನು ಯಾರೂ, ಈ ಜಗತ್ತು ಏಥದು? ಈ ಸಂಸಾರವೂ ಯಾರಿಗೆ? ನಾನು ಎಲ್ಲಿಂದಬಂದೆನು; ಎಲ್ಲಿಗೆ ಹೋಗಬೇಕು! ನನಗೆ ಮುಂದಿನ ಮಾರ್ಗವು ಯಾವುದು? ನಾನು ಮುಂದೇ ಸದ್ಗತಿಯನ್ನು ಪಡೆಯುವೆನೆ? ದೈವಕಟಾಕ್ಷವು ನನ್ನಮೇಲೆ ಉಂಟಾಗಬಹುದೆ? ಎಂದು ಯೋಚಿಸುತ್ತಾ ದೇಹಾದಿಗಳಲ್ಲಿ ಭ್ರಮೆಯನ್ನು ಬಿಟ್ಟುಬಿಟ್ಟು, ವೇದವೇದಾಂತತತ್ವಜ್ಞರಿಂದ ವರವಿಭವವನ್ನು ತಿಳಿದು, ಸದ್ಗುರುವು ಎಂದಿಗೆ ಸಿಕ್ಕುವನೋ ಎಂದು ವಿಚಾರಮಾಡುತ್ತಿರುವವನು ಸ್ವಸ್ವರೂಪೋಪದೇಶಕ್ಕೆ ಅರ್ಹನೆನಿಸುವನು ಎಂದು ಹೇಳಿ ಮತ್ತಿಂತೆಂದನು.

ಎಲೈ ರಾಜನೇ ಕೇಳು. ಮೋಕ್ಷಕಾಮಿಯಾದವನು ಶರೀರಬುದ್ಧೀಂದ್ರಿಯ, ಪ್ರಾಣಗಳೂ ಪೃಥಿವ್ಯಾಪಸ್ತೇಜೋವಾಯ್ವಾಕಶಬ್ದ ಸ್ಪರ್ಶರೂಪ ರಸಗಂಧ ಮುಂತಾದ ಸಂಸಾರದ ಭ್ರಮೆಗಳಿಂದ ಈ ಲೋಕವೆಲ್ಲಾ ಜಡವು, ದೃಶ್ಯವು, ನಶ್ವರವು; ನಾನು ಇವುಗಳಲ್ಲಿ ಒಂದೂ ಅಲ್ಲವು ಎಂದು ತಿಳಿದುಕೊಂಡು, ತನ್ನನ್ನು ತಾನು ತಿಳಿದುಕೊಂಡಿರುವ ಗುರುವಿನ ಆಶ್ರಯಗಳನ್ನು ಹುಡುಕಿಕೊಂಡು ಹೋಗುವನು. ಅಂತವನಿಗೆ ವಿದ್ಯೆ, ಜ್ಞಾನ, ಹಸಿವು, ನಿದ್ರೆ, ಹಿರಿದು, ಕಿರಿದು, ದೇಹ, ವರ್ಣ, ಆಶ್ರಮ, ಆಚಾರ, ದೇಶ, ಕಾಲ, ರೂಪ ಮುಂತಾದುವುಗಳಲ್ಲಿ ಸ್ವಲ್ಪವೂ ಅಭಿಮಾನವಿಲ್ಲವು. ಯಾವ ಜಾತಿಯವನೇ ಆಗಲಿ, ಯಾವ ನೀತಿಯವನೇ ಆಗಲಿ, ಯಾವ ಮಾರ್ಗದವನೇ ಆಗಲಿ ರಾಜಯೋಗವನ್ನು ಅಭ್ಯಾಸಮಾಡಿದರೆ ಬಾಹ್ಯದೃಷ್ಟಿಯು ತಪ್ಪಿ, ಅಂತರ್ದೃಷ್ಟಿಯುಂಟಾಗುವುದು. ಒಳಹೊಕ್ಕು ನೋಡುತ್ತಾ ಬಂದಹಾಗೆಲ್ಲಾ ಲೋಕವು

ಅಸ್ತಮಯವಾಗಿ ಬೆಳದಿಂಗಳು ತುಂಬಿದಂತೆ ಹೊಳೆಯುತ್ತಿರುವುದು. ಇದು ಸಿದ್ಧಿಸಬೇಕಾದರೆ ಸದ್ಗುರುವನ್ನು ಹುಡುಕಿಕೊಂಡು ಹೋಗಬೇಕು. ಗುರುವಿನ ಅನುಗ್ರಹವಿಲ್ಲದಿದ್ದರೆ ಯೋಗಸಿದ್ಧಿಯಾಗುವುದಿಲ್ಲ. ಸದ್ಗುರುವಿನ ಹತ್ತಿರಕ್ಕೆ ಹೋಗಿ, ಹನ್ನೆರಡು ವರುಷಕಾಲ ಆತನಸೇವೆ ಮಾಡಿ ನಾಲ್ಕು ಬಗೆಯ ಶುಶ್ರೂಷೆಗಳಿಂದ ಆತನನ್ನು ಒಲಿಸಬೇಕು. ಆತ್ಮಶುಶ್ರೂಷೆ, ಅಂಗಶುಶ್ರೂಷೆ, ಸ್ಥಾನಶುಶ್ರೂಷೆ, ಭಾವಶುಶ್ರೂಷೆ ಇವೇ ಚತುರ್ವಿಧ ಶುಶ್ರೂಷೆಗಳು. ಇಂತಹ ಶುಶ್ರೂಷೆ ಮಾಡತಕ್ಕ ಭಕ್ತನಿಗೆ ಮಾತ್ರವೇ ಜ್ಞಾನೋಪದೇಶವನ್ನು ಮಾಡಬೇಕು.

ಪರಮೇಶ್ವರನ ಅಂಗವಿಕ್ಷೇಪದಿಂದ ಮೂರುಬಗೆಯ ಅಹಂಕಾರಗಳು ಉತ್ಪನ್ನವಾದುವು. ಅವುಗಳಲ್ಲಿ ಅಧಮವಾದ ಭೂತಾಹಂಕಾರದಲ್ಲಿ ವಿಶ್ವಕಾರಣವೆಂಬ ಹೆಸರುಳ್ಳ ತಮೋಗುಣಭರಿತವಾದ ಆದಿಶಕ್ತಿಯಿಂದ ಧೂರ್ಜಟಿಯೂ, ಮಧ್ಯಮವಾಗಿ ಸೂಕ್ಷ್ಮದೇಹಿಯಾಗಿ ಮೋಹವೆಂಬ ತೈಜಸಾಹಂಕಾರವೂ ರಜೋಗುಣಪೂರ್ಣವಾಗಿ ಇಚ್ಛಾಶಕ್ತಿಯಿಂದ ಹಿರಣ್ಯಗರ್ಭನೂ, ಉತ್ತಮಾಹಂಕಾರವಾಗಿ, ವಿಶ್ವದೇಹಿಯಾಗಿ ಜ್ಞಾನಶಕ್ತಿಯಿಂದ ಕೂಡಿದ ಸಾತ್ವಿಕದಿಂದ ವಿಷ್ಣುವೂ ಉತ್ಪನ್ನರಾದರು. ಈ ಕಲ್ಪಿತಪುರುಷರಾದ ಹರಿಹರಹಿರಣ್ಯಗರ್ಭರು ಜ್ಞಾನೇಂದ್ರಿಯ ಕರ್ಮೇಂದ್ರಿಯಾಂತಃಕರಣಗಳಿಗೆ ಬೀಜಸ್ವರೂಪರಾಗಿರುವರು. ಅಖಿಲದೇಹೇಂದ್ರಿಯ ಸಮಷ್ಟಿಯಲ್ಲಿದ್ದುಕೊಂಡು ಕಲ್ಪನಭ್ರಾಂತಿಯಿಂದ ಪುರುಷನು ಜೀವರೂಪದಲ್ಲಿ ಪ್ರವೇಶಿಸಿ, ತಾನೇ ಕ್ರಿಯಾಶಕ್ತಿಯುಕ್ತನಾಗಿ ತನ್ನನ್ನು ತಾನೇ ಮರೆತುಬಿಡುವನು. ಅವನು ನಾನಾದೇಹೋಪಾಧಿಗಳಲ್ಲಿ ನಾನಾತ್ವವೆಂಬ ಭ್ರಾಂತಿಯನ್ನು ಹೊಂದಿ ಇದು ನನ್ನದು ಎಂದು ನಾನಾವಿಧದ ಅಭಿಮಾನಗಳಿಂದ ಆ ನಾರಾಯಣನೇ ನಾನಾರೂಪಗಳಾದನು. ಜೀವನು ಸ್ವಪ್ನದಲ್ಲಿ ಬುದ್ಧಿಕಲ್ಪನೆಗಳಿಂದ ಏನೇನೋ ನೋಡುತ್ತಾ, ಜಾಗ್ರದವಸ್ಥೆಯಲ್ಲಿ ಅವೇನೂ ಇಲ್ಲದೆ ನಿರ್ಮಲನಾಗಿರುವಂತೆಯೇ ಚಿದ್ರೂಪನು ತಾನು ನಿರಾಕಾರನಾಗಿದ್ದರೂ ವಿವಿಧಸಂಕಲ್ಪಾಕೃತಿಗಳಿಂದ ಬಂಧಮುಕ್ತಿಗಳನ್ನು ಪಡೆಯುತ್ತಾ ನಾನಾಬಗೆಯ ಜಂತುಜಾಲಗಳಿಂದ ಜಗತ್ಕಾರ್ಯವಾಗಿ ತೋರುತ್ತಲಿರುವನು. ಸುವರ್ಣಲೋಹವು ಒಂದೇ ಹಲವು ಮಾದರಿಯ ಒಡವೆಗಳಾಗಿ ಕಾಣಬರುವಂತೆಯೂ, ಧ್ವನಿಯೊಂದೇ ವಾದ್ಯಭೇದಗಳಿಂದ ಹಲವು ಬಗೆಯಾಗಿ ತೋರಿಬರುವಂತೆಯೂ, ಒಂದೇ ಆಗಿ

ರುವ ಬ್ರಹ್ಮತೇಜಸ್ಸು ಆಕಾರವಿಶೇಷಗಳಿಂದ ಬಗೆಬಗೆಯ ಸ್ವರೂಪಗಳಾಗಿ ಕಾಣಲ್ಪಡುತ್ತಿರುವುದು. ಬ್ರಹ್ಮಕ್ಕೆ ವ್ಯತಿರಿಕ್ತವಾದುದು ಈ ಜಗತ್ತಿನಲ್ಲಿ ಯಾವುದೂ ಇಲ್ಲವು. ಭೇದಭಾವವಿಲ್ಲದೆ ಸರ್ವವೂ ಪರಮಾತ್ಮನೆಂದು ತಿಳಿಯತಕ್ಕದ್ದು. ಜ್ಞಾನಿಯಾದವನು "ಸರ್ವಂಖಲ್ವಿದಂ ಬ್ರಹ್ಮ" ಎಂಬಂತೆ ಆಚಾಂಡಾಲಪರ್ಯಂತವಿರುವ ಸಮಸ್ತಪ್ರಾಣಿಗಳೂ ಬ್ರಹ್ಮವೆಂತಲೇ ಭಾವಿಸುವನು. ಅಜ್ಞಾರು ಇದನ್ನು ತಿಳಿಯದೆ ಬಗೆಬಗೆಯ ಕಲ್ಪನೆಗಳಿಂದ ಮೋಸಹೋಗುತ್ತಿರುವರು.

ಕೆಲವರು ಮಾತನಾಡುವುದನ್ನು ಬಿಟ್ಟು ನಾವು ಮೌನಿಗಳೆಂದು ವೇಷಹಾಕುವರು. ಕೆಲವರು ಜಪವೆಂಬ ಹೆಸರಿನಿಂದ ಮಂತ್ರಗಳನ್ನು ಗೊಣಗುತ್ತಿರುವರು. ಕೆಲವರು ಯಾತ್ರಿಕರೆಂಬ ನೆವದಿಂದ ಊರೂರಿಗೂ ತಿರುಗುತ್ತಾ ಕಾಲಕಳೆಯುತ್ತಿರುವರು. ಕೆಲವರು ತಪಸ್ವಿಗಳೆಂದು ಹೆಸರಿಟ್ಟುಕೊಂಡು ಮಳೆ, ಗಾಳಿ, ಚಳಿ, ಬಿಸಲುಗಳನ್ನು ಸಹಿಸುತ್ತಾ ಕಷ್ಟಪಡುತ್ತಿರುವರು. ಈ ರೀತಿಯ ದಾಂಭಿಕ ವೃತ್ತಿಗಳಿಂದ ಪರಬ್ರಹ್ಮ ಬೋಧೆಯ ಮಾರ್ಗವು ತಿಳಿಯಲಾರದು. ತನ್ನನ್ನೇ ಸದ್ಗುರುವನ್ನಾಗಿ ತಿಳಿದುಕೊಳ್ಳುವ ಪ್ರಜ್ಞಾನ ಘನನೇ ಯೋಗಿ ಯೆನಿಸುವನು. ದೃಶ್ಯಗಳಾದ ನಾನಾಬಗೆಯ ವಸ್ತುಗಳನ್ನು ನಾನಾ (ಇಲ್ಲ ಇಲ್ಲ) ಎಂಬ ನಟನೆಗಳಿಂದ ತೊಲಗಿಸಿಬಿಟ್ಟು, ತಾನೇ ಬ್ರಹ್ಮನೆಂದು ತಿಳಿದುಕೊಂಡರೆ ತಾನೇ ಉಳಿಯುವನು. ವಾಸನೆಯು ಕ್ಷಯವಾದ ಹೊರತು ಈ ತತ್ವಬೋಧೆಯು ತಿಳಿಯಲಾರದು. ಅವುಗಳನ್ನು ಲಯಮಾಡುವಬಗೆ ಹೇಗೆಂದರೆ—(೧) ಲೌಕಿಕವನ್ನು ತಿಳಿದು ನಡೆಯದಿದ್ದರೆ ಸಭೆಗಳಲ್ಲಿ ಗೌರವವುಂಟಾಗುವುದಿಲ್ಲವೆಂದು, ಅದನ್ನು ಅನುಸರಿಸಿ ನಡೆಯುವುದು ಲೋಕವಾಸನೆ. (೨) ಓದಿ ಓದಿ ಪದ ಪದಾರ್ಥಗಳನ್ನು ಹುಡುಕಿ ತಿಳಿದು ಕರ್ಮವಶನಾಗಿ ನಿಷ್ಠೆಯಿಂದಿರುವುದು ಶಾಸ್ತ್ರವಾಸನೆ (೩) ಗಂಗಾಸ್ನಾನ ಮೊದಲಾದ ಕಾಯ ಶೋಷಣೆಗಳಿಂದ ಮುಕ್ತಿಯುಂಟಾಗುವುದೆಂದು ಭಾವಿಸುವುದು ದೇಹವಾಸನೆ.

ಆದುದರಿಂದ ಈ ಮೂರು ಬಗೆಯ ವಾಸನೆಗಳೂ ಕಷ್ಟಸಾಧ್ಯವಾದುವುಗಳು. ಇವುಗಳನ್ನು ಬಿಟ್ಟುಬಿಡಬೇಕು. ಎಲೈ ಧರ್ಮರಾಜನೇ ಕೇಳು. ಜೀವೇಶ್ವರಶರೀರಗಳು ನಾಲ್ಕು ವಿಧಗಳು. ಸ್ಥೂಲಶರೀರ, ಸೂಕ್ಷ್ಮಶರೀರ, ಲಿಂಗಶರೀರ, ಕಾರಣಶರೀರ, ಇವೇ ನಾಲ್ಕು

ಬಗೆಯ ಶರೀರಗಳು. ಈ ಶರೀರಗಳಿಗೆ ಜಾಗ್ರತೆ ಸ್ವಪ್ನ, ಸುಷುಪ್ತಿ ಯೆಂಬ ಮೂರು ಬಗೆಯ ಅವಸ್ಥೆಗಳಿರುವುವು. ಇನ್ನು ಜೀವನ್ಮುಕ್ತ ಲಕ್ಷಣವನ್ನು ಹೇಳುವೆನು ಕೇಳು. ಆಕಾಶಮಧ್ಯದಲ್ಲಿ ವಿಷಯಶೂನ್ಯ ವಾಗಿ ಪ್ರಕಾಶಿಸುತ್ತಾ, ಪೂರ್ಣವಾಗಿ ಆನಂದದಲ್ಲಿ ತೇಲಿ ಮುಳುಗುತ್ತಾ, ಇರುವ ಮಹಾಯೋಗಿಯು, ಸರ್ವತ್ರಸಂಚಾರಮಾಡಿಕೊಂಡು ಒಂದು ಕಡೆ ಸಂಸಾರಿಯಾಗಿ ವರ್ತಿಸುತ್ತಲೂ, ಮತ್ತೊಂದುಕಡೆ ವೈರಾಗ್ಯ ವನ್ನು ಉದ್ಧರಿಸುತ್ತಲೂ, ಇನ್ನೊಂದುಕಡೆ ಭೋಗಗಳನ್ನು ಅನುಭವಿ ಸುತ್ತಲೂ, ಹಲವುಕಡೆಗಳಲ್ಲಿ ಹಲವುಬಗೆಯಾಗಿ ನಡೆಯುತ್ತಲಿರುವನು. ಅವನಿಗೆ ಮಣಿಮಂತ್ರೌಷಧಗಳೂ, ಯಂತ್ರತಂತ್ರಗಳೂ, ಜಪ, ಹೋಮ ದ್ರವ್ಯಯೋಗಗಳೂ, ಅಣಿಮಾದಿ ಸಿದ್ಧಿಗಳು ಗುಣಸಾಮ್ಯಗಳೂ, ಮಾಯೆ ಗಳೂ ಎಲ್ಲವೂ ಸ್ವಾಧೀನಗಳಾಗಿಯೇ ಇರುವುವು. ಅಂತವನು ನಿಶ್ಚಿಂತ ನಾಗಿ ಬ್ರಹ್ಮಸಮಾಧಿಯಲ್ಲಿ ಕುಳಿತು, ಬಾಹ್ಯಕುಶಲಗಳನ್ನೆಲ್ಲಾ ಮರೆತು ಜ್ಞಾನತತ್ಪರನಾಗಿರುವನು. ಅವನಿಗೆ ಯಾವ ಧರ್ಮವೂ ಬೇಕಾಗಿಲ್ಲ. ಆತ್ಮನನ್ನು ತಿಳಿದಿರುವ ಅವಧೂತನ ಸಂಚಾರವನ್ನು ಬಲ್ಲವರೇ ಇಲ್ಲ ಅಂತವನು ಅಮನಸ್ಕಯೋಗದಿಂದ ಸದಾಕಾಲವೂ ಪರಮಾತ್ಮನನ್ನು ನೋ ಡುತ್ತಲೇ ಇರುವನು. ಅವನಿಗೆ ಯಾವ ದುಃಖವೂ ಇಲ್ಲ. ಅವನು ಮಾಯೆಗೆ ವಶನಾಗತಕ್ಕವನಲ್ಲ ಎಂದು ಹೇಳಿದನು.

ಬಳಿಕ ಧರ್ಮರಾಯನು ವ್ಯಾಸಮುನೀಂದ್ರನಿಗೆ ಕೈ ಮುಗಿದು "ಆರ್ಯನೇ, ಮೋಕ್ಷಲಕ್ಷ್ಮೀಕಲ್ಯಾಣವನ್ನು ತಿಳಿಸಿ ನನ್ನನ್ನು ಕೃತಾರ್ಥನ ನ್ನಾಗಿ ಮಾಡಬೇಕು" ಎಂದು ಪ್ರಾರ್ಥಿಸಲು ವೇದವ್ಯಾಸನಿಂತೆಂದನು.-

ಎಲೈ ರಾಯನೇ ಕೇಳು, ಬಹು ವೈಭವದಿಂದ ಕೂಡಿದ ಬ್ರಹ್ಮಾ ನಂದವೆಂಬ ನಗರಿಯೊಂದಿರುವುದು, ಆ ಪಟ್ಟಣದ ಕೋಟೆಯು ಮುಗಿ ಲನ್ನು ಮುಟ್ಟುತ್ತಿರುವುದು. ಆ ಕೋಟೆಯ ಸುತ್ತಲೂ ಇರುವ ಅಗಳ್ತೆ ಯು ಬಹು ಆಳವಾಗಿರುವುದು. ಆ ಕೋಟೆಗೆ ಹತ್ತುಬಾಗಿಲುಗಳುಂಟು ವೇದಾಂತ ಸಿದ್ಧಾಂತಗಳೇ ಆ ಪಟ್ಟಣದ ಬೀದಿಗಳು. ವಿಷಯೇಂದ್ರಿಯ ಗಳೇ ಅದರ ಅಂಗಡಿಗಳು. ದೇಹಾತ್ಮಬುದ್ಧಿ, ವರ್ಣಾಶ್ರಮಾಚಾರನಿರ್ಣಯ ಧರ್ಮಗಳೇ ಆನೆ ಕುದುರೆಗಳು, ಕರ್ಮಫಲಗಳೂ, ದೃಶ್ಯದರ್ಶನರಾಗಗ ಳೂ, ಸ್ತ್ರೀಪುರುಷರೂ, ಸಕಲ ಆಶೆಗಳಿಂದ ಸಮೃದ್ಧವಾದ ಆ ಪಟ್ಟಣವ ನ್ನು ಸದ್ಗುರು ಪಟ್ಟಭದ್ರಸ್ವಾಮಿಯು ಆಳುತ್ತಲಿರುವನು. ಅತನು ಆತ್ಮ

ಕಾಂತಾಸಮೇತನಾಗಿ ಒಂದುದಿನ ಸಿಂಹಾಸನದಮೇಲೆ ಕುಳಿತು ಒಡ್ಡೋಲಗವನ್ನು ಕೊಡುತ್ತಿದ್ದನು. ದರಬಾರು ಮುಗಿದಮೇಲೆ ಆ ದೇಶಿಕಸ್ವಾಮಿಯು ವಿದ್ಯಾಮಂಟಪವನ್ನು ಬಿಟ್ಟು ತನ್ನ ಅಂತಃಪುರಕ್ಕೆ ಹೋಗಬೇಕೆಂದು ಹೊರಟನು. ಆಗಲಾತನು ಆಧಾರವೆಂಬ ಪುಷ್ಪಕ ರಥವನ್ನೇರಿ, ಸ್ವಾಧಿಷ್ಠಾನಭೂಮಿಯನ್ನು ಅತಿಕ್ರಮಿಸಿ, ಮಣಿಪೂರಕ, ಅನಾಹತ, ವಿಶುದ್ಧಗಳೆಂಬ ಚಕ್ರಗಳನ್ನು ದಾಟಿ, ಸರ್ವಕ್ರವಾದ ಆಜ್ಞಾಚಕ್ರವೆಂಬ ಅಂತಃಪುರಕ್ಕೆ ಕಾಂತಾಸಮೇತನಾಗಿ ಹೋಗಿ, ಅಲ್ಲಿ ಹಂಸತೂಲಿಕಾತಲ್ಪದಮೇಲೆ ಕುಳಿತು, ತನ್ನ ಪತ್ನಿಯೊಂದಿಗೆ ಇಷ್ಟಸುಖಗಳಲ್ಲಿ ಕ್ರೀಡಿಸುತ್ತಾ ಕಾಲವನ್ನು ಕಳೆದನು. ರಾಜಪತ್ನಿಗೆ ಗರ್ಭವು ನಿಂತಿತು. ಹನ್ನೆರಡುವರ್ಷಗಳು ಆ ಸಾಧ್ವಿಯು ಗರ್ಭವನ್ನು ಧರಿಸಿ, ಮುಕ್ತಿಕಾಂತೆಯೆಂಬ ಕನ್ಯೆಯನ್ನು ಪಡೆದಳು. ಸರ್ವಲಕ್ಷಣಸಂಪನ್ನೆಯಾದ ಆ ಕನ್ಯೆಯು ದಿನದಿನ ಪ್ರವೃದ್ಧಮಾನಳಾಗಿ ಪ್ರಾಪ್ತವಯಸ್ಕಳಾದಳು. ನವಯೌವ್ವನ ಸಂಪನ್ನೆಯಾದ ಆ ಬಾಲೆಯನ್ನು ನೋಡಿ ರಾಜನು ತನ್ನ ಮಗಳಿಗೆ ವಿವಾಹ ಮಾಡಬೇಕೆಂದು ಮನಸ್ಸಿನಲ್ಲಿ ಯೋಚಿಸಿದನು. ಬಳಿಕಲಾತನು ತನ್ನ ಪುತ್ರಿಗೆ ಸ್ವಯಂವರವನ್ನು ಮಾಡುವೆನೆಂದು ಎಲ್ಲಾ ಕಡೆಗಳಲ್ಲಿಯೂ ಪ್ರಸಿದ್ಧಿಪಡಿಸಿದನು. ಆ ಸ್ವಯಂವರಕ್ಕೆ ಸಕಲ ದೇಶಗಳಿಂದಲೂ ಜನರು ಗುಂಪುಗುಂಪಾಗಿ ಬರುತ್ತಿದ್ದರು. ಪಟ್ಟಣವು ನೇತ್ರಾನಂದಕರವಾಗಿ ಅಲಂಕರಿಸಲ್ಪಟ್ಟಿತು. ನಾನಾ ದೇಶಾಧೀಶ್ವರರೂ ಬಗೆಬಗೆಯ ವಸ್ತ್ರಭೂಷಣಾದಿಗಳಿಂದ ಅಲಂಕೃತರಾಗಿ ಆ ಸ್ವಯಂವರ ಮಹೋತ್ಸವಕ್ಕೆ ದಯಮಾಡಿಸಿದರು. ಗೊತ್ತಾದ ಮುಹೂರ್ತದ ವೇಳೆಗೆ ಸರಿಯಾಗಿ ಆ ಕನ್ಯೆಗೆ ಮಂಗಳಸ್ನಾನಮಾಡಿಸಿ, ದಿವ್ಯಾಂಬರಾಭರಣಗಳಿಂದ ಅಲಂಕರಿಸಿ ಸಭಾಮಂಟಪಕ್ಕೆ ಕರೆದು ತಂದರು. ರಾಜಪುರೋಹಿತನು ಆ ಬಾಲೆಗೆ ಅಲ್ಲಿ ಬಂದಿದ್ದ ರಾಜರುಗಳ ಕುಲಶೀಲವಿತ್ತವಿದ್ಯಾವಯೋವಿಕ್ರಮಾದಿಗಳನ್ನೆಲ್ಲಾ ವಿವರಿಸಿ ಹೇಳುತ್ತಾ ಬಂದನು. ಆ ಸಭೆಯಲ್ಲಿ ನೆರದಿದ್ದವರಲ್ಲಿ ಒಬ್ಬೊಬ್ಬರು ಒಂದೊಂದು ಬಗೆಯಾಗಿ ಮಾತನಾಡಿಕೊಳ್ಳುತ್ತಿದ್ದರು. ಒಬ್ಬನು ಕರ್ಮದಿಂದಲೇ ಮೋಕ್ಷ ಪಡೆಯಬಹುದೆಂದು ವಾದಿಸಲು ಮತೊಬ್ಬನು ಹಾಗಲ್ಲ, ಜ್ಞಾನದಿಂದಲೇ ಮುಕ್ತಿ ಲಭಿಸುವುದೆಂದು ಅವನ ವಾದವನ್ನು ಖಂಡಿಸಿದನು. ಆತ್ಮನು ಅಣುವೆಂದು ಒಬ್ಬನು ಯುಕ್ತಿಯಿಂದ ಸಾಧಿಸಲು, ಇದು ಸುಳ್ಳು, ಆತ್ಮನೇ ವಿಭುವೆಂದು ಮತ್ತೊ

ಬ್ಬನು ಸಿದ್ಧಾಂತಮಾಡಿದನು. ದೇಹವೇ ಆತ್ಮನೆಂದು ಒಬ್ಬನು ಹೇಳಲು ಇನ್ನೊಬ್ಬನು ಇದಲ್ಲ, ಪ್ರಾಣವೇ ಆತ್ಮನೆಂದು ಅವನನ್ನು ಗದರಿಸಿದನು. ಹೀಗೆ ಭಿನ್ನಾಭಿಪ್ರಾಯಗಳಿಂದ ಸಭೆಯಲ್ಲಿ ಎಲ್ಲಿ ನೋಡಿದರೂ ಚರ್ಚೆಗಳೇ ನಡೆಯುತ್ತಲಿದ್ದುವು. ಹೀಗೆ ಸಭಿಕರು ವಾದಿಸುತ್ತಿರುವಲ್ಲಿ ಗುರುಕೃಪಾಪಾತ್ರನಾದ ಬ್ರಹ್ಮಜ್ಞಾನಿಯೊಬ್ಬನು ಅವರನ್ನೆಲ್ಲಾ ವಾದದಲ್ಲಿ ಗೆದ್ದು ನಾನೇ ಬ್ರಹ್ಮನೆಂಬ ಸಿದ್ಧಾಂತವನ್ನು ಸ್ಥಾಪಿಸಿದನು. ಆಗಲಾ ಮುಕ್ತಿಕಾಂತೆಯು ಇವನೇ ನನಗೆ ತಕ್ಕ ವರನೆಂದು ನಿಶ್ಚಯಿಸಿ ತನ್ನ ಜತೆಯಲ್ಲಿದ್ದ ಸಖಿಗೆ ತೋರಿಸಿ, ಕೈಯಲ್ಲಿದ್ದ ವರಣಮಾಲಿಕೆಯನ್ನು ಅವನ ಕೊರಳಲ್ಲಿ ಹಾಕಿದಳು. ಕೂಡಲೇ ಸಮಸ್ತ ಮಂಗಳವಾದ್ಯಗಳೂ ಭೋರ್ಗರೆದುವು. ವಿಧಿವತ್ತಾಗಿ ಅವರಿಬ್ಬರಿಗೂ ವಿವಾಹಮಹೋತ್ಸವವು ಬೆಳೆಯಿತು. ತರುವಾಯ ವಸಂತೋತ್ಸವ ಮುಂತಾದ ಕ್ರೀಡಾ ವಿನೋದಗಳೆಲ್ಲಾ ನಡೆದುವು. ಒಂದು ಶುಭದಿನದ ರಾತ್ರಿ ಮಂಗಳಲಗ್ನದಲ್ಲಿ ಅವರಿಗೆ ನಿಷೇಕೋತ್ಸವವು ನಿರ್ಣಯಿಸಲ್ಪಟ್ಟಿತು. ಸದ್ಗುರುವರನ ಆಜ್ಞೆಯಿಂದ ಚಿಚ್ಛಕ್ತಿ ಮೊದಲಾದ ಕಾಂತೆಯರು ಶೋಭನದ್ರವ್ಯಗಳನ್ನು ತಂದಿರಿಸಿದರು. ಆ ದಂಪತಿಗಳಿಂದ ದೇಹಾರ್ಥಪ್ರಾಣಗಳೆಂಬ ಫಲಗಳನ್ನು ಗುರುವಿಗೆ ದಾನಮಾಡಿಸಿ, ಆ ವಧೂವರರಿಬ್ಬರನ್ನು ಶಯ್ಯಾಗೃಹಕ್ಕೆ ಕರೆದೊಯ್ದು ಹಂಸತೂಲಿಕಾತಲ್ಪದಲ್ಲಿ ಕುಳ್ಳಿರಿಸಿ, ಶೋಭಾನಗಳನ್ನು ಹಾಡುತ್ತಾ ಅವರನ್ನಲ್ಲಿಬಿಟ್ಟು, ಗುರುಸನ್ನಿಧಾನಕ್ಕೆ ಬಂದು ಇಷ್ಟಕಥಾಲಾಪಗಳಲ್ಲಿ ಹೊತ್ತು ಕಳೆಯುತ್ತಿದ್ದರು.

ಅತ್ತಲಾ ಮುಕ್ತಿವಧೂವರರು ವೇದಾಂತಾರ್ಥಕಳಾಯೋಗಕುಶಲರಾಗಿದ್ದರೂ ನೂತನ ಸಂಗಮವಾದುದರಿಂದಲೂ, ಮುಕ್ತಿಕಾಂತೆಯು ಮುಗ್ಧೆಯಾಗಿಯೂ, ಪತಿಯು ಯೋಗೀಶ್ವರನಾಗಿಯೂ ಇದ್ದುದರಿಂದಲೂ, ಲೋಕಪದ್ಧತಿಗಳನ್ನು ಸಾರವಾಗಿ ಗ್ರಾಮ್ಯಧರ್ಮ ಸುಖವನ್ನನುಭವಿಸುತ್ತಿದ್ದರೂ, ಆತ್ಮಾರಾಮ ಧ್ಯಾನದಿಂದ ವಿನೋದವಾಗಿ ಹೊತ್ತು ಕಳೆಯುತ್ತಿದ್ದರು. ತರುವಾಯ ಆ ದಂಪತಿಗಳು ಸಂತುಷ್ಟಾಂತರಂಗರಾಗಿ, ಎದ್ದು ವಸ್ತ್ರಾಭರಣಾದಿಗಳಿಂದ ಅಲಂಕೃತರಾಗಿ ಆರೂಢ ಜ್ಞಾನಸನ್ಮಾರ್ಗಗಳಲ್ಲಿ ನಡೆಯುತ್ತಾ ನಿತ್ಯಮಹೋತ್ಸವಗಳನ್ನು ಆಚರಿಸುತ್ತಾ ಸದ್ಗುರು ವಾಕ್ಯಾರ್ಥವೆಂಬ ರಾಜ್ಯಪರಿಪಾಲನೆಯನ್ನು ಮಾಡಿಕೊಂಡು ಸುಖದಿಂದಿದ್ದರು.



ಎಂದು ಹೇಳಲು ಧರ್ಮರಾಯನು ಅತ್ಯಾನಂದದಿಂದ ಆ ವೇದವ್ಯಾಸಮುನೀಂದ್ರನಿಗೆ ನಮಸ್ಕರಿಸಿ "ಸ್ವಾಮಿ! ತಮ್ಮ ಅನುಗ್ರಹದಿಂದ ನನ್ನ ಮನಸ್ಸಿನ ಸಂಶಯಗಳು ದೂರವಾಗಿ ಕೃತಾರ್ಥನಾದೆನು" ಎಂದು ಹೇಳಿ ಅವರನ್ನು ಉಪಚರಿಸಿ ಕಳುಹಿಸಿಕೊಟ್ಟನು.

ಎಲೌ ಪಾರ್ವತಿಯೇ! ಈ ರಾಮತತ್ವಾಮೃತವನ್ನು ನಿನಗೋಸ್ಕರವಾಗಿ ಹೇಳಿದೆನು. ಇದನ್ನು ಓದಿ ಕೇಳುವ ಸಜ್ಜನರು ಶ್ರೀತಾರಕನಾಮನಾದ ರಾಮಚಂದ್ರನಲ್ಲಿ ಭಕ್ತಿಯುಳ್ಳವರಾಗಿ, ಸನ್ಮಾರ್ಗದಲ್ಲಿ ನಡೆದು, ಮುಕ್ತಿರಾಜ್ಯವನ್ನು ಪಡೆಯುವರೆಂದು ನಿರೂಪಿಸಿದ ಪರಮೇಶ್ವರನನ್ನು ನೋಡಿ, ಗೌರೀದೇವಿಯು "ಎಲೈ ಪ್ರಾಣವಲ್ಲಭನೇ! ವೇದಾಂತಸಾರವಾದ ಈ ರಹಸ್ಯವನ್ನು ತಮ್ಮ ಮುಖದಿಂದ ಕೇಳಿ ಧನ್ಯಳಾದೆನು." ಎಂದು ಹೇಳಿ, ಆ ಸ್ವಾಮಿಗೆ ಕೈಮುಗಿದು ಆತ್ಮಾರಾಮನ ಧ್ಯಾನದಲ್ಲಿ ನಿರತಳಾಗಿದ್ದಳು.

೧. ವೇದಾಂತಮಹಾವಾಕ್ಯರತ್ನಾವಳಿ

೧ ಪ್ರಜ್ಞಾನಂಬ್ರಹ್ಮ (ಸರ್ವತ್ರ ಅನುಸ್ಯೂತವಾದ ಬ್ರಹ್ಮಸ್ವರೂಪವೇ ನನ್ನಲ್ಲಿರುವ ಪ್ರಜ್ಞಾನವೆಂಬ ಬ್ರಹ್ಮಸ್ವರೂಪವು. ಚೈತನ್ಯವು, ಪ್ರಜ್ಞಾನವು, ಬ್ರಹ್ಮನು, ಆತ್ಮನು ಈ ಹೆಸರುಗಳಲ್ಲಿ ಭೇದವಿದ್ದರೂ ವಸ್ತುವು ಒಂದೇ ಎಂದು ತಿಳಿಯತಕ್ಕದ್ದು.)

೨ ಅಹಂಬ್ರಹ್ಮಾಸ್ಮಿ (ನಾನೇ ಬ್ರಹ್ಮನಾಗಿದ್ದೇನೆ.)

೩ ತತ್ತ್ವಮಸಿ (ಸೃಷ್ಟಿಗೆ ಪೂರ್ವದಲ್ಲಿ ನಾಮರೂಪರಹಿತವಾಗಿ ಚಿದ್ರೂಪವಾದ ಯಾವ ಆತ್ಮವಿದ್ದಿತೋ ಆ ಆತ್ಮಕ್ಕೆ ತತ್ ಎಂದು ಹೆಸರು. ದೇಹೇಂದ್ರಿಯಾದಿಗಳಿಗೆ ಅತೀತವಾಗಿ ಸಾಕ್ಷಿಭೂತವಾದ ಚೈತನ್ಯವು "ತ್ವಂ" ಪದದಿಂದ ಹೇಳಲ್ಪಡುವುದು. ತತ್ಪದ ಲಕ್ಷ್ಯಾರ್ಥವಾದ ಚೈತನ್ಯವು ನೀನೇ, ತ್ವಂಪದ ಲಕ್ಷ್ಯಾರ್ಥವಾದ ವಸ್ತುವೂ ನೀನೇ ಆಗಿದ್ದೀಯೆ ಎಂಬುದು 'ಅಸಿ' ಪದದಿಂದ ಬೋಧವಾಗುವುದು.)

೪ ಅಯಮಾತ್ಮಾಬ್ರಹ್ಮ (ಈ ಆತ್ಮನೇ ಬ್ರಹ್ಮನು.)

೨. ಉಪದೇಶವಾಕ್ಯಗಳು.

೧ ಸಯಏಷೋಣಿಮೈತದಾತ್ಮ್ಯಮಿದಂ ಸರ್ವಂತತ್ಸತ್ಯಂಸ ಆತ್ಮಾ ತತ್ವಮಸಿಶ್ವೇತಕೇತೋ (ಆ ಈ ಆತ್ಮಸ್ವರೂಪನು, ಈ ಸರ್ವರೂಪವೂ ನಿನ್ನ ಆತ್ಮಸ್ವರೂಪವು, ಅದು ಸತ್ಯವು, ಅವನೇ ಆತ್ಮನು, ಎಲೈ ಶ್ವೇತಕೇತುವೇ.)

೨ ಅಭಯಂವೈಜನಕಪ್ರಾಪ್ತೋಸಿ (ಎಲೈ ಜನಕರಾಯನೇ, ಅಭಯಸ್ವರೂಪವಾದ ಬ್ರಹ್ಮನನ್ನು ನೀನು ಹೊಂದಿದವನಾದೆ.)

೩ ಬ್ರಹ್ಮಚರ್ಯಮಹಿಂಸಾಂಚಾಪರಿಗ್ರಹಂಚ ಸತ್ಯಂಚಯತ್ನೇನ ಹೇರಕ್ಷಿತೋ ಹೇರಕ್ಷಿತೋ ಇತಿ ಇವು(ಸದ್ಗುಣಗಳು)

೪ ತತ್ವಮಸಿತ್ವಂತದಸಿ (ಅದೇ ನೀನು ಮತ್ತು ನೀನೇ ಅದು)

೫ ಯನ್ಮನಸಾನಮನುತೇ ಯೇನಾಹುರ್ಮನೋಮತಂ ॥

ಯಾವುದು ಮನಸ್ಸಿನಿಂದ ತಿಳಿಯಲ್ಪಡುವುದಿಲ್ಲವೋ, ಏತರಿಂದ ಮನಸ್ಸು ತಿಳಿಯಲ್ಪಡುವುದೆಂದು ಹೇಳುವರೋ.

೬ ತದೇವಬ್ರಹ್ಮ ತ್ವಂವಿದ್ಧಿ, ನೇದಂಯದಿದಮುಪಾಸತೇ ॥
ಅದೇ ಬ್ರಹ್ಮವೆಂದು ನೀನು ತಿಳಿ. ಯಾವುದು ಉಪಾಸಿಸಲ್ಪಡುವುದೋ ಅದು ಇದಲ್ಲ.

೭ ಯಃಪರಂಬ್ರಹ್ಮಸರ್ವಾತ್ಮಾ ವಿಶ್ವಸ್ಯಾಯತನಂಮಹತ್ ॥
ಯಾವುದು ಪರಬ್ರಹ್ಮವೋ ಅದು ಸಕಲಕ್ಕೂ ಆತ್ಮಸ್ವರೂಪವು. ಪ್ರಪಂಚಕ್ಕೆ ದೊಡ್ಡ ಆಶ್ರಯಭೂತವಾದದ್ದು.

೮ ಸೂಕ್ಷ್ಮಾತ್ಸೂಕ್ಷ್ಮತರಂನಿತ್ಯಂ ತತ್ತ್ವಮೇವತ್ವಮೇವತತ್ ॥
ಯಾವುದು ಸೂಕ್ಷ್ಮವಾದುದಕ್ಕಿಂತ ಅತಿ ಸೂಕ್ಷ್ಮವಾದುದೋ ನಿತ್ಯಸ್ವರೂಪವಾದ ಆ ವಸ್ತುವೇ ನೀನು, ನೀನೇ ಅದು.

೯ ಅಂತಃಪೂರ್ಣೋಬಹಿಃಪೂರ್ಣಃ ಪೂರ್ಣಕುಂಭಇವಾರ್ಣವೇ ॥
ಸಮುದ್ರದಲ್ಲಿ ತುಂಬಿದ ಕೊಡದಂತೆ ಒಳಗೂ ಹೊರಗೂ ಪೂರ್ಣವಾಗಿರುವವನು.

೧೦ ಅಂತಶ್ಶೂನ್ಯೋಬಹಿಶ್ಶೂನ್ಯಃ ಶೂನ್ಯಕುಂಭಇವಾಂಬರೇ ॥
ಆಕಾಶದಲ್ಲಿ ಶೂನ್ಯವಾದ ಘಟವಿರುವಹಾಗೆ ಒಳಗೂ ಹೊರಗೂ ಕೂಡ ಶೂನ್ಯವಾಗಿರುವವನು.

೧೧ ಮಾಭವಗ್ರಾಹ್ಯಭಾವಾತ್ಮಾ ಗ್ರಾಹಕಾತ್ಮಾಚಮಾಭವ ॥
ಗ್ರಹಿಸಲ್ಪಡುವ ಪದಾರ್ಥಗಳ ಸ್ವರೂಪವೂ ಆಗಬೇಡ. ಗ್ರಹಿಸಲ್ಪಡುವ ಸ್ವರೂಪವೂ ಆಗಬೇಡ.

೧೨ ಭಾವನಾಮಖಿಲಾಂತ್ಯಕ್ತ್ವಾ ಯಚ್ಛಿಷ್ಟಂತನ್ಮಯೋಭವ ॥
ಸಮಸ್ತಭಾವವನ್ನೂ ಬಿಟ್ಟು ಯಾವುದು ಉಳಿಯುವುದೋ ತನ್ಮಯನಾಗು.

೧೩ ದ್ರಷ್ಟೃದರ್ಶನದೃಶ್ಯಾನಿ ತ್ಯಕ್ತ್ವಾವಾಸನಯಾಸಹ ॥
ನೋಡುವವನು, ನೋಡುವುದು, ನೋಡಲ್ಪಡುವುದು ಇವುಗಳ ವಾಸನೆಯೊಂದಿಗೆ ಬಿಟ್ಟು.

೧೪ ದರ್ಶನಂಪ್ರಥಮಾಭಾಸಂ ಆತ್ಮಾನಂಕೇವಲಂಭಜ ॥
ಪ್ರಥಮದರ್ಶನದಲ್ಲಿ ಪ್ರಕಾಶಿಸುವ ಕೇವಲಸ್ವರೂಪನಾದ ಆತ್ಮನನ್ನು ಭಜಿಸು.

೧೫ ಚಿತ್ತಾಕಾಶಂ ಚಿದಾಕಾಶಂ ಆಕಾಶಂಚ ತೃತೀಯಕಂ ॥
ಚಿತ್ತಾಕಾಶವೆಂದರೆ ಎಲ್ಲಾಕಡೆಯೂ ವ್ಯಾಪಿಸಿದ ಮನಸ್ಸಿನಲ್ಲಿ

ಯೂ ವ್ಯಾಪಿಸಿರುವುದು. ಚಿದಾಕಾಶವೆಂದರೆ ಹೃದಯದಲ್ಲಿ ಪ್ರತಿ ಫಲಿಸಿದ್ದು, ಮೂರನೆಯದು ಮಹಾಕಾಶವು.

೧೬ ದ್ವಾಭ್ಯಾಂಶೂನ್ಯತರಂ ವಿದ್ಧಿ ಚಿದಾಕಾಶಂಮಹಾಮುನೇ ॥
ಎಲೈ ಮಹರ್ಷಿಯೇ, ಚಿದಾಕಾಶವೆಂಬ ಚಿತ್ತಾಕಾಶವು, ಮಹಾ ಕಾಶವು ಇವೆರಡರಿಂದಲೂ ತುಂಬಿ ಶೂನ್ಯವಾದುದೆಂದು ತಿಳಿದುಕೊ.

೧೭ ಧ್ಯಾನತೋಹೃದಯಾಕಾಶೇ ಚಿತಿಚಿಚ್ಚಕ್ರಧಾರಯಾ ॥
ಹೃದಯದಲ್ಲಿ ಪ್ರತಿಫಲಿಸಿದ ಆಕಾಶದಲ್ಲಿ ಧ್ಯಾನದಿಂದಲೂ ಚಿತ್ತದಲ್ಲಿ ಚಿಚ್ಛಬ್ದಾರ್ಥವಾದ ಜ್ಞಾನವೆಂಬ ಚಕ್ರದ ಕೊನೆಯಿಂದಲೂ,

೧೮ ಮನೋಹರಯಸಿಶ್ಯಂಕಂ ತ್ವಾಂಪ್ರಬಧ್ನಂತಿನಾರಯಃ ॥
ಸಂದೇಹವಿಲ್ಲದಿರುವಂತೆ ಮನಸ್ಸನ್ನು ಕೊಲ್ಲು. ಬಳಿಕ ನಿನ್ನನ್ನು ಶತ್ರುಗಳು ಎಂದರೆ ಇಂದ್ರಿಯಗಳು ಬಂಧಿಸಲಾರವು.

೧೯ ಭೋಗ್ಯೈಕವಾಸನಾಂ ತ್ಯಕ್ತ್ವಾ ತ್ಯಜತ್ವಂಭೇದವಾಸನಾಂ ॥
ನೀನು ಭೋಗದಲ್ಲಿ ಮುಖ್ಯವಾದ ವಾಸನೆಯನ್ನು ಬಿಟ್ಟು ಭೇದ ವಾಸನೆಯನ್ನೂ ತ್ಯಜಿಸಿಬಿಡು.

೨೦ ಭಾವಾಭಾವೌತತಸ್ತ್ಯಕ್ತ್ವಾ ನಿರ್ವಿಕಲ್ಪಸ್ಥಿರೋಭವ ॥
ತರುವಾಯ ಭಾವಾಭಾವಗಳನ್ನು ಅಂದರೆ ಇರುವುವುಗಳನ್ನೂ ಇಲ್ಲದುವುಗಳನ್ನೂ ಬಿಟ್ಟುಬಿಟ್ಟು ಸ್ಥಿರವಾದ ನಿರ್ವಿಕಲ್ಪನಾಗು.

೨೧ ತ್ಯಜಧರ್ಮಮಧರ್ಮಂಚಉಭೇಸತ್ಯಾನೃತೇತ್ಯಜ ॥
ಧರ್ಮಾಧರ್ಮಗಳನ್ನು ಬಿಟ್ಟುಬಿಡು. ಹಾಗೆಯೇ ಸತ್ಯಾಸತ್ಯಗಳೆ ರಡನ್ನು ಬಿಟ್ಟುಬಿಡು.

೨೨ ಉಭೇಸತ್ಯಾನೃತೇತ್ಯಕ್ತ್ವಾಯೇನತ್ಯಜಸಿತತ್ತ್ಯಜ ॥
ಸತ್ಯಾಸತ್ಯಗಳೆರಡನ್ನೂ ಬಿಟ್ಟು, ಯಾವ ಮನಸ್ಸಿನಿಂದ ಇವೆರಡ ನ್ನೂ ಬಿಡುತ್ತಿರುವೆಯೋ ಆ ಮನಸ್ಸನ್ನೂ ಬಿಟ್ಟುಬಿಡು.

೨೩ ಆತ್ಮನ್ಯತೀತೇಸರ್ವಸ್ಮಾತ್ಸರ್ವರೂಪೇಥವಾತತೇ ॥
ಎಲ್ಲಕ್ಕಿಂತ ಅತಿಶಯವಾದುದಾಗಿಯೂ ಸಕಲ ಸ್ವರೂಪವಾಗಿಯೂ ಸರ್ವ ವ್ಯಾಪಕವಾಗಿಯೂ ಇರುವ ಆತ್ಮನಲ್ಲಿ,

೨೪ ಕೋ ಬಂಧಃ ಕಸ್ಯವಾಮೋಕ್ಷಃ ನಿರ್ಮೂಲಂ ಮಾನಸಂಕುರು ॥
ಯಾವುದು ಬಂಧವೋ ಯಾವುದು ಮೋಕ್ಷವೋ ಅಂತಹ ಮ ನೋವ್ಯಾಪಾರವನ್ನು ನಿರ್ಮೂಲವಮಾಡು.

೩೫ ಆಶಾಯಾತುನಿರಾಶತ್ವಂ ಅಭಾವಂಯಾತುಭಾವನಾಂ॥
ಆಶೆಯನ್ನು ನಿರಾಶೆಗೊಳಿಸು. ಭಾವನೆಯನ್ನು ಅಭಾವಗೊಳಿಸು.

೩೬ ಅಮನಸ್ತ್ವಂಮನೋಯಾತು ತವಾಸಂಗೇನಜೀವತಃ॥
ಅಸಂಗದಿಂದ ಜೀವಿಸುವ ನಿನ್ನಮನಸ್ಸು ಇಲ್ಲದೆಇರುವುದನ್ನು ಹೊಂದಲಿ.

೩೭ ಏಕಮಾದ್ಯಂತರಹಿತಂ ಚಿನ್ಮಾತ್ರಮಮಲಂತತಃ ॥
ಒಂದೇ ಆಗಿಯೂ ಆದ್ಯಂತಗಳಿಲ್ಲದುದಾಗಿಯೂ ಚಿನ್ಮಾತ್ರವಾಗಿಯೂ ನಿರ್ಮಲವಾಗಿಯೂ, ವ್ಯಾಪಿಸಿದುದಾಗಿಯೂ ಇರುವ,

೩೮ ಖಾದಪ್ಯತಿತರಾಂ ಸೂಕ್ಷ್ಮಂ ತದ್ಬ್ರಹ್ಮಾಸಿನಸಂಶಯಃ ॥
ಆಕಾಶಕ್ಕಿಂತಲೂ ಬಹು ಸೂಕ್ಷ್ಮವಾದ ಆ ಬ್ರಹ್ಮನಾದೆ. ಸಂಶಯವಿಲ್ಲ.

೩೯ ರಕ್ಷಕೋ ವಿಷ್ಣುರಿತ್ಯಾದಿ ಬ್ರಹ್ಮಸೃಷ್ಟೇಸ್ತುಕಾರಣಂ ॥
ರಕ್ಷಿಸುವವನು ವಿಷ್ಣುವು ಇದೇ ಮೊದಲಾದುದು.ಸೃಷ್ಟಿಗೆ ಕಾರಣವು ಬ್ರಹ್ಮನು.

೪೦ ಸಂಹಾರೇ ರುದ್ರ ಇತ್ಯೇವಂ ಸರ್ವಂ ಮಿಥ್ಯೇತಿನಿಶ್ಚಿನು ॥
ಸಂಹಾರದಲ್ಲಿ ರುದ್ರನೆಂದು ಹೇಳುವುದು ಮಿಥ್ಯೆಯೆಂದುನಿಶ್ಚಯಿಸು

೪೧ ಮತ್ತ್ಯಕ್ತಂ ನಾಸ್ತಿ ಕಿಂಚಿತ್ವಮತ್ತ್ಯಕ್ತಂಪೃಥಿವೀಚನ ॥
ನನ್ನಿಂದ ಬಿಡಲ್ಪಟ್ಟುದು ಸ್ವಲ್ಪವಾದರೂ ಇಲ್ಲ. ನನ್ನಿಂದ ಬಿಡಲ್ಪಟ್ಟುದು ಭೂಮಿಯಲ್ಲಿಯೇ ಇಲ್ಲ.

೪೨ ಮಯಾತಿರಿಕ್ತಂ ಯತ್ತದ್ವಾತತ್ತನ್ನಾಸ್ತೀತಿನಿಶ್ಚಿನು ॥
ನನ್ನಿಂದ ಅತಿಕ್ರಮಿಸಲ್ಪಟ್ಟದ್ದು ಯಾವುದಾವುದೋ ಅದದೂ, ಇಲ್ಲವೆಂದು ನಿಶ್ಚಯಿಸು.

೪೩ ಅನಾತ್ಮೇತಿ ಪ್ರಸಂಗೋವಾ ಅನಾತ್ಮೇತಿ ಮನೋಪಿವಾ ॥
೪೪ ಅನಾತ್ಮೇತಿ ಜಗದ್ವಾಪಿ ನಾಸ್ತ್ಯನಾತ್ಮೇತಿ ನಿಶ್ಚಿನು ॥
ಅನಾತ್ಮವೆಂಬ ಪ್ರಸಂಗವಾದರೂ, ಅನಾತ್ಮ ಎಂದು ಮನಸ್ಸಾದರೂ ಅನಾತ್ಮನು ಈ ಜಗತ್ತೆಂತಲಾದರೂ, ಅನಾತ್ಮವು ಇಲ್ಲವೆಂತಲಾದರೂ ನಿಶ್ಚಯಿಸು.

೪೫ ಆದಿಮಧ್ಯಾನಸಾನೇಷು ದುಃಖಂ ಸರ್ವಮಿದಂಯತಃ ॥
ಆದಿ, ಮಧ್ಯ,ಕೊನೆ ಇವುಗಳಲ್ಲಿ ಏತರಿಂದ ಸರ್ವತ್ರ ದುಃಖವುಂಟೂ

ಗುತ್ತಿರುವುದೋ ?

೩೬ ತಸ್ಮಾತ್ಸರ್ವಂ ಪರಿತ್ಯಜ್ಯ ತತ್ವನಿಷ್ಠೋ ಭವಾನಘ ॥
ಎಲೈ ಪಾಪರಹಿತನೇ, ಆ ಕಾರಣದಿಂದ ಅವುಗಳನ್ನೆಲ್ಲಾ ಬಿಟ್ಟು ನೀನು ತತ್ವನಿಷ್ಠನಾಗು.

೩೭ ನಿದ್ರಾಯಾ ಲೋಕವಾರ್ತಾಯ ಶಬ್ದಾದೇರಾತ್ಮವಿಸ್ಮೃತೇಃ ॥
ತನ್ನನ್ನು ಮರೆಯಿಸುವ ನಿದ್ರೆಗೂ ಲೋಕವಾರ್ತೆಗಳಿಗೂ ಶಬ್ದ ಮೊದಲಾದುವುಗಳಿಗೂ,

೩೮ ಕ್ವಚಿನ್ನಾವಸರಂ ದತ್ವಾಚಿಂತಯಾತ್ಮಾನಮಾತ್ಮನಿ ॥
ಸ್ವಲ್ಪವೂ ಅವಕಾಶಕೊಡದೆ ನಿನ್ನಲ್ಲಿ ನಿನ್ನನ್ನೇ ಚಿಂತಿಸು.

೩೯ ಸರ್ವವ್ಯಾಪಾರ ಮುತ್ಸೃಜ್ಯ ಅಹಂಬ್ರಹ್ಮೇತಿ ಭಾವಯ ॥
ಸಕಲ ವ್ಯಾಪಾರಗಳನ್ನು ಬಿಟ್ಟುಬಿಟ್ಟು ನಾನು ಬ್ರಹ್ಮನೆಂದು ಭಾವಿಸು.

೪೦ ಅಹಂಬ್ರಹ್ಮೇತಿ ನಿಶ್ಚಿತ್ಯತ್ವಹಂಭಾವಂ ಪರಿತ್ಯಜ ॥
ನಾನು ಬ್ರಹ್ಮನೆಂದು ನಿಶ್ಚಯಿಸಿ, ಅಹಂಭಾವವನ್ನು ಬಿಡು.

೪೧ ಘಟಾಕಾಶಂ ಮಹಾಕಾಶ ಇವಾತ್ಮಾನಂ ಪರಾತ್ಮನಿ ॥
ಮಹಾಕಾಶದಲ್ಲಿ ಘಟಾಕಾಶವನ್ನು ಲಯಿಸುವಂತೆಯೇ ಪರಮಾತ್ಮನಲ್ಲಿ ನಿನ್ನನ್ನು,

೪೨ ವಿಲಾಪ್ಯಾಖಂಡಭಾವೇನ ತೂಷ್ಣೀಂ ಭವಸದಾಮುನೇ ॥
ಲಯಗೊಳಿಸಿ ಸದಾ ಅಖಂಡಭಾವದಿಂದ ಸುಮ್ಮನೆ ಇರು. ಎಲೈ ಮುನಿಯೇ.

೪೩ ಚಿದಿಹಾಸ್ತೀತಿ ಚಿನ್ಮಾತ್ರಂ ಇದಂ ಚಿನ್ಮಯಮೇವಚ ॥
ಎಲ್ಲಿ ಚಿತ್ತವು ಇರುವುದೋ ಅದು ಚಿನ್ಮಾತ್ರವು ಮತ್ತು ಚಿನ್ಮಯವು.

೪೪ ಚಿತ್ತ್ವಂ ಚಿದಹಮೇತೇಚಲೋಕಾಶ್ಚಿದಿತಿಭಾವಯ ॥
ನೀನೂ ಚಿತ್ತು. ನಾನೂ ಚಿತ್ತು, ಈ ಲೋಕವೂ ಚಿತ್ತು ಎಂದು ಭಾವಿಸು.

೪೫ ಸತ್ಯಚಿದ್ಘನಮಖಂಡಮದ್ವಯಂ ಸರ್ವದೃಶ್ಯರಹಿತಂ ನಿರಾಮಯಂ॥
ಕಾಲತ್ರಯಗಳಿಂದ ಅಬಾಧವಾಗಿ, ದಟ್ಟವಾದ ಜ್ಞಾನಸ್ವರೂಪವು ಪರಿಪೂರ್ಣವೂ ಅದ್ವಿತೀಯವೂ ಆಗಿದೆ, ಸಕಲ ದೃಶ್ಯ ವಿರಹಿತ

ವಾದ ಮಾಯಾ ರೂಪವಾಗಿಯೂ ರಾಗವಿಲ್ಲದ್ದಾಗಿಯೂ ಇದೆ.

೪೬ ಯತ್ಪರಂವಿಮಲಮದ್ವಯಂಶಿವಂ। ತತ್ಸದಾಹಮಿತಿಮೌನಮಾಶ್ರಯ॥
ಕರ್ತೃತ್ವಾದಿ ಮಲರಹಿತವು, ಭೇದರಹಿತವು, ಸರ್ವೋತ್ತಮವು, ಹೊಂದತಕ್ಕದ್ದು ನಾನೇ ಎಂದು ಮೌನವನ್ನು ಆಶ್ರಯಿಸು.

೪೭ ಜನ್ಮಮೃತ್ಯುಸುಖದುಃಖವರ್ಜಿತಂ।ಜಾತಿನೀತಿಕುಲಗೋತ್ರವಿದೂರಂ॥
ಹುಟ್ಟು, ಸಾವು, ಸುಖ ದುಃಖ ಇವುಗಳಿಲ್ಲದ್ದಾಗಿಯೂ, ಬ್ರಾಹ್ಮಣಾದಿಜಾತಿಯೂ, ಶಾಸ್ತ್ರಗಳಲ್ಲಿ ಆಯಾ ವರ್ಣಾಶ್ರಮಗಳನ್ನು ಕುರಿತು ಹೇಳಲ್ಪಟ್ಟ ಹೆಸರೂ, ಕುಲವೂ, ಗೋತ್ರವೂ ಇವುಗಳಿಗೆ ದೂರವಾದದ್ದು.

೪೮ ಚಿದ್ವಿವರ್ತಜಗತೋಽಸ್ಯಕಾರಣಂ ತತ್ಸದಾಹಮಿತಿಮೌನಮಾಶ್ರಯ ॥
ಚಿದ್ವಿಕಾರವಾದ ಈ ಜಗತ್ತಿಗೆ ಕಾರಣವಾವುದೋ, ಎಂದಿಗೂ ಅದು ನಾನೇ ಎಂದು ತಿಳಿದು ಮೌನವನ್ನಾಶ್ರಯಿಸು.

೪೯ ಪೂರ್ಣಮದ್ವಯಮಖಂಡಚೇತನಂ। ವಿಶ್ವಭೇದಕಲನಾದಿವರ್ಜಿತಂ॥
ಪೂರ್ಣವು, ಅದ್ವಯವು, ಅಖಂಡವು, ಚೇತನಾಸ್ವರೂಪವು, ಪ್ರಪಂಚದಭೇದಗಳನ್ನು ಮಾಡುವುದು ಮೊದಲಾದವುಗಳಿಂದ ವಿವರ್ಜಿತವಾದದ್ದು.

೫೦ ಅದ್ವಿತೀಯಮ ಪರಂಚಿದಂಶಕಂ ತತ್ಸದಾಹಮಿತಿಮೌನಮಾಶ್ರಯ॥
ಅದ್ವಿತೀಯವಾಗಿ ಉತ್ಕೃಷ್ಟವಾದ ಜ್ಞಾನಾಂಶವು ಯಾವುದೋ ಆಗ್ಗೆ ಅದು ನಾನೇ ಎಂದು ಮೌನಶಬ್ದಾರ್ಥವಾದ ನಿಜರೂಪವನ್ನು ಆಶ್ರಯಿಸು.

೫೧ ಸ್ವಾತ್ಮನೋಽನ್ಯತಯಾಭಾತಂ ಚರಾಚರಮಿದಂ ಜಗತ್ ॥
ತನಗಿಂತಲೂ ಬೇರೆಯಾಗಿ ಪ್ರಕಾಶಿಸುವ ಚರಾಚರ ರೂಪವಾದ ಆ ಜಗತ್ತು,

೫೨ ಸ್ವಾತ್ತಮಾತ್ರತಯಾ ಬುಧ್ವಾತದಸ್ಮೀತಿವಿಭಾವಯ ॥
ತಾನು ಮಾತ್ರವೆಂದು ತಿಳಿದು, ಅದೇ ನಾನಾದೆನೆಂದು ವಿಶೇಷವಾಗಿ ಭಾವಿಸು.

೫೩ ವಿಲಾಪ್ಯವಿಕೃತೀಃಕೃತ್ಸ್ನಾಃ ಸಂಭವವ್ಯತ್ಯಯಕ್ರಮಾತ್ ॥
ಹುಟ್ಟುವಿಕೆಗೆ ವ್ಯತ್ಯಯವಾದ ಕ್ರಮದಿಂದ ಸಕಲ ವಿಕಾರಗಳನ್ನು ಲಯಗೊಳಿಸಿ,

೫೪ ಪರಿಶಿಷ್ಟಂಚ ಚಿನ್ಮಾತ್ರಂ ಚಿದಾನಂದಂವಿಚಿಂತಯ ॥

ಮಿಕ್ಕಿರುವಚಿನ್ಮಾತ್ರ ಚಿದಾನಂದವನ್ನು ವಿಶೇಷವಾಗಿ ಚಿಂತಿಸು.

ಸಾರ್ಧಾಂತಿಕಸಮಾಧಿವಾಕ್ಯಗಳು.

೧ ಜೀವಾತ್ಮಪರಮಾತ್ಮೈಕ್ಯಾವಸ್ಥಾ ತ್ರಿಪುಟರಹಿತಾಪರಮಾನಂದ ಸ್ವರೂಪಂ ಶುದ್ಧಚೈತನ್ಯಾತ್ಮಿಕಾಸಮಾಧಿಃ ॥

ಜೀವಾತ್ಮ ಪರಮಾತ್ಮಗಳಿಗೆ ಐಕ್ಯವಾದ ಅವಸ್ಥಾ ವಿಶೇಷವು ತ್ರಿಪುಟ ಯೆಂದರೆ ನೋಡುವವನು, ನೋಡಲ್ಪಡುವ ವಸ್ತುವು, ನೋಡುವಿಕೆ ಇವುಗಳಿಲ್ಲದ, ಪರಮಾನಂದ ಸ್ವರೂಪವೂ ಶುದ್ಧಚೈತನ್ಯಸ್ವರೂಪವೂ ಸಮಾಧಿ ಯೆನಿಸುವುದು.

೨ ಧ್ಯಾತೃಧ್ಯಾನೇವಿಹಾಯ ನಿವಾತಸ್ಥಿತದೀಪವತ್ ಧ್ಯೇಯೈಕಗೋಚರಂಚಿತ್ತಂಸಮಾಧಿಃ ॥

ಧ್ಯಾನಿಸುವವನು, ಧ್ಯಾನವು ಇವೆರಡನ್ನೂ ಬಿಟ್ಟುಬಿಟ್ಟು ಗಾಳಿಯಿಲ್ಲದಕಡೆ ಇರುವ ದೀಪದಂತೆ ಮನಸ್ಸು ಧ್ಯಾನಮಾಡಲ್ಪಡುವ ವಸ್ತುವನ್ನು ಮುಖ್ಯವಾಗಿ ತಿಳಿದುಕೊಳ್ಳುವುದು ಸಮಾಧಿ.

೩ ನಮನಃಪ್ರಚಾರಶೂನ್ಯಂ ಪರಮಾತ್ಮಲೀನಂಭವತಿ ॥

ಮನಸ್ಸು ಸಂಚಾರವಿಲ್ಲದಿದ್ದರೆ ಪರಮಾತ್ಮನಲ್ಲಿ ಲೀನವಾಗುವುದು. ಅದೇ ಸಮಾಧಿ.

೪ ಪ್ರಾಪ್ತೇ ಜ್ಞಾನೇನ್ಯೈವ ವಿಜ್ಞಾನೇಜ್ಞೇಯೇ ಪರಮಾತ್ಮನಿಹೃದಿ ಸಂಸ್ಥಿತೇ । ದೇಹೇಲಬ್ಧಶಾಂತಿಪದಂಗತೇತದಾಪ್ರಭಾಮನೋಬುದ್ಧಿಶೂನ್ಯಂಭವತಿ ॥

ಜ್ಞಾನದಿಂದ ಅಜ್ಞಾನವು ಹೊಂದಲ್ಪಟ್ಟಿರುವಾಗ ತಿಳಿಯತಕ್ಕ ಪರಮಾತ್ಮನು ಹೃದಯದಲ್ಲಿರುವಾಗ ಅಹಂಕಾರ ಮನೋಬುದ್ಧಿಗಳು ಇಲ್ಲದೆ ಹೋಗುವುವು. ಅದೇ ಸಮಾಧಿಯೇನಿಸುವುದು.

೫ ಪ್ರಾಣಾಪಾನಯೋರೈಕ್ಯಂ ಕೃತ್ವಾಧೃತಕುಂಭಕೋನಾಸಾಗ್ರದರ್ಶನದೃಢಭಾವನಯಾದ್ವಿಕರಾಂಗುಳೀಭಿಃ ಷಣ್ಮುಖೀಪ್ರಕರಣೇನ ಪ್ರಣವಧ್ವನಿಂ ನಿಶಮ್ಯ ಮನಸ್ತತ್ರವಿಲೀನಂಭವತಿ ॥

ಪ್ರಾಣಾಪಾನಗಳನ್ನು ಐಕ್ಯವಾಗಿ ಮಾಡಿ ಕುಂಭಕಮಾಡಿ, ನಾಸಾಗ್ರವನ್ನು ನೋಡುತ್ತಾ ದೃಢಭಾವನೆಯಿಂದ ಎರಡು ಕೈಗಳ ಬೆರಳುಗಳಿಂದಲೂ ಷಣ್ಮುಖೀಯೆಂಬ ಮುದ್ರೆಯಿಂದಲೂ ಪ್ರಣವಧ್ವ

ನಿಯನ್ನು ಕೇಳಿ, ಮನಸ್ಸು ಅಲ್ಲಿಯೇ ಲೀನವಾಗುವುದು. ಅದೇ ಸಮಾಧಿ.

೬ ಪಯಸ್ಸ್ರಾವಾನುತರಂಧೇನುಸ್ತನ ಕ್ಷೀರಮಿವ ಸರ್ವೇಂದ್ರಿಯ ವರ್ಗೇಪರಿನಷ್ಟೇಮನೋನಾಶೋಭವತಿ ॥

ಪಾಲು ಹಿಂಡಿಕೊಂಡಮೇಲೆ ಹಸುವಿನ ಮೊಲೆಗಳಲ್ಲಿ ಹಾಲಿನಹಾಗೆ ಸಕಲೇಂದ್ರಿಯ ಸಮೂಹವೂ ನಶಿಸಿ ಹೋಗಲು ಮನಸ್ಸೂ ನಾಶ ವಾಗಿ ಹೋಗುವುದು.

೭ ಯಥಾ ಪಂಚಾವತಿಷ್ಠಂತೇ ಜ್ಞಾನಾನಿಮನಸಾಸಹ ॥

ಯಾವಾಗ ಪಂಚೇಂದ್ರಿಯಗಳೂ ಮನಸ್ಸಿನೊಂದಿಗೆ ತಮ್ಮತಮ್ಮ ವಿಷಯಗಳಾದ ಶಬ್ದಾದಿಗಳನ್ನುಬಿಟ್ಟು ಸ್ವಸ್ವರೂಪದಲ್ಲಿರುವುವೋ,

೮ ಬುದ್ಧಿಶ್ಚನವಿಚೇಷ್ಟತಿ ತಾಮಾಹುಃ ಪರಮಾಂಗತಿಂ ॥

ಬುದ್ಧಿಯೂ ಚಲಿಸಲ್ಪಡದೆ ಇದ್ದರೆ ಅದೇ ಉತ್ತಮಗತಿಯೆಂದು ಹೇಳುವರು.

೯ ಸಶಾಂತಸರ್ವಸಂಕಲ್ಪಾ ಯಾಶಿಲಾವದವಸ್ಥಿತಿಃ ॥

ಚೆನ್ನಾಗಿ ಶಾಂತವಾದುದಾಗಿಯೂ, ಸಕಲ ಸಂಕಲ್ಪಗಳೂ ಉಳ್ಳದ್ದಾಗಿಯೂ ಶಿಲೆಯಂತೆ ಚಲನವಿಲ್ಲದ್ದಾಗಿಯೂ ಇರುವ ಸ್ಥಿತಿಯು ಯಾವುದೋ,

೧೦ ಜಾಗ್ರನ್ನಿದ್ರಾವಿನಿರ್ಮುಕ್ತಾ ಸಾಸ್ವರೂಪ ಸ್ಥಿತಿಃಪರಾ ॥

ಜಾಗತ್ಸ್ವಪ್ನ ಸುಷುಪ್ತಿಗಳೆಂಬ ಅವಸ್ಥೆಗಳಿಂದ ಬಿಡಲ್ಪಟ್ಟ ಆ ಸ್ಥಿತಿಯೇ ಮುಖ್ಯವಾದ ಸ್ವರೂಪಸ್ಥಿತಿಯು.

೧೧ ಮಾರುತೇ ಮಧ್ಯಸಂಚಾರೇ ಮನಸ್ಥೈರ್ಯಂ ಪ್ರಜಾಯತೇ ॥

ಪ್ರಾಣವಾಯುವು ಸುಷುಮ್ನಾ ಮಾರ್ಗದಲ್ಲಿ ಸಂಚರಿಸುತ್ತಿರುವಾಗ ಮನಸ್ಸಿಗೆ ಸ್ಥೈರ್ಯವುಂಟಾಗುತ್ತದೆ.

೧೨-೧೩ ಯೋಮನಸ್ಸುಸ್ಥಿರೀಭಾವಃ ಸೈವಾವಸ್ಥಾಮನೋನ್ಮನೀ ॥
ಸರೂಪೋಸೌಮನೋನಾಶೋಜೀವನ್ಮುಕ್ತಸ್ಯವಿದ್ಯತೇ ॥

ಯಾವುದು ಮನಸ್ಸಿನ ಸ್ಥಿರವಾದ ಭಾವವೋ ಆ ಅವಸ್ಥೆಯೇ ಮನೋನ್ಮನಿ ಯೆನ್ನಲ್ಪಡುವುದು. ಸರೂಪವಾದ ಈ ಮನೋನಾಶವು ಜೀವನ್ಮುಕ್ತನಿಗೆ ಮಾತ್ರವೇ ಉಂಟಾಗುವುದು.

೧೪ ನಿದಾಘಾರೋಪನಾಶಸ್ತು ವರ್ತತೇದೇಹಮುಕ್ತಕೇ ॥
ಎಲೈ ನಿದಾಘನೇ, ವಿರೂಪವಿಲಯವಾದರೂ ವಿದೇಹಮುಕ್ತಿಯಲ್ಲಿರುವುದು.

೧೫ ಚಿತ್ತೇಚೈತ್ಯದಶಾಹೀನೇ ಯಾಸ್ಥಿತಿಃಕ್ಷೀಣಚೇತಸಾಂ ॥
ಮನಸ್ಸು ಚೈತನ್ಯವಾದ ಪ್ರಪಂಚದಶೆಯಿಂದ ಹೀನವಾಗಿರುವಾಗ ಕ್ಷೀಣವಾದ ಮನಸ್ಸನ್ನುಳ್ಳವರಿಗೆ ಯಾವ ಸ್ಥಿತಿಯುಂಟಾಗುವುದೊ,

೧೬ ಸೋಚ್ಯತೇ ಶಾಂತಕಲನಾ ಜಾಗ್ರತ್ಯೇವ ಸುಷುಪ್ತತಾ ॥
ಆ ಸ್ಥಿತಿಸಂಕಲ್ಪವಿಲ್ಲದ ಜಾಗ್ರದವಸ್ಥೆಯಲ್ಲಿಯೇ ಸುಷುಪ್ತಿಯೆನ್ನಲ್ಪಡುವುದು.

೧೭ ನೈತಜ್ಜಾಗ್ರನ್ನಚಸ್ವಪ್ನ ಸಂಕಲ್ಪಾನಾಮಭಾವನಾತ್ ॥
ಇದು ಜಾಗ್ರತೆಯಲ್ಲ. ಸ್ವಪ್ನವೂ ಅಲ್ಲ. ಸಂಕಲ್ಪಗಳ ಭಾವನೆಯು ಇಲ್ಲದೆ ಹೋಗುವುದರಿಂದ—

೧೮ ಸುಷುಪ್ತಭಾವೋನಾಪ್ಯೇತದಭಾವಾಜ್ಜಡತಾಸ್ಥಿತೇ ॥
ಜಡತ್ವವಾದ ಸ್ಥಿತಿಯ ಅಭಾವದಿಂದ ಇದು ಸುಷುಪ್ತಭಾವವೂ ಅಲ್ಲ.

೧೯ ಸತ್ವಾವಬೋಧಪವಾಸೌ ವಾಸನಾತೃಣಪಾವಕಃ ॥
ಇದು ವಾಸನೆಗಳೆಂದ ತೃಣಗಳಿಗೆ ಅಗ್ನಿಯಂಥ ಸತ್ಯಜ್ಞಾನವು.

೨೦ ಪ್ರೋಕ್ತಸ್ಸಮಾಧಿಶಬ್ದೇನ ನತುತೂಷ್ಣೀಮವಸ್ಥಿತಿಃ ॥
ಸಮಾಧಿಯು ಶಬ್ದದಿಂದ ಹೇಳಲ್ಪಡುತ್ತದೆಯೇ ಹೊರತು ಸುಮ್ಮನೆ ಇರುವುದರಿಂದಲ್ಲವು.

೨೧ ನಿರ್ವಿಕಾರತಯಾವೃತ್ತ್ಯಾ ಬ್ರಹ್ಮಾಕಾರತಯಾಪುನಃ ॥
ನಿರ್ವಿಕಾರವೃತ್ತಿಯಿಂದಲಾದರೂ, ಬ್ರಹ್ಮಾಕಾರವೃತ್ತಿಯಿಂದಲಾದರೂ—

೨೨ ವೃತ್ತಿವಿಸ್ಮರಣಾಸಮ್ಯಕ್ ಸಮಾಧಿರಭಿಧೀಯತೇ ॥
ಚೆನ್ನಾಗಿ ಬಹಿರ್ವೃತ್ತಿಯ ವಿಸ್ಮೃತಿಯೇ ಸಮಾಧಿಯೆನ್ನಲ್ಪಡುವುದು.

೨೩ ದೃಶ್ಯಾಸಂಭವಬೋಧೇನ ರಾಗದ್ವೇಷಾದಿತಾನವೇ ॥
ದೃಗ್ರೂಪವಾದಬ್ರಹ್ಮಜ್ಞಾನದಿಂದ ರಾಗದ್ವೇಷಾದಿಗಳು ಕೃಶತ್ವವನ್ನು ಹೊಂದಿರಲು,

೨೪ ರೀತಿರ್ಬಲೋದಿತಾಯಾಸಾ ಸಮಾಧಿರಭಿಧೀಯತೇ ॥

ಬಲವಾಗಿ ಉದಿಸಿದಹಾಗೆಲ್ಲಾ ಸಮಾಧಿಯೆಂದು ಹೇಳಲ್ಪಡುವುದು.

೨೫ ಅಹಮೇವಪರಂಬ್ರಹ್ಮಾ ಬ್ರಹ್ಮಾಹಮಿತಿಸಂಸ್ಥಿತಃ ॥

ನಾನು ಪರಬ್ರಹ್ಮನು, ಬ್ರಹ್ಮನೇ ನಾನು ಎಂದು ತಿಳಿದುಕೊಳ್ಳುವುದೇ —

೨೬ ಸಮಾಧಿಸ್ಸತುವಿಜ್ಞೇಯಃ ಸರ್ವವೃತ್ತಿಸಿರೋಧಕಃ ॥

ಅದೇ ಸಕಲವೃತ್ತಿಗಳನ್ನೂ ಹೋಗಗೊಳಿಸುವ ಸಮಾಧಿಯೆಂದು ತಿಳಿಯತಕ್ಕದ್ದು.

೨೭ ಸಮಾಧಿಸ್ಸಂವಿದುತ್ಪತ್ತಿಃ ಪರಜೀವೈಕ್ಯತಾಂಪತಿಃ ॥

ಪರಮಾತ್ಮ ಜೀವಾತ್ಮಗಳ ಐಕ್ಯವನ್ನು ಕುರಿತ ಜ್ಞಾನೋತ್ಪತ್ತಿಯೇ ಸಮಾಧಿಯು.

೨೮ ಧ್ಯಾನಸ್ಯವಿಸ್ಮೃತಿಸ್ಸಮ್ಯಕ್ ಸಮಾಧಿರಭಿಧೀಯತೇ ॥

ಚೆನ್ನಾಗಿ ಧ್ಯಾನವನ್ನು ಮರೆಯುವುದೇ ಸಮಾಧಿಯೆನ್ನಲ್ಪಡುವುದು.

೨೯ ಸಮಾಹಿತಾನಿತ್ಯತೃಪ್ತಾ ಯಥಾಭೂತಾರ್ಥದರ್ಶನೀ ॥

ಸತ್ಕರ್ಮಗಳಿಂದ ಪರಿಶುದ್ಧವಾದ ಅಂತಃಕರಣದಲ್ಲಿ ನಿತ್ಯತೃಪ್ತಿಯಾಗಿ ಇರುವುದು ಮತ್ತು,

೩೦ ಬ್ರಹ್ಮಾಸಮಾಧಿಶಬ್ದೇನ ಪರಾಪ್ರಜ್ಞೋಚ್ಯತೇಬುಧೈಃ ॥

ಉತ್ಕೃಷ್ಟವಾದ ಜ್ಞಾನವು ಬ್ರಹ್ಮವೆಂದು ಮಹಾಪುರುಷರಿಂದಲೂ ಸಮಾಧಿಶಬ್ಧದಿಂದಲೂ ಹೇಳಲ್ಪಡುವುದು.

೩೧ ಅಕ್ಷೋಭಾನಿರಹಂಕಾರಂ ದ್ವಂದ್ವೇಚಾನನುಪಾತನಿ ॥

ಕ್ಷೋಭೆ ಪಡದೆ ಇರುವುದೂ, ಅಹಂಕಾರವಿಲ್ಲದ್ದೂ, ಸುಖದುಃಖಾದಿದ್ವಂದ್ವಗಳಲ್ಲಿ ಸೇರದ್ದೂ ಮತ್ತು.

೩೨ ಬ್ರಹ್ಮಸಮಾಧಿಶಬ್ದೇನ ಮೇರೋಃಸ್ಥಿರತರಾಸ್ಥಿತಿಃ ॥

ಮಹಾಮೇರುವಿಗಿಂತಲೂ ಸ್ಥಿರತರವಾದ ಸ್ಥಿತಿಯು ಬ್ರಹ್ಮಸಮಾಧಿಶಬ್ಧದಿಂದ ಹೇಳಲ್ಪಡುತ್ತದೆ.

೩೩ ನಿಶ್ಚಿತಾವಿಗತಾಭೀಷ್ಟಾ ಹೇಯೋಪಾದೇಯವರ್ಜಿತಾ ॥

ನಿಶ್ಚಯಿಸಲ್ಪಟ್ಟದ್ದಾಗಿಯೂ, ಹೋಗಗೊಳಿಸಲ್ಪಟ್ಟ ಇಷ್ಟಾನಿಷ್ಟಗಳು ಉಳ್ಳದ್ದಾಗಿಯೂ ಪರಿಹರಿಸಲ್ಪಡತಕ್ಕದ್ದು, ಗ್ರಹಿಸಲ್ಪಡತಕ್ಕದ್ದು ಎಂಬಿವು ಇಲ್ಲದ್ದಾಗಿಯೂ ಇರುವುದು.

೩೪ ಬ್ರಹ್ಮಣ್ಯ ಸಮಾಧಿಶಬ್ದೇನ ಪರಿಪೂರ್ಣಾಮನೋಗತಾ ॥
ಎಲ್ಲೈ ಬ್ರಹ್ಮನೇ ಪರಿಪೂರ್ಣವಾದ ಮನಸ್ಸಿನ ಗತಿಯು ಸಮಾಧಿ ಶಬ್ದದಿಂದ ಹೇಳಲ್ಪಡುತ್ತದೆ.

೩೫ ಸಲಿಲೇ ಸೈಂಧವಂ ಯದ್ವತ್ಸಾಮ್ಯಂ ಭಜತಿಯೋಗತಃ ॥
ನೀರಿನಲ್ಲಿ ಉಪ್ಪು ಹೇಗೆ ಸಂಯೋಗದಿಂದ ಸಮತ್ವವನ್ನು ಹೊಂದುತ್ತದೆಯೋ,

೩೬ ತದಾತ್ಮ ಮನಸೋರೈಕ್ಯಂ ಸಮಾಧಿರಭಿಧೀಯತೇ ॥
ಹಾಗೆಯೇ ಆತ್ಮಕ್ಕೂ ಮನಸ್ಸಿಗೂ ಉಂಟಾಗುವ ಐಕ್ಯವು ಸಮಾಧಿ ಯೆನ್ನಲ್ಪಡುವುದು.

೩೭ ಯತ್ಸಮತ್ವಂತಯೋರತ್ರ ಜೀವಾತ್ಮ ಪರಮಾತ್ಮನೋಃ ॥
ಎಲ್ಲಿ ಜೀವಾತ್ಮ ಪರಮಾತ್ಮರುಗಳಿಗೆ ಸಮತ್ವವಿರುವುದೋ,

೩೮ ಸಮಸ್ತ ನಷ್ಟ ಸಂಕಲ್ಪಃ ಸಮಾಧಿರಭಿಧೀಯತೇ ॥
ನಾಶವಾಗಿ ಮಾಡಲ್ಪಟ್ಟ ಸಕಲಸಂಕಲ್ಪಗಳೂ ಉಂಟಾದುದು ಯಾವುದೋ ಅದೇ ಸಮಾಧಿಯು,

೩೯ ಪ್ರಭಾಶೂನ್ಯಂ ಮನಶ್ಶೂನ್ಯಂ ಬುದ್ಧಿಶೂನ್ಯಂ ನಿರಾಮಯಂ ॥
ಅಹಂಕಾರವಿಲ್ಲದ್ದೂ, ಮನಸ್ಸಿಲ್ಲದ್ದೂ, ಬುದ್ಧಿಯಿಲ್ಲದ್ದೂ, ವಿಷಯ ವ್ಯಾಪಾರಗಳಿಲ್ಲದ್ದೂ,

೪೦ ಸರ್ವಶೂನ್ಯಂ ನಿರಾಭಾಸಂ ಸಮಾಧಿರಭಿಧೀಯತೇ ॥
ಸಕಲ ವೃತ್ತಿಗಳೂ ವಿಷಯವಾಸನೆಗಳೂ ಇಲ್ಲದ್ದು ಸಮಾಧಿಯೆನಿಸುವುದು.

೪೧ ಬ್ರಹ್ಮಾಕಾರ ಮನೋವೃತ್ತಿ ಪ್ರವಾಹೇಹಂಕೃತಿಂದಿನಾ ॥
ಅಹಂಕಾರವನ್ನು ಬಿಟ್ಟು ಬ್ರಹ್ಮಾಕಾರವಾದ ಮನೋವೃತ್ತಿಗಳ ಪ್ರವಾಹವು.

೪೨ ಸಂಪ್ರಜ್ಞಾತ ಸಮಾಧಿಸ್ಸ್ಯಾತ್ ಧ್ಯಾನಾಭ್ಯಾಸ ಪ್ರಕರ್ಷತಃ ॥
ಧ್ಯಾನದಲ್ಲಿ ಅಭ್ಯಾಸಾತಿಶಯದಿಂದ ಚೆನ್ನಾಗಿ ತಿಳಿಯಲ್ಪಟ್ಟ ಸಮಾಧಿಯಾಗುವುದು.

೪೩ ಪ್ರಶಾಂತವೃತ್ತಿಕಂ ಚಿತ್ತಂ ಪರಮಾನಂದ ದೀಪಕಂ ॥
ನಿಂತು ಹೋದ ವೃತ್ತಿಗಳುಳ್ಳದ್ದಾಗಿಯೂ, ಪರಮಾನಂದವನ್ನು ಪ್ರಕಾಶಗೊಳಿಸತಕ್ಕದ್ದಾಗಿಯೂ ಇರುವ ಮನಸ್ಸು,

೪೪ ಅಸಂಪ್ರಜ್ಞಾತ ನಾಮಾಯ ಸಮಾಧಿರ್ಯೋಗಿನಾಂಪ್ರಿಯಃ ॥
ಅಸಂಪ್ರಜ್ಞಾತವೆಂಬ ಹೆಸರುಳ್ಳದ್ದಾಗಿಯೂ, ಸಮಾಧಿ ಯೋಗಿಗಳಿಗೆ ಇಷ್ಟವಾದುದಾಗಿಯೂ,

೪೫ ಸ್ವಾನುಭೂತರಸಾವೇಶಾತ್ ದೃಶ್ಯಶಬ್ದಾವುಪೇಕ್ಷತಃ ॥
ಸ್ವಾನುಭವರೂಪವಾದ ರಸದಲ್ಲಿ ಮುಳುಗುವುದರಿಂದ ದೃಶ್ಯಪದಾರ್ಥಗಳನ್ನೂ ಬಹಿಶ್ಶಬ್ದಗಳನ್ನು ಉಪೇಕ್ಷಿಸಿದಂಥ ಪುರುಷನಿಗೆ,

೪೬ ನಿರ್ವಿಕಲ್ಪ ಸಮಾಧಿಸ್ಸ್ಯಾತ್ ನಿವಾತಸ್ಥಿತದೀಪವತ್ ॥
ಗಾಳಿಯಿಲ್ಲದ ಸ್ಥಳದಲ್ಲಿ ನಿಂತಿರುವ ದೀಪದಂತೆ ನಿರ್ವಿಕಲ್ಪ ಸಮಾಧಿಯಾಗುವುದು.

೪೭ ಪ್ರಭಾಶೂನ್ಯಂ ಮನಶ್ಶೂನ್ಯಂ ಬುದ್ಧಿಶೂನ್ಯಂಚಿದಾತ್ಮಕಂ ॥
ಅಹಂಕಾರವಿಲ್ಲದ್ದಾಗಿಯೂ ಮನಸ್ಸಿಲ್ಲದ್ದಾಗಿಯೂ, ಬುದ್ಧಿಯಿಲ್ಲದ್ದಾಗಿಯೂ, ಚಿತ್ಸ್ವರೂಪವಾದುದಾಗಿಯೂ,

೪೮ ಅಂತರ್ವ್ಯಾವೃತ್ತಿರೂಪೋಸೌ ಸಮಾಧಿರ್ಮುನಿಭಾವಿತಃ ॥
ಜಗತ್ಪದಾರ್ಥಗಳನ್ನು ನಿಷೇಧ ಮಾಡತಕ್ಕದ್ದಾಗಿಯೂ, ಮುನೀಶ್ವರರಿಂದ ಭಾವಿಸಲ್ಪಡತಕ್ಕದ್ದಾಗಿಯೂ, ಇರುವುದು ಸಮಾಧಿಯು,

೪೯ ಊರ್ಧ್ವಪೂರ್ಣ ಮಧಃಪೂರ್ಣಂ ಮಧ್ಯಪೂರ್ಣಂ ಶಿವಾತ್ಮಕಂ ॥
ಉದ್ದದಲ್ಲಿಯೂ ಪೂರ್ಣವಾದದ್ದು. ಕೆಳಗಡೆಯೂಪೂರ್ಣವಾದದ್ದು. ಮಧ್ಯದಲ್ಲಿಯೂ ಪೂರ್ಣವಾದದ್ದು. ಶಿವಾತ್ಮಕವಾದದ್ದು,

೫೦ ಸಾಕ್ಷಾದ್ವಿಧಿಮುಖೋಹ್ಯೇಷ ಸಮಾಧಿಃ ಪಾರಮಾರ್ಥಿಕಃ ॥
ಪಾರಮಾರ್ಥಿಕವಾದ ಈ ಸಮಾಧಿಯು ಸಾಕ್ಷಾದ್ಬ್ರಹ್ಮನ ಮುಖದಿಂದ ಹುಟ್ಟಿದ್ದು.

ವಿಧಿವಾಕ್ಯಗಳು.

೧ ಸರ್ವಂಖಲ್ವಿದಂಬ್ರಹ್ಮ ! (ಇದೆಲ್ಲವೂ ಬ್ರಹ್ಮವೇ ಅಲ್ಲವೆ ?)

೨ ತಜ್ಜಲಾನೀತಿಶಾಂತಉಪಾಸತ ॥
ಅದರಲ್ಲಿ ಹುಟ್ಟಿದುದು, ಅದರಲ್ಲಿ ಇರುವುದು, ಅದರಲ್ಲಿ ಲಯಿಸುವುದು ಎಂದು ಶಾಂತನಾಗಿ ಉಪಾಸಿಸಬೇಕು.

೩ ಆತ್ಮಾನಮೇವ ವೇದಾಹಂಬ್ರಹ್ಮಾಸ್ಮೀತಿ ॥

ನಾನು ಬ್ರಹ್ಮನಾದೆನೆಂದು ತನ್ನನ್ನು ತಾನೇ ತಿಳಿಯಬೇಕು.

೪ ಆತ್ಮಾನಾಹರೇದ್ರಷ್ಟವ್ಯ ಶ್ರೋತವ್ಯೋಮಂತವ್ಯೋನಿಧಿಧ್ಯಾಸಿತವ್ಯಃ ॥

ನೋಡಲ್ಪಡುವವನು, ಕೇಳಲ್ಪಡುವವನು, ಮನನಮಾಡಲ್ಪಡುವವನು, ನಿಧಿಧ್ಯಾಸಿಸಲ್ಪಡುವವನು, ಇವೆಲ್ಲಾ ಆತ್ಮನೇ ಅಲ್ಲವೆ ?

೫ ಮಹತ್ಪದಂ ಜ್ಞಾತ್ವಾವೃಕ್ಷಮೂಲೇವಸತೇ ॥

ಹೊಂದತಕ್ಕ ಘನವಾದ ಮೋಕ್ಷಪದವಿಯನ್ನರಿತು ಗಿಡದ ಬುಡದಲ್ಲಿ ವಾಸಮಾಡಬೇಕು.

೬ ಸಚ್ಚಿದಾನಂದಾತ್ಮಾನಮದ್ವಿತೀಯಂ ಬ್ರಹ್ಮಭಾವಯೇತ್ ॥

ಕಾಲತ್ರಯದಲ್ಲಿಯೂ ನಶಿಸದ ಏಕಸ್ವರೂಪವಾದ ಸುಖಸ್ವರೂಪ ಬ್ರಹ್ಮವನ್ನು ಭಾವನೆ ಮಾಡಬೇಕು.

೭ ಅಹಂಬ್ರಹ್ಮಾಸ್ಮೀತ್ಯನುಸಂಧಾನಂ ಕುರ್ಯಾತ್ ॥

ನಾನು ಬ್ರಹ್ಮನಾದೆನೆಂದು ಅನುಸಂಧಾನಮಾಡಬೇಕು.

೮ ಸೆತದ್‌ಜ್ಞಾನೋಬಾಲೋನ್ಮತ್ತಪಿಶಾಚವಜ್ಜಡವೃತ್ತ್ಯಾಲೋಕಮಾಚರೇತ್ ॥

ತಚ್ಛಬ್ದಾರ್ಥವಾದ ಬ್ರಹ್ಮವನ್ನು ಬಲ್ಲವನು ಬಾಲಕನ ಹಾಗೆಯೂ, ಹುಚ್ಚನಹಾಗೆಯೂ, ಪಿಶಾಚದಹಾಗೆಯೂ, ವಿವೇಕಶೂನ್ಯರು ಇರುವ ಹಾಗೆಯೂ ಲೋಕವೃತ್ತಿಯನ್ನು ಆಚರಿಸಬೇಕು.

೯ ಬ್ರಾಹ್ಮಣಸ್ಸಮಾಹಿತೋ ಭೂತ್ವಾ ತತ್ತ್ವಂ ಪದೈಕ್ಯಮೇವ ಸದಾ ಕುರ್ಯಾತ್ ॥

ಬ್ರಾಹ್ಮಣನು ಸ್ವಸ್ಥಚಿತ್ತನಾಗಿ ತತ್, ತ್ವಂ ಪದಗಳಿಗೆ ಐಕ್ಯವನ್ನು ಯಾವಾಗಲೂ ಮಾಡುತ್ತಿರಬೇಕು.

೧೦ ಸರ್ವತ್ರಾದ್ವೈತ ಬ್ರಹ್ಮಬುದ್ಧಿಂ ಕುರ್ಯಾತ್ ॥

ಎಲ್ಲೆಲ್ಲಿಯೂ ಅದ್ವಿತೀಯವಾದ ಬ್ರಹ್ಮಬುದ್ಧಿ ಇರಬೇಕು.

೧೧ ಆಶಾಂಬರೋ ನಿರ್ನಮಸ್ಕಾರೋನಸ್ವಾಹಾಕಾರೋನಸ್ವಧಾಕಾರೋನನಿಂದಾಸ್ತುತಿರ್ಯಾದೃಚ್ಛಿಕೋಭವತಿ ॥

ತಾನು ದಿಗಂಬರನಾಗಬೇಕು. ಎಲ್ಲಿಯೂ ಯಾರಿಗೂ ನಮಸ್ಕಾರ ಮಾಡದವನೂ, ಯಜ್ಞಮಾಡದವನೂ, ಶ್ರಾದ್ಧಮಾಡದವನೂ,

ದೂಷಣಾಸ್ತೋತ್ರಗಳಿಲ್ಲದವನೂ, ಮನಸ್ಸಿಗೆ ತೋಚಿದಂತೆ ಇರುವವನೂ ಆಗಬೇಕು.

೧೨ ಸರ್ವಂ ತತ್ಸ್ವರೂಪಮೇವಪಶ್ಯ ಜೀವನ್ಮುಕ್ತಿ ಮವಾಪ್ಯ ಪ್ರಾರಬ್ಧಪ್ರತಿಭಾಸನಾಶಪರ್ಯಂತಂ ಸ್ವಸ್ವರೂಪಾನು ಸಂಧಾನೇನವಸೇತ್॥

ಸರ್ವತ್ರ ತನ್ನನ್ನು ನೋಡುತ್ತಾ ಜೀವನ್ಮುಕ್ತಿಯನ್ನು ಹೊಂದಿ, ಪ್ರಾರಬ್ಧ ಪ್ರತಿಭಾಸ ಪದಾರ್ಥವಾದ ದೇಹದ ನಾಶಪರ್ಯಂತವೂ ಸ್ವಸ್ವರೂಪಾನುಸಂಧಾನದಿಂದಲೇ ನಿವಸಿಸಬೇಕು.

೧೩ ಸ್ವರೂಪಾನು ಸಂಧಾನಂ ವಿನಾನ್ಯಥಾಚಾರಪರೋನಭವೇತ್ ॥

ಸ್ವರೂಪಾನುಸಂಧಾನವಿಲ್ಲದೆ ಇತರ ನಡತೆಗಳುಳ್ಳವನಾಗಬಾರದು

೧೪ ವೇದಾಂತ ಶ್ರವಣಂ ಕುರ್ವ್ವ ಯೋಗಂ ಸಮಾರಭೇತ್ ॥

ವೇದಾಂತ ಶ್ರವಣವನ್ನು ಮಾಡುತ್ತಾ ಯೋಗವನ್ನಾರಂಭಿಸಬೇಕು.

೧೫ ಆಕುಂಚನೇನ ಕುಂಡಲಿನ್ಯಾಕವಾಟಮುದ್ಘಾಟ್ಯ ಮೋಕ್ಷದ್ವಾರಂ ವಿಭೇದಯೇತ್ ॥

ಅಡಗಿಸುವುದರಿಂದಲೂ ಕುಂಡಲಿನಿಯಿಂದಲೂ ಬಾಗಿಲನ್ನು ತೆರೆದು ಮೋಕ್ಷದ್ವಾರವನ್ನು ಭೇದಿಸಬೇಕು.

೧೬ ಯಚ್ಛೇದ್ವಾಚಸಿ ಪ್ರಾಜ್ಞಸ್ತದ್ಯಚ್ಛೇದ್ ಜ್ಞಾನಂ ॥

ತಿಳಿದವನು ವಾಕ್ಕನ್ನು ಮನಸ್ಸಿನಲ್ಲಿಯೂ ಆ ಮನಸ್ಸನ್ನು ತನ್ನ ಬುದ್ಧಿಯಲ್ಲಿಯೂ. ಆ ಬುದ್ಧಿಯನ್ನು ತನ್ನ ಆತ್ಮನಲ್ಲಿಯೂ,

೧೭ ಆತ್ಮನಿಜ್ಞಾನಮಾತ್ಮನಿಮಹತಿ ನಿಯಚ್ಛೇತ್ತದ್ಯಚೇಚ್ಛಾಂತಾಆತ್ಮನಿ॥

ಮಹತ್ತತ್ವದಲ್ಲಿ ಮಹತ್ತತ್ವವನ್ನೂ ಪರಬ್ರಹ್ಮದಲ್ಲಿ ಲಯಗೊಳಿಸಬೇಕು.

೧೮ ಆತ್ಮಾನಂಚೇದ್ವಿಜಾನೀಯಾ ದಯಮಸ್ಮೀತಿಪೂರುಷಃ ॥

ತನ್ನನ್ನು ಇವನಾದೆನೆಂದು ತಿಳಿದವನಾದರೆ ಆ ಪುರುಷನು.

೧೯ ಕಿಮಿಚ್ಛನ್ ಕಸ್ಯಕಾಮಾಯಾ ಶರೀರಮನುಸಂಜ್ವರೇತ್ ॥

ಯಾವುದನ್ನು ಇಚ್ಛೈಸಿ ಏತಕ್ಕೋಸ್ಕರಶರೀರವನ್ನು ತಪಿಸಬೇಕೋ

೨೦ ತಮೇವಧೀರೋ ವಿಜ್ಞಾಯಪ್ರಜ್ಞಾಂ ಕುರ್ವೀತ ಬ್ರಾಹ್ಮಣಃ ॥

ವಿವೇಕಿಯಾದ ಬ್ರಾಹ್ಮಣನು ಆ ಆತ್ಮನನ್ನೇ ತಿಳಿದು ಅನುಸಂಧಾನಮಾಡಬೇಕು.

೨೧ ನಾನುಧ್ಯಾಯಾದ್ಬಹೂನ್ ಶಬ್ದಾನ್ ವಾಚೋವಿಗ್ಲಾಪನಂಹಿತತ್ ॥

ಅನೇಕ ಶಬ್ದಗಳನ್ನು ಉಚ್ಚರಿಸಬಾರದು, ಅದು ವಾಗಿಂದ್ರಿಯಕ್ಕೆ ಆಯಾಸಕೊಡತಕ್ಕದ್ದಲ್ಲವೆ ?

೨೨ ಯತೋನಿರ್ವಿಷಯಸ್ಯಾಸ್ಯ ಮನಸೋಮುಕ್ತಿರಿಷ್ಯತೇ ॥
ಏತರಿಂದ ನಿರ್ವಿಷಯವಾದ ಈ ಮನಸ್ಸಿಗೆ ಮುಕ್ತಿಯು ಕೋರಲ್ಪಡುವುದೋ ?

೨೩ ಅತೋನಿರ್ವಿಷಯಂನಿತ್ಯಂ ಮನಃಕಾರ್ಯಂಮುಮುಕ್ಷುಣಾ ॥
ಅದರಿಂದ ಮೋಕ್ಷವನ್ನು ಬಯಸುವ ಪುರುಷನಿಂದ ಮನಸ್ಸು ನಿತ್ಯವೂ ನಿರ್ವಿಷಯವಾದುದಾಗಿ ಮಾಡಲ್ಪಡಬೇಕು.

೨೪ ಚಿತ್ತಮೆ ವಹಿಸಂಸಾರಃ ತತ್ಪ್ರಯತ್ನೇನಶೋಧಯೇತ್ ॥
ಸಂಸಾರವು ಮನಸ್ಸೇ ಅಲ್ಲವೆ ! ಅದನ್ನು ಪ್ರಯತ್ನದಿಂದ ಶೋಧಿಸಬೇಕು.

೨೫ ದೃಶ್ಯಂಹ್ಯದೃಸ್ಯತಾಂ ನೀತ್ವಾ ಬ್ರಹ್ಮಾಕಾರೇಣಚಿಂತಯೇತ್ ॥
ದೃಶ್ಯವನ್ನು ದೃಶ್ಯವಾದ ಬ್ರಹ್ಮವಾಗುವಂತೆ ಹೊಂದಿಸಿ ಬ್ರಹ್ಮಸ್ವರೂಪವಾಗಿ ಚಿಂತಿಸಬೇಕು.

೨೬ ಮಾಯಾಕಾರ್ಯಮಿದಂಭೇದಂ ಅಸ್ತಿಚೇದ್ಬ್ರಹ್ಮಭಾವನಃ ॥
ಮಾಯಾಕಾರ್ಯವಾದ ಈ ಭೇದವು ಇದ್ದದ್ದೇ ಆಗಿರುವಂತೆ ಬ್ರಹ್ಮಭಾವನೆ ಮಾಡಬೇಕು.

೨೭ ದೇಹೋಹಮಿತಿದುಃಖಂಚೇದ್ಬ್ರಹ್ಮಾಹಮಿತಿನಿಶ್ಚಯಃ ॥
ಶರೀರವೇ ನಾನೆಂಬದು ದುಃಖವು. ನಾನೇ ಬ್ರಹ್ಮನೆಂಬುದು ಸತ್ಯವು ಎಂಬ ನಿಶ್ಚಯವಿರಬೇಕು.

೨೮ ಹೃದಯಗ್ರಂಥಿರಸ್ತಿತ್ವೇ ಭೇದನೇಬ್ರಹ್ಮಚಕ್ರಕಂ ॥
ಹೃದಯಗ್ರಂಥಿಯಿರುವುದರಲ್ಲಿ ಭೇದದಿಂದ ಬ್ರಹ್ಮವೆಂಬ ಚಕ್ರವನ್ನು ಭೇದಿಸಬೇಕು.

೨೯ ಸಂಶಯೇಸಮುಪಪ್ರಾಪ್ತೇ ಬ್ರಹ್ಮನಿಶ್ಚಯಮಾಪ್ನುಯಾತ್ ॥
ಸಂಶಯವುಂಟಾದರೆ ಬ್ರಹ್ಮವೇ ಸತ್ಯವೆಂದು ತಿಳಿಯಬೇಕು.

೩೦ ವಿಜ್ಞೇಯೋಕ್ಷರತನ್ಮಾತ್ರೇ ಜೀವಿತಂಚಾಪಿಚಂಚಲಂ ॥
ನಾಶಯುಕ್ತವಾದ ವಿತನ್ಮಾತ್ರಶಬ್ದಾರ್ಥವಾದ ವಿಷಯವು ಜೀವಿಸುವುದೇ ಸಂಶಯವೆಂದು ತಿಳಿಯತಕ್ಕದ್ದು.

೩೧ ವಿಹಾಯಶಾಸ್ತ್ರಜಾಲಾನಿ ಯತ್ಸತ್ಯಂತದುಪಾಸ್ಯತಾಂ ॥

ಶಾಸ್ತ್ರಗಳ ಸಮೂಹವನ್ನೆಲ್ಲಾ ಬಿಟ್ಟು ಯಾವುದು ಸತ್ಯವೋ ಅದನ್ನು ಉಪಾಸಿಸಬೇಕು.

೩೨ ಯಸ್ಯಸ್ತ್ರೀತಸ್ಯಭೋಗೇಛ್ಛಾನಿಸ್ತ್ರೀಕಸ್ಯಕ್ವಭೋಗಭೂಃ ॥
ಯಾವನಿಗೆ ಸ್ತ್ರೀಯು ಇರುವಳೋ ಅವನಿಗೆ ಭೋಗದಲ್ಲಿ ಇಚ್ಛೆಯುಂಟಾಗುತ್ತದೆ. ಸ್ತ್ರೀ ಇಲ್ಲದವನಿಗೆ ಭೋಗಸ್ಥಾನವೆತ್ತಣದು ?

೩೩ ಸ್ತ್ರಿಯಸ್ತ್ಯಕ್ತ್ವಾಜಗತ್ತ್ಯಕ್ತಂ ಜಗತ್ತ್ಯಕ್ತ್ವಾಸುಖೀಭವೇತ್॥
ಸ್ತ್ರೀಯರನ್ನು ಬಿಟ್ಟುಬಿಟ್ಟರೆ ಜಗತ್ತೂ ಬಿಡಲ್ಪಡುವುದು, ಜಗತ್ತನ್ನು ಬಿಟ್ಟರೆ ಸುಖವುಳ್ಳವನಾಗುವನು.

೩೪ ಚಿತ್ತಂಕಾರಣಮರ್ಥಾನಾಂ ತಸ್ಮಿನ್ಸತಿಜಗತ್ತ್ರಯಂ ॥
ಪದಾರ್ಥಗಳಿಗೆ ಚಿತ್ತನೇ ಕಾರಣವು. ಆ ಚಿತ್ತವಿದ್ದರೆ ಮೂರು ಲೋಕಗಳೂ ಇರುವುವು.

೩೫ ತಸ್ಮಿನ್ಕ್ಷೀಣೇ ಜಗತ್ಕ್ಷೀಣಂ ತಚ್ಚಿಕಿತ್ಸಪ್ರಯತ್ನತಃ ॥
ಆ ಚಿತ್ತವು ನಶಿಸಿದರೆ ಜಗತ್ತೂ ನಶಿಸುವುದು. ಆದ್ದರಿಂದ ಆ ಚಿತ್ತವು ಪ್ರಯತ್ನದಿಂದ ಶಿಕ್ಷಿಸಲ್ಪಡಬೇಕು.

೩೬ ಸುಪ್ತೇರುತ್ಥಾಯಸುಪ್ತ್ಯಂತಂ ಬ್ರಹ್ಮೈಕಂ ಪ್ರವಿಚಿಂತ್ಯತಾಂ ॥
ನಿದ್ರೆಯಿಂದ ಎದ್ದದ್ದು ಮೊದಲುಗೊಂಡು ಪುನಃ ನಿದ್ರೆ ಬರುವ ತನಕ ಬ್ರಹ್ಮವೊಂದನ್ನೇ ವಿಶೇಷವಾಗಿ ಚಿಂತಿಸುತ್ತಿರಬೇಕು.

೩೭ ಗಚ್ಛನ್‌ತಿಷ್ಠನ್‌ಉಪವಿಶನ್‌ಶಯನೋನಾನ್ಯಥಾಪಿಚ ॥
ನಡೆಯುತ್ತಿರುವಾಗಲೂ ನಿಂತಿರುವಾಗಲೂ ಕುಳಿತಿರುವಾಗಲೂ ಮಲಗಿರುವಾಗಲೂಹೇಗಾದರೂ ಬ್ರಹ್ಮಚಿಂತೆಯನ್ನು ಮಾಡಬೇಕು.

೩೮ ಯಥೇಛ್ಛಯಾ ವಸೇದ್ವಿದ್ವಾನ್ ಆತ್ಮಾರಾಮಸ್ಸದಾಮುನಿಃ॥
ತಿಳಿದಿರುವ ತನ್ನಲ್ಲಿತಾನೇ ರಮಿಸುವ ಮೌನನಿಷ್ಠನು ಇಛ್ಛೆ ಉಂಟಾದಹಾಗೆ ಯಾವಾಗಲೂ ವಾಸಮಾಡಬೇಕು.

೩೯ ಜ್ಯೋತಿರ್ಲಿಂಗಂಭ್ರುವೋರ್ಮಧ್ಯೇನಿತ್ಯಂಧ್ಯಾಯೇತ್ಸದಾಯತಿಃ ॥
ಜ್ಯೋತಿಸ್ವರೂಪವಾಗಿಯೂ ಲಿಂಗಶಬ್ದಾರ್ಥವಾಗಿಯೂ, ಮರೆಯಾಗಿಯೂ ಇರುವ ಅರ್ಥವನ್ನು ಹೊಂದಗೊಳಿಸುವ ಸ್ವರೂಪವನ್ನು ಭ್ರೂಮಧ್ಯದಲ್ಲಿ ನಿತ್ಯವೂ ಧ್ಯಾನಮಾಡಬೇಕು.

೪೦ ಆತ್ಮಾನಮಾತ್ಮನಾಸಾಕ್ಷಾದ್ಬ್ರಹ್ಮಬುದ್ಧ್ಯಾಸುನಿಶ್ಚಲಂ ॥
ತನ್ನ ಕೈಯಲ್ಲಿರುವ ನಿಶ್ಚಲವಾದ ಸಾಕ್ಷಾದ್ಬ್ರಹ್ಮನನ್ನು ತಿಳಿದು,

೪೧ ದೇಹಜಾತ್ಯಾದಿಸಂಬಂಧಾನ್ ವರ್ಣಾಶ್ರಮಸಮನ್ವಿತಾನ್ ॥
ವರ್ಣಾಶ್ರಮಗಳೊಡನೆ ಕೂಡಿರುವ ದೇಹಜಾತ್ಯಾದಿ ಸಂಬಂಧಗಳನ್ನೂ,

೪೨ ವೇದಶಾಸ್ತ್ರಪುರಾಣಾನಿ ಪದಪಾಂಸುಮಿವತ್ಯಜೇತ್ ॥
ವೇದಶಾಸ್ತ್ರಪುರಾಣಗಳನ್ನು ಕಾಲಿಗೆ ಹತ್ತಿದ ಧೂಳಿಯಂತೆ ಪರಿತ್ಯಜಿಸಬೇಕು.

೪೩ ಏಕಾಕೀನಿಸ್ಪೃಹಸ್ತಿಷ್ಠನ್ನಹಿತೇನಹಿತೇಲಪೇತ್ ॥
ಆಶೆಯಿಲ್ಲದವನಾಗಿಯೂ ಒಬ್ಬನೇ ಆಗಿಯೂ ಇರಬೇಕು. ಯಾರ ಸಂಗಡಲೂ ಮಾತನಾಡಕೂಡದು.

೪೪ ದದ್ಯಾನ್ನಾರಾಯಣೇತ್ಯೇವ ಪ್ರತಿವಾಕ್ಯಂಸದಾಯತಿಃ ॥
ನಾರಾಯಣನಿಗೇಕೊಡಬೇಕೆಂದು ಯತಿಯು ಪ್ರತಿವಾಕ್ಯದಲ್ಲಿಯೂ ಹೇಳಬೇಕು.

೪೫ ಮುನಿಃಕೌಪೀನವಾಸಾಸ್ಸ್ಯಾನ್ ನಗ್ನೋವಾಧ್ಯಾನತತ್ಪರಃ ॥
ಮುನಿಯಾದವನು ಧ್ಯಾನದಲ್ಲಿ ಆಸಕ್ತನಾಗಿ ಕೌಪೀನವೇ ವಸ್ತ್ರವುಳ್ಳವನಾಗಿ ಅಥವಾ ದಿಗಂಬರನಾಗಿ ಇರಬೇಕು.

೪೬ ಅಧ್ಯಾತ್ಮರತಿರಾಸೀನಃ ನಿರಪೇಕ್ಷೋಸಿರಾಶಿಷಃ ॥
ಆತ್ಮನಲ್ಲಿಯೇ ರತಿಯುಳ್ಳವನಾಗಿ ಎಲ್ಲಿಯೂ ಸಂಚಾರಮಾಡದೆ ಕುಳಿತಿದ್ದು ಅಪೇಕ್ಷೆಯಿಲ್ಲದವನಾಗಿಯೂ ಆಶೆಗಳಿಲ್ಲವನಾಗಿಯೂ,

೪೭ ಆತ್ಮನೇವ ಸಹಾಯೇನ ಸುಖಾರ್ಥೀ ವಿಚರೇದಿಹ ॥
ನಿಜವಾದ ಸುಖವನ್ನು ಕೋರಿದವನು ಈ ಕರ್ಮಭೂಮಿಯಲ್ಲಿ ತನ್ನೊಂದಿಗೆ ತಾನೇ ಸಹಾಯವಾಗಿ ಸಂಚರಿಸಬೇಕು.

೪೮ ಸಂದಿಗ್ಧ ಸ್ಸರ್ವಭೂತಾನಾಂ ವರ್ಣಾಶ್ರಮ ವಿವರ್ಜಿತಃ ॥
ಸಕಲ ಭೂತಗಳಲ್ಲಿಯೂ ಸಂದೇಹವುಳ್ಳವನಾಗಿಯೂ, ವರ್ಣಾಶ್ರಮ ಧರ್ಮಗಳಿಂದ ವರ್ಜಿಸಲ್ಪಟ್ಟವನಾಗಿಯೂ,

೪೯ ಅಂಧವಜ್ಜಡವಚ್ಚಾಪಿ ಮೂಕವಚ್ಚಮಹೀಂಚರೇತ್ ॥
ಕುರುಡನಂತೆಯೂ, ಹುಚ್ಚನಂತೆಯೂ, ಮೂಗನಂತೆಯೂ, ಭೂಮಿಯಲ್ಲಿ ಸಂಚರಿಸಬೇಕು.

೫೦ ಯದ್ಯತ್ಪಶ್ಯತಿಚಕ್ಷುಭ್ಯಾಂ ತತ್ತದಾತ್ಮೇತಿಭಾವಯೇತ್ ॥
ಕಣ್ಣುಗಳಿಂದ ಯಾವ ಯಾವುದನ್ನು ನೋಡುತ್ತಾನೆಯೋ, ಅದದು

ಆತ್ಮಸ್ವರೂಪವೆಂತಲೇ ಭಾವನೆಮಾಡಬೇಕು.

೫೧ ಯದ್ಯತ್‌ಶೃಣೋತಿ ಕರ್ಣಾಭ್ಯಾಂ ತತ್ತದಾತ್ಮೇತಿಭಾವಯೇತ್ ॥
ಯಾವಯಾವುದನ್ನು ಕಿವಿಗಳಿಂದ ಕೇಳುತ್ತಾನೆಯೋ ಅದುಅದು ಆತ್ಮ ಸ್ವರೂಪವೆಂತಲೇ ತಿಳಿಯಬೇಕು.

೫೨ ಲಭತೇನಾಸಯಾ ಯದ್ಯತ್ತತ್ತದಾತ್ಮೇತಿ ಭಾವಯೇತ್ ॥
ಯಾವಯಾವುದನ್ನು ಮೂಗಿನಿಂದ ಹೊಂದುತ್ತಾನೆಯೋ ಅದದು ಆತ್ಮಸ್ವರೂಪವೆಂತಲೇ ಭಾವಿಸಬೇಕು.

೫೩ ಜಿಹ್ವಯಾಯದ್ರಸಂಹ್ಯತ್ತಿ ತತ್ತದಾತ್ಮೇತಿ ಭಾವಯೇತ್ ॥
ನಾಲಿಗೆಯಿಂದ ಯಾವರಸವನ್ನು ಭಕ್ಷಣೆಮಾಡುವನೋ ಅದದು ಆತ್ಮಸ್ವರೂಪವೆಂದು ತಿಳಿಯಬೇಕು.

೫೪ ತ್ವಚಾಯದ್ಯತ್ಸ್ಪೃಶೇದ್ಯೋಗೀ ತತ್ತದಾತ್ಮೇತಿಭಾವಯೇತ್ ॥
ತ್ವಗಿಂದ್ರಿಯದಿಂದ ಯಾವಯಾವುದು ತಾಕುತ್ತಿರುವುದೋ ಅದದು ಆತ್ಮಸ್ವರೂಪವೆಂದು ಭಾವಿಸತಕ್ಕದ್ದು.

೫೫ ದೃಶಂಜ್ಞಾನಮಯೀಂಕೃತ್ವಾಪಶ್ಯೇದ್ಬ್ರಹ್ಮಮಯಂಜಗತ್ ॥
ದೃಷ್ಟಿಯನ್ನು ವಿಜ್ಞಾನ ಸ್ವರೂಪವನ್ನಾಗಿಮಾಡಿ ಜಗತ್ತನ್ನು ಬ್ರಹ್ಮಮಯವಾಗಿ ತಿಳಿಯತಕ್ಕದ್ದು.

೫೬ ದ್ರಷ್ಟೃದರ್ಶನ ದೃಶ್ಯಾನಾಂ ವಿರಾಮೋಯತ್ರವರ್ತತೇ ॥
ನೋಡುವವನು, ನೋಡತಕ್ಕದ್ದು, ನೋಡಲ್ಪಡುವ ಪದಾರ್ಥವು ಇವುಗಳಿಗೆ ಎಲ್ಲಿ ಸಮಾಪ್ತಿಯುಂಟಾಗುವುದೋ,

೫೭ ದೃಷ್ಟಿಸ್ತತ್ರೈವ ಕರ್ತವ್ಯಾನನಾಸಾಗ್ರಾವಲೋಕನೇ ॥
ದೃಷ್ಟಿಯನ್ನು ಅಲ್ಲಿಯೇ ಇಡಬೇಕು. ನಾಸಾಗ್ರವನ್ನು ನೋಡಬೇಕಾದುದಿಲ್ಲ.

೫೮ ದೇವಾಗ್ನ್ಯಗಾರೇತರು ಮೂಲೇ ಗುಹಾಯಾಂ ವಸೇದಸಂಗೋಲಕ್ಷಿತಶೀಲವೃತ್ತಃ ॥
ದೇವತಾ ಗೃಹದಲ್ಲಿಯೂ ಅಗ್ನಿಹೋತ್ರದ ಮನೆಯಲ್ಲಿಯೂ, ವೃಕ್ಷಮೂಲಗಳಲ್ಲಿಯೂ, ಗುಹೆಗಳಲ್ಲಿಯೂ ನಿಸ್ಸಂಗನಾಗಿ ತಿಳಿಯಲ್ಪಡದ ಆಚಾರನಡತೆಗಳನ್ನುಳ್ಳವನಾಗಿ ವಾಸಮಾಡಬೇಕು.

೫೯ ನಿರಿಂಧನ ಜ್ಯೋತಿರಿವೋಪ ಶಾಂತೋ ನಚೋದ್ವಿಜೇದು ದ್ವಿಜೇದ್ಯತ್ರಕುತ್ರ ॥

ಸಮಿತ್ತುಗಳಿಲ್ಲದ ಅಗ್ನಿಯಂತೆ ಉಪಶಾಂತನಾಗಿ ಎಲ್ಲಿಯೂ ಭಯ ಪಡಬೇಕಾಗಿಲ್ಲ.

೬೦ ಶಾಂತೋದಾಂತ ಉಪರತಸ್ತಿತಿಕ್ಷುರ್ಯೋನೂಚಾನೋsಭಿ ಜಜ್ಞೇಸಮಾನಃ ॥

ಅಂತರಿಂದ್ರಿಯ ನಿಗ್ರಹವುಳ್ಳವನಾಗಿ ಶೀತೋಷ್ಣಾದಿಗಳನ್ನು ಸಹಿಸಿಕೊಂಡು, ವೇದಶಾಸ್ತ್ರ ಸಂಪನ್ನನಾಗಿ ಸರ್ವತ್ರ ಸಮಾನನಾಗಿ ಯಾವನು ಇರುವನೋ,

೬೧ ತ್ಯಕ್ತೇಷಣೋಹ್ಯಯೃಣಸ್ತಂವಿದಿತ್ವಾ ಮೌನೀವಸೇದಾಶ್ರಮೇ ಯತ್ರಕುತ್ರ ॥

ಅವನು ಈಷಣತ್ರಯವರ್ಜಿತನಾಗಿ ಆ ಪರಮಾತ್ಮಸ್ವರೂಪವನ್ನು ತಿಳಿದು ಮೌನಿಯಾಗಿ ಯಾವ ಆಶ್ರಮದಲ್ಲಿಯಾದರೂ ವಾಸಮಾಡಬೇಕು.

೬೨ ಯಮೈಶ್ಚನಿಯಮೈಶ್ಚೈವ ಹ್ಯಾಸನೈಶ್ಚಸುಸಂಯುತಃ ॥

ಇಂದ್ರಿಯನಿಗ್ರಹಗಳಿಂದಲೂ, ನಿಯಮಗಳಿಂದಲೂ, ಆಸನಗಳಿಂದಲೂ ಚೆನ್ನಾಗಿ ಕೂಡಿಕೊಂಡು,

೬೩ ನಾಡೀಶುದ್ಧಿಂಚಕೃತ್ವಾದೌ ಪ್ರಾಣಾಯಾಮಂಸಮಾಚರೇತ್ ॥

ಮುಂಚಿತವಾಗಿ ನಾಡೀಶುದ್ಧಿಯನ್ನು ಮಾಡಿಕೊಂಡು ಪ್ರಾಣಾಯಾಮವನ್ನು ಮಾಡಬೇಕು.

೬೪ ಸರ್ವಚಿಂತಾಃಪರಿತ್ಯಜ್ಯ ಸಾವಧಾನೇನಚೇತಸಾ ॥

ಸಾವಧಾನವಾದ ಮನಸ್ಸಿನಿಂದ ಸಮಸ್ತವಾದ ಚಿಂತೆಗಳನ್ನೂ ಬಿಟ್ಟುಬಿಟ್ಟು,

೬೫ ನಿರ್ವಿಕಲ್ಪಃ ಪ್ರಸನ್ನಾತ್ಮಾ ಪ್ರಾಣಾಯಾಮಂಸಮಭ್ಯಸೇತ್ ॥

ವಿಕಲ್ಪಗಳಿಲ್ಲದವನಾಗಿಯೂ, ಪ್ರಸನ್ನವಾದ ಬುದ್ಧಿಯುಳ್ಳವನಾಗಿಯೂ, ಪ್ರಾಣಾಯಾಮವನ್ನು ಚೆನ್ನಾಗಿ ಅಭ್ಯಾಸಮಾಡಬೇಕು.

೬೬ ಮರುದಭ್ಯಸನಂಸರ್ವಂ ಮನೋಯುಕ್ತಂ ಸಮಭ್ಯಸೇತ್ ॥
ಇತರತ್ರಾಣಕರ್ತವ್ಯಾಮನೋವೃತ್ತಿರ್ಮನೀಷಿಣಾ ॥

ವಾಯುನಿರೋಧವು ಯಾವತ್ತೂ ಮನಸ್ಸಿನಿಂದ ಕೂಡಿದ್ದನ್ನಾಗಿ ಅಭ್ಯಾಸ ಮಾಡಬೇಕು. ತಿಳಿದವರಮೂಲಕ ಮನೋವೃತ್ತಿಯು ಇತರ ಸ್ಥಳದಲ್ಲಿ ಮಾಡಲ್ಪಡಕೂಡದು.

೬೭. ಸಂಸಾರಗಾಢತಿಮಿರಚಯಭಾನುಂನಮಾಮ್ಯಹಂ ॥ ಶ್ರೀನಿವಾ ಗುರುಂವಾದಿಮದೇಭಾಂಕುಶಸನ್ನಿಭಂ ॥

ಜೀವಬ್ರಹ್ಮೈಕ್ಯವಾಕ್ಯಗಳು.

೧ ಸಯಶ್ಚಾಯಂಪುರುಷೇ ॥ (ಜೀವಸಮೂಹದಲ್ಲಿ ಯಾವನಿರುವನೋ)

೨ ಯಶ್ಚಾಸಾವಾದಿತ್ಯೇ ॥ (ಸೂರ್ಯಮಂಡಲದಲ್ಲಿ ಯಾವನಿರುವನೋ)

೩ ಸಏಕಃ ॥ (ಅವನು ಒಬ್ಬನೇ)

೪ ಸತ್ಯಮಾತ್ಮಾಬ್ರಹ್ಮೈವ ಬ್ರಹ್ಮಾತ್ಮೈವಾತ್ರಹ್ಯೇವನವಿಚಿಕಿತ್ಸಾ ॥ ಯಥಾರ್ಥವು ತಾನೇ, ಬ್ರಹ್ಮವು ತಾನೇ, ಇಲ್ಲಿ ಸಂದೇಹಪಡಬೇಕಾದುದಿಲ್ಲ.

೫ ತ್ವಂಬ್ರಹ್ಮಾಸ್ಮಿ ॥ (ನೀನು ಬ್ರಹ್ಮನಾಗಿದ್ದೀಯೆ)

೬ ಅಹಂಬ್ರಹ್ಮಾಸ್ಮಿ ॥ (ನಾನು ಬ್ರಹ್ಮನಾಗಿದ್ದೇನೆ)

೭ ಆವಯೋರಂತರಂನವಿದ್ಯತೇ ತ್ವಮೇವಾಹಮಹಮೇವತ್ವಂ ॥ ನಮ್ಮಿಬ್ಬರಿಗೂ ಭೇದವಿಲ್ಲ, ನಾನೇ ನೀನು, ನೀನೇ ನಾನು.

೮ ಗತಾಃಕಲಾಃಪಂಚದಶಪ್ರತಿಷ್ಠಾ ದೇವಾಶ್ಚಸರ್ವೇಪ್ರತಿದೇವತಾಸು ॥ ಹದಿನೈದು ಕಳೆಗಳು ಯಾವುದರಲ್ಲಿ ಹೋಗಿವೆಯೋ ? ಸಕಲದೇವತೆಗಳೂ ಪ್ರತಿದೇವತೆಗಳೂ ಎಲ್ಲಿಗೆ ಹೋದರೋ ?

೯ ಕರ್ಮಾಣಿವಿಜ್ಞಾನಮಯಂಚ ಆತ್ಮಾ ಪರೇವ್ಯಯೇಯೇವಭವಂತಿ ಚೈಕಂ ॥
ಕರ್ಮಗಳೂ ವಿಜ್ಞಾನಸ್ವರೂಪನಾದ ಜೀವನೂ ಇವೆಲ್ಲವೂ ನಾಶರಹಿತನಾದ ಆ ಪರಮಾತ್ಮನಲ್ಲಿ ಒಂದಾಗಿಯೇ ಆಗುತ್ತದೆ.

೧೦ ಯೇನೇಕ್ಷತೇಶೃಣೋತೀದಂಜಿಘ್ರತಿವ್ಯಾಕರೋತಿಚ ॥
ಯಾವನಿಂದ ನೋಡಲ್ಪಡುವುದೋ, ಇದನ್ನು ಯಾವನು ಕೇಳುತ್ತಿರುವನೋ, ಯಾವನು ಆಘ್ರಾಣಿಸುವನೋ, ಮಾತುಗಳನ್ನಾಡಿಸುವನೋ,

೧೧ ಸ್ವಾದ್ವಸ್ವಾದುವಿಜಾನಾತಿ ತತ್ಪ್ರಜ್ಞಾನಮುದೀರಿತಂ ॥
ರುಚಿಯಾಗಿರುವುದು, ರುಚಿಯಿಲ್ಲದ್ದು ಇವುಗಳನ್ನು ತಿಳಿದುಕೊಳ್ಳುವುದು ಪ್ರಜ್ಞಾನವೆಂದು ಹೇಳಲ್ಪಡುವುದು.

ರ್ಮುಖೇಂದ್ರ ದೇವೇಷು ಮನುಷ್ಯಾಶ್ವಗಜಾದಿಷು ॥
ಕ್ಮದೇವನು, ಇಂದ್ರನು, ದೇವತೆಗಳು, ಅಶ್ವಗಳು, ಗೋವು
, ಮೊದಲಾದವುಗಳಲ್ಲಿ,
ನ್ಯಮೇಕಂ ಬ್ರಹ್ಮಾಂತಃ, ಪ್ರಜ್ಞಾನಂಬ್ರಹ್ಮಮಯ್ಯಪಿ ॥
ಂದೇ ಚೈತನ್ಯಸ್ವರೂಪವಾದಬ್ರಹ್ಮವು ಆದ್ದರಿಂದ ನನ್ನಲ್ಲಿ,

೪ ಪ್ರಜ್ಞಾನಂಬ್ರಹ್ಮಾಪರಿಪೂರ್ಣಃಪರಾತ್ಮಾಸ್ಮಿದೇಹೇವಿದ್ಯಾಧಿಕಾರಿಣಿ ॥
ಪರಿಪೂರ್ಣನಾದ ಪರಮಾತ್ಮನು ವಿದ್ಯಾಯೋಗ್ಯವಾದ ಈದೇಹದಲ್ಲಿ.

೧೫ ಬುದ್ಧೇಸ್ಸಾಕ್ಷಿತಯಾಸ್ಥಿತ್ವಾಸ್ಫುರನ್ನಹಮಿತೀರ್ಯತೇ ॥
ಬುದ್ಧಿಗೆ ಸಾಕ್ಷಿಯಾಗಿದ್ದುಕೊಂಡು ಪ್ರಕಾಶಿಸುತ್ತಿರುವ ನಾನೆಂದು
ಹೇಳಲ್ಪಡುವನು.

೧೬ ಸ್ವತಃ ಪೂರ್ಣಃ ಪರಾತ್ಮಾತ್ರ ಬ್ರಹ್ಮಶಬ್ದೇನ ವರ್ಣಿತಃ ॥
ತನಗೆ ತಾನೇ ಪೂರ್ಣನಾದ ಪರಮಾತ್ಮನು ಇಲ್ಲಿ ಬ್ರಹ್ಮಶಬ್ದದಿಂದ
ಹೇಳಲ್ಪಟ್ಟಿರುವವನು.

೧೭ ಅಸ್ಮೀತ್ಯೈಕ್ಯಪರಾಮರ್ಶಾತ್ತೇನಬ್ರಹ್ಮಾಭವಾಮ್ಯಹಂ ॥
ಆಗಿದ್ದೇನೆಂದು ಐಕ್ಯ ಜ್ಞಾನದಿಂದ ಇದ್ದರೆ ಅದರಿಂದಲೇ ನಾನು
ಬ್ರಹ್ಮನಾಗುವೆನು.

೧೮ ಏಕಮೇವಾದ್ವಿತೀಯಂ ಸನ್ನಾಮರೂಪವಿವರ್ಜಿತಂ ॥
ಒಂದೇಅದ್ವಿತೀಯವಾದದ್ದು, ನಾಮ ರೂಪಗಳಿಲ್ಲದ್ದು ಸದ್ರೂಪವು.

೧೯ ಸೃಷ್ಟೇಃ ಪುರಾಧುನಾಪ್ಯಸ್ಯತಾದೃಕ್ತ್ವಂಚತದೀರ್ಯತೇ ॥
ಸೃಷ್ಟಿಗೆ ಮೊದಲಿನಲ್ಲಿಯೂ, ಈಗಲೂ ಇದಕ್ಕೆ ಹಾಗೆಯೇ ಇರು
ವುದೆಂದು ಹೇಳಲ್ಪಡುವುದು.

೨೦ ಶ್ರೋತುರ್ದೇಹೇಂದ್ರಿಯಾತೀತಂ ವಸ್ತ್ವತ್ರತ್ವಂಪದೋದಿತಂ ॥
ಕೇಳುವವನ ದೇಹೇಂದ್ರಿಯಗಳನ್ನು ಅತಿಕ್ರಮಿಸಿದ ವಸ್ತುವು
ಇಲ್ಲಿ ತ್ವಂಪದದಿಂದ ಹೇಳಲ್ಪಟ್ಟಿತು.

೨೧ ಏಕತಾಗ್ರಾಹ್ಯತೇಸೀತಿ ತದೈಕ್ಯಮನುಭೂಯತಾಂ ॥
ಅಸಿಯೆಂಬ ಪದದಿಂದ ಏಕತ್ವವು ಗ್ರಹಿಸಲ್ಪಡುತ್ತದೆ. ಆ ಐಕ್ಯವ
ನ್ನು ಅನುಭವಿಸುವಂತೆ ಮಾಡು.

ಸ್ವಪ್ರಕಾಶಾಪರೋಕ್ಷತ್ವಮಯ ಮಿತ್ಯುಕ್ತಿತೋಮತಂ ॥

ಇವನು ಅಸಿ ಎಂದು ಹೇಳುವುದರಿಂದ ಸ್ವಪ್ರಕಾಶ ಪ್ರ
ವು ಅಭಿಮತವಾಯಿತು.

೨೩ ಅಹಂಕಾರಾದಿ ದೇಹಾಂತಾತ್ಪ್ರತ್ಯಗಾತ್ಮೇತಿಗೀಯತೇ ॥
ಅಹಂಕಾರ ಮೊದಲು ದೇಹಪರ್ಯಂತವೂ ವ್ಯಾಪಿಸಿದ
ಆತ್ಮನೆನ್ನಲ್ಪಡುವನು.

೨೪ ದೃಶ್ಯಮಾನಸ್ಯಸರ್ವಸ್ಯ ಜಗತಸ್ತತ್ವಮಿರ್ಯತೇ ॥
ಕಾಣಲ್ಪಡುವ ಸಕಲವಾದ ಜಗತ್ತಿಗೂ ಬ್ರಹ್ಮತತ್ವವೆಂದು ಹೇಳ
ಲ್ಪಡುವುದು.

೨೫ ಬ್ರಹ್ಮಶಬ್ದೇನ ತದ್ಬ್ರಹ್ಮಾಸ್ವಪ್ರಕಾಶಾತ್ಮರೂಪಕಂ ॥
ಬ್ರಹ್ಮಶಬ್ದದಿಂದ ಸ್ವಪ್ರಕಾಶಾತ್ಮರೂಪವಾದ ಆ ಬ್ರಹ್ಮವು ಹೇಳ
ಲ್ಪಡುವುದು.

೨೬ ಮಾಯಾವಿದ್ಯಾವಿಹಾಯ್ಯೈವ ಉಪಾಧಿಪರಿಜೀವಯೋಃ ॥
ಈಶ್ವರ ಜೀವರುಗಳಿಗೆ ಉಪಾಧಿಗಳಾದ ಮಾಯೆಯನ್ನೂ ಅವಿದ್ಯೆ
ಯನ್ನೂ ಬಿಟ್ಟುಬಿಟ್ಟು.

೨೭ ಅಖಂಡಸಚ್ಚಿದಾನಂದ ಪರಬ್ರಹ್ಮಾ ವಿಲಕ್ಷ್ಯತೇ ॥
ಅಖಂಡಸಚ್ಚಿದಾನಂದಪರಬ್ರಹ್ಮನುವಿಶೇಷವಾಗಿತಿಳಿಯಲ್ಪಡುವನು.

೨೮ ಸಕಾರಃ ಖೇಚರೀಪ್ರೋಕ್ತಃ ತ್ವಂಪದಂಚೇತಿನಿಶ್ಚಿತಂ ॥
ಸಕಾರವು ಖೇಚರಿಯೆಂದು ಹೇಳಲ್ಪಟ್ಟಿತು. ತ್ವಂಪದವೆಂದು
ನಿಶ್ಚಯಿಸಲ್ಪಡುವ ಹಕಾರವು,

೨೯ ಹಕಾರಂಪರಮೇಶಸ್ಸ್ಯಾತ್ತತ್ಪದಂಚೇತಿನಿಶ್ಚಿತಂ ॥
ಹಕಾರವೆಂದರೆ ಪರಮಶಿವನು ತತ್ಪದವೆಂದು ನಿಶ್ಚಯಿಸಲ್ಪಟ್ಟಿತು.

೩೦ ಸಕಾರೋಧ್ಯಾಯತೇಜಂತುಃ ಹಕಾರೋಹಿಭವೇದ್ಧ್ರುವಂ ॥
ಸಕಾರರೂಪನಾಗಿ ಜಂತುವು ಧ್ಯಾನಮಾಡಲ್ಪಡುವನು. ಹಕ್ಕಾ
ವೇ ಅಪುದೆಂದು ನಿಶ್ಚಯವು.

೩೧ ಆದ್ಯೋರಾತತ್ಪದಾರ್ಥಃಸ್ಯಾನ್ಮಕಾರಸ್ತ್ವಂಪದಾರ್ಥವಾನ್ ॥
ಮೊದಲನೆಯದಾದರೇಫವು ತತ್ಪದಾರ್ಥವಾಗಿರುವುದು, ಮ ...
ವು ತ್ವಂಪದಾರ್ಥವಾಗಿರುವುದು.

೩೨ ತಯೋಸ್ಸಂಯೋಜನಮಸೀತ್ಯಗ್ರೇ ತತ್ವವಿದೋವಿದುಃ ॥

ೀನಿವಾ ... ವನೋ)

ಆ ಎರಡು ಪದಗಳ ಸಂಯೋಗವನ್ನು ಅಸಿ ಎಂಬ ಪದದಿಂದ ತತ್ವಜ್ಞರು ತಿಳಿಯುವರು.

೬೩ ನಮಸ್ತ್ವಮರ್ಥೋ ವಿಜ್ಞೇಯೋ ರಾಮಸ್ತತ್ಪದಮುಚ್ಯತೇ ॥

ನಮಃ ಎಂಬ ಶಬ್ದವು ತ್ವಂಪದಾರ್ಥವೆಂದು ತಿಳಿಯತಕ್ಕದ್ದು. ರಾಮಃ ಎಂಬ ಶಬ್ದವು ತತ್ಪದವೆಂದು ಹೇಳಲ್ಪಡುವುದು.

೬೪ ಅಸೀತ್ಯರ್ಥೇಚತುರ್ಥೀಸ್ಯಾದೇವಂ ಮಂತ್ರೇಷುಯೋಜಯೇತ್ ॥

ಅಸಿ ಎಂಬ ಅರ್ಥದಲ್ಲಿ ಚತುರ್ಥೀವಿಭಕ್ತಿಯಾಗುವುದು, ಈ ಪ್ರಕಾರ ಮಂತ್ರಗಳಲ್ಲಿ ಯೋಜಿಸತಕ್ಕದ್ದು,

೬೫ ಕ್ಷೀರೇಕ್ಷೀರಂ ಯಥಾಕ್ಷಿಪ್ತಂ ತೈಲಂ ತೈಲೇ ಜಲಂಜಲೇ ॥

ಕ್ಷೀರದಲ್ಲಿ ಸುರಿಯಲ್ಪಟ್ಟ ಕ್ಷೀರವೂ ತೈಲದಲ್ಲಿ ಸೇರಿಸಲ್ಪಟ್ಟ ತೈಲವೂ, ಉದಕದಲ್ಲಿ ಬೆರೆತಿರುವ ಉದಕವೂ,

೬೬ ಸಂಯುಕ್ತಮೇಕತಾಂಯಾತಿ ತಥಾತ್ಮನ್ಯಾತ್ಮವಿನ್ಮುನಿಃ ॥

ಕಲೆತದ್ದೇ ಆದರೆ ಹೇಗೆ ಏಕತ್ವವನ್ನು ಹೊಂದುವುದೋ ಹಾಗೆಯೇ ಆತ್ಮವೇತ್ತನಾದ ಮುನಿಯು ಆತ್ಮದಲ್ಲಿ ಏಕತ್ವವನ್ನು ಹೊಂದುವನು.

೬೭ ಘಟೇನಷ್ಟೇಯಥಾವ್ಯೋಮ ವ್ಯೋಮೈವಭವತಿಸ್ವಯಂ ॥

ಘಟವು ನಾಶವಾದರೆ ಘಟನಿಷ್ಠವಾದ ಆಕಾಶವು ಹೇಗೆ ತಾನೇ ಆಕಾಶವಾಗುವುದೋ.

೬೮ ತೈವಾಕಾಶವಿಲಯೇ ಬ್ರಹ್ಮೈವ ಬ್ರಹ್ಮವಿತ್ಸ್ವಯಂ ॥

ಹಾಗೆಯೇ ಬ್ರಹ್ಮವೇತ್ತನು [illegible]ಪಾಧಿವಿಲಯದಲ್ಲಿ ತಾನೇ ಬ್ರಹ್ಮನು

ನಾನು ಬ್ರಹ್ಮನಾದೆನು ಎಂಬ ಈ ಮಂತ್ರವು ಭೇದಬುದ್ಧಿಯನ್ನು
ಹೋಗಲಾಡಿಸುವುದು.

೨ ಅಹಂಬ್ರಹ್ಮಾಸ್ಮಿ ಮಂತ್ರೋಯಂ ಕೋಟಿದೋಷಂವಿನಾಶಯೇತ್
ನಾನು ಬ್ರಹ್ಮನಾದೆನು ಎಂಬ ಮಂತ್ರವು ಕೋಟಿದೋಷಗಳನ್ನು
ನಾಶವಮಾಡುವುದು.

೩ ಅಹಂಬ್ರಹ್ಮಾಸ್ಮಿಮಂತ್ರೋಯಂ ಜ್ಞಾನಾನಂದಂ ಪ್ರಯಛತಿ ||
ನಾನು ಬ್ರಹ್ಮನಾಗಿದ್ದೇನೆ ಎಂಬ ಮಂತ್ರವು ಜ್ಞಾನವನ್ನೂ ಆನಂ
ದವನ್ನೂ ಕೊಡುವುದು.

೪ ಸರ್ವಮಂತ್ರಾನ್ ಸಮುತ್ಸೃಜ್ಯ ಏತನ್ಮಂತ್ರಂ ಸಮಭ್ಯಸೇತ್ ||
ಸಮಸ್ತ ಮಂತ್ರಗಳನ್ನೂ ಬಿಟ್ಟುಬಿಟ್ಟು ಈ ಮಂತ್ರವನ್ನು
ಅಭ್ಯಾಸಮಾಡಬೇಕು.

೫ ಸದ್ಯೋಮೋಕ್ಷಮವಾಪ್ನೋತಿ ನಾಸ್ತಿ ಸಂದೇಹಮಣ್ವಪಿ ||
ಆಗಲೇ ಮೋಕ್ಷವನ್ನು ಹೊಂದುವನು. ಇದರಲ್ಲಿ ಸ್ವಲ್ಪವೂ ಸಂಶ
ಯವಿಲ್ಲವು.


ರಾಮಾಯ ರಾಮಭದ್ರಾಯ ರಾಮಚಂದ್ರಾಯವೇಧಸೇ
ರಘುನಾಥಾಯನಾಥಾಯ ಸೀತಾಯಾಃಪತಯೇನಮಃ ||

ಶ್ರೀ.


ಸೀತಾರಾಮಾಂಜನೇಯ ಸಂವಾದವೆಂಬ

ಶ್ರೀರಾಮತತ್ವಾಮೃತವು

ಸಂಪೂರ್ಣವು.



A synchronous s
at this very mo



Antibiotics, Antimicrobials

Alcephin Capsules	Cephale
Alcephin Dry Syrup	Cephale reconstit
Alcizon Injections	Cefazoli Cefazoli
Norbid Tablets	Norfloxa
Veripen Tablets	Penicillin
Veripen Forte Tablets	Penicillin Potassiu

Anti-T.B. Range of Product

Alzide Tablets	Pyrazina
Rifaminal Capsules	Rifampic
Rifaminal Forte Tablets	Rifampic 300 mg

LEMBIC CHEMICAL WORKS CO. LTD., VADODARA-390 003.

MEGACARE



ntibacterials

250 mg and 500 mg

25 mg/5 ml (When
)

Lyophilised
dium) 500 mg and 1 g

400 mg and 800 mg

Potassium 130 mg

(as Penicillin V
250 mg

le 500 mg, 750 mg and 1 g

450 mg

450 mg and Isoniazid

Hydrochloride
800 mg

mino Acids with
infusion

ultiple-
sphates with Alcohol

Antihypertensive Products

Anginal Capsules	Nifedipine 10 mg
Anginal Retard Tablets	Nifedipine 20 mg in sustained release form
Odinol Tablets	Atenolol 50 mg and 100 mg

Other Products

Ephedrex Syrup	Ephedrine Hydrochloride with Codeine and Chlorpheniramine Maleate
Ephedrex-N	Ephedrine Hydrochloride with Noscapine and Chlorpheniramine Maleate in cherry-red soft gelatin capsules form
Hepagest Tablets	Ayurvedic Herbal Preparation of Bhangaro, Kadu, Kalmegh, Guduchi and Harde
Monorin Tablets	Ranitidine (as Ranitidine Hydrochloride) 150 mg and 300 mg
Magadol Tablets	Ibuprofen and Paracetamol combination